TIGHT BINDING BOOK

TEXT PROBLEM
WITHIN THE
BOOK ONLY
TEXT FLY WITHIN
THE BOOK ONLY

UNIVERSAL LIBRARY
OU_198026
UNIVERSAL LIBRARY

# ಹೈದರಾಬಾದ್ ಕರ್ನಾಟಕ

---


: ಸಂಪಾದಕರು :

ಆರ್. ಜಿ. ಜಾಗಿರದಾರ, ಬಿ. ಎ.

ಲಿಂಗಸುಗೂರು ವಿಠ್ಠಲರಾವ್


---


: ಪುಸ್ತಕ ದೊರೆಯುವಸ್ಥಳ :

ಕರ್ನಾಟಕ ಜನರಲ್ ಸ್ಟೋರ್ಸ್. ಸುಲ್ತಾನ ಬಾಜಾರ ಹೈದರಾಬಾದು.

---

ಪ್ರೇಮಸಾಗರ ಮುದ್ರಣಾಲಯ

ಹೈದರಾಬಾದು-ದ.

ಬೆಲೆ. ರೂ. ೧-೮-೦ ]   [ ಅಂಚೆವೆಚ್ಚ ಬೇರೆ.

೧ ನಿಜಾಮ ಪ್ರಭುಗಳವರ ಭಾವ ಚಿತ್ರ.

೨ ಅರ್ಪಣೆ.

೩ ಸಂದೇಶಗಳು.

೪ ಮುನ್ನುಡಿ.

೫ ಅರಿಕೆ.

೬ ಕನ್ನಡದ ಮುನ್ನುಡಿ.

೭ ನಮ್ಮ ಇತಿಹಾಸ. ೧

೮ ಆಸಫಜಾಹಿ ರಾಜಮನೆತನದ ಇತಿಹಾಸ. ೧೮

೯ ಕನ್ನಡ ಸಾಹಿತ್ಯಕ್ಕೆ ಹೈದರಾಬಾದು ಸಲ್ಲಿಸಿದ ಸೇವೆ. ೨೬

೧೦ ನಮ್ಮ ಅಧ್ಯಾತ್ಮ ಜೀವನ. ೩೫

೧೧ ನಮ್ಮ ಇಂದಿನ ಶಿಕ್ಷಣ ಸಮಸ್ಯೆಗಳು. ೪೩

೧೨ ನಮ್ಮ ಆರ್ಥಿಕ ಮತ್ತು ಕೈಗಾರಿಕೆಯ ಸ್ಥಿತಿಗತಿ. ೫೨

೧೩ ನಮ್ಮ ಸಾರ್ವಜನಿಕ ಚಟುವಟಿಕೆಗಳು. ೬೦

೧೪ ನಮ್ಮ ನಾಡಿನ ಸ್ತ್ರೀಯರ ಶಿಕ್ಷಣ. ೬೭

೧೫ ಹೈದರಾಬಾದಿನ ರಾಜ್ಯಾಡಳಿತ ಕ್ರಮ. ೭೦

೧೬ ನಕಾಶ.

೧೭ ಪರಿಚಯ ವಿಭಾಗ.

ಕಾಯಿ ದೇವ ನಮ್ಮ ದೊರೆಯ

ಬೆಳೆಸು ದೇವ ಅರಸು ಬಳಿಯ

ಮೆರೆಸು ದೇವ ನಾಡ ಸಿರಿಯ

ನಲಿಸು ದೇವ ಜನದ ಬಗೆಯ

ಒಲಿದು ವರದಿ ದೇವ ವಾಣಿಯಿಂತೆನ್ನಲಿ

" ಆಳುತಿರಲಿ ನಿತ್ಯ ನಿಮ್ಮನುಸ್ವಾನಲಿ "

——: ಪ್ರೊ. ಡಿ. ಕೆ. ಭೀಮಸೇನರಾಯರು.

# ನಮ್ಮನ್ನಾಳುವ ನಿಜಾಮು ಪ್ರಭುಗಳವರು.



ಆಲೀಜಾ, ರುಸ್ತುಂಜಮಾನ್, ಸಿಕೆಂದರೆದೌರಾನ್ ಮುಜಫ್ಫರುದೌಲಾ

**ನಿಜಾಮುಲ್ಮುಲ್ಕ್, ಏಳನೆಯ ಆಸಫಜಾಹ**

**ನವಾಬ್ ಮೀರ್ ಉಸ್ಮಾನ ಅಲಿಖಾನ್ ಬಹಾದ್ದೂರ್**

ಜಿ. ಸಿ. ಐ. ಇ., ಜಿ. ಬಿ. ಇ. ಅವರು

# ಅರ್ಪಣೆ.



ಬತ್ತಿ ಹೋಗುತ್ತಿದ್ದ ಕನ್ನಡದ ಶೆಲೆಯನ್ನು ಪುನುರುಜ್ಜೀವನಗೊಳಿಸುವುದಕ್ಕಾಗಿ ಅಭಿಮಾನದ ಕೆಚ್ಚನ್ನೂ ಆಶ್ರಯವನ್ನೂ ನೀಡಿ, ರಾಜಧಾನಿಯಾದ ಹೈದರಾಬಾದು ನಗರದಲ್ಲಿ ಕನ್ನಡದ ಮುನ್ನಡೆಗೆ ಪ್ರಯತ್ನಿಸುತ್ತಿರುವ **ಕನ್ನಡ ಭಕ್ತ ಶ್ರೀ. ಭೀಮಾಚಾರ್ಯ ಗೋವಿಂದಾಚಾರ್ಯ ಚಿಮ್ಮಲಗಿ ಅವರಿಗೆ.**

# ಸಂದೇಶ.



ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು.

ಹೈದರಾಬಾದು ಕರ್ನಾಟಕವನ್ನು ಕುರಿತ ತಮ್ಮ ಪುಸ್ತಕ ಅತ್ಯಗತ್ಯವಾಗಿ ಕನ್ನಡಿಗರಿಗೆ ಬೇಕಾಗಿದೆ. ಕನ್ನಡಿಗರನ್ನು ಎಚ್ಚರಿಸಿ ಅವರ ಹಿಂದಿನ ಹಿರಿಮೆಯಿಂದ ಇಂದಿನ ಹಿರಿಮೆಯನ್ನು ಬೆಳಸ ಬೇಕಾಗಿದೆ. ಅಜಂತ, ಎಲ್ಲೋರ, ಕೊಪ್ಪಳ, ಮಾಲ್‌ಖೇಡ್, ಕಲ್ಯಾಣ ಈ ಹೆಸರುಗಳೇ ಒಂದೊಂದು ಚರಿತ್ರೆಗಳಾಗಿವೆ. ಇಂತಹ ವೀರಭೂಮಿಯಾದ ತಮ್ಮ ಕಡೆಯ ವಿಚಾರಗಳು ಮಿಕ್ಕಕಡೆಯ ಜನರಿಗೆ ಚೆನ್ನಾಗಿ ತಿಳಿಯದೆ ನಮ್ಮ ಸಾಂಸ್ಕೃತಿಕ ಬಾಂಧವ್ಯಕ್ಕೆ ಅಡಚಣೆಯಾಗಿದೆ. ಎಚ್ಚತ್ತ ಹೈದರಾಬಾದು ಕರ್ನಾಟಕ ಈಗ ತನ್ನ ವಾಣಿ ಸಮಗಲ್ಲ ಕೇಳುವಂತೆ ಮೊಳಗಬೇಕು. ತಮ್ಮ ಉದ್ಯಮಕ್ಕೆ ಯಶಸ್ಸು ತುಂಬಲಿ.

ಕನ್ನಡ ಸಾಹಿತ್ಯಪರಿಷತ್ತು (ರಾಜಸೇವಾಸಕ್ತ)
ಬೆಂಗಳೂರು. ಬಿ. ಎಂ. ಶ್ರೀಕಂಠಯ್ಯ
ತಾ. ೮-೧೨-೧೯೪೧. (ಎಂ. ಎ., ಬಿ. ಎಲ್.)

# ಸಂದೇಶ



೨೫ನೆಯ ಕನ್ನಡಸಾಹಿತ್ಯ ಸಮ್ಮೇಲನಾಧ್ಯಕ್ಷರು.

ತಾವು ‘ ಹೈದರಾಬಾದ್ ಕರ್ನಾಟಕ ’ ಎಂಬುವ ಹೊತ್ತಿಗೆಯನ್ನು ಸಾಹಿತ್ಯಸಮ್ಮೇಳನದ ಕಾಲಕ್ಕೆ ಹೊರಡಿಸುತ್ತೀರೆಂಬುದನ್ನು ಕೇಳಿ ನನಗೆ ಅತ್ಯಂತ ಸಂತೋಷವಾಯಿತು. ಹೈದರಾಬಾದ್ ಕರ್ಣಾಟಕದ ಹಿಂದಿನ ಇತಿಹಾಸವು ಉಜ್ವಲ ವಾಗಿರುತ್ತದೆ. ಶ್ರೀ ಬಸವಾದಿ ಪ್ರಮಥರು ಇದೇ ಕರ್ಣಾಟಕದಲ್ಲಿ ಅವತರಿಸಿ, ಉಪನಿಷತ್ತುಗಳಿಗೆ ಸಮಾನಗಳಾದ ಎರಡೆಂಭತ್ತು ಕೋಟಿ ವಚನಗಳನ್ನು ರಚಿಸಿ ಕನ್ನಡ ವಾಙ್ಮಯವು ಅಜರಾಮರ ವಾಗುವಂತೆ ಮಾಡಿರುವರು. ಇನ್ನು ಎಷ್ಟೋ ಐತಿಹಾಸಿಕ ಸಂಗತಿಗಳು ಒದಗಿರುತ್ತವೆ. ಈ ಕೈಪಿಡಿಯನ್ನು ಓದುವುದರಿಂದ ಕನ್ನಡಿಗರಿಗೆ ಎಷ್ಟೋ ಹೊಸ ಸಂಗತಿಗಳು ಗೊತ್ತಾಗುತ್ತವೆ. ಇಂತಹ ಸಾಹಸಕ್ಕೆ ಕೈಹಾಕಿದ ನಿಮಗೆ ಧನ್ಯವಾದಗಳು. ಕನ್ನಡಿಗರೆಲ್ಲ ಪ್ರೋತ್ಸಾಹವನ್ನು ಕೊಟ್ಟು ನಿಮಗೆ ಉತ್ಸಾಹ ಬರುವಂತೆ ಮಾಡುವರೆಂದು ನಂಬಿರುತ್ತೇನೆ. ದೇವರು ಈ ಕಾರ್ಯಕ್ಕೆ ಯಶಸ್ಸನ್ನು ಕೊಡಲಿ.

ಯಾದಗಿರಿ,
ತಾ. ೧೫-೧೧-೪೧.

ವ್ಯಾಕರಣ ತೀರ್ಥ
**ಚಂದ್ರಶೇಖರ ಶಾಸ್ತ್ರಿಗಳು**

# ಸಂದೇಶ



ನಿಜಾಮು ಕರ್ನಾಟಕ ಪರಿಷತ್ತಿನ ಅಧ್ಯಕ್ಷರು.

ಗ್ರಂಥ ಪ್ರಕಟನೆಯೂ ಶಿಕ್ಷಣಕ್ಕೆ ಮುಖ್ಯವಾದ ಸಾಧನ. ಜನಸಾಮಾನ್ಯರು ಸುಶಿಕ್ಷಿತರಾಗಬೇಕಾದರೆ, ನಾಗರಿಕತೆಗೆ ಆವಶ್ಯಕವಾದ ಜ್ಞಾನ ತಾಯ್ನುಡಿಯಲ್ಲಿಯೇ ಅವರಿಗೆ ಮುಟ್ಟಬೇಕು. ಈ ತರದ ಜ್ಞಾನವನ್ನು ಬೆಳೆಯಿಸಿ ವಿವಿಧ ಮತಪಂಥಗಳಲ್ಲಿ ಸಾಮರಸ್ಯವನ್ನುಂಟುಮಾಡಿ, ನಮ್ಮ ಸಾಮುದಾಯಿಕ ಜೀವನವನ್ನು ವಿಕಾಸಗೊಳಿಸುವ ಸಾಹಿತ್ಯ ನಮಗಿಂದು ಬೇಕಾದ ಸಾಹಿತ್ಯ. ಈ ದೃಷ್ಟಿಯನ್ನಿಟ್ಟುಕೊಂಡು ನೀವು ಕಾರ್ಯವನ್ನು ಮುಂದುವರಿಸಿ, ಈ ಕ್ಷೇತ್ರದಲ್ಲಿಯೂ ಕನ್ನಡಿಗರು ಇತರ ಬಾಂಧವರೊಡನೆ ಕೂಡಿಕೊಂಡು ಮುಂದುವರಿಯುವದಕ್ಕೆ ತಕ್ಕ ರಂಗವನ್ನು ಕಲ್ಪಿಸುವಿರೆಂದು ಹಾರೈಸುತ್ತೇನೆ. ಪ್ರತಿಯೊಂದು ಉತ್ತಮಕಾರ್ಯಗಳಿಗೆ ಬೆಂಬಲವನ್ನಿತ್ತು ಆಶ್ರಯವನ್ನು ನೀಡುತ್ತಿರುವ ನಮ್ಮ ನಾಡಿನ ಮಹಾಜನರು, ನೀವು ಕೈಕೊಂಡಿರುವ ಕಾರ್ಯಕ್ಕೆ ಪೋಷಣೆಯನೀಯುವರೆಂಬುದರಲ್ಲಿ ಸಂದೇಹ ವಿಲ.

ತಾ. ೧೮-೩-೧೩೫೧.
ಹೈದರಾಬಾದು.

**ಜನಾರ್ದನರಾವ್ ದೇಸಾಯಿ.**

# FORE WORD.

Mr. R G, Jagirdar and Mr. V:V. Lingsugur deserve congratulations on their pioneer attempt in presenting this useful publication to the general public, particularly to the Kannadigas of Hyderabad and outside. The publication is brilliantly got up with useful information of Hyderabab Karnataka and articles dealing with the history of kannadigas, their culture and matters dealing with their economic and industrial subjects by wel-known writers. This nice work also contains short biographies with photoes of the prominent persons of the State both official as well as non-official. I am particularly pleased to note the venture of these youngmen for bringing out such a novel publication in Hyderabad for the Kannadigas as so far no one came forward with such a book.

When the publishers came to me for a 'Fore Word' I was hesitataing whether I am entitled to write the same on such a publication, but my intimate connections with so many Kannadigas of the State as well as outside naturally prevailed upon me to contribute whatever I can to the cause of Kannada Culture and language.

Kannadigas are well known for their aptitude always for Service and their contribution to the building

up of modern Hyderabad is self explanatory. There is no public activity which is deprived of the eminent talent of the Kannadigas especially in sincere and concrete work

I am sure this publication will add to those rich traditions of Hyderabad Kannadigas. It is hoped that the public in general and kannadingas in particular will render all possible help to encourage these youngmen to bring out such useful publications very often.

Muktashram Begumpet<br>
Hyderabad-Dn<br>
Dated 24-12-1941.

**Sridhar Vaman Naik**<br>
*B. A., Bar-at-Law.*

# ಅರಿಕೆ

ಪುಸ್ತಕ ಪ್ರಕಟನೆಯ ಕಾರ್ಯಕ್ಕೆ ಪ್ರೇರಕವಾದ ಆ ಅನಿರ್ವಚನೀಯವಾದ ಶಕ್ತಿಯು ನಮ್ಮನ್ನು ಇನ್ನು ಮುಂದೆಯೂ ದಾರಿತೋರುತ್ತಲೇ ಇರುವುದೆಂದು ನಮಗೆ ವಿಶ್ವಾಸವಿದೆ. ಪ್ರಸ್ತುತ ಪುಸ್ತಕದಲ್ಲಿ ಹೈದರಾಬಾದು ಕರ್ನಾಟಕದ ಇಂದಿನ ಸ್ಥಿತಿಯೇನು, ಮುಂದಿನ ಗತಿಯೇನು ಎಂಬುದರ ಸ್ಥೂಲ ರೂಪರೇಖೆಯನ್ನು ಕೊಡಲಾಗಿದೆ. ಹೊರಗಿನ ಜನರು ಇಲ್ಲಿಯ ನಿಜ ಪರಿಸ್ಥಿತಿಗಳನ್ನರಿಯದೆ, ತಮ್ಮ ಅಭಿಪ್ರಾಯಗಳನ್ನು ಸರಿಯಾಗಿ ಕೊಡಲಾರರೆಂಬ ಅಂಶವು ನಮಗೆ ಅನೇಕಸಲ ಅನುಭವಕ್ಕೆ ಬಂದುದುಂಟು. ಇದೂ ಒಂದು ಈ ಪುಸ್ತಕ ಪ್ರಕಟನೆಗೆ ಮುಖ್ಯ ಕಾರಣವೆಂದು ಹೇಳಬಹುದು.

ಇದರಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಒದಗಿಸಿ ಕೊಟ್ಟಿರುವ ಲೇಖಕರಿಗೆ ನಾವು ಋಣಿಯಾಗಿದ್ದೇವೆ. ವಿಶೇಷತಃ ಪ್ರೊ. ಡಿ. ಕೆ. ಭೀಮಸೇನರಾಯರು ಹಾಗು ಅನ್ವರಿ ಮಧ್ವರಾಯರು ತಮ್ಮ ಅನುಭವ ಪೂರ್ಣ ಸಲಹೆ ಸೂಚನೆಗಳನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞರಾಗಿದ್ದೇವೆ. ನಮ್ಮ ಬೇಡಿಕೆಗಳಿಗೆ ಮನ್ನಣೆಯನ್ನಿತ್ತು, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರೂ, ೩೫ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರೂ, ನಿಜಾಮು ಕರ್ನಾಟಕ ಪರಿಷತ್ತಿನ ಅಧ್ಯಕ್ಷರೂ ತಮ್ಮ ಸಂದೇಶಗಳನ್ನಿತ್ತು ನಮ್ಮನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಶ್ರೀ. ಭೀಮಾಚಾರ್ಯ ಚಿಮ್ಮಲಗಿಯವರು ಈ ಪುಸ್ತಕವನ್ನು ತಮಗೆ ಅರ್ಪಿಸಲು ದಯವಿಟ್ಟು ಸಮ್ಮತಿಯನ್ನಿತ್ತುದ್ದಕ್ಕಾಗಿ ನಾವು ಉಪಕೃತರಾಗಿದ್ದೇವೆ. ಶ್ರೀ. ಜಿ. ರಾಮಾಚಾರ್ಯರು, ಕಲಬುರ್ಗಿಯ ಡಾ. ಆರ್. ಬಿ. ಜಾಗಿರದಾರರು ನಮಗೆ ನೀಡಿದ ಬೆಂಬಲಕ್ಕಾಗಿ ನಾವು ಆಭಾರಿಯಾಗಿದ್ದೇವೆ. ನಾವು ಕೇಳಿದ ಕೂಡಲೇ ಶ್ರೀ. ಶ್ರೀಧರ ವಾಮನ ನಾಯಕರು ಪುಸ್ತಕಕ್ಕೆ ಮುನ್ನುಡಿಯನ್ನ ಬರೆದು ಕೊಟ್ಟು ನಮನ್ನು ಕೃತಜ್ಞರನ್ನಾಗಿ ಮಾಡಿದ್ದಾರೆ.

ಪರಿಚಯಗಳ ಸಂಗ್ರಹದಲ್ಲಿಯೂ ಹಾಗು ಇತರ ಮಾಹಿತಿಯನ್ನು ಒದಗಿಸುವ ಕಾರ್ಯದಲ್ಲಿಯೂ, ಶ್ರೀಯುತರುಗಳಾದ ಹೈದರಾಬಾದಿನ ಮಾಸ್ತರ ಗಿರಿರಾಯರು, ಮಸ್ಕಿ ಕೃಷ್ಣರಾಯರು, ವೆ. ನಾ. ಕಾಗಲ, ಚಿಂಚೋಳಿ,ಯ ಔಂಟಿಯವರು ಸುರಪುರದ ರಾಘವೇಂದ್ರಾಚಾರ್ಯರು ಹಾಗು ದೀಕ್ಷಾಚಾರ್ಯರು, ಯಾದಗಿರಿಯ ಬನ್ನಿಗೋಳ ರಾಘವೇಂದ್ರರಾಯರು, ಶಿಂಧನೂರಿನ ಮದ್ದು ರಂಗರಾಯರು, ಲಿಂಗಸುಗೂರಿನ ಹನುಮಂತರಾಯರು, ಕನಕಗಿರಿಯ ಎನ್. ಎನ್. ಕಟ್ಟಿಯವರು, ಕುಕನೂರಿನ ದೇಸಾಯಿ ರಾಘವೇಂದ್ರ ರಾಯರು, ಅಡೂರು ವೀರಭದ್ರಪ್ಪನವರು ಸಹಾಯ ಮಾಡಿ ನಮ್ಮನ್ನು ಆಭಾರಿಯನ್ನಾಗಿ ಮಾಡಿದ್ದಾರೆ.

ಇದರಲ್ಲಿ ಬಂದಿರುವ ಕೆಲವು ಜನರ ಭಾವಚಿತ್ರಗಳನ್ನು ಬ್ಲಾಕು ಮಾಡುವುದಕ್ಕಾಗಿ ಶ್ರೀ. ಆಳವಂಡಿ ಭಗವಂತರಾಯರು ದಯವಿಟ್ಟು ಕೊಟ್ಟದ್ದಕ್ಕಾಗಿಯೂ, ವೇಳೆಗೆ ಸರಿಯಾಗಿ ಬ್ಲಾಕುಗಳನ್ನು ಶ್ರೀ. ವಜ್ರಂ ಅವರು, ಶ್ರೀ. ನರಶಿಂಹಭಟ್ಟರು ನಕಾಶವನ್ನು ಮಾಡಿ ಕೊಟ್ಟಿರುವದಕ್ಕಾಗಿ

ಶುದ್ಧ ಪ್ರತಿ ಮಾಡುವುದರಲ್ಲಿ ನೆರವಾದ ಶ್ರೀ. ಹುಣಶಿಹಾಳ ಗೋಪಾಲರಾಯರಿಗೂ ನಾವು ಋಣಿಯಾಗಿದ್ದೇವೆ. ಯುದ್ಧದಿಂದ ಹೆಚ್ಚಿಗೆ ಬ್ಲಾಕಿನ ಸಾಮಾನುಗಳು ದೊರೆಯದ್ದಕ್ಕಾಗಿ ಇನ್ನು ಅನೇಕರ ಭಾವಚಿತ್ರಗಳನ್ನು ಕೊಡುವುದಾಗಲಿಲ್ಲ. ಕೆಲವರ ಪರಿಚಯ ಸಮಯಕ್ಕೆ ದೊರೆಯಲಿಲ್ಲ. ಇಷ್ಟಾದರೂ ನಾವುನಿರ್ದಿಷ್ಟ ಮಾಡಿದ ೧೫೦ ಪುಟಗಳು. ಇಷ್ಟಕ್ಕೇ ಪೂರ್ಣವಾಗಿರುವುದರಿಂದ ಕೊನೆಯಲ್ಲಿ, ನಾವು ಪ್ರಕಟಿಸಿದಂತೆ ಪಟ್ಟಿಯನ್ನು ಕೊಡುವುದಾಗಲಿಲ್ಲ. ಈ ನ್ಯೂನತೆಗಳನ್ನು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳ ಲಾಗುವುದು.

ಅಚ್ಚಿನ ವಿಷಯದಲ್ಲಿ ಒಂದು ಮಾತು. ಹೈದರಾಬಾದಿನಲ್ಲಿ ಅಷ್ಟು ಅಚ್ಚುಕಟ್ಟಾದ ಕನ್ನಡ ಅಚ್ಚುಕೂಟಗಳಿಲ್ಲ. ಅದರಲ್ಲಿ ನಾವು ಈ ಪುಸ್ತಕವನ್ನು ಸಾಹಿತ್ಯ ಸಮ್ಮೇಳನದೊಳಗಾಗಿ ಪ್ರಕಟಿಸಬೇಕೆಂದು ನಿರ್ಬಂಧ ಹಾಕಿಕೊಂಡದ್ದರಿಂದ ಕೆಲಸವು ಆತುರತೆಯಿಂದ ನಡೆಯಬೇಕಾಯಿತು. ಈ ಕಾರಣಗಳಿಂದ ಕೆಲವು ಮುದ್ರಣ ದೋಷಗಳು ನುಸುಳಿ ಕೊಂಡಿವೆ. ಆದರೆ ಪ್ರೇಮಸಾಗರ ಮುದ್ರಣಾಲಯದ ಒಡೆಯರು, ಹಾಗು ಮುದ್ರಣಾಲಯದ ಕೆಲಸಗಾರರು, ಮುಖ್ಯವಾಗಿ ಶ್ರೀ ಲಿಂಗಯ್ಯ, ಶ್ರೀ. ದ್ವೈಪಾಯನಾಚಾರ್ಯರು, ಶ್ರದ್ಧೆ ವಹಿಸಿ ಅವಿಶ್ರಾಂತವಾಗಿ ಕೆಲಸಮಾಡಿರದಿದ್ದರೆ ಪುಸ್ತಕ ಇಷ್ಟು ಅಲ್ಪ ವೇಳೆಯಲ್ಲಿ ಹೊರಬೀಳುವುದು ಕಠಿಣವಾಗುತ್ತಿತ್ತು. ಇವರೆಲ್ಲರ ಉಪಕಾರಸ್ಮರಣೆ ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ.

ಹೈದರಾಬಾದು. —-ಪ್ರಕಾಶಕರು.

೨೫ನೆಯ ಡಿಶೆಂಬರ ೧೯೪೧ ಇ. ಪುಷ್ಯ ಶು॥ ೭ ೧೮೬೩ ಶಾ. ಶ.

# ಕನ್ನಡದ ಮುನ್ನಡೆ.

ಹೈದರಾಬಾದ್ ಕರ್ನಾಟಕದ ಪೂರ್ವೇತಿಹಾಸವನ್ನು ಕುರಿತು ಪ್ರಸ್ತಾಪಿಸುವಾಗ ಸಾಧಾರಣವಾಗಿ ಹಿಂದೆ ಆಳಿದ ರಾಜರ ವೈಭವ, ಅವರ ರಾಜಧಾನಿಗಳು, ಅವರ ಕಾಲದ ಕವಿಗಳು, ಅವರ ಸೇನೆಯ ಬಲ ಮತ್ತು ಅವರ ಗ್ರಂಥಗಳು ಮುಂತಾದ ವಿಷಯಗಳನ್ನೆತ್ತಿ, ಹೈದರಾಬಾದ್ ಕನ್ನಡ ಭಾಗವು ಇಡೀ ನಾಡಿನ ಕನ್ನಡಕ್ಕೆ 'ಕಾಶಿ' ಯಂತಿದೆಯೆಂದು ಹೇಳುವುದು ಸಂಪ್ರದಾಯವಾಗಿದೆ. ಇದು ನಿಜ. ಇದಕ್ಕೆ ಕಾರಣಗಳಿಲ್ಲದಿಲ್ಲ. ಕನ್ನಡ ಬೆಳೆದುದು ಇಲ್ಲಿಯೇ, ಕನ್ನಡ ನಾಡು ಆಕಾರ ಪಡೆದು ವಸಿಸಿಕೊಂಡುದು ಇಲ್ಲಿಯೇ, ಕನ್ನಡ ಹಬ್ಬಿದುದು ಇಲ್ಲಿಂದಲೇ, ಕನ್ನಡದ ಉತ್ತಮ ಕವಿಗಳು ಗ್ರಂಥಗಳನ್ನು ಬರೆದುದು ಇಲ್ಲಿಯೇ. ಒಟ್ಟಿನಲ್ಲಿ ಒಂದೆ ಕನ್ನಡವು ತನ್ನ ಏಳ್ಗೆಯನ್ನೆಲ್ಲ ಕಂಡುದು ಇಲ್ಲಿಯೇ. ಇದೆಲ್ಲ ಅತೀತ ಕಾಲದ ಮಾತಾಯಿತು. ಇಷ್ಟೆಲ್ಲ ಗತವೈಭವವನ್ನು ಹೇಳುವಾಗ ಇಲ್ಲಿಯ ಕನ್ನಡದ ಪರಿಸ್ಥಿತಿ ಅಷ್ಟೇನೂ ಸರಿಯಾಗಿಲ್ಲವೆಂಬ ಮಾತು ಧ್ವನಿತವಾಗುತ್ತದೆ. ಚೆನ್ನಾಗಿ ಪರ್ಯಾಲೋಚಿಸಿದರೆ ಈ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡು ಹಿಂದಿನ ವೈಭವವನ್ನು ಪದೇಪದೇ ಪ್ರಸ್ತಾಪಿಸಲಾಗುತ್ತದೆ. ಇಲ್ಲಿ ಕನ್ನಡ ಇಷ್ಟು ಹಿಂದೆ ಬೀಳಲು ಕಾರಣವೇನು? ಮುಂದೆ ಇದನ್ನು ತಿದ್ದಿಕೊಳ್ಳುವ ಬಗೆಯೆಂತು ಎಂಬುದನ್ನು ಸ್ವಲ್ಪ ವಿಚಾರಿಸಿ ಅದರಂತೆ ಆಚರಿಸಿದರೆ ಪರಿಸ್ಥಿತಿ ಉತ್ತಮಗೊಳ್ಳಬಹುದು.

ಇಲ್ಲಿಯ ಕನ್ನಡಕ್ಕೆ ಹೀನ ದಶೆ ಒದಗಿದುದಕ್ಕೆ ಅನೇಕ ಕಾರಣಗಳುಂಟು. ಅದರಲ್ಲಿ ಮುಖ್ಯವಾದುದು ಐತಿಹಾಸಿಕ ಘಟನೆ. ಇದನ್ನು ಈ ಗ್ರಂಥದಲ್ಲಿ 'ಇತಿಹಾಸ' ಪ್ರಕರಣದಲ್ಲಿ ಸ್ವಲ್ಪ ಮಟ್ಟಿಗೆ ವಿಸ್ತರಿಸಿ ಹೇಳಲಾಗಿದೆ. ೧೩ ನೆಯ ಶತಮಾನದಿಂದಲೇ ಇಲ್ಲಿಯ ಕನ್ನಡವು ಘೋರ ವಿಪತ್ತಿಗೆ ಗುರಿಯಾಯಿತೆನ್ನಬಹುದು. ಆ ಮೇಲೆ ೧೪ ನೆಯ ಶತಮಾನದಿಂದ ೧೮ ನೆಯ ಶತಮಾನದ ವರೆಗೆ ಈ ಭಾಗದಲ್ಲಿ ಶಾಂತಿಯುತವಾದ ವಾತಾವರಣವೇ ಇರಲಿಲ್ಲ. ಇಲ್ಲಿ ಕದನಗಳಮೇಲೆ ಕದನಗಳಾಗುತ್ತಿದ್ದುದರಿಂದ ಈ ಪ್ರಾಂತವು ದೊಡ್ಡ ಯುದ್ಧ ಕ್ಷೇತ್ರವಾಗಿತ್ತು. ೧೮ ನೆಯ ಶತಮಾನದ ಮಧ್ಯದಲ್ಲಿ ಆಸಫಿಯಾ ಅರಸು ಮನೆತನವು ಇಲ್ಲಿ ಸ್ಥಾಪಿತವಾಯಿತು. ಆಗ ಹಿಂದುಸ್ಥಾನದಲ್ಲಿ ಶಾಂತಿಯ ಕಾಲವಾಗಿರಲಿಲ್ಲ. ಅಲ್ಲದೆ ಇಂಗ್ಲೀಷರಿಗೂ ಬೇರೆ ಬೇರೆ ರಾಜರುಗಳಿಗೂ ಯುದ್ಧಗಳು ಮೇಲೆ ಮೇಲೆ ನಡೆಯುತ್ತಿದ್ದುದರಿಂದ ಎಲ್ಲಿಯೂ ನೆಮ್ಮದಿಯ ಜೀವನವಿರಲಿಲ್ಲ. ಇಲ್ಲಿಯೂ ಅದೇ ಪರಿಸ್ಥಿತಿ.

ಮರಾಟರೂ, ಮೈಸೂರುರಾಜರೂ, ನಿಜಾಂ ದೊರೆಗಳೂ ಯುದ್ಧ ಕಾರ್ಯದಲ್ಲಿ ಪ್ರವೃತ್ತರಾಗಿದ್ದುದರಿಂದ ರಾಜ್ಯದ ಗಡಿಗಳೇ ಏರ್ಪಟ್ಟಿರಲಿಲ್ಲ. ಘೋರ ಬಂಡಾಯದ ತರುವಾಯವೇ ಇಲ್ಲಿ ನೆಮ್ಮದಿ ನೆಲೆಗೊಂಡಿತೆಂದು ಹೇಳಬೇಕು. ಅಷ್ಟು ಹೊತ್ತಿಗೆ ಇಲ್ಲಿಯ ಕನ್ನಡಿಗರಿಗೆ ಕನ್ನಡತನದ ಅರಿವೇ ಅಳಿದು ಹೋಗಿದ್ದಿತೆಂದು ಹೇಳಬೇಕು. ಮರಾಠಿ, ಫಾರಸಿ ಭಾಷೆಗಳು ಪ್ರಬಲವಾಗಿದ್ದುವು. ಹೊರಗೆ ಕನ್ನಡದ ಆವಶ್ಯಕತೆ ಇಲ್ಲವಾಯಿತು. ರಾಜಕೀಯಭಾಷೆ ಫಾರಸಿಯಾಗಿದ್ದುದರಿಂದಲೂ, ಪಕ್ಕದಲ್ಲಿ ಮರಾಠಿಯ ಪ್ರಾಬಲ್ಯವು ಹೆಚ್ಚಾಗಿದ್ದುದರಿಂದಲೂ, ವಿದ್ಯೆ ಕಲಿಯ ಬೇಕೆಂದು ಅಪೇಕ್ಷೆ ಇದ್ದವರು ಇವೆರಡನ್ನೇ ಕಲಿಯುತ್ತ ಬಂದರು. ಎಲ್ಲರು ಕನ್ನಡ ಅನವಶ್ಯಕವೆಂದು ತಿಳಿದುಕೊಂಡರು. ಕಲಬುರ್ಗಿ, ಬೀದರುಗಳಲ್ಲಿ ಸಂಪೂರ್ಣವಾಗಿ ಕನ್ನಡವು ಕಣ್ಮರೆಯಾಗಬೇಕಾಗಿತ್ತು. ಇಲ್ಲಿ ಕನ್ನಡ ಮಾತಾಡುವಭಾಷೆಯಾಗಿ ಉಳಿದುದು ಕನ್ನಡದ ಹಿಂದಿನ ಪುಣ್ಯದಿಂದ. / ರಾಯಚೂರು ಭಾಗದಲ್ಲಿಮಾತ್ರ "ಅಯ್ಯನವರ ಶಾಲೆ" ಗಳಲ್ಲಿ—ಅದು ಅಲ್ಲೊಂದು, ಇಲ್ಲೊಂದು-ಹಳ್ಳಿಯ ಪದ್ಧತಿಯಂತೆ ಕನ್ನಡದ ಅಭ್ಯಾಸವಾಗುತ್ತಿತ್ತು. ಜೈಮಿನಿಯ ಒಂದೆರಡು ಸಂಧಿಗಳು ಓದುವದಕ್ಕೆ-ಅರ್ಥ ವತ್ತಾಗಿ ಅಲ್ಲ-ಬಂದಿತೆಂದರೆ ಶಾಲೆಯ ಕಾರ್ಯ ಮುಗಿಯುತ್ತಿತ್ತು. ಹಳ್ಳಿಗಳಲ್ಲಿ ವಿದ್ಯಾವಂತರೆಂದರೆ ಒಬ್ಬ ಕುಲಕರಣಿ ಮತ್ತೊಬ್ಬ ಗೌಡ. ಕುಲಕರಣಿಯ ವಿದ್ಯೆ, ಲೆಕ್ಕಬರೆಯುವಷ್ಟು, ಗೌಡನದು ರುಜುಮಾಡುವಷ್ಟು. ಎಷ್ಟೋಕಡೆ ಅನೇಕ ಗ್ರಾಮಗಳಿಗೆ ಲೆಕ್ಕ ಬರೆಯುವವನು ಒಬ್ಬನೇ ಕುಲಕರಣಿ ಯಾಗಿರುವುದುಂಟು. ಒಂದೂರಿನ ಜನಸಂಖ್ಯೆಯಲ್ಲಿ ವಿದ್ಯಾವಂತರ ಪರಿಮಾಣವಿದು. ಒಂದೆರಡು ಗ್ರಂಥಗಳನ್ನು ಓದಿದವರು ಘನ ವಿದ್ವಾಂಸರಾದರು. ದಾಸರುಗಳು ಕೀರ್ತನೆಗಳನ್ನೇನೋ ಬರೆದರು. ಆದರೆ ಕೇವಲ ಭಗವದನುಗ್ರಹದಿಂದ. ಹೀಗೆ ಇಲ್ಲಿಯ ಕನ್ನಡಿಗರು ಬಾಳಿದ್ದು, ಆರುನೂರು ವರ್ಷಗಳ ಕಾಲ, ಬಳಲಿದ್ದು ಆರುನೂರು ವರ್ಷಗಳಕಾಲ. ಈಗ ಉಳಿದದ್ದು ಇದು.

ಇಪ್ಪತ್ತನೆಯ ಶತಮಾನ ಆರಂಭವಾಯಿತು. ತಮ್ಮ ಮಾತು, ತಮ್ಮದು ಎಂಬ ಜ್ಞಾನೋದಯವಾಗಿ ಎಲ್ಲೆಲ್ಲಿಯೂ ತಮ್ಮದನ್ನು ಕಾಪಾಡುವುದಕ್ಕಾಗಿ, ಹೋದದ್ದನ್ನು ಪಡೆಯುವದಕ್ಕಾಗಿ ಹೋರಾಟ ನಡೆಯಿತು. ಇಲ್ಲಿಯವರು ಇದರ ಮರ್ಮವನ್ನು ತಿಳಿದುಕೊಂಡರು. ಹೊರಗಣಗಾಳಿ ಸೋಂಕಿತು.

ಇಷ್ಟು ಹೊತ್ತಿಗೆ ವಿಶ್ವ ವಿದ್ಯಾನಿಲಯವು ಸ್ಥಾಪಿತವಾಯಿತು. ವಿದ್ಯೆ ಅಗ್ಗವಾಯಿತು. ಕನ್ನಡ, ಮರಾಠಿ, ತೆಲುಗು ಎಂಬ ಮಾತುಗಳು ವಿದ್ಯಾರ್ಥಿಗಳ ಕಿವಿಯಲ್ಲಿ ಬೀಳ ತೊಡಗಿದುವು. ವರ್ಷ ವರ್ಷ ಒಬ್ಬಿಬ್ಬರು ಉಚ್ಚತರಗತಿಯಲ್ಲಿ ಕನ್ನಡ-ವನ್ನು ಮುಂದೇನಾದರೂ ಆಗಲಿ ಎಂದು ಕಲಿಯಲಾರಂಭಿಸಿದರು.

ಇದು ಎಚ್ಚತ್ತ ಕಾಲವೆಂದು ಹೇಳುವುದುಂಟು. ವಯಸ್ಕರಿಗಿಂತ ಯುವಕರೇ ಹೆಚ್ಚು ಎಚ್ಚತ್ತಿದ್ದಾರೆ ಎಂದೂ ಹೇಳುವುದುಂಟು. ಇವರಲ್ಲಿ ಅಭಿಮಾನವೂ, ಕಾರ್ಯದಕ್ಷತೆಯೂ ಇವೆಯೆಂದು ಹೇಳಲಾಗುತ್ತಿದೆ. ಆದರೇನು, ಇವರಮುಂದೆ ಅಂಧಕಾರ ಕವಿದಿದೆ. ಆದರೂ ಇವರು ಮುನ್ನುಗ್ಗುತ್ತಿದ್ದಾರೆ.

ನಮ್ಮಲ್ಲಿ ದೇಶಭಾಷೆಗಳು ಉಚ್ಚತರಗತಿಯ ವ್ಯಾಸಂಗ ವಿಧಾನದಲ್ಲಿ ದ್ವಿತೀಯ ಭಾಷೆಗಳಾಗಿರದೆ, ಐಚ್ಛಿಕ ವಿಷಯಗಳ ಗುಂಪಿನಲ್ಲಿ ಸೇರಿರುವುದು ಎಲ್ಲರಿಗೂ ತಿಳಿದ ವಿಷಯ. ಇವು ಐಚ್ಛಿಕ ವಿಷಯಗಳಾಗಿರುವಮಾತ್ರದಿಂದಲೇ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿ ಈ ಭಾಷೆಗಳನ್ನು ತೆಗೆದುಕೊಳ್ಳುವುದಿಲ್ಲ; ಈ ಭಾಷೆಗಳನ್ನು ವ್ಯಾಸಂಗ ಮಾಡುವುದರಿಂದ ಮುಂದಿನ ಜೀವನ ಪಥದಲ್ಲಿ ಆರ್ಥಿಕ ದೃಷ್ಟಿಯಿಂದ ಪ್ರಯೋಜನವಿಲ್ಲವೆಂದು ತಿಳಿದುಕೊಂಡಂತಿದೆ. ಸರಕಾರಿ ವ್ಯವಹಾರದಲ್ಲಿ ಈ ಭಾಷೆಗಳ ಆವಶ್ಯಕತೆ ಹೆಚ್ಚಾಗಿ ಕಂಡುಬರುವುದಿಲ್ಲವಾದ್ದರಿಂದ ಉದ್ಯೋಗ ದೊರೆಯುವುದಿಲ್ಲವೆಂದೂ, ಈ ಭಾಷೆಗಳನ್ನು ತೆಗೆದುಕೊಂಡು ವ್ಯಾಸಂಗ ಮಾಡುವವರಿಗೆ ಗೌರವವಿಲ್ಲವೆಂದೂ, ಅವರನ್ನು ಕೀಳುಗಣ್ಣಿನಿಂದ ನೋಡುತ್ತಾರೆಂದೂ, ನಮ್ಮ ಯುವಕರು ಹೇಳುತ್ತಾರೆ. ಇವರಿಗೆ ಅಲ್ಲಲ್ಲಿ ಇಂಥ ಅನುಭವಗಳುಂಟಾಗಿರುವುದರಿಂದ ಕನ್ನಡದ ಅಭ್ಯಾಸಕ್ಕಾಗಿ ಅವರು ಹಿಂಜರಿಯುತ್ತಿದ್ದಾರೆ. ಯುವಕರು ಹೃದಯದಲ್ಲಿ ಇಂಥ ಭಯಕ್ಕೆ ಎಡೆಗೊಡಬಾರದು. ಉದ್ಯೋಗದ ಸಮಸ್ಯೆ ಬರಿ ಕನ್ನಡವನ್ನೋದುವವರಿಗೆ ಮಾತ್ರವಿಲ್ಲ. ಈ ಕಾರಣದಿಂದ ಕನ್ನಡವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ಅದು ಬರಿ ಕುಂಟ ನೆವವಾಗುತ್ತದೆ. ಉಚ್ಚ ತರಗತಿಗಳಲ್ಲಿ ಕನ್ನಡವನ್ನೋದಿದವರಾರೂ ನಿರುದ್ಯೋಗಿಗಳಾಗಿ ಮನೆಯಲ್ಲಿ ಕುಳಿತಿಲ್ಲ. ಇನ್ನು ಕನ್ನಡವನ್ನೋದುವವರಿಗೆ ಸ್ಥಾನಮಾನ ವಿಲ್ಲವೆಂಬುದು. ಇದೂ ಒಂದು ತಪ್ಪು ತಿಳಿವಳಿಕೆಯೇ. ಕನ್ನಡದ ಪ್ರಾಚೀನತೆ, ಸಾಹಿತ್ಯದ ವಿಪುಲತೆ, ಅದಕ್ಕೆ ದೊರೆಯುತ್ತಿದ್ದ ರಾಜರ ಮನ್ನಣೆ, ಅವರ ವೈಭವ, ಘನತೆ ಮುಂತಾದುವುಗಳನ್ನು ಕನ್ನಡದ ವಿದ್ಯಾರ್ಥಿಗಳು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು. ಸಮಯ ಬಂದಾಗಲೆಲ್ಲ ಅವುಗಳ ವಿಷಯವಾದ ಜ್ಞಾನವನ್ನು ಜನರಲ್ಲಿ ಹರಡಬೇಕು. ಎಂದರೆ ಕನ್ನಡದ ಘನತೆಯ ತಿಳಿವಳಿಕೆ ಜನರಲ್ಲಿ ನೆಲೆಗೊಂಡು ಕನ್ನಡದ ಗೌರವವು ತನ್ನಷ್ಟಕ್ಕೆ ತಾನೇ ಮೇಲೇರುವುದು. ಇದು ಫಲಿಸಿತೆಂದರೆ ಕೀಳುಗಣ್ಣಿನಿಂದ ಕಾಣುವುದು ತಾನೇ ಅದೃಶವಾಗುವುದು. ಕನ್ನಡಿಗರೆಲ್ಲರೂ ಕನ್ನಡವನ್ನೋದುವವರಾದರೆ ಯಾರು ಯಾರನ್ನು ಕೆಳಗಣ್ಣಿನಿಂದ ನೋಡಬೇಕು ?

ಕನ್ನಡವು ಐಚ್ಛಿಕ ವಿಷಯವಾಗಿರುವುದರಿಂದ ಕನ್ನಡದ ಅಭಿಮಾನಿಗಳ ಅಭಿಮಾನವನ್ನು ಒರೆ ಹಚ್ಚಿ ನೋಡಲು ಅವಕಾಶವನ್ನು ಕಲ್ಪಿಸಿದಂತಾಗಿದೆ. ಈಗ ಎಲ್ಲರೂ

ಕನ್ನಡವನ್ನೋದುವ ಇಚ್ಛೆಯುಳ್ಳವರಾಗಿ ತಮ್ಮ ನಿಜವಾದ ಅಭಿಮಾನವನ್ನು ತೋರಿಸಬೇಕು. ಅವರು ಉದ್ಯೋಗ, ಗೌರವ, ಕೀಳ್ಮೆ ಒಂದನ್ನೂ ಲಕ್ಷಿಸಬಾರದು. ಕನ್ನಡವನ್ನೋದಿ ಕನ್ನಡದ ಹಂಬಲ ವೆಷ್ಟಿದೆಯೆಂಬುದನ್ನು ವ್ಯಕ್ತಗೊಳಿಸಬೇಕು. ಇದಕ್ಕೆ ಯಾರೂ ಅಡ್ಡಿಯಾಗುವದಿಲ್ಲ. ಪ್ರಭುತ್ವವೂ ಇದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

ಕನ್ನಡದ ಅನಕ್ಷರತೆ ನಿವಾರಣೆಯಾಯ್ತೆಂದರೆ ಕನ್ನಡವನ್ನು ಒದುವವರ ಸಂಖ್ಯೆ ಬೆಳೆಯುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದು ಸಾಧಿಸಬೇಕಾದರೆ ಹಳ್ಳಿ ಹಳ್ಳಿಗಳಲ್ಲಿ ಕನ್ನಡದ ಶಾಲೆಗಳು ಏರ್ಪಡಬೇಕೆಂದು ಎಲ್ಲರೂ ಒಪ್ಪುತ್ತಾರೆ. ಸರಕಾರದವರೂ, ಅನಕ್ಷರತೆ ದೂರಮಾಡಲು ಹೆಣಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಕನ್ನಡದೇಶದ ಮೂಲೆಮೂಲೆಗಳಲ್ಲಿ ಶಾಲೆಗಳು ನಿರ್ಮಿತವಾಗಿ ಕನ್ನಡಿಗರಲ್ಲಿ ಕನ್ನಡದ ಪ್ರಚಾರವಾದರೆ ಯಾರೂ ಬೇಡವೆನ್ನುವದಿಲ್ಲ. ಪ್ರಭುತ್ವದಿಂದ ಸಹಾಯವನ್ನೂ ನಿರೀಕ್ಷಿಸಬಹುದಾಗಿದೆ. ಇದಕ್ಕಾಗಿ ಕನ್ನಡಿಗರು ಕನ್ನಡವನ್ನೋದಲು ಸಿದ್ಧರಾಗಬೇಕು ಅಷ್ಟೆ.

ಶ್ರೀಮನ್ನಿಜಾಂ ಪ್ರಭುಗಳವರ ಮಹದಾಶ್ರಯದಲ್ಲಿ ಎಲ್ಲ ಭಾಷೆಗಳೂ ಸರ್ವತೋಮುಖವಾಗಿ ಅಭಿವೃದ್ಧಿಯನ್ನು ಹೊಂದುತ್ತವೆಯೆಂಬಲ್ಲಿ ಯಾವ ವಿಧವಾದ ಸಂದೇಹವಿಲ್ಲ,

**ಶ್ರೀಮಾನ್ ಪ್ರೊಫೆಸರ್ ಡಿ. ಕೆ. ಭೀಮಸೇನರಾಯರು ಎಂ. ಎ.,**

# ನಮ್ಮ ಇತಿಹಾಸ.

**: ವಿದ್ಯಾರ್ಥಿ :**

---

ಸತ್ಯವಾಗಿ ನಡೆದ ಸಂಗತಿಗಳನ್ನು ಪಕ್ಷಪಾತ, ದುರಭಿಮಾನ ದೃಷ್ಟಿಯಿಲ್ಲದೆ ಯಥಾರ್ಥವಾಗಿ ಹೇಳುವುದೆ ನಿಜವಾದ ಚರಿತ್ರೆಯೆಂದು ಇತಿಹಾಸಜ್ಞರು ಅಭಿಪ್ರಾಯಪಡುತ್ತಾರೆ. ಉತ್ಪ್ರೇಕ್ಷೆ, ಅತಿಶಯೋಕ್ತಿ ಮುಂತಾದ ವರ್ಣನಾತ್ಮಕವಾದ ವಾಕ್ಯ ಸರಣಿ ತಲೆದೋರಿದರೆ ಸತ್ಯವಾದ ಇತಿಹಾಸವು ಕಲಂಕಿತವಾಗುತ್ತದೆ. ಮಾತು ಸಯುಕ್ತಿಕವಾಗಿಯೂ, ಆಧಾರಗಳಿಗೆ ಸಮನ್ವಯವಾಗುವಂತೆಯೂ ಇದ್ದರೆ ಸಾಕು, ಚರಿತ್ರಕಾರನು ಕೃತಕಾರಿಯಾಗುವನು. ಈ ಲೇಖನದ ರಚನೆಯಲ್ಲಿ ಇದುವರೆಗೆ ಉಪಲಬ್ಧವಾಗಿ ಪ್ರಕಟವಾಗಿರುವ ಆಧಾರಗಳನ್ನೇ ಆದಷ್ಟುಮಟ್ಟಿಗೆ ಬಳಸಿಕೊಂಡಿದೆ.

ದಕ್ಷಿಣಾಪಥವೆಂಬ ಮಾತು ೨ ನೆಯ ಪುಲಿಕೇಶಿಯ ಶಾಸನಗಳಿಂದ ತಿಳಿದು ಬರುವುದರಿಂದ ಇದು ಅವನ ರಾಜ್ಯವಿಸ್ತಾರಕ್ಕೆ ಸಂವಾದಿಯಾದ ಪದವೆಂದು ಹೇಳಬಹುದಾಗಿದೆ. ಎಂದರೆ ನರ್ಮದಾ ನದಿಯಿಂದ ಕಾಂಚೀಪಟ್ಟಣದವರೆಗೆ ಹಬ್ಬಿದ ಅವನ ರಾಜ್ಯವು ದಕ್ಷಿಣಾಪಥವೆಂದು ವ್ಯವಹರಿಸಲ್ಪಟ್ಟಂತೆ ಕಂಡುಬರುತ್ತದೆ. ಪುಲಿಕೇಶಿ ಕರ್ನಾಟಕ ಸಾಮ್ರಾಜ್ಯದ ಅಧಿಪತಿಯೆಂಬ ಅಂಶದಲ್ಲಿ ವಿವಾದವಿಲ್ಲ. ಆದ್ದರಿಂದ ಈ ರಾಜ್ಯವನ್ನೆಲ್ಲ ಕನ್ನಡದ ಸಾಮ್ರಾಜವೆಂದುವ್ಯವಹರಿಸಬುಹುದಾಗಿದೆ. ಆದರೆ, ಈ ಬಾದಾಮಿ ಚಾಲುಕ್ಯ ರಾಜರಿಗಿಂತ ಮುಂಚೆ ಕನ್ನಡರಾಜ್ಯದ ಇತಿಹಾಸವನ್ನು ತಿಳಿಸುವ ಕೆಲವು ಕುರುಹಗಳು ಇರುವುದರಿಂದ ಅವುಗಳನ್ನು ಆಧರಿಸಿ ಸ್ವಲ್ಪಮಟ್ಟಿಗೆ ಪೂರ್ವೇತಿಹಾಸವನ್ನೂ ಪ್ರಸ್ತಾಪಿಸಿದರೆ ಅನುಚಿತವಾಗದು. ಕರ್ನಾಟಕಕ್ಕೆ ಮೌರ್ಯ ಚಂದ್ರಗುಪ್ತನು ( ಕ್ರಿ. ಪೂ. ೩ ನೆಯ ಶತಮಾನ ) ಬಂದಿದ್ದನೆಂಬ ವಿಷಯದಲ್ಲಿ ಇದೀಗ ಸಂದೇಹ ವುಂಟಾಗಿರುವದರಿಂದ ಇದನ್ನಿಲ್ಲಿ ಹೆಚ್ಚು ಪ್ರಸ್ತಾಪಿಸುವುದಿಲ್ಲ. ಆ ತರುವಾಯ ಬಿಂದುಸಾರನ ಕಾಲಾನಂತರ ಸಾಮ್ರಾಟನಾದ ಅಶೋಕನ ಕಾಲವು ಆರಂಭವಾಗುವುದು. ಇವನ ಕಾಲದ ಶಾಸನಗಳು ಕರ್ನಾಟಕದಲ್ಲಿ ಉಪಲಬ್ಧವಾಗಿರುವುದರಿಂದ ಕರ್ನಾಟಕ ಭಾಗವು ಅವನ ಆಳಿಕೆಗೆ ಒಳಪಟ್ಟಿದ್ದಿತು ಎಂಬುದು ನಿರ್ವಿವಾದವಾಗಿದೆ. ಅಶೋಕನ ಶಾಸನಗಳಲ್ಲಿ ಕೆಲವು ಶಾಸನಗಳು ನಿಜಾಂ ಪ್ರಾಂತಕ್ಕೆ ಸೇರಿದ ಕರ್ನಾಟಕ ಭಾಗದಲ್ಲಿ ಉಪಲಬ್ಧವಾಗಿರುವುದು, ಇಲ್ಲಿ ಮಹತ್ವದ ವಿಷಯ. ಮಸ್ಕಿ, ಕೊಪ್ಪಳ ಈ ಎರಡು ಸ್ಥಲಗಳಲ್ಲಿ ಅಶೋಕನ ಶಾಸನಗಳು ಸಿಕ್ಕಿವೆ. ಆಗಿನ

ಕಾಲದಲ್ಲಿ ಇವೆರಡು ಸ್ಥಲಗಳು ಅಶೋಕನಿಗೆ ದಕ್ಷಿಣದ ಕೇಂದ್ರಗಳಾಗಿದ್ದುವೆಂದು ಭಾವಿಸಬಹುದಾಗಿದೆ. ಅಶೋಕನು ಬೌದ್ಧ ಸಂಘಗಳನ್ನೇರ್ಪಡಿಸಿ ತನ್ನ ಮತ ತತ್ವಗಳ ಪ್ರಚಾರವನ್ನು ದಕ್ಷಿಣದಲ್ಲೆಲ್ಲ ಹರಡಿಸಿದುದು ಇಲ್ಲಿಂದಲೇ ಎಂದು ಹೇಳಬೇಕು. ಮಸ್ಕಿಎಂಬ ಮಾತು ಇದಕ್ಕೆ ಆಧಾರವಾಗಿ ತೆಗೆದುಕೊಳ್ಳಬಹುದಾಗಿದೆ. ಮಸ್ಕಿಯು ಹಿಂದಿನ ರೂಪವು ಮಾಸಂಗಿ ಎಂಬುದು. ಈ ರೂಪವು ೧೧, ೧೨ ನೆಯ ಶತಮಾನಗಳ ಶಾಸನಗಳಲ್ಲಿ ದೊರೆಯುತ್ತದೆ. ಮಾಸಂಗಿ ಎಂಬುದು ಮಹಾಸಂಘ ಎಂಬುದರ ಅಪಭ್ರಂಶ. ಮಹಾಸಂಘವೆಂಬುಪದೇ ಮಸ್ಕಿಯ ಮೊದಲನೆಯಹೆಸರು. ಅದು ಅಶೋಕನ ಕಾಲದಲ್ಲಿ ಬೌದ್ಧ ಭಿಕ್ಷುಗಳ ಮಹಾಸ್ಥಾನವಾಗಿರಬೇಕು ಕರ್ನಾಟಕ ಪ್ರಾಂತದಲ್ಲಿ ಬೌದ್ಧಮತವು ಎಷ್ಟುಮಟ್ಟಿಗೆ ಪ್ರಚಾರವಾಗಿದ್ದಿತೆಂಬುದನ್ನು ಇದರಿಂದ ಊಹಿಸಬಹುದಾಗಿದೆ. ಹೀಗೆಯೇ ಕೊಪ್ಪಳ. ಕೊಪ್ಪಳವು ಪ್ರಾಚೀನ ಕಾಲದಿಂದಲೂ ಅನೇಕ ಘಟನೆಗಳಿಗೆ, ಕೇಂದ್ರವಾಗಿದ್ದಿತೆಂದು ಕಂಡುಬರುತ್ತವೆ. ಮೊದಲು ಬೌದ್ಧ ಮತಕ್ಕೂ ಆಮೇಲೆ ಜೈನಮತಕ್ಕೂ ಅದು ಕೇಂದ್ರವಾಗಿದ್ದಿತು. ನೃಪತುಂಗನು ರನ್ನನು ತಮ್ಮ ಗ್ರಂಥಗಳಲ್ಲಿ ಕೊಪ್ಪಳವನ್ನು ಹೆಸರಿಸಿದ್ದಾರೆ. ರನ್ನನು ಕೊಪ್ಪಳವನ್ನ ಜೈನ ಕ್ಷೇತ್ರವೆಂದು ಉಲ್ಲೇಖಿಸಿದ್ದಾನೆ. ಮುಖ್ಯ ವಿಷಯವೇನೆಂದರೆ ಈ ಪ್ರಾಂತದ ಕನ್ನಡ ಭಾಗವು ಅತ್ಯಂತ ಪ್ರಾಚೀನ ಕಾಲದಿಂದ ವಿವಿಧ ರಾಜ್ಯಾಡಳಿತಗಳಿಗೂ ಮತ್ತು ಮತಪ್ರಚಾರಕ್ಕೂ ಮೂಲಸ್ಥಾನವಾಗಿದ್ದಿತೆಂದು ಹೇಳಬೇಕಾಗುತ್ತದೆ

ಅಶೋಕನ ಕಾಲವಾದಮೇಲೆ ದಕ್ಷಿಣದಲ್ಲಿ ಸ್ವತಂತ್ರರಾಗಿ ಕ್ರಿಸ್ತ ಶಕ ಆರಂಭದ ತರುವಾಯ ಮೂರು ಶತಮಾನಗಳವರೆಗೆ ರಾಜ್ಯಭಾರ ಮಾಡಿದ ಮನೆತನ, ವೆಂದರೆ ಶಾತವಾಹನರದು. ಈ ಮನೆತನಕ್ಕೆ ಆಂಧ್ರಭೃತ್ಯಎಂಬ ಹೆಸರೂಇದೆ. ಆಂಧ್ರಭೃತ್ಯಎಂದಕೂಡಲೇ ತೆಲುಗಿನಸಂಬಂಧ ಇವರಿಗೆ (ಈ ಮನೆತನದವರಿಗೆ) ಇದ್ದಿತೆಂದು ಭ್ರಮೆಯಾಗುವಹಾಗಿದೆ. ಈಗಿನಕಾಲದಲ್ಲಿ ಆಂಧ್ರಕ್ಕೂ ತೆಲುಗಿಗೂ ಅಭೇದ ಭಾವವಿರುವುದೇ ಇದಕ್ಕೆ ಕಾರಣ. ಆದರೆ ಎರಡು ಸಾವಿರ ವರ್ಷದಹಿಂದೆ ತೆಲಗು ಕರ್ನಾಟಕ ಎಂಬ ಭೇದಭಾವವಿಲ್ಲದೆ ಇದ್ದುದರಿಂದ ಆಂಧ್ರಭೃತ್ಯವೆಂಬಪದವು ತೆಲಗು ಮಾತಾಡುವವರನ್ನುದ್ದೇಶಿಸಿಯೇ ಪ್ರಯುಕ್ತವಾಗಿದೆಯೆಂದು ಹೇಳಲಾಗದು. ಶಾತವಾಹನರು ಆಳಿದ ಪ್ರದೇಶದಲ್ಲಿ ನಿಜಾಂಪ್ರಾಂತವೆಲ್ಲವೂ ಅಡಕವಾಗಿದ್ದಿತು. ಎಂದರೆ ಕನ್ನಡದ ಬಹುಭಾಗವು ಇವರ ಸಾಮ್ರಾಜ್ಯದಲ್ಲಿ ಸಮಾವೇಶವಾಗಿತ್ತು. ಹೈದರಾಬಾದಿನ ಪ್ರಾಚೀನ ಸಂಶೋಧನ ಇಲಾಖೆಯವರು ನಡೆಯಿಸಿದ ಸಂಶೋಧನೆಯಿಂದ ಕೊಂಡಾಪುರವೆಂಬಸ್ಥಳವು ಶಾತವಾಹನರಆಳಿಕೆಯ ಕಾಲದ ಸ್ಥಳವೆಂದು ಗೊತ್ತಾಗಿದೆ.

+ ಹೈದರಾಬಾದಿನಿಂದ ಪಶ್ಚಿಮಕ್ಕೆ ೪೧ ಮೈಲು ದೂರದಲ್ಲಿದೆ.

ಶಾತವಾಹನರ ಕಾಲದ ತರುವಾಯ ಕರ್ನಾಟಕವು ಒಬ್ಬ ರಾಜನ ಆಧಿಪತ್ಯಕ್ಕೆ ಒಳಗಾಗದೆ ಅಲ್ಲಲ್ಲಿ ಬಿಡಿಬಿಡಿಯಾಗಿ ಹಂಚಿಹೋಗಿ ಸಣ್ಣಸಣ್ಣ ರಾಜರ ಆಡಳಿತಕ್ಕೆ ಒಳಗಾಗಿತ್ತೆಂದು ಕಂಡುಬರುತ್ತದೆ. ಹೀಗೆ ಬನವಾಸಿಯ ಕದಂಬರು, ತಲಕಾಡಿನ ಗಂಗರು, ನೊಳಂಬರು ಮುಂತಾದವರು ಕನ್ನಡ ರಾಜ್ಯವನ್ನು ಆಳುತ್ತಿದ್ದರು. ಆರನೆಯ ಶತಮಾನದ ಆರಂಭದ ಹೊತ್ತಿಗೆ ಬಾದಾಮಿಯಲ್ಲಿ ಚಾಲುಕ್ಯರಾಜರು ರಾಜ್ಯವನ್ನು ಕಟ್ಟಿಕೊಂಡು ಅದನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಏಳನೆಯ ಶತಮಾನದ ಆರಂಭದಲ್ಲಿ ೨ ನೆಯ ಪುಲಿಕೇಶಿ (ಸುಮಾರು ೬೨೦ ಇ.) ಸಂಪೂರ್ಣಸ್ವತಂತ್ರನಾಗಿ ನರ್ಮದೆಯಿಂದ ಪಲ್ಲವ ರಾಜ್ಯದವರೆಗೆ ಸಾಮ್ರಾಜ್ಯವನ್ನು ವಿಸ್ತರಿಸಿದನು. ಇವನೇ ಕರ್ನಾಟಕ ಸಾಮ್ರಾಜ್ಯದ ಮೊದಲನೆಯ ಸಾರ್ವಭೌಮ. ಹರ್ಷವರ್ಧನನ್ನು ನರ್ಮದೆಯ ದಂಡೆಯಲ್ಲಿ ತಡೆದು ಮುಂದೆ ಬಾರದಂತೆ ತನ್ನ ಅಪಾರವಾದ ಗಜ ಸೇನೆಯಿಂದ ಅವನಲ್ಲಿ ಭಯವನ್ನು ಹುಟ್ಟಿಸಿ, ಅವನನ್ನು ತಿರುಗಿ ಹೋಗಲು ಒತ್ತಂಬ ಪಡಿಸಿದ ಅಸಹಾಯ ಶೂರನು ಪುಲಿಕೇಶಿ. ಉತ್ತರದ ಸಾರ್ವಭೌಮನಿಗೆ ದಕ್ಷಿಣದ ಸಾರ್ವಭೌಮನ ಪರಾಕ್ರಮದ ಅರಿವು ಉಂಟಾದದ್ದು ಆಗಲೇ. ಕನ್ನಡಿಗರ ಕೆಚ್ಚು, ಬಿಗುಹು, ಕಾರ್ಯದಕ್ಷತೆ ಇವುಗಳ ತಿಳಿಹು ಉತ್ತರ ಹಿಂದುಸ್ಥಾನದಲ್ಲೆಲ್ಲ ಹಬ್ಬಿದುದು ಈ ಒಂದು ಪ್ರಸಂಗದಿಂದಲೇ. ಈಮಾತಿಗೆ ಉಪಷ್ಟಂಭಕವಾಗಿ ಚೀಣದೇಶದ ಬೌದ್ಧ ಯಾತ್ರಿಕನಾದ ಹ್ಯೂನ್ಸಾಂಗನ ಗ್ರಂಥವನ್ನು ಆಧಾರವಾಗಿ ಹೇಳಬಹುದು.

ಪಶ್ಚಿಮ ಚಾಲುಕ್ಯರ ಕಾಲದ ಆಡಳಿತವೆಂದರೆ ಕನ್ನಡಿಗರ ಅಭ್ಯುದಯದ ದ್ಯೋತಕವೆಂದು ಹೇಳಬೇಕು. ಏಕೆಂದರೆ ಆಗಲೇ ಕನ್ನಡಿಗರಿಗೆ ಒಂದು ಸ್ವತಂತ್ರವಾದ ಸಾಮ್ರಾಜ್ಯವು ಲಭಿಸಿದುದಲ್ಲದೆ ಇವರ ಸಂಸ್ಕೃತಿ ಮುಂದೆ ಒಂದು ಸ್ವರೂಪ ಕೊಳ್ಳಲು ತಕ್ಕ ಸಾಧನವು ಕಲ್ಪಿತವಾಯಿತು. ಭಾಷೆ, ಸಾಹಿತ್ಯ, ಧರ್ಮ, ಶಿಲ್ಪ, ವಾಸ್ತು ಮುಂತಾದವೆಲ್ಲವೂ ಅಭಿವೃದ್ಧಿಯ ಮಾರ್ಗವನ್ನು ಅವಲಂಬಿಸಿದ್ದು ಆಗಲೇ.

ರಾಷ್ಟ್ರಕೂಟರ ರಾಜ್ಯಾಡಳಿತ ಆರಂಭವಾದ ಕಾಲದಿಂದ ಈಗಿನ ನಿಜಾಂ ಪ್ರಾಂತದ ಕನ್ನಡ ಭಾಗವು ಎಲ್ಲಾ ಚಳುವಳಿಗಳಿಗೆ ಮುಖ್ಯ ರಂಗಸ್ಥಳವಾಗಿ ಏರ್ಪಟ್ಟಿತು. ಮಳಖೇಡವೇ ರಾಜಧಾನಿ. ಇಲ್ಲಿಂದಲೇ ಕನ್ನಡದ ಸಂಸ್ಕೃತಿ ಹಬ್ಬಿದುದು. ನೃಪತುಂಗನು ಮಳಖೇಡ ಪಟ್ಟಣವನ್ನು ಅನೇಕ ವಿಧದಿಂದ ಶೃಂಗರಿಸಿ ಇಡೀ ಹಿಂದುಸ್ಥಾನದಲ್ಲಿ ಪ್ರಸಿದ್ಧಿ ಪಡೆಯುವಂತೆ ಮಾಡಿದನು.) ಪರದೇಶದ ವ್ಯಾಪಾರಿಗಳು ಮಳಖೇಡದ ಪ್ರಸ್ತಾಪವನ್ನೆತ್ತಿರುವುದಲ್ಲದೆ ಅಲ್ಲಿಯ ವೈಭವವನ್ನು ಕುರಿತು ಪ್ರಸಂಗಿಸಿದಾರೆ. ಕನ್ನಡದ ವೈಭವವು ಉಚ್ಚ ಶಿಖರವನ್ನು ಮುಟ್ಟಿದ್ದು ನೃಪತುಂಗನ ಆಳಿಕೆಯ

ಲ್ಲಿಯೇ. ಕನ್ನಡಭಾಷೆ ಸಾಹಿತ್ಯ, ಕನ್ನಡದ ಜನಾಂಗದ ವೈದುಷ್ಯ, ಕನ್ನಡ ನಾಡಿನ ಧರ್ಮ ಒಟ್ಟಿನಲ್ಲಿ ಸುಸಂಸ್ಕೃತ ಜೀವನಕ್ಕೆಬೇಕಾಗುವ ಎಲ್ಲಬಗೆಯ ಕುರಹಗಳ ಉಲ್ಲೇಖನವು ನೃಪತುಂಗನ ಗ್ರಂಥದಲ್ಲಿ ಕಂಡುಬರುತ್ತದೆ. ಈ ಮಹಾವೀರನು ಸುಮಾರು ೬೦ ವರುಷಗಳಕಾಲ ಒಳ್ಳೇದರ್ಪದಿಂದ ರಾಜ್ಯಭಾರಮಾಡಿ ಕೊನೆಯಲ್ಲಿ ದೀಕ್ಷೆ ವಹಿಸಿದನು. ಇದು ಆಗಿನಕಾಲದ ವೀರ ಪುರುಷರ ಜೀವನ ಧ್ಯೇಯವನ್ನು ತಿಳಿಸುವ ಮುಖ್ಯವಿಷಯವಾಗಿದೆ. ಇವನ ಪೂರ್ವಿಕನಾದ ಮೊದಲನೆಯ ಕೃಷ್ಣನು ಎಲ್ಲೋರದ ಕೈಲಾಸ ದೇವಾಲಯವನ್ನು ಕಟ್ಟಿಸಿ ಕನ್ನಡಿಗರ ಶಿಲ್ಪಕಲೆಯ ಕುಶಲತೆಯನ್ನು, ಇವರ ಲಲಿತ ಕಲೆಯ ಉಪಾಸನ ಬುದ್ಧಿಯನ್ನು ಜಗತ್ತಿಗೆ ಪ್ರದರ್ಶಿಸಿದನು. ಇಂದಿಗೂ ಅವನ ಕಾರ್ಯವು ಶಾಶ್ವತವಾಗಿ ಉಳಿದಿದೆ. ಮುಂದೆಯೂ ಉಳಿಯುತ್ತದೆ. ಜಗತ್ಪ್ರಸಿದ್ಧವಾದ ಚಿತ್ರಕಲಾ ನೈಪುಣ್ಯವು ಆಗಲೇ ಎಷ್ಟು ಪರಿಪಕ್ವಾವಸ್ಥೆಯನ್ನು ಮುಟ್ಟಿದ್ದಿತೆಂಬುದು ಕನ್ನಡಿಗರಿಗೆ ಅಭಿಮಾನಾಸ್ಪದವಾದ ವಿಷಯವಾಗಿದೆ. ಇದು ಎಂಟನೆಯ ಶತಮಾನದ ಮಾತು. ಅಂದಿನಿಂದ ಈ ಕಲೆ ವಿಕಾಸ ಹೊಂದುತ್ತ ಅಭಿವೃದ್ಧಿಯ ಮಾರ್ಗವನ್ನು ಅವಲಂಬಿಸಿತೆನ್ನಬಹುದು. ಮುಂದೆ ಮೂರನೆಯ ಕೃಷ್ಣನ ಕಾಲದ ಹೊತ್ತಿಗೆ (೧೦ ನೆಯ ಶತಮಾನ) ಕನ್ನಡ ಸಾಹಿತ್ಯವು ಬೆಳೆದು ಕವಿಚಕ್ರವರ್ತಿಗಳು ಹುಟ್ಟುವ ಸಮಯವೊದಗಿತ್ತು. ಈ ಚಕ್ರವರ್ತಿ, ಪೊನ್ನನಿಗೆ ಉಭಯಕವಿ ಚಕ್ರವರ್ತಿಯೆಂಬ ಬಿರುದನ್ನಿತ್ತನು. ಕನ್ನಡ ಸಾಮ್ರಾಜ್ಯಕ್ಕೆ ಕೃಷ್ಣನು ಚಕ್ರವರ್ತಿ ಹೇಗೋ. ಕನ್ನಡ ಸಾಹಿತ್ಯಕ್ಕೆ ಪೊನ್ನ ಕವಿ ಚಕ್ರವರ್ತಿ ಹಾಗೆ. ಇದರಿಂದ ಕನ್ನಡ ಸಾಮ್ರಾಜ್ಯದ ವಿಸ್ತಾರವನ್ನೂ ಕನ್ನಡ ಸಾಹಿತ್ಯದ ವಿಸ್ತಾರವನ್ನು ಸುಲಭವಾಗಿ ಊಹಿಸಿಕೊಳ್ಳಬಹುದಾಗಿದೆ. ಕನ್ನಡ ಸಾಹಿತ್ಯವು ಊರ್ಜಿತೆಯ ಮಾರ್ಗಗಾಮಿಯಾಗಿದುದು ಇಲ್ಲಿಂದಲೇ. ಹತ್ತನೆಯ ಶತಮಾನವು ಕರ್ನಾಟಕದ ಇತಿಹಾಸದಲ್ಲಿಯೂ ಸಾಹಿತ್ಯದ ಇತಿಹಾಸದಲ್ಲಿಯೂ ಸುವರ್ಣಾಕ್ಷರಗಳಿಂದ ಬರೆಯತಕ್ಕದ್ದಾಗಿದೆ. ಕನ್ನಡಿಗರ ಅತ್ಯಂತ ವೈಭವದ, ಉನ್ನತಿಯ ಕಾಲವಿದು. ಅವರ ಸಂಸ್ಕೃತಿ ಬಹುಮುಖವಾಗಿ ಹರಡಿದ ಕಾಲವಿದು. ರಾಜಕೀಯ ವಿಷಯದಲ್ಲಿ, ಸಾಮಾಜಿಕ ವಿಷಯದಲ್ಲಿ, ಸಾಂಸ್ಕೃತಿಕ ಜೀವನದಲ್ಲಿ ಇವರಿಗೆ ಸರಿದೊರೆಯಾದವರು ನೆರೆಯಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಕನ್ನಡಿಗರ ದರ್ಪ, ಪರಾಕ್ರಮ, ಶೌರ್ಯ ಸಾಹಸಾದಿಗಳು ಕನ್ನಡ ಸಾಮ್ರಾಜ್ಯದ ಎಲ್ಲೆಯನ್ನೂ ದಾಟಿ ಉತ್ತರದವರೆಗೂ ಪ್ರಸರಿಸಿದದು ಈಗಲೇ. ಪಂಪನಂಥ ಉದ್ದಾಮ ಕವಿ ಪರಿಶೋಭಿಸುತ್ತಿದ್ದ ಕಾಲ ಇದೇ. ಮಹಾ ಮಂಡಲೇಶ್ವರರು, ಮಹಾ ಸಾಮಂತರು, ಮಂಡಲಾಧಿಪತಿಗಳು, ಸಾಮಂತರು, ಪಡೆವಳರು, ನೆಜ್ಜೆವಳರೂ ಸಹ ಶೂರರೇ, ವಿದ್ಯಾ ಪಕ್ಷಪಾತಿಗಳೇ. ಕವಿಗಳನ್ನು ಇವರು ಪೋಷಿಸಿದರು. ಅವರಿಂದ ಗ್ರಂಥಗಳನ್ನು ಬರೆಯಿಸಿದರು. ತಾವೂ ಬರೆದರು. ಇವರು ರಾಜರೂ ಅಹುದು. ರಾಜ ಕವಿಗಳೂ ಅಹುದು.

ಹತ್ತನೆಯ ಶತಮಾನದ ಅಂತ್ಯ ಭಾಗದಲ್ಲಿ ಕನ್ನಡ ಸಾಮ್ರಾಜ್ಯದಲ್ಲಿ ಮತ್ತೊಂದು ಮಹಾರಾಜ್ಯಾಂದೋಳನವು ಎದ್ದಿತು. ಚಾಳುಕ್ಯರ ಎರಡನೆಯ ತೈಲಪನು ಮುರುಟಿ ಬತ್ತಿಹೋಗಿದ್ದ ಚಾಳುಕ್ಯ ವಂಶದ ಕುಡಿಯನ್ನು ನೀರೆರೆದು ಮುಂದಕ್ಕೆ ಹರಡಿದ ಕಾಲವಿದು. ಸೇನಾ ಸನ್ನಾಹದೊಡನೆ ಮಾನ್ಯಖೇಟ ನಗರವನ್ನು ಮುತ್ತಿ ಅಗ್ನಿಗೆ ಆಹುತಿ ಮಾಡಿದನು. ಆಗಲೇ ಕನ್ನಡಿಗರ ಸಂಸ್ಕೃತಿಯ ಕೆಲವು ಅಂಶವು ಅಗ್ನಿದಗ್ಧವಾಯಿತು. ರಾಷ್ಟ್ರಕೂಟರ ರಾಜಧಾನಿಯಲ್ಲಿದ್ದ ಅನೇಕ ಗ್ರಂಥ ಭಂಡಾರಗಳು ಅಗ್ನಿ ನಾರಾಯಣನಿಗೆ ಆಹುತಿಯಾದವು. ನೃಪತುಂಗನು 'ಕವಿರಾಜಮಾರ್ಗ'ದಲ್ಲಿ ಹೆಸರಿಸಿದ ಸುಮಾರು ಹತ್ತು ಜನ ಕವಿಗಳ ಕೃತಿಗಳು ಆಗಲೇ ನಾಶವಾಗಿರಬೇಕು. ಮಾನ್ಯಖೇಟದಲ್ಲಿ ದಗ್ಧಾವಶೇಷವಾಗಿ ಉಳಿದ ಕುರುಹೆಂದರೆ ಅಲ್ಲಿರುವ ಒಂದು ಜಿನಾಲಯ. ಈ ಒಂದು ಜಿನಾಲಯವೇ ಮಾನ್ಯಖೇಟದ ಪೂರ್ವೇತಿಹಾಸವನ್ನು ತಿಳಿಸಲು ಸಾಕಾಗಿದೆ. ೨ನೆಯ ತೈಲಪನ (೯೭೩ ಇ.) ಈ ಕಾರ್ಯವು ಅಷ್ಟು ಸ್ತುತಿಗೆ ಅರ್ಹವಲ್ಲವಾದರೂ, ಅವನು ತನ್ನೀ ಕೃತ್ಯವನ್ನು ಮರೆಸುವಂಥ ಕಾರ್ಯಗಳನ್ನು ಮುಂದೆ ಮಾಡಿದನು. ಕಲ್ಯಾಣವು ರಾಜಧಾನಿಯಾಗಿ ಏರ್ಪಟ್ಟಿತು. ಸಾಹಿತ್ಯ ಮಂದಿರವು ಮಾನ್ಯಖೇಟದಿಂದ ಕಲ್ಯಾಣಕ್ಕೆ ಬದಲಾಯಿಸಿತು. ಕಲ್ಯಾಣವು ಕನ್ನಡ ಸಾಮ್ರಾಜ್ಯಕ್ಕೆ ಕೇಂದ್ರವಾಗಿ ನೆಲೆಗೊಂಡಿತು. ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿದ್ದ ಮಹಾಪುರುಷರೂ, ಕವಿಗಳೂ, ಕಲ್ಯಾಣಕ್ಕೆ ಆಕರ್ಷಿತರಾದರು. ರನ್ನ ಮಹಾಕವಿ ಕನ್ನಡದ ಸಾಮ್ರಾಜ್ಯದ ಮುಖ್ಯ ಸ್ಥಳಕ್ಕೆ ಬಂದುದ್ದು ಈಗಲ್ಲೇ. ತೈಲಪನು ರಾಜ್ಯಾರಂಭದ ಜೀವನದಲ್ಲಿ ರಾಜ್ಯವನ್ನು ವಿಸ್ತರಿಸುವ ಕಾರ್ಯದಲ್ಲಿ ದಕ್ಷತೆಯನ್ನು ವಹಿಸಿದ್ದಂತೆ, ಉತ್ತರ ಕಾಲದಲ್ಲಿ ಸಾಹಿತ್ಯ ಸೇವೆಯಲ್ಲಿ ದಕ್ಷತೆಯನ್ನ ವಹಿಸಿದ್ದನು. ರನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದು ದೊರೆತುದದು ಈ ಕಾಲದಲ್ಲಿಯೇ; ಎಂದರೆ ರಾಷ್ಟ್ರಕೂಟರ ಕಾಲದಿಂದ ಹರಿದುಬಂದ ಸಾಹಿತ್ಯವಾಹಿನಿ ಮುಂದಕ್ಕೂ ತಡೆಯಿಲ್ಲದೆ ಪ್ರವಹಿಸುತ್ತ ಬಂದುದನ್ನು ಇಲ್ಲಿ ಕಾಣಬಹುದು. ಇರಿವಬೆಡಂಗನಿಗೆ ಅರಿಕೇಸರಿಯ ಮಾದರಿಯಲ್ಲಿ ಕನ್ನಡಸಾಹಿತ್ಯದ ಕವಿತಾರತ್ನವೊಂದು ಅರ್ಪಿತವಾಯಿತು.

ಹನ್ನೊಂದನೆಯ ಶತಮಾನಕ್ಕೆ ಈಗ ನಾವು ಬರುತ್ತೇವೆ. ಆರನೆಯ ವಿಕ್ರಮಾರ್ಕನ ಕಾಲವಿದು. ಈ ಶತಮಾನದಲ್ಲೆಲ್ಲ ಇವನೇ ಪರಮವಿಖ್ಯಾತನು. ಇವನ ಕಾಲದಲ್ಲಿ ಸುತ್ತಮುತ್ತ ದಕ್ಷಿಣದ ರಾಜರು ತಲೆಯೆತ್ತಿ ಕರ್ನಾಟಕ ಸಾಮ್ರಾಜ್ಯವನ್ನು ಒಳನುಗ್ಗ ತೊಡಗಿದರು. ಆಗಲೇ ಸಾಮ್ರಾಜ್ಯವು ಒಡೆದು ಹೋಗುವ ಸ್ಥಿತಿ ಒದಗಿದ್ದಿತು. ಆದರೆ ಕರ್ನಾಟಕದ ಸಾಮ್ರಾಜ್ಯದ ಲಕ್ಷ್ಮಿಯ ವೈಭವವು ಇನ್ನೂ ಕೆಲವು ಕಾಲದವರೆಗೆ ನಡೆಯಬೇಕಾಗಿದ್ದುದರಿಂದ ವಿಕ್ರಮಾರ್ಕನಂತಹ ವೀರ ಪುರುಷನು

ಉದಯ ಹೊಂದಿದನು. ವಿಕ್ರಮಾರ್ಕನು ಈ ವೈರಿಗಳನ್ನು ಸದೆಬಡಿದು ವಿಜಯ ಯಾತ್ರೆಯನ್ನು ಯಶಸ್ವಿಯಾಗಿ ಕೈಕೊಂಡನು. ಇವನ ಹೆಸರು ಕೇಳಿ ವೈರಿರಾಜ ರೆಲ್ಲರೂ ಕಂಪಿಸುತ್ತಿದ್ದರು. ಆದ್ದರಿಂದಲೇ ಇವನಿಗೆ ಶಕಪುರುಷನೆಂಬ ಖ್ಯಾತಿಯು ಪ್ರಾಪ್ತವಾಯಿತು. ಬಾದಾಮಿ ಚಾಲುಕ್ಯ ವಂಶದಲ್ಲಿ ಎರಡನೆಯ ಪುಲಿಕೇಶಿಯೂ ರಾಷ್ಟ್ರಕೂಟ ವಂಶದಲ್ಲಿ ಅಮೋಘವೃಷ ನೃಪತುಂಗನು ಹೇಗೋ ಕಲ್ಯಾಣಿಚಾಲುಕ್ಯ ಶಾಖೆಯಲ್ಲಿ ಈ ವಿಕ್ರಮಾರ್ಕನು ಹಾಗೆ. ಕನ್ನಡದ ಜನಾಂಗದ ವೈಶಿಷ್ಟ್ಯವು ಈ ಶಕ ಪುರುಷನಾದ ವಿಕ್ರಮಾರ್ಕನಿಂದ ಪ್ರಸ್ಫುಟವಾಗಿ ವ್ಯಕ್ತವಾಗುವುದು. ಕನ್ನಡಿಗರಿಗೆ ಒಬ್ಬ ಶಕಪುರುಷನು ದೊರೆತು ಈ ನಾಡಿನಲ್ಲೆಲ್ಲ ಅವನ ಶಕವೇ ಶಕವಾಗಿ ಪರಿಗಣಿತ ವಾಯಿತು. ಕನ್ನಡನಾಡಿನ ತುಂಬ ಎಲ್ಲಿನೋಡಿದರೂ ಮೂಲೆಮೂಲೆಯಲ್ಲಿಯೂ ವಿಕ್ರಮಾರ್ಕನ ಶಾಸನಗಳೇ ಶಾಸನಗಳು. ಕಲಬುರ್ಗಿ, ಬೀದರ್, ರಾಯಚೂರು, ಹೈದರಾಬಾದಿನ ಸುತ್ತಿನ ಪ್ರಾಂತ; ಈಗಿನ ತೆಲಂಗಾಣಾಪ್ರಾಂತ: ಇಲ್ಲೆಲ್ಲ ವಿಕ್ರಮಾ ರ್ಕನ ಶಾಸನಗಳು ಕರ್ನಾಟಕದ ಬೇರೆ ಎಡೆಗಳಲ್ಲಿ ದೊರೆಯುವಂತೆ ಹೇರಳವಾಗಿ ದೊರೆಯುತ್ತವೆ. ಇವನ ಕೀರ್ತಿ ಪ್ರತಾಪಗಳು ಉತ್ತರ ಹಿಂದುಸ್ಥಾನದಲ್ಲೆಲ್ಲ ಹರಡಿ ಕಾಶ್ಮೀರದಿಂದಲೂ ಪಂಡಿತರನ್ನು ದಕ್ಷಿಣಕ್ಕೆ ಆಕರ್ಷಿಸುವಹಾಗೆ ಮಾಡಿದವು. ಬಿಲ್ಹಣ, ವಿಜ್ಞಾನೇಶ್ವರರಂತಹ ದಿಗ್ದಂತಿ ಪಂಡಿತರು ಇವನ ಸಭೆಯನ್ನಲಂಕರಿಸಿ ದ್ದರು. ವಿಕ್ರಮಾಂಕದೇವ ಚರಿತೆ ಹುಟ್ಟಿದುದು ಈಗಲೇ. ಗ್ರಂಥವು ಸಂಸ್ಕೃತದಲ್ಲಿ ದ್ದರೂ, ಕರ್ನಾಟಕ ಸಾರ್ವಭೌಮನ ಜೀವನವನ್ನು ಪ್ರತಿಪಾದಿಸುತ್ತಿರುವುದರಿಂದ ಈಗ್ರಂಥದತುಂಬ ಕರ್ನಾಟಕೀಯತೆಯನ್ನು ಕಾಣಬಹುದಾಗಿದೆ. ಬಿಲ್ಹಣನು ಕನ್ನಡ ನಾಡಿನಲ್ಲಿ ಹುಟ್ಟಿ ಅಚ್ಚಕನ್ನಡಿಗನಾದ ಕವಿಯಾಗಿದ್ದರೆ, ವಿಕ್ರಮಾಂಕದೇವ ಚರಿ ತೆಯು ಸಂಸ್ಕೃತದಲ್ಲಲ್ಲದೆ ಕನ್ನಡದಲ್ಲಿ ಲಭಿಸಬಹುದಾಗಿದ್ದಿತು. ಪಂಪ ರನ್ನರ ಜೊತೆ ಯಲ್ಲಿ ಬಿಲ್ಹಣನ ಹೆಸರು ವಿರಾಜಮಾನವಾಗುತ್ತಿತ್ತು. ವಿಷಾದದ ಸಂಗತಿಯೆಂದರೆ ಆಗಿನ ಕರ್ನಾಟಕ ವೀರನಾದ ವಿಕ್ರಮಾರ್ಕನ ಚರಿತೆ ಕನ್ನಡದಲ್ಲಿ ಇಲ್ಲದೇ ಇದ್ದುದು. ಇವನ ಕಾಲದಲ್ಲಿ ಕನ್ನಡ ಸಾಹಿತ್ಯದಲ್ಲಿ ಅಂಥ ಗ್ರಂಥಗಳೇನೂ ತಲೆದೋರಲಿಲ್ಲವಾ ದರೂ ಶಾಸನಗಳು ಅಸಂಖ್ಯಾತವಾಗಿ ಮೈದೋರಿದವು. ಶಾಸನಗಳಿಂದ ಕನ್ನಡಭಾಷೆ, ಹಳೆಗನ್ನಡ ಭಾಷೆಯಿಂದ ನಡುಗನ್ನಡ ಭಾಷೆಗೆ ತಿರುಗುತ್ತಿದ್ದಿತೆಂದು ಕಾಣಬಹುದಾ ಗಿದೆ. ಇದು ಕನ್ನಡದ ಪರಿವರ್ತನೆಯ ಕಾಲ. ಈ ಶಾಸನಗಳೇ ಈಗಿನಕಾಲದ ಭಾಷೆಯ ಭಂಡಾರವಾಗಿದೆ.

ಚಾಲುಕ್ಯ ವಿಕ್ರಮಾರ್ಕನ ಕಾಲದ ವೈಶಿಷ್ಟ್ಯವೆಂದರೆ ಇವನ ಅಧೀನವಾಗಿದ್ದ ಮಾಂಡಲಿಕರೆಲ್ಲರು ಇವನ ಅಂಕೆಗೆ ಒಳಪಟ್ಟು ತಮ್ಮ ಶಾಸನಗಳಲ್ಲೆಲ್ಲ ಇವನ ಕೀರ್ತಿ ಯನ್ನು ಕೊಂಡಾಡಿದುದು. ಯಾವ ಶಾಸನವನ್ನು ನೋಡಿದರು ಅದರಲ್ಲಿ ಇವನ ಶಕ

ವರ್ಷವೇ ಗ್ರಂಥಿತವಾಗಿದೆ. ಪ್ರತಿಯೊಂದು ಶಾಸನವೂ ದತ್ತಿಗಾಗಿ ಬರೆದಿದೆ. ಧಾರ್ಮಿಕ ಚಳವಳಿ ಎಷ್ಟುಮಟ್ಟಿಗೆ ನಡೆದಿದ್ದಿತೆಂಬುದನ್ನು ಈ ಶಾಸನಗಳು ಸಾರುತ್ತವೆ. ಸಹಸ್ರಾರು ದೇವಾಲಯಗಳು ನಿರ್ಮಿತವಾಗಿ ಚಾಲುಕ್ಯ ಶೈಲಿಯು ಪ್ರವರ್ಧಮಾನ ದಶೆಯನ್ನು ಮುಟ್ಟಿತು. ಚಾಲುಕ್ಯ ಶೈಲಿಯೆಂದರೆ ಕಟ್ಟಡಗಳ ಸ್ವರೂಪದ ಮಾದರಿ. ಇದು ಬಾದಾಮಿ ಚಾಲುಕ್ಯರ ಕಾಲದಲ್ಲಿಯೇ ಆರಂಭವಾಯ್ತು. ಆದರೆ ಒಂದು ವಿಶಿಷ್ಟ ರೂಪವನ್ನು ತಾಳಿದುದು ಈ ಕಾಲದಲ್ಲಿಯೇ. ಈ ವಿಕ್ರಮಾರ್ಕದೇವನು, ಅವನ ಅಧೀನ ಅಧಿಕಾರಿಗಳು ಅನೇಕ ಭವ್ಯವಾದ ದೇವಾಲಯಗಳ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ಕನ್ನಡಿಗರ ವಾಸ್ತು ಶಿಲ್ಪದ ನೈಪುಣ್ಯವನ್ನು ಈ ಕಟ್ಟಡಗಳು ಸಾರುತ್ತವೆ. ಕರ್ನಾಟಕದ ಯಾವ ಪ್ರಾಂತದಲ್ಲಿ ನೋಡಿದರೂ ಭಗ್ನಾವಶೇಷವಾಗಿರುವ ಈ ಕಟ್ಟಡಗಳೇ ಕಣ್ಣಿಗೆ ಬೀಳುತ್ತವೆ. ರಾಯಚೂರು ಜಿಲ್ಲೆಯಲ್ಲಿಯಂತೂ ಈ ಮಾದರಿಯ ಕಟ್ಟಡಗಳನ್ನು ಹಳೆಯ ಕಾಲದ ಹಳ್ಳಿಹಳ್ಳಿಗಳಲ್ಲಿ ಕಾಣಬಹುದಾಗಿದೆ. ಆದ್ದರಿಂದ ಈ ಕಾಲವನ್ನು ನಾವು ವಾಸ್ತುಶಿಲ್ಪದ ಕಾಲವೆಂದು ಕರೆಯಬಹುದಾಗಿದೆ.

ಇನ್ನು ಹನ್ನೆರಡನೆಯ ಶತಮಾನವು ಆರಂಭವಾಗುವದು. ರಾಜಕೀಯ ರಂಗದಲ್ಲಿಯೂ, ಧಾರ್ಮಿಕ ಪ್ರವೃತ್ತಿಯಲ್ಲಿಯೂ ದೊಡ್ಡ ಆಂದೋಲನವೆದ್ದ ಕಾಲವಿದು. ಕರ್ನಾಟಕ ಸಾಮ್ರಾಜ್ಯದ ಅಡಿಗಲ್ಲು ಶಿಥಿಲವಾದ ವಿಷಮಕಾಲ. ಇದುವರೆಗೆ ಅವಿಚ್ಛಿನ್ನವಾಗಿ ಕನ್ನಡ ಸಾಮ್ರಾಜ್ಯವನ್ನೆಲ್ಲ ಆಳುತ್ತ ಬಂದಿದ್ದ ಕಲ್ಯಾಣ ಚಾಲುಕ್ಯ ವಂಶದ ರಾಜರು ಬರಬರುತ್ತ ಬಲಹೀನರಾದರು. ಅವರ ಕೈಕೆಳಗಿನ ಮಾಂಡಲಿಕರು ಇವರ ಕೊರತೆಯನ್ನು ಕಂಡು ತಾವು ಸ್ವತಂತ್ರರಾಗಲು ಉದ್ಯಮಿಸತೊಡಗಿದರು. ಇಂಥ ಉದ್ಯಮ ಮಾಡಿ ಯಶಸ್ವಿಯಾದವರಲ್ಲಿ ಮೊದಲನೆಯವನೆಂದರೆ ಕಲಚುರಿ ವಂಶದ ಬಿಜ್ಜಳನು. ಕ್ರಿ. ಶ. ೧೧೬೦ ರ ಸುಮಾರಿನಲ್ಲಿ ಚಾಲುಕ್ಯ ಸಿಂಹಾಸನವನ್ನು ಆಕ್ರಮಿಸಿಕೊಂಡು ಕಲ್ಯಾಣವನ್ನು ವಶಪಡಿಸಿಕೊಂಡನು. ರಾಜಕೀಯ ಭೂಮಿಕೆಯಲ್ಲಿ ದೊಡ್ಡ ಕೋಲಾಹಲವೆದ್ದಿತು. ಚಾಲುಕ್ಯ ಸಾಮ್ರಾಟನು ಹಿಂಜರಿದನು. ಇನ್ನು ಬಿಜ್ಜಳನ ಕಾರಭಾರವೇ ಕಾರಭಾರ. ಇದುವರೆಗೆ ಮಹಾಮಂಡಲೇಶ್ವರನಾಗಿದ್ದವನೊಬ್ಬವನು ಈಗ ಚಕ್ರೇಶ್ವರನಾಗಿ ಸಿಂಹಾಸನವನ್ನೇರಿದುದು ಅವನ ಸರಿಸಮರಾಗಿದ್ದ ಮಂಡಲೇಶ್ವರರಿಗೆ ಸಹನವಾಗಲಿಲ್ಲವೆಂದು ತೋರುತ್ತದೆ. ಆದ್ದರಿಂದ ಅವರು ಈ ವಂಶದ ರಾಜರ ಆಡಳಿತವನ್ನು ಬಹುಬೇಗ ಮುಗಿಸಿಬಿಡಬೇಕೆಂದು ಕಾಲ ನಿರೀಕ್ಷಣೆಯಲ್ಲಿದ್ದಂತೆ ತಿಳಿದುಬರುತ್ತದೆ. ಬಿಜ್ಜಳನು ಒಳ್ಳೆಯ ಸಮರ್ಥನೂ, ಮುಂಜಾಗ್ರತೆಯುಳ್ಳವನೂ ಆದ ರಾಜತಂತ್ರಜ್ಞನಾಗಿದ್ದುದರಿಂದ ಯಾರನ್ನೂ ತಲೆಯೆತ್ತಗೊಡಲಿಲ್ಲ. ಪಟ್ಟಕ್ಕೆ ಬಂದೊಡನೆಯೇ ಅವನು ದಿಗ್ವಿಜಯ

ವನ್ನು ಬೆಳೆಯಿಸಿ ಎದುರಾಳಿಗಳನ್ನೆಲ್ಲ ತನ್ನ ಅಂಕೆಗೊಳಪಡಿಸಿಕೊಂಡನು.- ಎಲ್ಲಿ ನೋಡಿದರೂ ಇವನ ದಿಗ್ವಿಜಯ ಸೂಚಕವಾದ ಶಾಸನಗಳು ಈ ಕಾಲದಲ್ಲಿ ಕಣ್ಣಿಗೆ ಬೀಳುತ್ತವೆ.

ಬಸವೇಶ್ವರನು ಕೋಶಾಧ್ಯಕ್ಷನಾಗಿ ಮಂತ್ರಿಗದವಿಗೂ ಏರಿದ ಕಾಲವಿದೆಯೆ. ರಾಜಕೀಯ ರಂಗದಲ್ಲಿ ಬಿಜ್ಜಳನಿಂದ ಹೇಗೆ ಮಾರ್ಪಾಡುಂಟಾಯಿತೋ ಧರ್ಮಕ್ಷೇತ್ರ ದಲ್ಲಿ ಬಸವೇಶ್ವರನಿಂದ ಹಾಗೆಯೇ ಸ್ಥಿತ್ಯಂತರವಾಯಿತು. ಕನ್ನಡನಾಡಿನ ತುಂಬ ಹಬ್ಬಿದ್ದ ಜೈನ ಧರ್ಮಕ್ಕೆ ಅದೀಗ ಅಳಿಗಾಲ ಪ್ರಾಪ್ತವಾಯಿತು. ಬಸವೇಶ್ವರನು ಲಿಂಗಾಯತ ಧರ್ಮವನ್ನು ಬೋಧಿಸುತ್ತ ಜೈನಮತಕ್ಕೆ ಆಘಾತವನ್ನುಂಟುಮಾಡಿ ದನು. ವೀರಶೈವ ಧರ್ಮವು ನಾಲ್ಕೂ ಕಡೆಯಲ್ಲಿ ಹಬ್ಬಿ ಕರ್ನಾಟಕದೇಶದ ಗಡಿ ಮೀರಿ ತೆಲುಗು ನಾಡನ್ನು ಮುಟ್ಟಿತು. ಕಲ್ಯಾಣವು ಭೂಕೈಲಾಸವೆನಿಸಿತು. ಕರ್ನಾ ಟಕದ ನಾನಾ ಭಾಗಗಳಿಂದ ಶಿವಭಕ್ತರು, ಶರಣರು, ಶರಣೆಯರು, ವಿರಕ್ತರು, ಜಂಗ ಮರು, ತಂಡೋಪತಂಡವಾಗಿ ಕಲ್ಯಾಣಕ್ಕೆ ಬರತೊಡಗಿದರು. ಇದುವರೆಗೆ ವೈದಿಕ ಮತಾವಿಲಂಬಿಗಳಿಗೂ, ಜೈನ ಮತಾನುಯಾಯಿಗಳಿಗೂ ಆಶ್ರಯವಾಗಿದ್ದ ನೆಲೆ ವೀಡಿನಲ್ಲಿ ಈಗ ಜಂಗಮ ಸಮುದಾಯವು ಕಂಡುಬರತೊಡಗಿತು. ಒಂದುಕಡೆ ಬ್ರಾಹ್ಮಣರಲ್ಲಿಯೂ, ಮತ್ತೊಂದುಕಡೆ ಜೈನರಲ್ಲಿಯೂ, ವೈಮನಸ್ಯವನ್ನುಂಟುಮಾ ಡಲು ಇದು ಕಾರಣವಾಗಿರಬಹುದು. ಆದರೆ ಬಸವೇಶ್ವರನಂತಹ ಭಕ್ತನ ಸದಾ ಚಾರ ಸಂಪನ್ನತೆಯೂ ನಿಷ್ಕಲ್ಮಷವಾದ ಹೃದಯವೂ, ನಿರಾಡಂಬರತೆಯೂ, ಖಂ ಡಿತವಾದಿತ್ವವು, ಕೊನೆಗೆ ಬಸವೇಶ್ವರನನ್ನು ಜಯಶಾಲಿಯನ್ನಾಗಿ ಮಾಡಿದವು. ಬಸವೇಶ್ವರನು ಭಕ್ತಿಯಿಂದಲೇ ಜಯಿಸಿದನೆನ್ನಬಹುದು. ಇದೇ ಅವನು ಸರ್ವಾದರ ಣೀಯನಾಗಲು ಕಾರಣ. ಶಿವಾನುಭವ ಮಂಟಪವು ಕಲ್ಯಾಣದಲ್ಲಿ ಏರ್ಪಟ್ಟು ವೀರ ಶೈವ ಮತ ಚರ್ಚೆ, ಅನುಭಾವಿಗಳ ಗೋಷ್ಠಿ, ಎಲ್ಲೆಲ್ಲಿಯೂ ನಡೆಯಿತು.

ಬಿಜ್ಜಳನ ಕಾಲವೂ, ಬಸವೇಶ್ವರನ ಕಾಲವೂ ಒಮ್ಮೆಗೆ ಸಮಾಪ್ತವಾಯಿ ತೆಂದು ಹೇಳಬಹುದು. ಬಿಜ್ಜಳನ ತರುವಾಯ ಅವನ ಮಕ್ಕಳು ಹೆಚ್ಚು ಕಾಲ ರಾಜ್ಯ ಭಾರವನ್ನು ಮಾಡಲಿಲ್ಲ. ಚಾಲುಕ್ಯ ವಂಶದ ನಾಲ್ಕನೆಯ ಸೋಮೇಶ್ವರನು - ಪುನಃ ಕಲ್ಯಾಣವನ್ನು ಆಕ್ರಮಿಸಿಕೊಂಡನು. ಆದರೆ ಇವನ ರಾಜ್ಯಭಾರವು ಬಹಳ ದಿನ ಗಳವರೆಗೆ ನಡೆಯಲಿಲ್ಲ. ಮಂತ್ರಿಗಳ ಸಹಾಯದಿಂದ ಇವನು ರಾಜ್ಯವನ್ನು ನಡೆಯಿ ಸುತ್ತಿದ್ದನಾದ್ದರಿಂದ ಅಧೀನ ರಾಜರು ಪುನಃ ಸ್ವತಂತ್ರರಾಗಲು ಪ್ರಯತ್ನಿಸಿದರು. ಹೀಗೆ ಒಂದುಕಡೆಯಲ್ಲಿ ಕಾಕತೀಯ ರುದ್ರನು, ಮತ್ತೊಂದುಕಡೆಯಲ್ಲಿ ಸೇವುಣ ಭಿಲ್ಲಮನು, ಇನ್ನೊಂದೆಡೆ ಹೊಯ್ಸಳ ವೀರಬಲ್ಲಾಳನು ಚಾಲುಕ್ಯ ಸಾಮ್ರಾಜ್ಯವನ್ನು

ಕೊಳ್ಳೆಹೊಡೆದು ಆಕ್ರಮಿಸಿಕೊಳ್ಳುವ ಉದ್ಯಮದಲ್ಲಿ ಅನುರಕ್ತರಾದರು. ಚಾಲುಕ್ಯ ಸಾಮ್ರಾಟನಿಗೆ ಪರಾಜಯ ವುಂಟಾಯಿತು. ಈ ಮೂವರು ಸರ್ವತಂತ್ರ ಸ್ವತಂತ್ರ ರಾದರು. (1) ರುದ್ರದೇವನು ಕಾಕತೀಯ ಸಿಂಹಾಸನಾಧಿಪತಿಯಾದನು. ಮುಂದೆ ಈ ರಾಜ್ಯವೇ ತೆಲಗುರಾಜ್ಯವಾಗಿ ಪರಿಣಮಿಸಿತು. 2) ಸೇವುಣ ಭಿಲ್ಲಮನು ಯಾದವ ರಾಜ್ಯಕ್ಕೆ ಅಧಿಪತಿಯಾದನು. ಇದೇ ಮುಂದೆ ಮಹಾರಾಷ್ಟ್ರವಾಯಿತು. 3) ಇನ್ನುಳಿದ ಭಾಗವೆಲ್ಲವೂ ವೀರಬಲ್ಲಾಳನಿಗೆ ಸೇರಿತು. ತುಂಗಭದ್ರೆಯ ದಕ್ಷಿಣ ಪ್ರಾಂತವೆಲ್ಲವೂ ಬರಿಯ ಕರ್ನಾಟಕವಾಗಿ ಉಳಿಯಿತು. ವಿಸ್ತಾರವಾದ ಕನ್ನಡದ ಸಾಮ್ರಾಜ್ಯವು ಮೂರುಭಾಗವಾಗಿ ಒಡೆದು ಹೋಗಿ ಈ ಸಣ್ಣಸಣ್ಣ ಭಾಗಗಳಿಗೆ ಒಬ್ಬೊಬ್ಬ ಚಕ್ರವರ್ತಿಯು ಅಧಿರಾಜನಾಗಿದ್ದುದು ಒಂದುಬಗೆಯಲ್ಲಿ ವಿಷಾದದಸಂಗತಿಯೆಂದು ಹೇಳಬೇಕು.

೧೨ ನೆಯ ಶತಮಾನದ ಕೊನೆಯ ದಶಕ, ಇತಿಹಾಸದಲ್ಲಿ ಬಹಳ ಮಹತ್ವವುಳ್ಳದ್ದಾಗಿದೆ. ಮಹಾರಾಷ್ಟ್ರ, ಆಂಧ್ರ, ಕರ್ನಾಟಕಗಳೆಂಬ ಪ್ರತ್ಯೇಕವಾದ ಪ್ರಾಂತಗಳ ವಿಭಜನೆ ಆದುದು ಈಗಲೇ ಎಂದು ಹೇಳಬೇಕು. / ಈ ಪ್ರಾಂತಗಳ ರಾಜರಲ್ಲಿ ತಮ್ಮ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಹೋರಾಟವು ಇಂದಿನಿಂದಲೇ ನಡೆಯಲಾರಂಭವಾಯಿತು./ ವೀರ ಬಲ್ಲಾಳನಿಗೂ ಭಿಲ್ಲಮನಿಗೂ ಸೊರಟೂರು ಎಂಬ ಸ್ಥಳದಲ್ಲಿಘೋರ ಯುದ್ಧವಾದುದು ಈಗಲೇ. ಕಾಕತೀಯ ರುದ್ರನು ಇದೇ ದಶಕದಲ್ಲಿಯೇ ತನ್ನ ಸ್ವಾತಂತ್ರ್ಯ ದುಂದುಭಿಯನ್ನು ಮೊಳಗಿಸಿದುದು. ಒಬ್ಬ ರಾಜನ ತರುವಾಯದಲ್ಲಿ ಪಟ್ಟಕ್ಕೆ ಬಂದ ರಾಜನು ಕೂಡಲೇ ತನ್ನ ನೆರೆಯ ರಾಜರೊಡನೆ ಯುದ್ಧಕ್ಕೆ ಹೋಗುವುದೊಂದು ಸಂಪ್ರದಾಯವಾಗಿಬಿಟ್ಟಿತು. ಸೇವುಣಯಾದವರಿಗೂ, ಹೊಯ್ಸಳಯಾದವರಿಗೂ ಈ ಹೋರಾಟವು ಎರಡುಮನೆತನದವರು ನಿರ್ನಾಮವಾಗುವವರೆಗೆ ನಡೆದೇ ಇದ್ದಿತೆಂದು ಹೇಳಬೇಕು. ಹಾಗೆಯೇ ಕಾಕತೀಯ ದೊರೆಗಳಿಗೂ, ದೇವಗಿರಿಯ ಯಾದವರಿಗೂ, ಪರಸ್ಪರ ಬದ್ಧದ್ವೇಷ ಮೂಲಕವಾಗಿ ಪದೇಪದೇ ಕದನಗಳು ನಡೆಯುತ್ತಿದ್ದವು. ಒಟ್ಟಿನಲ್ಲಿ ಹದಿಮೂರನೆಯ ಶತಮಾನವೆಲ್ಲವೂ ಈ ಒಳತೋಟಿಯಲ್ಲಿಯೇ ಕಳೆದು ಹೋಯಿತೆನ್ನಬಹುದು.

ಈ ಮನೆತನಗಳ ರಾಜರುಗಳು ಈ ವಿಧವಾದ ಸಂಗ್ರಾಮಗಳಲ್ಲಿ ಉದ್ಯುಕ್ತರಾಗಿದ್ದರೂ ಅವಕಾಶ ಸಿಕ್ಕಿದಾಗಲೆಲ್ಲ, ತಮ್ಮತಮ್ಮ ಪ್ರಾಂತದ ಭಾಷೆಗೆ ಅನುಗುಣವಾಗಿ ಸಾಹಿತ್ಯಾಭಿವೃದ್ಧಿಯಲ್ಲಿಯೂ, ತಕ್ಕಮಟ್ಟಿಗೆ ಪ್ರೋತ್ಸಾಹವನ್ನಿತ್ತಂತೆ ಕಂಡುಬರುತ್ತದೆ. ವಾಸ್ತುಶಿಲ್ಪವು ತಕ್ಕಮಟ್ಟಿಗೆ ಅಭಿವೃದ್ಧಿಯಾಯಿತೆಂದು ತಿಳಿಯುತ್ತದೆ. ಸೇವುಣ ಯಾದವರ ಕಾಲದಲ್ಲಿ "ಹೇಮಾಡಪಂತ" ವೆಂಬ ಹೊಸ ವಾಸ್ತು ಶೈಲಿಯು

ಪ್ರಚಾರದಲ್ಲಿ ಬಂದಿತು. ಈ ವಿಧವಾದ ಕೆಲವು ಕಟ್ಟಡಗಳು ನಿಜಾಮುಪ್ರಾಂತದ ಮಹಾರಾಷ್ಟ್ರದಲ್ಲಿಯೂ, ಕನ್ನಡದಲ್ಲಿಯೂ ಇವೆ. ಹೊಯ್ಸಳರು, ಹಿಂದಿನಿಂದ ನಡೆದುಬಂದ "ಚಾಲುಕ್ಯ ಶೈಲಿ" ಯಲ್ಲಿ ಸ್ವಲ್ಪಮಟ್ಟಿಗೆ ಮಾರ್ಪಾಡು ಮಾಡಿ ಹೊಯ್ಸಳ ರೀತಿಯ ಕಟ್ಟಡಗಳನ್ನು ನಿರ್ಮಾಣಮಾಡತೊಡಗಿದರು. ಇದೇ ಈಗಿನಕಾಲದ ವಾಸ್ತುಶಿಲ್ಪದ ವೈಶಿಷ್ಟ್ಯ. ಈಗ ಹೊಯ್ಸಳರ ರಾಜಧಾನಿ ಕರ್ನಾಟಕಕ್ಕೆ ಕೇಂದ್ರವಾಗಿ ಪರಿಣಮಿಸಿತು. ಕನ್ನಡ ಸಾಹಿತ್ಯ, ಭಾಷೆ, ಮುಂತಾದವುಗಳಿಗೆ ಹೊಯ್ಸಳರೇ ಈಗ ರಾಜಪೋಷಕರು. ಆದರೆ ಈಗ ನಿಜಾಮು ಪ್ರಾಂತಕ್ಕೆ ಸೇರಿದ ತುಂಗಭದ್ರೆಯಿಂದ ಉತ್ತರಕ್ಕಿದ್ದ ಕನ್ನಡ ಭಾಗವು 'ಕುಂತಳ' ವೆಂದು ವ್ಯವಹೃತವಾದಂತೆ ಕಂಡುಬರುತ್ತದೆ. ಕರಡಿಕಲ್ಲಿನ ಶಿಲಾ ಶಾಸನದಿಂದ ಸೇವುಣ ಯಾದವ ಭಿಲ್ಲಮನು ಈ ಕುಂತಳ ರಾಜ್ಯವನ್ನೂ ಆಳುತ್ತಿದ್ದನೆಂದು ತಿಳಿದುಬರುತ್ತದೆ. ಮುಂದೆ ಈ ಭಾಗವೆಲ್ಲವೂ ಈ ಯಾದವ ವಂಶದವರ ಆಳಿಕೆಯಲ್ಲಿಯೇ ಇದ್ದಿತೆಂದು ಹೇಳಬೇಕಾಗಿದೆ. ಏಕೆಂದರೆ ಭಿಲ್ಲಮನ ತರುವಾಯ ಬಂದ ರಾಜರಕಾಲದ ಶಾಸನಗಳು ಈ ಕರ್ನಾಟಕ ಭಾಗದಲ್ಲಿ ಎಂದರೆ ವಿಶೇಷವಾಗಿ ರಾಯಚೂರು ಜಿಲ್ಲೆಯಲ್ಲಿ ದೊರೆಯುತ್ತವೆ. ಮರಾಠಿ ಭಾಷೆಯ ಶಾಸನಗಳು ಈ ಕನ್ನಡ ಪ್ರಾಂತದಲ್ಲಿ ಉಪಲಬ್ಧವಾಗಿರುವಂತೆ ಕಂಡುಬಂದಿಲ್ಲ. ಆದ್ದರಿಂದ ದೇವಗಿರಿ ಯಾದವರು ತಮ್ಮ ರಾಜ್ಯಾಡಳಿತದಕಾಲದಲ್ಲಿ ಶಾಸನಗಳನ್ನು ಈ ಪ್ರಾಂತದ ಭಾಷೆಯಲ್ಲಿಯೇ ಬರೆಯಿಸುತ್ತಿದ್ದರೆಂದು ಹೇಳಬಹುದಾಗಿದೆ. ಆಗಿನಿಂದಲೇ ಮಹಾರಾಷ್ಟ್ರದ ಒಂತ್ತಂಬವು ಕನ್ನಡದಮೇಲೆ ಆಗಿರಬೇಕು. ಮತ್ತೊಂದುಕಡೆ ಒರಂಗಲ್ಲಿನಲ್ಲಿ ತೆಲುಗಿಗೆ ಕಾಕತೀಯರಿಂದ ಹೆಚ್ಚು ಪ್ರೋತ್ಸಾಹ ದೊರೆತು ಅದು ತನ್ನ ಕಾಲುಚಾಚತೊಡಗಿತು.

ಮೇಲೆ ನಿರೂಪಿಸಿದಂತೆ ಹದಿಮೂರನೆಯ ಶತಮಾನದಲ್ಲಿ ಈ ಮೂರು ಮನೆತನದವರಲ್ಲಿ ನಿತ್ಯ ಹೊಡೆದಾಟವೇ ನಡೆಯುತ್ತಿದ್ದ ಈ ಪ್ರಸಂಗವು ಪರಕೀಯರನ್ನು ಇಲ್ಲಿಗೆ ಬರಮಾಡಲು ಅವಕಾಶವನ್ನು ಕಲ್ಪಿಸಿತು. ದೆಹಲಿಯ ಚಕ್ರವರ್ತಿಗಳು ದಕ್ಷಿಣದಕಡೆಗೆ ಕಣ್ಣಿಟ್ಟಿದ್ದರು. ದಕ್ಷಿಣದ ಪರಿಸ್ಥಿತಿ ಅಷ್ಟೇನೂ ಸಮರ್ಪಕವಾಗಿಲ್ಲವೆಂಬುದು ಅವರಿಗೆ ತಿಳಿದೊಡನೆಯೇ ದಕ್ಷಿಣವನ್ನು ಆಕ್ರಮಿಸಬೇಕೆಂಬ ಆಪೇಕ್ಷೆ ಅವರಿಗೆ ಉಂಟಾದುದರಲ್ಲಿ ಏನೂ ಆಶ್ಚರ್ಯವಿಲ್ಲ. ಹದಿಮೂರನೆಯ ಶತಮಾನದ ಕೊನೆಯ ದಶಕದಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಅಪಾರವಾದ ಸೇನೆಯೊಡನೆ ವಿಂಧ್ಯಾದ್ರಿಯನ್ನು ದಾಟಿ ದಕ್ಷಿಣದಲ್ಲಿ ಕಾಲಿಟ್ಟನು. ದೇವಗಿರಿಯನ್ನು ಮುತ್ತಿ, ಅಲ್ಲಿಯ ರಾಮಚಂದ್ರನನ್ನು ಸೋಲಿಸಿದನು. ಒಪ್ಪಂದವನ್ನು ಮಾಡಿಕೊಂಡು ಅಲ್ಲಾವುದ್ದೀನನು ಅಪಾರವಾದ ಸಂಪತ್ತಿನೊಡನೆ ಹಿಂತಿರುಗಿದನು. ಅಲ್ಲಾವುದ್ದೀನನ

ಈ ದಿ ಗ್ವಿ ಜ ಯ ವು ಮುಂದೆ ದೆಹಲಿಯಿಂದ ಬೇರೆ ರಾಜರು ಇಲ್ಲಿಗೆ ಬರಲು ಹೆದ್ದಾರಿಯನ್ನು ಕಲ್ಪಿಸಿದಂತಾಯಿತು. ಅವನು ಹೋದಮೇಲೆ ಮಲಿಕ್ಕಾಫುರನು ದಂಡೆತ್ತಿಬಂದನು. ಪುನಃ ಇಲ್ಲಿಯ ರಾಜರೊಡನೆ ಯುದ್ಧವಾಯಿತು. ಇವರಿಗೇ ಅಪಜಯವಾಯಿತು. ಕಾಕತೀಯ ದೊರೆ ಪರಾಜಿತನಾದನು. ಹೀಗೆ ಒಬ್ಬರಾಜನ ತರುವಾಯ ಮತ್ತೊಬ್ಬ ರಾಜನು ಪರಾಜಿತನಾಗಿ ಇಲ್ಲಿಯ ರಾಜವಂಶಗಳು ೧೪ನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ನಾಮಾವಶೇಷಗಳಾದವು.

ಔತ್ತರೀಯರ ಆಕ್ರಮಣ ಶೀಲತೆ ದಕ್ಷಿಣದಲ್ಲಿ ದಿನದಿನಕ್ಕೆ ಹೆಚ್ಚಾಗುತ್ತ ನಡೆದುದಲ್ಲದೆ ಅವರಿಂದ ಹಿಂಸೆಯೂ, ದೇಶದಲ್ಲಿ ಅರಾಜಕತೆಯು ನಿತ್ಯಶಃ ಬೆಳೆಯ ತೊಡಗಿತು. ಇಲ್ಲಿಯ ನಿವಾಸಿಗಳಿಗೆ ಇದು ಸಹನಾತೀತವೂ ಆಗಿದ್ದಿತೆಂದು ಕಂಡು ಬರುತ್ತದೆ. ಪರಕೀಯರ ಸಂಪರ್ಕದಿಂದ ಇವರಲ್ಲಿ ಹೊಸ ಅನುಭವ, ನವ ಚೈತನ್ಯಗ ಳುಂಟಾದವು. ತತ್ಫಲವಾಗಿ ಹೊಸರಾಜ್ಯವನ್ನು ನೆಲೆಗೊಳಿಸುವ ಹೆಬ್ಬಯಕೆಯೂ, ಅದಕ್ಕೆ ತಕ್ಕ ಉದ್ಯಮವೂ ಏಕ ಕಾಲದಲ್ಲಿ ನಡೆದವು. ಈ ಉದ್ಯಮದ ಪರಿಣಾಮವೇ ವಿಜಯನಗರದ ಸ್ಥಾಪನೆ. ಈ ರಾಜ್ಯಸ್ಥಾಪನೆಯಾದುದರ ಉದ್ದೇಶವು ಅನ್ಯರಾಷ್ಟ್ರೀಯರನ್ನು ಪ್ರತಿಭಟಿಸಿ ಸ್ವಕೀಯತೆಯನ್ನು ರಕ್ಷಿಸಿಕೊಳ್ಳುವದಾಗಿದ್ದಿತು. ಈ ಉದ್ದೇಶವು ಪರರಾಷ್ಟ್ರೀಯರಿಗೆ ಗೊತ್ತಾಗಿರಬೇಕೆಂದು ತೋರುತ್ತದೆ. ಅವರೂ ಇಲ್ಲಿಯೇ ತಮ್ಮ ಸ್ಥಳವನ್ನು ಭದ್ರಮಾಡಿಕೊಳ್ಳುವ ಯತ್ನದಲ್ಲಿ ಪ್ರವೃತ್ತರಾದರು. ವಿಜಯನಗರದ ರಾಜ್ಯಸ್ಥಾಪನೆಯಾಗಿ ಹತ್ತಿಪ್ಪತ್ತು ವರ್ಷಗಳೊಳಗಾಗಿಯೇ ಇದಕ್ಕೆ ಪ್ರತಿಮುಖವೋ ಎಂಬಂತೆ ಮತ್ತೊಂದು ರಾಜ್ಯವು ಇಲ್ಲಿ ಸ್ಥಾಪಿತವಾಯಿತು. ಇದೇ ಬಹಮನೀರಾಜ್ಯ, ಇದರ ಮುಖ್ಯಸ್ಥಳವೇ ನಿಜಾಮುಕರ್ನಾಟಕದ ಕಲಬುರ್ಗಿ.

ಕೆಲವುಕಾಲದವರೆಗೆ ವಿಜಯನಗರದ ರಾಜರಿಗೂ, ಬಹಮನಿ ರಾಜರಿಗೂ, ಘರ್ಷಣೆ ನಡೆಯಲಿಲ್ಲವೆಂದು ಕಂಡುಬರುತ್ತದೆ. ಆದರೆ ತಟಸ್ಥ ವೃತ್ತಿ ಬಹುಕಾಲ ಉಳಿಯಲಿಲ್ಲ. ಇವೆರಡು ಅರಸು ಮನೆತನಗಳಲ್ಲಿ ಬರಬರುತ್ತ ದ್ವೇಷಾಸೂಯೆ ಭಾವ ಗಳು ಉಲ್ಬಣಗೇರಿ ಕಲಹಗಳನ್ನು ತಂದೊಡ್ಡಿದವು. ವಿಜಯನಗರದ ರಾಜರು ತುಂಗ ಭದ್ರಾ ನದಿಯನ್ನು ದಾಟಿ ಬಹಮನಿ ರಾಜ್ಯವನ್ನು ನುಗ್ಗುತ್ತಲೂ, ಬಹಮನಿ ರಾಜರು ಅವರನ್ನು ತಡೆಯಲು ಅಪಾರವಾದ ಸೈನ್ಯದೊಡನೆ ತುಂಗಭದ್ರಾಯತ್ತ ಸಾಗುತ್ತಲೂ ಬಂದರು. ಇವೆರಡು ಪಡೆಗಳು ತಾವು ಆಕ್ರಮಿಸಿದ ಭಾಗವನ್ನೆಲ್ಲ ಕೊಳ್ಳೆಹೊಡೆ ಯುತ್ತ, ಸೂರೆಮಾಡುತ್ತ, ಪ್ರದೇಶಗಳ ಜೀವನಕ್ಕೆ ಘೋರ ಹಿಂಸೆಯನ್ನುಂಟು ಮಾಡಿದರು. ಇಷ್ಟೆಲ್ಲಕ್ಕೂ ಕಾರ್ಯಕ್ಷೇತ್ರವೆಂದರೆ ಈಗಿನ ನಿಜಾಮು ಕರ್ನಾಟಕದ ಭಾಗ. ಈ ರಾಜ್ಯಗಳು ವೈದೋರಿದಂದಿನಿಂದ ಇವೆರಡರ ಪತನವಾಗುವವರೆಗೆ ಈ

ಪ್ರದೇಶವೆಲ್ಲವೂ ರಣರಂಗವಾಗಿಯೇ ಇದ್ದಿತೆಂದು ಹೇಳಬಹುದು. ಒಂದುಕಡೆ ರಾಯಚೂರು, ಇನ್ನೊಂದುಕಡೆ ಮುದುಗಲ್ಲು, ಗಡಿಗಲ್ಲುಗಳಾದವು. ಒಮ್ಮೆ ಈ ಸೇನೆಯವರು ಒಮ್ಮೆ ಆ ಸೇನೆಯವರು, ಇವುಗಳನ್ನು ಮುತ್ತಿದುದೇ, ಕೊಳ್ಳೆಹೊಡೆದುದೇ. ಇಂಥ ಪರಿಸ್ಥಿತಿಯಲ್ಲಿ ದೇಶದ ನಿವಾಸಿಗಳಿಗೆ ಸುಖವೆಲ್ಲಿ? ಶಾಂತಿಯಲ್ಲಿ? ನೆಮ್ಮದಿಯ ಜೀವನವೆಲ್ಲಿ? ಈ ಕಥೆ ಒಂದೇ ವಿಧವಾಗಿ ಜರುಗಿದುದು ಸುಮಾರು ೨೫೦ ವರ್ಷಗಳ ವರೆಗೆ. ಈ ಮಧ್ಯ ದೊಡ್ಡ ಅವಾಂತರ ಒಂದೆದ್ದಿತು. ಬಹಮನಿರಾಜರು ದುರ್ಬಲರಾಗಲು ಅವರ ಅಧೀನವಾಗಿದ್ದ ಮಾಂಡಲೀಕರು ಸ್ವತಂತ್ರರಾಗಿ ತಮ್ಮ ತಮ್ಮೊಳಗೆಕಾದಾಡತೊಡಗಿದರು. ವಿಸ್ತಾರವಾದ ಬಹಮನಿ ಸಾಮ್ರಾಜ್ಯ ಒಡೆದುಹೋಗಿ ಐದುಭಾಗವಾಯಿತು. ಆಗಲೂ ಕರ್ನಾಟಕದಲ್ಲಿ ಎರಡು ಮುಖ್ಯ ರಾಜಧಾನಿಗಳಿದ್ದವು. ಒಂದುವಿಜಾಪುರ ಮತ್ತೊಂದು ಬೀದರು. ಇದುವರೆಗೆ ಕಾದಾಡುತ್ತಿದ್ದ ರಾಜ್ಯಗಳುಎರಡೇ ಆಗಿದ್ದರೆ ಈಗ ಆರು ಆದವು.ತಾಳಿಕೋಟೆಯ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯವು ಅಸ್ತಂಗತವಾಯಿತು. ಉಳಿದವುಗಳು ಮುಂದೆ ಔರಂಗಜೇಬನ ದಾಳಿಯ ಬಿರುಗಾಳಿಗೆ ತರಗಲೆಯಹಾಗೆ ಹಾರಿ ಕಣ್ಮರೆಯಾದವು. ಅಲ್ಲಿಂದ ಮುಂದಿನ ಇತಿಹಾಸವೇ ಈಗ ನಮ್ಮನ್ನಾಳುತ್ತಿರುವ ಆಸಫಜಾಹಿ ಮನೆತನಕ್ಕೆ ಸಂಬಧಿಸಿದುದು. ಇದರ ವಿವರಣೆ 'ಆಸಫಜಾಹಿ ರಾಜಮನೆತನದ ಇತಿಹಾಸ' ವೆಂಬ ಪ್ರಕರಣದಲ್ಲಿ ನೋಡಬಹುದು.

ಈ ಮೂರನೂರು ವರ್ಷಗಳ ಸುದೀರ್ಘಾವಧಿಯಲ್ಲಿ ಇಲ್ಲಿಯ ಕನ್ನಡಿಗರ ಜೀವನ ಸ್ವರೂಪವು ಹೇಗಿದ್ದಿತೆಂಬುದನ್ನು ಮೇಲಿನ ವಿವರಣೆಯಿಂದ ತಕ್ಕಮಟ್ಟಿಗೆ ಊಹಿಸಿಕೊಳ್ಳಬಹುದಾಗಿದೆ. ಈ ಪ್ರಾಂತವು ಯುದ್ಧರಂಗವಾಗಿ ಪರಿಣಮಿಸಿದ್ದುದರಿಂದ ಇಲ್ಲಿಯವರಿಗೆ ಶಾಂತಿಯ ಉಸಿರಾಡಿಸಲು ಅವಕಾಶ ವಿಲ್ಲದಂತಾಯಿತು. ಇಂಥ ಪರಿಸ್ಥಿತಿಯಲ್ಲಿ ಇವರಲ್ಲಿ ಉತ್ಪಾದಕಶಕ್ತಿ ಉಳಿಯುವದೆಂತು? ಇವರ ವೈಶಿಷ್ಟ್ಯವೇ ನಷ್ಟವಾಗಿಹೋಯಿತು. ತಿರುಗಿದತ್ತ ಹೊಡೆತ ಬೀಳುತ್ತಿದ್ದಾಗ ಕಾವ್ಯಗಳನ್ನು ಬರೆಯುವದೆಂತು? ಮನೆ ಮಠಗಳನ್ನು ನಿರ್ಮಿಸುವದೆಂತು? ಲಲಿತ ಕಲೆಗಳ ಪೋಷಣೆಯೆಲ್ಲಿ? ರಕ್ಷಣೆಯಲ್ಲಿ? ಭಯ ನಿರಾಶ, ವಿಫಲತೆಗಳು ಇವರನ್ನಾವರಿಸಿದವು. ಇದೇ ಸಂದರ್ಭದಲ್ಲಿಯೇ ದಾಸಕೂಟ ಚಳವಳಿ ಆರಂಭವಾದದ್ದು. ಕನ್ನಡ ನುಡಿಗೆ ಈಗ ಅಧಿನಾಯಕರುಗಳಿಲ್ಲದಾಗಿತ್ತು. ಮಾತು ಬೀದಿ ಪಾತಾಯಿತು; ರಾಜಸಿಂಹಾಸನವನ್ನೇರಿ ಮೆರೆದ ಕಾಲಹೋಯಿತು. ಈಗ ಅದಕ್ಕೆ ಮನೆಮನೆ ಅಲೆಯಬೇಕಾದ ಕಾಲಬಂತು. ದಾಸರುಗಳು ಸದ್ಯಃ ಈ ಜನತೆಯನ್ನು ಉದ್ಧಾರಮಾಡಿದರೆಂದು ಹೇಳಬೇಕು. ಹೃದಯವನ್ನು ಕಲಕುವಂಥ, ನೊಂದ ಎದೆಗೆ ಆಪ್ಯಾಯನ

ವನ್ನುಂಟುಮಾಡುವಂಥ, ದುಃಖದಲ್ಲಿ ದೇಹಾನಿತ್ಯತೆಯನ್ನು ಬೋಧಿಸಿ ಮನಸ್ಸನ್ನು ದೇವರತ್ತ ತಿರುಗಿಸುವಂಥ ನೀತಿಪರವಾದ, ಭಕ್ತಿಯುಕ್ತವಾದ ಇವರ ಅಚ್ಚು ಗನ್ನಡದ ಕೀರ್ತನೆಗಳಿಂದ ಜನರಿಗೆ ತತ್ಕಾಲದಲ್ಲಿ ಸಮಾಧಾನ ಉಂಟಾಗಿರಬೇಕು . ಕೆಲವರು, ದಾಸರುಗಳ ಈ ವಿಧವಾದ ಪದ್ಯರಚನೆಯನ್ನು ಕುರಿತು, ಆಕ್ಷೇಪಿಸಿದುದುಂಟು. ಈ ಪದ್ಯಗಳು ಮನುಷ್ಯನನ್ನು ಹೇಡಿಯನ್ನಾಗಿಮಾಡುತ್ತವೆ. ದೇಹಾನಿತ್ಯತೆಯನ್ನು ಬೋಧಿಸಿ ಅವನ ಕಾರ್ಯಾಸಕ್ತಿಯನ್ನು ನಾಶಮಾಡುತ್ತವೆ. ಎಂದು ಮುಂತಾಗಿ ಟೀಕಿಸಿದುದುಂಟು. ವಿಚಾರಮಾಡಿ ನೋಡಿದರೆ ಆಗಿನಕಾಲದಲ್ಲಿ ಇಲ್ಲಿ ಕ್ಷಾತ್ರ ಸಾಹಿತ್ಯ ಹುಟ್ಟಲೆಡೆಯಿರಲಿಲ್ಲವೆಂದು ತೋರುವದು. ಇಲ್ಲಿಯ ಜನತೆಯ ಜೀವನದಲ್ಲಿ ಪೌರುಷ, ವೀರ್ಯ, ಪರಾಕ್ರಮಗಳನ್ನು ಹುಟ್ಟಿಸುವ ಸನ್ನಿವೇಶವದಾಗಿರಲ್ಲಿಲ್ಲ. ಇವರು ಒಂದುಭುಜದಿಂದ ಉತ್ತರವನ್ನೂ, ಮತ್ತೊಂದು ಭುಜದಿಂದ ದಕ್ಷಿಣವನ್ನು ಹಾಯುತ್ತ ಸಿತ್ತರಿಸುವಷ್ಟು ಸಮರ್ಥರಾಗಿರಲಿಲ್ಲ. ಬಲಿಷ್ಠರಾದವರು ಎಡಬಲ ಪಾರ್ಶ್ವಗಳಲ್ಲಿರುವಾಗ ಅವರನ್ನು ಎದುರಿಸುವ ಸಾಮರ್ಥ್ಯವಿಲ್ಲದಿದ್ದರೆ ಸುಮ್ಮನೆ ತಲೆ ಬಗ್ಗಿಸಿ ಆತ್ಮರಕ್ಷಣೆ ಮಾಡಿಕೊಳ್ಳುವದೇ ಕ್ಷೇಮಕರ. ಇದು ಅಂಥ ಸಂದರ್ಭ. ದಾಸರುಗಳು ಬೋಧಿಸುದುದು ಇದು. ಅದು ಏನೇ ಇರಲಿ; ನೀತಿಯುತವಾದ ದಾಸ ಸಾಹಿತ್ಯದಿಂದ ತಳಮಳಗೊಂಡ ಈ ನಾಡಿನ ಜನ ಜೀವನಕ್ಕೆ ಸ್ವಲ್ಪಮಟ್ಟಿಗಾದರೂ ನೆಮ್ಮದಿಯುಂಟಾಯಿತೆಂದು ಹೇಳಬಹುದು. ಈ ವಿಧವಾದ ಸಾಹಿತ್ಯರಚನೆಗೆ ಕಾರಣವೇನೇಇರಲಿ ಈ ಪ್ರಾಂತವು ಅದಕ್ಕೆ ಮುಖ್ಯಕ್ಷೇತ್ರವಾಗಿ ಪರಿಗಣಿತವಾಗಿರುವದನ್ನು ಇಲ್ಲಿ ಗಮನಿಸಬೇಕಾಗಿದೆ.

ಮೇಲಿನ ಸುದೀರ್ಘವಾದ ನಿರೂಪಣೆಯಿಂದ ಕರ್ನಾಟಕ ಸಾಮ್ರಾಜ್ಯವು ಪಶ್ಚಿಮಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಮೊದಲಾದ ಅರಸು ಮನೆತನಗಳು ರಾಜ್ಯಭಾರಮಾಡುತ್ತಿದ್ದ ಕಾಲದಲ್ಲಿ ಒಬ್ಬ ಚಕ್ರವರ್ತಿಯ ಕೇಂದ್ರಾಧಿಪತ್ಯಕ್ಕೆ ಒಳಗಾಗಿದ್ದಿತೆಂಬ ಅಂಶವು ಸ್ಪಷ್ಟವಾಗಿದೆ. ಇಷ್ಟು ವಿಸ್ತೃತವಾದ ರಾಜ್ಯದ ಮೇಲೆಲ್ಲ ತಕ್ಕ ಲಕ್ಷವನ್ನಿಡುವುದಕ್ಕಾಗಿ ಚಕ್ರವರ್ತಿಯು ಒಂದಕ್ಕಿಂತ ಹೆಚ್ಚು ನೆಲೆವೀಡುಗಳಲ್ಲಿ ವಾಸಿಸುತ್ತಿದ್ದನು. ಎಂದರೆ ಈ ನೆಲೆವೀಡುಗಳು ರಾಜ್ಯದ ನಾಲ್ಕೂ ದಿಕ್ಕುಗಳಲ್ಲಿ ಏರ್ಪಟ್ಟಿದ್ದವು. ಇದರಿಂದ ರಾಜನು ಒಂದೇಕಡೆ ಇರುತ್ತಿರಲಿಲ್ಲವೆಂದೂ ವರ್ಷಾವಧಿಯಲ್ಲಿ ಸಾಮ್ರಾಜ್ಯದ ತುಂಬ ಸಂಚರಿಸಿ, ಅಲ್ಲಲ್ಲಿ ಕೆಲವುಕಾಲದವರೆಗೆ ವಾಸಿಸುತ್ತಿದ್ದನೆಂದೂ ಊಹಿಸಬಹುದಾಗಿದೆ. ಇದರಿಂದ ಪ್ರಜೆಗಳಿಗೂ ಒಂದು ವಿಧವಾದ ಸಮಾಧಾನವಿರುತ್ತಿತ್ತು. ವೈರಿಗಳು ತಲೆ ಎತ್ತಲು ಅವಕಾಶ ವಿರುತ್ತಿರಲಿಲ್ಲ. ನಾಡಿನಲ್ಲಿ ಬೆಳೆಯುತ್ತಿದ್ದ ಪದಾರ್ಥಗಳರೂಪದಲ್ಲಿ ಭೂ ಕಂದಾಯವನ್ನು ತೆಗೆದುಕೊಳ್ಳಲಾಗುತ್ತಿತ್ತು.

ಪದಾರ್ಥಗಳಮೇಲೆ ಸುಂಕವೂಇತ್ತು. 'ಸುಂಕ' 'ಪೆರ್ಜುಂಕ' ಎಂಬ ಪದಗಳು ರೂಢಿಯಲ್ಲಿದ್ದವು. ರಾಜರು ತಮ್ಮ ಹೆಸರಿನ ನಾಣ್ಯಗಳನ್ನು ರಾಷ್ಟ್ರದಲ್ಲಿ ನಡೆಸುತ್ತಿದ್ದರು. ವಿಜಯನಗರದ ಕಾಲದ ನಾಣ್ಯವಾದ 'ಹೊನ್ನು' ಎಂಬ ಪದವನ್ನು ಮುಸಲ್ಮಾನ ರಾಜರು ಉಪಯೋಗಿಸುತ್ತಿದ್ದರು. ಇದು ಪರದೇಶಗಳಲ್ಲಿ ಇದೇ ಹೆಸರಿನಿಂದ ವ್ಯವಹೃತವಾಗುತ್ತಿತ್ತು. ಆಗಿನಕಾಲದ ಜನರು ಉಡುತ್ತಿದ್ದ ಉಡುಪಿನಿಂದಲೂ ಅವರು ಧರಿಸುತ್ತಿದ್ದ ವಿಧವಿಧವಾದ ಆಭರಣಗಳಿಂದಲೂ ಅವರು ಎಷ್ಟು ಸುಸಂಸ್ಕೃತ ರಾಗಿದ್ದರೆಂಬುದನ್ನು ತಿಳಿನುಕೊಳ್ಳಬಹುದಾಗಿದೆ. ನೃತ್ಯ ಸಂಗೀತ ಕಲೆಗಳಲ್ಲಿ ಅವರು ಒಳ್ಳೇ ನಿಷ್ಣಾಣತರಾಗಿದ್ದರು. ಕನ್ನಡ ಕಾವ್ಯಗಳನ್ನು ಸರಸವಾಗಿ ರಾಗಗಳಿಂದ ಬಾಜಿಸಿ ವಾಜಿಸುತ್ತಿದ್ದರು. ಇಲ್ಲಿಯ ವಾಸ್ತು ಶಿಲ್ಪ, ಚಿತ್ರ ಕಲೆಗಳು ಜಗತ್ತಿಗೆ ಆದರ್ಶಗಳಾಗಿವೆ. ಇವರಿಗೆ ಅನೇಕವಿನವ ವಿನೋದ ಆಟಗಳು ಗೊತ್ತಿದ್ದವು. ಪಂಪ ರನ್ನರ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಬರುವ ಇವುಗಳ ಹೆಸರುಗಳನ್ನು ಆಯಾಗ್ರಂಥಗಳನ್ನು ಓದಿಯೇ ತಿಳಿಯಬೇಕು. ಇಷ್ಟು ವಿಸ್ತಾರವಾದ ರಾಜ್ಯವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡಿರಬೇಕಾದರೆ ಈ ರಾಜರಲ್ಲಿ ಸುಶಿಕ್ಷಿತವಾದ ಅಪಾರವಾದ ಸೇನೆ ಇದ್ದಿರಬೇಕಲ್ಲವೆ? ಎರಡನೆಯ ಪುಲಿಕೇಶಿಯ 'ಕರ್ನಾಟಕ ಸೇನೆ' ಯಲ್ಲವೆ! ಶ್ರೀ ಹರ್ಷನನ್ನು ಸೋಲಿಸುದದು! ಪಂಪನ ಆದಿಪುರಾಣದಲ್ಲಿ ವರ್ಣಿತವಾದ 'ಕರ್ನಾಟಕಸೇನೆಯ' ವೈಶಿಷ್ಟ್ಯವನ್ನು ಇಲ್ಲಿ ಗಮನಿಸಬೇಕು. ಚಾಲುಕ್ಯ ಸೇನೆಯ ಗಜ ವ್ಯೂಹವನ್ನು ನೋಡಿಯೇ ಶ್ರೀ ಹರ್ಷನ ಉತ್ತರಸೇನೆಯವರು ಭಯಚಕಿತರಾಗಿ ಓಡಿದರಂತೆ. ನಮ್ಮ ರಾಜರಿಗೆ 'ಗಜವೇಂಟೆಕಾರ' ಎಂಬ ಬಿರುದುಇದೆ. ದೇವಾಲಯಗಳ ಚಿತ್ರಗಳಲ್ಲಿ ಕಂಡುಬರುವ ಆನೆಗಳ ಹೋರಾಟ, ಕುದುರೆಗಳ ಠೀವಿ ಮುಂತಾದವುಗಳು ಇಲ್ಲಿಯವರ ಸೇನಾಂಗ ರಚನೆಗೆ ನಿದರ್ಶನಗಳಾಗಿವೆ. ಇವರು ತಮ್ಮದೇ ಶ್ರೇಷ್ಠವೆಂದು ಸುಮ್ಮನಿರುತ್ತಿದ್ದಿಲ್ಲ. ಮುಸಲ್ಮಾನರ ಸೈನಿಕರ ಯುದ್ಧ ಕುಶಲತೆಯ ಪರಿಚಯವಾದಮೇಲೆ ಇವರು ಅವರಿಂದಲೂ ಯುದ್ಧ ಕಲೆಯ ಶಿಕ್ಷಣವನ್ನು ತಮ್ಮ ಸೇನಿಕರಿಗೆ ಕೊಡಿಸಿದರು. ವಿಜಯನಗರದರಾಜರ ಸೇನೆಯಲ್ಲಿ ಮುಸಲ್ಮಾನರು ಇದ್ದರಂತೆ. ಜೇಡಪಡೆಗೆ ಹೆದರಿಕೆಯೇ ಇಲ್ಲವೆಂಬಮಾತು ನಮ್ಮತ್ತಣವರಿಗೆ ಚನ್ನಾಗಿಗೊತ್ತು. ಸ್ತ್ರೀಯರು ಯುದ್ಧಗಳಲ್ಲಿ ಭಾಗ ವಹಿಸುತ್ತಿದ್ದುದನ್ನು ರಾಜ ಪತ್ನಿಯರು ರಾಜ್ಯಭಾರ ಮಾಡುತ್ತಿದ್ದುದನ್ನು ಶಾಸನಗಳಿಂದ ಗ್ರಹಿಸಬಹುದಾಗಿದೆ (ಲಿಂಗಸುಗೂರುಶಾಸನ). ನಮ್ಮ ನಾಡಿನಲ್ಲಿ ಅಲ್ಲಲ್ಲಿ ಕಂಡುಬರುವ 'ಮಾಸತಿ' ಕಲ್ಲುಗಳು ನಮ್ಮನಾಡಿನ ವೀರ ರಮಣಿಯರ ಪರಾಕ್ರಮದ ಪ್ರತಿಬಿಂಬಗಳಾಗಿವೆ.

ವಿವಿಧ ಧರ್ಮಗಳು ಈ ನಾಡಿನಲ್ಲಿ ಹೇಗೆ ಪ್ರವರ್ಧಮಾನವಾದವು, ರಾಜರು ಎಷ್ಟುಮಟ್ಟಿಗೆ ಬೇರೆ ಬೇರೆ ಧರ್ಮಗಳಲ್ಲಿ ಗೌರವ ಭಾವವನ್ನು ವ್ಯಕ್ತಗೊಳಿಸುತ್ತಿದ್ದರು,

ಆಯಾ ಮತಗಳ ಪುರೋಭಿವೃದ್ಧಿಗೆ ಬೆಂಬಲವನ್ನಿತ್ತುದು ಹೇಗೆ ಎಂಬ ವಿಷಯವೂ ಇಲ್ಲೀಗ ಗಮನಾರ್ಹವಾಗಿದೆ. ಕ್ರಿಸ್ತ ಪೂರ್ವದ ಶತಮಾನಗಳಲ್ಲಿ ಬೌದ್ಧಮತವಿಲ್ಲಿ ಪ್ರಚಾರದಲ್ಲಿದ್ದಿತೆಂಬುದಕ್ಕೆ ಅಶೋಕನ ಶಾಶನಗಳೇ ಸಾಕ್ಷಿ. ಅಜೆಂತಾ, ಎಲ್ಲೋರ ಗಳ ಭಿತ್ತಿ ಚಿತ್ರಗಳಲ್ಲಿ ಜಗದ್ವಿಖ್ಯಾತವಾದ ಬುದ್ಧನ ಜೀವನ ಸ್ವರೂಪವನ್ನು ಕಾಣ ಬಹುದು. ಮುಂದೆ ಶಾತವಾಹನರ ಕಾಲದಲ್ಲಿಯೂ ಈ ಬುದ್ಧಮತವೇ ಹೆಚ್ಚು ಪ್ರಚಾ ರದಲ್ಲಿದ್ದಿತು. ಕದಂಬರ ಹೊತ್ತಿಗೆ ವೈದಿಕ ಮತವು ತಲೆಯೆತ್ತಿದ್ದಿತು. ಅಷ್ಟಾದಶ ಅಶ್ವಮೇಧಗಳನ್ನು ನೆರೆವೇರಿಸಿದ ವೈದಿಕ ಮತೋದ್ಧಾರಕರು ಕದಂಬರು. ಇವರದು ಒಂದು ಶಾಖೆ ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿ ಕರಡಿಕಲ್ಲಿನಲ್ಲಿ ಆಳು ತ್ತಿದ್ದಿತು. ಜೈನಧರ್ಮವು ಪ್ರಾಬಲ್ಯಕ್ಕೆಬಂದುದು ಬಾದಾಮಿಯಚಾಳುಕ್ಯರ ಕಾಲದಲ್ಲಿ. ಈ ಚಾಳುಕ್ಯರು ಸ್ವತಃ ಧರ್ಮಾಭಿಮಾನಿಗಳಾಗಿದ್ದರೂ, ಜಿನ ಧರ್ಮಕ್ಕೆ ಆಶ್ರಯವನ್ನಿ ತ್ತಿದ್ದರು. ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ (ಮೇಣ ಬಸತಿಯಲ್ಲಿ) ಜೈನ, ವೈಷ್ಣವಾಲಯಗಳಿರುವದನ್ನು ನೋಡಬಹುದಾಗಿದೆ. ಹಾಗೆಯೇ ಎಲ್ಲೋರದ ಭಿತ್ತಿ ಚಿತ್ರಗಳಲ್ಲಿಯೂ, ತ್ರಿಮತಸ್ಥರ ಚಿತ್ರಗಳಿರುವುದು, ಕಾಲಾನು ಕ್ರಮದಲ್ಲಿ ಈ ಮತಗಳು ಅಭಿವೃದ್ಧಿಗೆ ಬಂದಿದ್ದುದನ್ನು ವ್ಯಕ್ತ ಗೊಳಿಸುತ್ತದೆ. ರನ್ನನ " ನೆಗಳ್ದ ಕೊಪಣಾ| ಚಳಪಂತೆ ಪವಿತ್ರಮತ್ತಿಮಬ್ಬೆಯ ಚರಿತಂ" ಎಂಬ ಮಾತಿನಿಂದ ಕೊಪ್ಪಳ ವು ಜೈನರಿಗಾಗಿ ಹತ್ತನೆಯ ಶತಮಾನದಲ್ಲಿ ಎಷ್ಟು ಪ್ರಸಿದ್ಧವಾಗಿದ್ದಿತೆಂಬುದು ವ್ಯಕ್ತ ವಾಗುತ್ತದೆ. ಕುಮಾರಿಲಭಟ್ಟ, ಶ್ರೀ. ಶಂಕರಾಚಾರ್ಯರಿಂದ ವೈದಿಕ ಮತಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಿದ್ದರೂ, ಜೈನ ಮತವು ಇಲ್ಲಿ ಪ್ರವರ್ಧಮಾನದಶೆಯಲ್ಲಿ ಯೇ ಇದ್ದಿತೆನ್ನಬೇಕು. ಇದಕ್ಕೆ ಮುಖ್ಯ ಕಾರಣವೇನಂದರೆ ರಾಜರು ಅನ್ಯಮತ ಸಹಿಷ್ಣುಗಳಾಗಿದ್ದುದು. ಶೈವ ವೈಷ್ಣವಾಲಯಗಳೂ ಜಿನ ಬಸದಿಗಳೂ, ರಾಷ್ಟ್ರಕೂಟ ದೊರೆಗಳ ಕಾಲದಲ್ಲಿ ನಿರ್ಮಾಣವಾದವು. ಶ್ರೀವೈಷ್ಣವ ಮತಸ್ಥಾಪನೆ ಯಾದಂದಿನಿಂದ ಜೈನಮತವು ಕ್ರಮಕ್ರಮವಾಗಿ ಕರ್ನಾಟಕದಲ್ಲಿ ಕ್ಷೀಣಿಸತೊಡಗಿತು. ವೀರಶೈವ ಮತಪ್ರಚಾರದಿಂದ ಜೈನಮತಕ್ಕೆ ಮತ್ತಷ್ಟು ಬಲವಾದ ಆಘಾತ ಒದಗಿತು. ಅನ್ಯಮತೀಯರಾದಅನೇಕರು ವೀರಶೈವ ಮತಾವಲಂಬಿಗಳಾದದು, ಇದು ಈ ನಾಡಿ ನಲ್ಲಿ ನಡೆದು ಹೋದ ಅನೇಕ ಘಟನೆಗಳಲ್ಲಿ ಮಹತ್ವವಾದ ಘಟನೆ. ಶ್ರೀ ಮಧ್ವಾ ಚಾರ್ಯರ ವಿಷ್ಣುಭಕ್ತಿ ಪರವಾದ ಉಪದೇಶವು ಶ್ರೀಮದಕ್ಷೋಭ್ಯತೀರ್ಥರಿಂದ ಈ ನಾಡಿನಲ್ಲಿ ಚೆನ್ನಾಗಿ ಹಬ್ಬಿತು. ಶ್ರೀ. ಟೀಕಾಚಾರ್ಯರ ಕಾರ್ಯಕ್ಷೇತ್ರವು ಈ ಪ್ರದೇಶವಾಗಿದ್ದುದರಿಂದಲೂ ಅವರ ಬೃಂದಾವನವು ಪೂರ್ವದ ಐತಿಹಾಸಿಕ ಸ್ಥಳವಾದ ಮಳಖೇಡದಲ್ಲಿ ನೆಲೆಗೊಂಡಿರುವದರಿಂದಲೂ ವೈಷ್ಣವ ಮತಾನುಯಾಯಿಗಳು ಈ ಪ್ರಾಂತದಲ್ಲಿ ಹೆಚ್ಚು ಸಂಖ್ಯೆಯಲ್ಲಿರುಲು ಕಾರಣವಾಯಿತು. ಮುಂದೆ ದಾಸಕೂಟದ

ಉದಯದಿಂದ ಇವರಿಗೆ ಇಲ್ಲಿ ಹೆಚ್ಚು ಪುಷ್ಟಿ ದೊರೆಯಿತು. ಈ ಹೊತ್ತಿಗಾಗಲೇ ಇಸ್ಲಾಂಧರ್ಮೀಯರ ಸಮಾಗಮದಿಂದ ಅವರ ಸಂಸ್ಕೃತಿಯ ಪರಿಣಾಮವು ಆಗತೊಡಗಿದ್ದಿತು.

ಮೇಲೆ ವಿಜಯನಗರದ ರಾಜರಿಗೂ ಬಹಮನಿರಾಜರಿಗೂ ಪದೇ ಪದೇ ಕಲಹಗಳಾಗುತ್ತಿದ್ದವೆಂದು ನಿರೂಪಿಸಿದೆಯಷ್ಟೆ! ಇವರುಗಳು ಮೊದಲು ಪರಕೀಯರಾಗಿ ಬಂದರೂ, ಕೊನೆಯವರೆಗೆ ಪರಕೀಯರಾಗಿ ಉಳಿಯಲಿಲ್ಲವೆಂದು ಹೇಳಬೇಕು. ಆ ಮುನ್ನೂರು ವರ್ಷಗಳವರೆಗೆ ಒಂದೇ ಎಡೆಯಲ್ಲಿ ನಿವಾಸ ವಾಗಿದ್ದುದರಿಂದಲೂ, ಔರಂಗಜೇಬನ ದಾಳಿಯಾದ ನಂತರ ಅವರ ಅಧಿಕಾರವು ತೊಲಗಿ ಅವರೂ ಸಾಧಾರಣ ಪ್ರಜೆಗಳಂತಾದುದರಿಂದಲೂ ಇವರು ಇಲ್ಲಿಯ ದೇಶೀಯರ ಸಮುಕಟ್ಟಿಗೆ ಬಂದು ಎಲ್ಲರೂ ಸ್ವಕೀಯರಾದರು. ಬಹಮನಿರಾಜರ ಉನ್ನತಿಯ ಕಾಲದಲ್ಲಿ ಅವರು ತಮ್ಮ ರಾಜ್ಯವೈಭವವನ್ನು ಮೆರೆದರು. ಇದರಿಂದ ಇಲ್ಲಿಯ ಜನತೆಯಮೇಲೆ ಇಸ್ಲಾಂ ಸಂಸ್ಕೃತಿ ಯ ಪರಿಣಾಮ ವಾದುದು ಆಶ್ಚರ್ಯದ ಸಂಗತಿಯಲ್ಲ. ಈ ದೊರೆಗಳು ತಮ್ಮ ಆಳಿಕೆಯಕಾಲದಲ್ಲಿ ನವೀನ ವಾಸ್ತು ಕಲೆಯನ್ನು ಪ್ರಚಾರಕ್ಕೆತಂದರು. ಇವರು ಯುದ್ಧ ಕಲೆಯಲ್ಲಿ ನಿಪುಣರಾಗಿದ್ದುದರಿಂದ ವಿಜಯನಗರದ ರಾಜರು ತಮ್ಮ ಸೇನೆಯಲ್ಲಿ ಇವರನ್ನು ಸೇರಿಸಿಕೊಂಡಿದ್ದರೆಂಬಂಶವನ್ನು ಮೇಲೆ ನಿರೂಪಿಸಲಾಗಿದೆ. ಉಡುಪಿನಲ್ಲಿ ಬದಲಾವಣೆಯಾದದ್ದು ಕಂಡುಬರುತ್ತದೆ. ಈ ಎರಡು ಧರ್ಮದವರು ಒಂದೆಡೆಯಲ್ಲಿ ಇಷ್ಟುದೀರ್ಘಕಾಲ ಕಲೆತುಜೀವಿಸುತ್ತಬಂದಿದ್ದುದರಿಂದ ಒಬ್ಬರ ಸಂಪ್ರದಾಯ, ಆಚರಣೆ, ವ್ಯವಹಾರ, ಮುಂತಾದವುಗಳ ಪರಿಣಾಮವು ಮತ್ತೊಬ್ಬರ ಮೇಲೆ ಆದುದು ಸಹಜವೆಂದು ಭಾವಿಸಬೇಕು. ಹೀಗೆ ಮುಸಲ್ಮಾನ ಮತದವರಿಂದ ಆಚರಿಸಲ್ಪಡುವ ಮೋಹರಂ, ಉರ್ಸು, ಮುಂತಾದ ಮತ ಸಂಭಂದವಾದ ಉತ್ಸವಗಳಲ್ಲಿ ಹಿಂದುಗಳೂ, ಹಿಂದುಗಳ ಜಾತ್ರೆ, ವಿವಾಹ ಮುಂತಾದ ಸಂದರ್ಭಗಳಲ್ಲಿ ಮುಸಲ್ಮಾನರೂ ಆಸಕ್ತಿಯನ್ನು ವ್ಯಕ್ತಗೊಳಿಸುತ್ತಬಂದ ಅಂಶವು ಎಲ್ಲರಿಗೂ ತಿಳಿದುದಾಗಿದೆ. ಹಿಂದುಗಳು ಮುಸಲ್ಮಾನರ ಪವಿತ್ರ ಸ್ಥಳಗಳನ್ನೂ, ಮಹಿಮಾ ಪುರುಷರನ್ನೂ, ಪೂಜ್ಯ ಭಾವದಿಂದ ಕಾಣುತ್ತಿರುವದನ್ನು ನಾವು ಈಗಲೂ ನೊಡುತ್ತಿದ್ದೇವೆ. ಹಾಗೆಯೇ ಮುಸಲ್ಮಾನರೂ ಹಿಂದುಗಳ ದೇವತೆಗಳಲ್ಲಿಯೂ, ಮಹಾತ್ಮರಲ್ಲಿಯೂ, ಭಕ್ತಿ ವಿಶ್ವಾಸವನ್ನಿಟ್ಟು ನಡೆದು ಕೊಳ್ಳುತ್ತಿರುವದು ಕಂಡುಬರುತ್ತದೆ. ಈ ಭಾವನೆ ಎಷ್ಟುಮಟ್ಟಿಗೆ ಬೆಳೆದು ಹೋಗಿದೆಯೆಂದರೆ ಮುಸಲ್ಮಾನರು ಹಿಂದುಗಳ ಹೆಸರುಗಳನ್ನು, ಹಿಂದುಗಳು ಮುಸಲ್ಮಾನರ ಹೆಸರುಗಳನ್ನೂ, ಇಟ್ಟುಕೊಳ್ಳುತ್ತಿರುವ ನಿದರ್ಶನಗಳು ಅಲ್ಲಲ್ಲಿ ಕಂಡು ಬರುತ್ತಿವೆ. ಈ ಸಂದರ್ಭದಲ್ಲ ಮೊನ್ನೆತಾನೇ ನವ್ವಾಬ ಮೆಹಿದಿಯಾರಜಂಗ್ ಬಹಾ

ದ್ದೂರ್ ಶಿಕ್ಷಣ ಶಾಖೆಯ ಮಂತ್ರಿಗಳು, ಆಂಧ್ರ ವಿಶ್ವವಿದ್ಯಾನಿಲಯದ ಪದವೀ ಪ್ರಾನ ಸಮಾರಂಭದ ಸಂದರ್ಭದಲ್ಲಿ ಅಪ್ಪಣೆ ಕೊಡಿಸಿದುದನ್ನು ಉದಾಹರಿಸಬಹುದಾಗಿದೆ.

"ಹಿಂದು ಮುಸಲ್ಮಾನ ಸಂಸ್ಕೃತಿಗಳು ಅನ್ಯೋನ್ಯವಾಗಿ ಸಮ್ಮಿಶ್ರವಾದುದು ಇತಿಹಾಸದಲ್ಲಿ ಬಹಳ ಸ್ವಾರಸ್ಯವಾದ ಘಟನೆಯಾಗಿದೆ. ಮುಸಲ್ಮಾನರು ಜೀವನವಿಧಾನದ ಒಂದು ಬೇರೆ ಅಂತಸ್ತನ್ನು ನಿರ್ಮಿಸಿದರು. ಆಹಾರ, ಉಡುಪುಗಳಲ್ಲಿ ನಯವನ್ನುಂಟು ಮಾಡಿದರು. ಕಂದಾಯ, ನ್ಯಾಯ ಪದ್ಧತಿಗಳನ್ನು ಪ್ರಚಾರಗೊಳಿಸಿದರು. ನ್ಯಾಯಾಸ್ಥಾನಗಳನ್ನು ಏರ್ಪಡಿಸಿದುದರಿಂದ ಹಿಂದುಸ್ಥಾನ ದರ್ಬಾರಗಳಲ್ಲಿ ಈಗಲೂ ಅದರ ಅನುಕರಣವಾಗುತ್ತಿರುವುದು ಕಂಡುಬರುತ್ತಿದೆ. ಮುಸಲ್ಮಾನರ ಆಳಿಕೆಯ ಪ್ರಭಾವವು ಆಗಿನ ಜನತೆಯ ಸಮಾಜ ಜೀವನದ ಮೇಲೆಯೂ, ಬಲವಾಗಿ ಪರಿಣಮಿಸಿತು. ಇದರ ಮುಖ್ಯಧ್ಯೇಯವೆಂದರೆ ಹಿಂದು ಮುಸಲ್ಮಾನರ ನಂಬಿಕೆಗಳನ್ನು ಒಂದುಗೂಡಿಸುವದಾಗಿದ್ದಿತು. ಹೀಗೆ ಹಿಂದು ಮತದ ಧಾರ್ಮಿಕ ನಾಯಕರು ಉತ್ತರದಲ್ಲಿಯೂ, ದಕ್ಷಿಣದಲ್ಲಿಯೂ ಉದಯಿಸಿ ಏಕದೇವವಾದ ತತ್ವವನ್ನು ಉಪದೇಶಿಸುವಂಥ ಪಂಗಡಗಳನ್ನು ಸ್ಥಾಪಿಸಿದರು. ಎಷ್ಟೋಜನ ಹಿಂದುಗಳು ಮುಸಲ್ಮಾನರೊಡನೆ ಮುಸ್ಲಿಂ ಮಹಿಮಾ ಪುರುಷರನ್ನು ಪೂಜ್ಯಭಾವದಿಂದ ಕಾಣತೊಡಗಿದರು. ಉತ್ತರದಲ್ಲಿ ರಾಮಾನಂದ, ಕಬೀರ್, ದಕ್ಷಿಣದಲ್ಲಿ ಲಿಂಗಾಯತ ಮತಸ್ಥಾಪಕನಾದ ಬಸವ, ಮುಂತಾದ ಧಾರ್ಮಿಕ ಸುಧಾರಕರನ್ನು ಉದಾಹರಿಸಬಹುದು. ಮುಸಲ್ಮಾನರು ಹಿಂದುಗಳ ಎಷ್ಟೋ ಆಚಾರ ವ್ಯವಹಾರಗಳನ್ನು ಎಂದರೆ ಮದುವೆ, ಜಾತ್ರೆ, ಉತ್ಸವಗಳನ್ನು ಅನುಕರಿಸಿದುದಲ್ಲದೆ, ಅಂಧ ಶ್ರದ್ಧೆಯ ಅನುಕರಣವನ್ನೂ ಮಾಡಿದರು."

—"ಹಿಂದು" ತಾ. ೭-೧೨-೧೯೪೧

"The commingling of the Hindu and Muslim civilisations into a harmonious whole was one of the most interesting phenomena of history The Muslims brought about a different standard of living and introduced refinements in such matters as food and dress. They instituted a revenue and a judicial system and laid bown a court ceremonial which was followed by Indian Durbars to this day· Muslim rule moreover strongly influenced the social life and religious thought of the time. Its tendency was to bring about a compromise between the Hindu and the Muslim beliefs· Thus Hindu religious leaders arose both in the North and the South who formed sects that were more or less monotheistic and many Hindus venerated Muslim saints in common with the Muslims· Ramananda and Kabir in the North and Basav, the founder of the Lingayat sect, in the South. were examples of such religious reformers· The Muslims on their part adopted many of the habits and customs of the Hindus, such as a marriage ceremonies festivals, fairs and even certain popular superstitions. (Address at Andhra University convocation by Nawab Mehadi Yar Jung Bahadur Education Minister, H.E H· the Nizam's Govt.)

# ಆಸಫ್‌ಜಾಹಿ ರಾಜಮನೆತನದ ಇತಿಹಾಸ.

---

ಬರೆದವರು:- ಮೌಲ್ವಿ ಸಯ್ಯದ್ ಮುಹಮ್ಮದ್ ಅಬ್ದುಲ್ಲಾ ಸಾಹೇಬ ತಿಮ್ಮಾಪುರಿ

ಅಡ್ವೊಕೇಟ್. ಹೈದರಾಬಾದು.

---

ಮೌಲ್ವಿ ತಿಮ್ಮಾಪುರಿಯವರು ಕಲಬುರ್ಗಿಯವರು. ತಮ್ಮ ವ್ಯವಸಾಯದಲ್ಲಿ ಬಹಳ ಚತುರರು. ಈಗ ಇವರ ವಯಸ್ಸು ಸುಮಾರು ೬೫ ಇವರಿಗೆ ಸನ್ ೧೯೪೪ನೆಯ ಇ. ಯಲ್ಲಿ ಅಡ್ವೋಕೇಟ್ ಪದವಿ ದೊರೆಯಿತು. ಇವರಿಗೆ ಕನ್ನಡ ಜನಾಂಗ, ಸಂಸ್ಕೃತಿಗಳಬಗ್ಗೆ ತುಂಬಾ ಆದರ. ಅವರ ಸರ್ವತೋಮುಖ ಏಳ್ಗೆಯಾಗಲಿಎಂದು ಕೋರುವವರಲ್ಲಿ ಇವರೊಬ್ಬರು. ಇವರು ನಿಜಾಂಕರ್ನಾಟಕ ಪರಿಷತ್ತಿನ ಉಪಾಧ್ಯಕ್ಷರು. ನೃಪತುಂಗಶಾಲೆಯ ಕಾ. ನಿ. ಮಂಡಲಿಯ ಸದಸ್ಯರು. ಈ ವರ್ಷ ಹೈದರಾಬಾದಿನ ಹೈಕೋರ್ಟ ವಕೀಲರ ಸಂಘಕ್ಕೆ ಪ್ರಚಂಡವಾದ ಬಹುಮತದಿಂದ ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ತಿಮ್ಮಾಪುರಿಯವರು ಜಾತೀಯತೆಯ ಭೂತವು ತೊಲಗಿ ಸಕಲರು ಒಮ್ಮತದಿಂದ ಸುಖ ಜೀವನದಲ್ಲಿ ಬಾಳಬೇಕೆಂಬ ಉತ್ಕಟೇಚ್ಛೆಯುಳ್ಳ ಸಂಗಡಕ್ಕೆ ಸೇರಿದವರು.

---

ಸಾಮ್ರಾಟ್ ಔರಂಗಜೇಬ ಆಲಂಗೀರನು ದಕ್ಷಿಣದಲ್ಲಿ ತನ್ನ ಜೈತ್ರಯಾತ್ರೆಯನ್ನು ಮುಗಿಸಿದಮೇಲೆ, ಆತನ ಸಾಮ್ರಾಜ್ಯದಲ್ಲಿ ಮುಂಬಯಿ, ಮದರಾಸು, ಕರ್ನಾಟಕ ಹಾಗು ಮೈಸೂರಿನ ಕೆಲವುಭಾಗ ಸೇರಿಕೊಂಡಿತು. ಈ ದಕ್ಷಿಣ ಪ್ರಾಂತದ ಪ್ರಜೆಗಳಲ್ಲಿ ಮರಾಠಿ, ತೆಲಗು, ಮಾತಾಡುವವರೊಡನೆ ಕನ್ನಡ ಮಾತಾಡುವ ಜನರು ಇದ್ದರು. ಆರಂಭದಲ್ಲಿ ದಕ್ಷಿಣದ ಭಾಗದಲ್ಲಿ ರಾಜ್ಯಾಡಳಿತವನ್ನು ನಡೆಯಿಸುವುದಕ್ಕೆ ಒಬ್ಬ ಅಧಿಕಾರಿಯನ್ನು ನಿಯಮಿಸಲಾಗುತ್ತಿತ್ತು. ಸನ್ ೧೭೧೩ ಇಸವಿಯಲ್ಲಿ ದಹಲಿಯ ಬಾದಷಹರಾದ ಮುಹಮ್ಮದ್ ಷಾಹರು ನಿಜಾಮುಲ್ಮುಲ್ಕ್ ಮೊದಲನೆಯ ಆಸಫ್‌ಜಾಹರನ್ನು ದಕ್ಷಿಣದ ಅಧಿಕಾರಿಗಳನ್ನಾಗಿ ನಿಯಮಿಸದರು. ನಿಜಾಮುಲ್ಮುಲ್ಕರ ಪೂರ್ವಜರು ಷಾಹಜಾಹನರ ಕಾಲದಲ್ಲಿಯೇ ಹಿಂದುಸ್ಥಾನಕ್ಕೆ ಬಂದಿದ್ದರೆಂಬ ಮಾತನ್ನು ಇಲ್ಲಿ ಹೇಳುವುದು ಆವಶ್ಯಕ. ನಿಜಾಮುಲ್ಮುಲ್ಕರ ತಾತಂದಿರಾದ ಖಾಜಾ ಆಬಿದ್ ಅವರು ಷಾಹಜಾಹನರ ಕಾಲದಲ್ಲಿಯೇ ಇರಾಕಿನಿಂದ ಹಿಂದುಸ್ತಾನಕ್ಕೆ ಬಂದರು.

ಖಾಜಾ ಆಬಿದ್‌ರಿಗೆ ಔರಂಗಜೇಬನು ನವಾಬ್ ಕಲೀಜಖಾನ್ ಎಂಬ ಬಿರುದನ್ನು ಕೊಟ್ಟನು. ಗೋಲಕುಂಡ ಕಿಲ್ಲೆಯನ್ನು ಗೆಲ್ಲುವಾಗ ಆಲಂಗೀರನ ಸೇನೆಯಲ್ಲಿ ಇವರೇ ದಂಡನಾಯಕರು. ಇದೇ ಯುದ್ಧದಲ್ಲಿ ಇವರು ವೀರಸ್ವರ್ಗವನ್ನೈದಿದರು. ಇವರ ಪುತ್ರರಾದ ಷಹಾಬುದ್ದೀನರು ಮೊಗಲರ ಸೇನೆಯಲ್ಲಿ ದೊಡ್ಡ ಸರದಾರರಾಗಿದ್ದರು. ಅವರಿಗೆ ಫಿರೋಜಜಂಗ್ ಗಾಜೀಯುದ್ದೀನ್ ನೆಂಬ ಬಿರುದಿತ್ತು. ಬೀಜಾಪೂರ ಕಿಲ್ಲೆಯನ್ನು ಗೆಲ್ಲುವಾಗ ಇವರು ತಮ್ಮ ಪರಾಕ್ರಮವನ್ನು ವ್ಯಕ್ತ ಗೊಳಿಸಿದರು. ನಿಜಾಮುಲ್ಮುಲ್ಕ್ ಮೊದಲನೆಯ ಆಸಫಜಾಹ ಅವರು ಇದೇ ಫಿರೋಜಜಂಗ್‌ರ ಮಕ್ಕಳು. ಸನ್ ೧೦೮೨ ಹಿಜರಿ (೧೬೭೩ ಇ.) ಯಲ್ಲಿ ದಹಲಿಯಲ್ಲಿ ಇವರ ಜನನವಾಯಿತು. ಇವರ ನಿಜವಾದ ಹೆಸರು ಕಮರುದ್ದೀನ್. ಇವರಿಗೆ ಸನ್ ೧೧೦೨ ನೆಯ ಹಿಜರಿ (೧೬೮೩ ಇ.) ಯಲ್ಲಿ ಚೀನ್ ಖಲೀಜಖಾನರೆಂಬ ಬಿರುದನ್ನು ದಯಪಾಲಿಸಲಾಯಿತು. ಮುಂದೆ ಇವರ ಪರಾಕ್ರಮದ ಕಾರ್ಯಗಳು ಬೆಳದಂತೆಲ್ಲ ಸ್ಥಾನಮಾನಗಳು ಉನ್ನತವಾಗಹತ್ತಿದವು. ದಹಲಿಯ ಫರ್ಖಸ್ಯೆರ ಸುಲ್ತಾನರ ಕಾಲದಲ್ಲಿ ಇವರಿಗೆ ದೊರೆತ ಬಿರುದು ಈ ವರೆಗೂ ಈ ಮನೆತನದವರಿಗೆ ವಂಶ ಪರಂಪರವಾಗಿ ನಡೆದುಬಂದಿದೆ. ನಿಜಾಮುಲ್ಮುಲ್ಕ್ ಫತೆಹಜಂಗ್ ಎಂಬುದೇ ಆ ಬಿರುದು. ಆರಂಭದಲ್ಲಿ ಇವರಿಗೆ ಕರ್ನಾಟಕ ಪ್ರಾಂತದ ಸೂಬೇದಾರಿಯನ್ನು ಕೊಡಲಾಯಿತು. ನಿಜಾಮುಲ್ಮುಲ್ಕ್ ಫತೆಹ ಜಂಗರು ಆರಂಭದಲ್ಲಿ ಸನ್ ೧೧೩೬ನೆಯ ಹಿಜರಿ (೧೭೧೭ ಇ.) ಯಲ್ಲಿ ಕರ್ನಾಟಕ ಪ್ರಾಂತದ ಸೂಭೆದಾರಿಯ ಅಧಿಕಾರ ಸೂತ್ರಗಳನ್ನು ವಹಿಸಿದರು. ಸನ್ ೧೧೩೭ನೆಯ ಹಿಜರಿ (೧೭೧೮ ಇ.) ಯಲ್ಲಿ ಮುಹಮ್ಮದ್ ಷಾಹಾ ಬಾದಷಹರು ಆಸಫ್‌ಜಾಹ ಎಂಬ ಬಿರುದನ್ನುಕೊಟ್ಟರು. ಆಗ ದಕ್ಷಿಣಕ್ಕೆ ಇವರು ಸುಭೇದಾರರಾದರು. ಔರಂಗಾಬಾದು ರಾಜಧಾನಿಯಾಗಿತ್ತು. ಹಜರತ್ ನಿಜಾಮುಲ್ಮುಲ್ಕ್ ಮೊದಲನೆಯ ಆಸಫ್‌ಜಾಹ ಅವರು ಸನ್ ೧೧೬೨ ನೇ ಹಿಜರಿ (೧೭೪೩ ಇ.) ಯಲ್ಲಿ ಬುರಹಾನಪುರ ಸ್ಥಳದಲ್ಲಿ ಮರಣ ಹೊಂದಿದರು. ಖಲ್ದಾಬಾದಿನಲ್ಲಿ ಗೋರಿಯಿದೆ.

ನಿಜಾಮುಲ್ಮುಲ್ಕ್ ಮೊದಲನೆಯ ಆಸಫ್‌ಜಾಹರು ಮರಣ ಹೊಂದಿದ ತರುವಾಯ ಅವರ ಮಗನಾದ ನಾಸಿರ್‌ಜಂಗ್ ಮೀರ ಅಹಮ್ಮದ್ ಅಲೀಖಾನ್ ನಿಜಾಮುದ್ದವಲ ಅವರು ದಕ್ಷಿಣದ ಸುಭೇದಾರರಾದರು. ಇದೇಕಾಲದಲ್ಲಿ ಮೊದಲನೆಯ ಆಸಫಜಾಹರ ದೌಹಿತ್ರನಾದ ಹಿದಾಯತ್ ಮಹಿಯೋದ್ದೀನ್‌ಖಾನ್ ಮುಜಫರ್‌ಜಂಗನನ್ನು ಸೆರೆಹಿಡಿಯಲಾಯಿತು. ಸನ್ ೧೧೬೪ನೆಯ ಹಿಜರಿ (೧೭೪೫ ಇ. ) ಯಲ್ಲಿ ಪಾಂಡಿಚರಿಯಯುದ್ಧದಲ್ಲಿ ನಾಸಿರ್ ಜಂಗರು ಹತರಾದರು. ಇವರ

ಗೋರಿಯು ಖುಲ್ದಾಬಾದಿನಲ್ಲಿದೆ. ಇವರು ಸುಮಾರು ಎರಡು ವರುಷ ಆಳಿದರು. ಇವರ ತರುವಾಯ ಮೇಲೇಹೇಳಿದ ಮುಜಫರ್ ಜಂಗರಿಗೆ ಪಟ್ಟವನ್ನು ಕಟ್ಟಲಾಯಿತು. ಆದರೆ ಇವರಿಗೆ ಪಟ್ಟಗಟ್ಟಿದ ಹಿಮ್ಮತ್ ಖಾನನೇ ಇವರನ್ನು ಮುಂದೆ ಸುಮಾರು ನಾಲ್ಕುತಿಂಗಳ ತರುವಾಯ ಸನ್ ೧೧೬೪ನೆಯ ಹಿಜರಿ (೧೭೫೫ ಇ.) ಯಲ್ಲಿ ಗುಂಡುಹಾಕಿ ಕೊಂದನು.

ಮುಜಫರ್ ಜಂಗನ ಕೊಲೆಯ ತರುವಾಯ, ಮೊದಲನೆಯ ನಿಜಾಮುಲ್ಮುಲ್ಕರ ಮಕ್ಕಳಾದ ನವಾಬ್ ಸಯ್ಯದ್ ಮಹಮ್ಮದ್ ಖಾನ್ ಆಸುಫದ್ದೌಲ ಸಲಾಬತ್ ಜಂಗ್ ಬಹಾದ್ದುರಗೆ ಪಟ್ಟಗಟ್ಟಲಾಯಿತು. ದಹಲಿಯ ಅಹಮ್ಮದ್ ಷಾಹ ಬಾದಶಹರು, ಇವರಿಗೆ ಆಸಫುದ್ದವಲಾ ಎಂಬ ಬಿರುದನ್ನು ದಯಪಾಲಿಸಿದರು. ಆದರೆ ದಹಲಿಯ ಬಾದುಶಹರು ನಿಜಾಂ ಅಲಿಖಾನನ ಹೆಸರಿನಲ್ಲಿ ದಕ್ಷಿಣ ಸುಭೇದಾರಿಯ ಹುಕುಮನ್ನು ಕಳಿಸಿದನಂತರ ೧೫ನೆಯ ಜೀಹಜ ಸನ್ ೧೧೭೫ ನೆಯ ಹಿಜರಿ (೧೭೫೬ ಇ) ಯಲ್ಲಿ ಆಸಫದ್ದೌಲ ಅವರು ಅಧಿಕಾರದಿಂದ ನಿವೃತ್ತರಾದರು. ಇವರು ಸುಮಾರು ೧೨ ವರುಷ ಆಳಿ ಸನ್ ೧೧೭೭ ನೆಯ ಹಿಜರಿ (೧೭೮೮ ಇ.) ಯಲ್ಲಿ ಮರಣ ಹೊಂದಿದರು.

ಅಲ್ಲಿ ಒಂದು ಮಾತು ಹೇಳಬೇಕು. ಮೊದಲನೆಯ ಆಸಫಜಾಹರ ತರುವಾಯ ಸುಮಾರು ೧೩ ವರ್ಷಗಳ ಅವಧಿಯಲ್ಲಿ ಮೂವರು ಆಳಿದರು. ಆದರೆ ಈ ಕಾಲದಲ್ಲಿ ದೇಶದ ಆಡಳಿತ ವ್ಯವಸ್ಥೆಯು ಸಮಾಧಾನಕರ ವಾಗಿತ್ತೆಂದು ಹೇಳುವಂತಿಲ್ಲ. ಯಾಕೆಂದರೆ ನಾಸಿರ್ ಜಂಗ್, ಮುಫರ್ ಜಂಗ್, ಹಾಗು ಆಸಫದ್ದೌಲ, ಈ ಮೂವರ ಆರಂಭದ ಕಾಲದಲ್ಲಿ ದಹಲಿಯ ಬಾದುಷಹರು ಇವರ ಸುಭೇಧಾರಿಯನ್ನು ಅಂಗೀಕರಿಸಿದ್ದಿಲ್ಲ. ಆದ್ದರಿಂದಲೇ ಸನ್ ೧೧೭೫ನೆಯ ಹಿಜರಿಯಲ್ಲಿ ದಹಲಿಯ ಬಾದಷಹರ ಫರ್ಮಾನಿನಂತೆ ಮೊದಲನೆಯ ನಿಜಾಮುಲ್ಮುಲ್ಕರ ಮಕ್ಕಳಾದ ನವಾಬ ನಿಜಾಂ ಅಲಿಖಾನ ಎರಡನೆಯ ಆಸಫ ಜಾಹರಿಗೆ ಪಟ್ಟಗಟ್ಟಲಾಯಿತು. ಅದೇಕಾಲಕ್ಕೆ ಸನ ೧೭೯೫ ನೆಯ ಇಸವಿಯಲ್ಲಿ ನವಾಬ್ ನಿಜಾಂ ಅಲಿಖಾನರು ಖುಲ್ದಾದಲ್ಲಿ ಮರಾಟಿಗರನ್ನು ಸೋಲಿಸಿದರು. ಅವರ ದಂಡು ಪುಣೆಯವರೆಗೆ ಮುಟ್ಟಿತ್ತು. ಕೊನೆಗೆ ಮರಾಟಿಗರ ಒಪ್ಪಂದ ದಿಂದ ಯುದ್ಧವು ಕೊನೆಗಂಡಿತು. ಸನ ೧೭೯೯ನೆಯ ಇಸವಿಯಲ್ಲಿ ನವಾಬ ನಿಜಾಂ ಅಲಿಖಾನರು ಇಂಗ್ಲಿಷರೊಡನೆ ಮೈಸೂರು ಯುದ್ಧದಲ್ಲಿ ಭಾಗವಹಿಸಿದರು. ಈ ಯುದ್ಧದ ಅನಂತರ ಮೈಸೂರಿನ ಕೆಲವು ಭಾಗವನ್ನು

ನಿಜಾಮ್ ಅಲಿ ಖಾನರಿಗೆ ಕೊಡಲಾಯಿತು. ಆದರೆ ಮುಂದಿನ ವರ್ಷವೇ ಇದನ್ನು ಈಸ್ಟ್ ಇಂಡಿಯಾ ಕಂಪನಿಯು ವಾಪಸು ತೆಗೆದುಕೊಂಡಿತು. ನಿಜಾಮ್ ಅಲಿಖಾನರು ತಮ್ಮ ಎಪ್ಪತ್ತನೆಯ ವರ್ಷದಲ್ಲಿ ಎಂದರೆ ಸನ್ ೧೮೦೨ ನೆಯ ಇಸವಿಯಲ್ಲಿ ಮರಣ ಹೊಂದಿದರು.

ನಿಜಾಮ್ ಅಲಿ ಖಾನರ ಮರಣದ ತರುವಾಯ ಅವರ ಮಕ್ಕಳಾದ ಮೀರ್ ಅಕ್ಬರ್ ಅಲಿ ಖಾನ್ ಸಿಕೆಂದರ್‌ಜಾಹ ಮೂರನೆಯ ಆಸಫ್‌ಜಾಹರು ಪಟ್ಟವನ್ನೇರಿದರು. ಇವರ ಕಾಲದಲ್ಲಿ ಪೆಂಡಾರಿಗಳು ದೇಶಲ್ಲೆಲ್ಲ ಲೂಟಿಯನ್ನು ಮಾಡುತ್ತ ಬಹಳ ಹಾವಳಿಯನ್ನೆಬ್ಬಿಸಿದ್ದರು. ಸಿಕೆಂದರ್‌ಜಾಹ ಅವರು ಇದನ್ನು ಬಗ್ಗುಬಡಿದು ಶಾಂತಿಯನ್ನು ನೆಲೆಗೊಳಿಸಿದರು. ಇವರ ಕಾಲದಲ್ಲಿಯೇ ಔರಂಗಾಬಾದಿನ ಬದಲಾಗಿ ಹೈದರಾಬಾದು ರಾಜಧಾನಿಯಾಯಿತು. ಸನ್ ೧೨೪೪ ನೆಯ ಹಿಜರಿ (೧೮೨೯ ಇ.) ಯಲ್ಲಿ ಇವರು ಮರಣ ಹೊಂದಿದರು. ಇವರ ತರುವಾಯ ಇವರ ಹಿರಿಯ ಮಗನಾದ ನವಾಬ್ ಮೀರ್ ಫರಖುಂದೆ ಅಲಿ ಖಾನ್ ನಾಸಿರುದ್ದೌಲ ನಾಲ್ಕನೆಯ ಆಸಫಜಾಹ ಅವರಿಗೆ ಪಟ್ಟ ಗಟ್ಟಲಾಯಿತು. ಇವರು ಸನ್ ೧೮೫೭ ನೆಯ ಇಸವಿಯಲ್ಲಿ ಮೃತರಾದ ತರುವಾಯ ಮೀರ್ ತಹನಿಯತ್ ಅಲಿಖಾನ್ ಅಫ್ಜಲುದ್ದೌಲ ೫ ನೆಯ ಆಸಫಜಾಹರು ಪಟ್ಟಕ್ಕೆ ಬಂದರು. ಚೌಮೊಹಲ್ಲ ಕಟ್ಟಡಗಳನ್ನು ಇವರೇ ಕಟ್ಟಿಸಿಸಿದರು. ಸೂಭೆ ಜಿಲ್ಲೆಗಳು ಏರ್ಪಟ್ಟವು. ಸೂಬೇದಾರನನ್ನು ತಾಲೂಕದಾರರನ್ನು ತಹಸಿಲ್ದಾರರನ್ನು ನಿಯಮಿಸಲಾಯಿತು. ಇವರಿಗಿಂತ ಮೊದಲು, ಮೊಗಲ ಬಾದಷಹರು ಹಾಕಿಕೊಟ್ಟ ತಳಹದಿಯಮೇಲೆಯೇ ರಾಜ್ಯಪದ್ಧತಿಯು ನಡೆದುಬಂದಿತ್ತು. ದೇಶಮುಖ, ದೇಶಪಾಂಡೆ, ಸರ್ ದೇಶಪಾಂಡೆ, ಪರಗಣೆದಾರ, ಕಿಲ್ಲೆದಾರ, ಎಂಬ ವತನದಾರರಿದ್ದರು ಅಫ್ಜಲುದೌಲ ಬಹಾದ್ದೂರ್ ಅವರು ಈ ವತನಗಳನ್ನು ಬದಲಾಯಿಸಿದರು. ಹೊಸ ಆಡಳಿತದ ಮಾಹಿತಿಯಾಗಬೇಕಾದರೆ ಈ ಜನರು ಹೊಸ ಶಿಕ್ಷಣವನ್ನು ಪಡೆಯುವುದು ಅವಶ್ಯಕವೆಂದು ನಿರ್ಬಂಧಿಸಲಾಯಿತು. ತೆಗೆದುಹಾಕಿದ ವತನದಾರರ ಸ್ಥಳಕ್ಕೆ ವತನದಾರರಲ್ಲದಿದ್ದರೂ ಹೊಸ ಶಿಕ್ಷಣವನ್ನು ಹೊಂದಿದವರನ್ನು ನಿಯಮಿಸಲಾಯಿತು. ಹೀಗೆ ಅನೇಕ ನೂರು ವರ್ಷಗಳಿಂದ ನಡೆದು ಬಂದ ಜಾಗೀರುಗಳು, ಮನ್ಸಬುಗಳು, ಇದ್ದವಾದರೂ ಅವುಗಳ ಹಕ್ಕು ಸನದಿನಮೇಲೆ ಅವಲಂಬಿಸಿ ಉಳಿಯಲಿಲ್ಲ. ಆದರೆ ಆಯಾ ಮನೆತನದ ಸಂತತಿಯವರು ಅಥವಾ ಬಳಗದವರು ಹೊಸ ಶಿಕ್ಷಣವನ್ನು ಪಡೆದವರಿಗೆಲ್ಲ ಅವರ ಯೋಗ್ಯತೆಗನುಸರಿಸಿ ಅಧಿಕಾರಿಗಳನ್ನು ಕೊಡಲಾಯಿತು. ಇದೇಕಾಲದಲ್ಲಿ ಬ್ರಿಟಿಷ್ ಹಿಂದುಸ್ತಾನದಲ್ಲಿರುವಂತೆ ಆಂಗ್ಲ ಪದ್ಧತಿಯ ಶಾಲೆಗಳನ್ನು ತೆಗೆಯಲಾಯಿತು. ಅದರ ಅನುಕರಣದಿಂದ ಶಿಕ್ಷಣದ ಪದ್ಧತಿ

ಯನ್ನು ಅದೇ ಬಣ್ಣದಲ್ಲಿ ಸ್ಥಾಪಿಸಲಾಯಿತು. ಶಿಕ್ಷಣ ಮತ್ತು ವ್ಯವಸ್ಥೆಯ ಆರಂಭವು ನವಾಬ್ ಅಫ್ಜಲುದ್ದೌಲ ಬಹಾದ್ದೂರ್ ೫ ನೆಯ. ಆಸಫ್‌ಜಾಹರ ಕಾಲದಿಂದಲೇ ಆಯಿತೆಂದು ಹೇಳಬಹುದು. ಇವರ ಕಾಲದಲ್ಲಿ ಸಾಲಾರ್‌ಜಂಗ್ ಬಹಾದ್ದೂರ್ ಅವರು ಮದಾರುಲ್‌ಮಹಾಮ (ದಿವಾನ) ರಾಗಿದ್ದರು. ಇಂಗ್ಲೀಷ್ ಅಮಲ್ದಾರಿಯ ಪರಿಣಾಮವು ದೇಶದಮೇಲೆ ಆದದ್ದು ಈ ಬಾದಷಹರ ಕಾಲದಲ್ಲಿಯೇ. ಕೋತ್ವಾಲಿ, ನ್ಯಾಯ (ಅದಾಲತ್), ಬಂದೋಬಸ್ತ (ಭೂಮಿ ಅಳತೆ) ಹಾಗು ಇತರ ಖಾತೆಗಳು ಇಂಗ್ಲೀಷು ಪದ್ಧತಿಯಂತೆಯೇ ಸ್ಥಾಪಿತವಾದವು. ಇಂದಿಗೂ ಈ ಖಾತೆಗಳು ಆ ತಳ ಹದಿಯ ಮೇಲೆ ನಿಂತು ಬ್ರಿಟಿಷ್ ಹಿಂದುಸ್ಥಾನದಲ್ಲಿಯಂತೆ ಪ್ರಗತಿ ಹೊಂದುತ್ತಲಿವೆ. ನವಾಬ್ ಅಫ್ಜಲುದ್ದೌಲ ಬಹಾದ್ದೂರ್ ಅವರ ಪುತ್ರರಾದ ಮೀರ್ ಮಹಬೂಬ್‌ಅಲಿ ಖಾನ್ ಆರನೆಯ ಆಸಫಜಾಹ ಅವರು ತಮ್ಮ ೨ ವರ್ಷ ೭ ತಿಂಗಳ ವಯಸ್ಸಿನಲ್ಲಿ ಸನ್ ೧೮೬೯ ನೆಯ ಇಸವಿಯಲ್ಲಿ ರಾಜ್ಯಾಭಿಷಕ್ತರಾದರು. ಇವರ ಕಾಲದಲ್ಲಿ ಹೈದರಾ ಬಾದಿನಿಂದ ಕಲಬುರ್ಗಿಯ ವರೆಗೆ ಉಗೆ ಬಂಡಿಯ ವ್ಯವಸ್ಥೆಯಾಯಿತು. ತಾಮೀ ರಾತ್ ಖಾತೆಯನ್ನು ಸ್ಥಾಪಿಸಲಾಯಿತು. ಸನ್ ೧೮೮೫ ನೆಯ ಇಸವಿಯಲ್ಲಿ 'ಸತಿ' ಪದ್ಧತಿಯು ನಿಂತು ಹೋಯಿತು. ಇವರ ಆಳಿಕೆಯಲ್ಲಿಯೇ ಕ್ಯಾಬಿನೆಟ್ಟ್ ಕೌನ್ಸಿಲಿನ ಸ್ಥಾಪನೆ ಯಾಯಿತು. ಇದರಲ್ಲಿ ಕೆಲವು ಮೊಯಿನಲ್ ಮಹಾಮರು (ಮಂತ್ರಿಗಳು) ಹಾಗು ಒಬ್ಬ ಮದಾರುಲ್ಮಹಾಮ (ಮುಖ್ಯಮಂತ್ರಿ) ಇದ್ದರು. ಸನ್ ೧೨೯೩ ನೆಯ ಹಿಜರಿ (೧೮೭೪ ಇ) ಯಲ್ಲಿ ಸರಕಾರೀ ಭಾಷೆ ಫಾರ್ಸಿಯ ಸ್ಥಾನದಲ್ಲಿ ಉರ್ದುಆಯಿತು. ಇದೇ ಕಾಲದಲ್ಲಿ ಹೈಕೋರ್ಟನ್ನು ಸ್ಥಾಪಿಸಿತು- ಇವರ ಆಳಿಕೆಯಲ್ಲಿಯೇ ಹೈದರಾ ಬಾದಿನ ನಾಣ್ಯವು 'ಮಹಬೂಬಿಯಾ' ಎಂಬ ಹೆಸರಿನಿಂದ ಪ್ರಚಾರಕ್ಕೆ ಬಂತು. ಸನ್ ೧೯೦೨ ನೆಯ ಇಸವಿಯಲ್ಲಿ ವರ್‍ಹಾಡ ಸ್ಥಿರಪಟ್ಟೆಯನ್ನು ಸಾಮ್ರಾಜ್ಯಸರಕಾರವು ವಾಪಸು ತೆಗೆದುಕೊಂಡಿತು. ಸರ್ ಮಹಾರಾಜಾ ಕಿಶನ್‌ಪ್ರಸಾದ್‌ಅವರು ಇವರಕಾಲದಲ್ಲಿಯೇ ಮುಖ್ಯ ಮಂತ್ರಿಗಳಾದರು. 'ಆರನೆಯ ಆಸಫಜಾಹರ ಆಳಿಕೆಯ ಬಹುಭಾಗದಲ್ಲಿ ಇವರು ಮುಖ್ಯ ಮಂತ್ರಿಯ ಪದವಿಯಲ್ಲಿದ್ದರು. ೧೩೨೯ ನೆಯ ಹಿಜರಿ (೧೯೧೦ ಇ) ಯಲ್ಲಿ ಮೂಸಿಹೊಳೆಯ ಮಹಾಪೂರದಿಂದ ಹೈದರಾಬಾದು ಹಾಳಾಯಿತು. ೪ ನೆಯ ರಮ್ಜಾನ್ ೧೩೨೯ ನೆಯ ಹಿಜರಿ (೧೯೧೦ ಇ) ಯ ದಿನ ಆರನೇ ಆಸಫಜಾಹರು ಮರಣ ಹೊಂದಿದರು. ಹೀಗೆ ಸನ್ ೧೯೧೧ನೆಯ ಇಸವಿಯಲ್ಲಿ ಆಳುವ ಮಹಾಪ್ರಭುಗ ಳಾದ **ನವಾಬ್ ಮೀರ್ ಉಸ್ಮಾನ್ ಅಲಿಖಾನ್ ಬಹಾದ್ದೂರ್ ಏಳನೆಯ ಆಸಫಜಾಹ** ಅವರು ರಾಜ್ಯಾಭಿಷಕ್ತರಾದರು. ಆಗ ಇವರ ವಯಸ್ಸು ೨೭. ಇವರ ಆಳಿಕೆಯಲ್ಲಿ ಆಗಿರುವ ಸುಧಾರಣೆಗಳನ್ನು ವಿಸ್ತರಿಸಿ ಹೇಳುವುದು ಈ ಲೇಖನಕ್ಕೆ ಅಸಾಧ್ಯ. ಪ್ರಭುಗಳಿಗೆ ಕಟ್ಟಡಗಳಲ್ಲಿ ವಿಶೇಷ ಆಸಕ್ತಿಯುಂಟು. ಹೈದರಾಬಾದಿನ

ಹೈಕೋರ್ಟು, ಉಸ್ಮಾನಿಯಾ ಆಸ್ಪತ್ರೆ, ಸಿಟಿ ಕಾಲೇಜು, ಆಸಫಿಯಾ ಗ್ರಂಥಾಲಯ, ಯುನಾನೀ ಆಸ್ಪತ್ರೆ, ಉಸ್ಮಾನಿಯಾ ವಿಶ್ವ ವಿದ್ಯಾನಿಲಯದ ಕಟ್ಟಡಗಳು ಹಿಂದು ಸ್ಥಾನದಲ್ಲಿಯೇ ಅನುಪಮೇಯವಾದ ಈ ಕಟ್ಟಡಗಳು, ಇವರ ಆಳಿಕೆಯಲ್ಲಿ ಆದುವು ಗಳು. ಉಸ್ಮಾನ್ ಸಾಗರ, ಹಿಮಾಯತ್ ಸಾಗರ, ನಿಜಾಮ ಸಾಗರಗಳನ್ನು ಕಟ್ಟುವದಕ್ಕೆ ವಿನಿಯೋಗವಾದ ಹಣ ಇತರ ದೇಶದಲ್ಲಿ ಆಗಿರುವಂತೆ ಕಂಡುಬರುವ ದಿಲ್ಲ. ಮೊನ್ನೆತಾನೆ ನಿಜಾಮ ಸಾಗರಕ್ಕೆ ಹೊಂದಿ ಸಕ್ಕರೆಯ ಕಾರಖಾನೆಯನ್ನು ಸ್ಥಾಪಿಸಿರುವುದು ದೇಶಕ್ಕೆ ಅತ್ಯಂತ ಲಾಭದಾಯಕವಾಗಿದೆ. ಔರಂಗಾಬಾದು, ಕಲಬುರ್ಗಿ, ರಾಯಚೂರು, ಪರಭಣಿ, ನಿಜಾಮಾಬಾದು, ನಾಂದೇಡು, ಮುಂತಾದ ಸ್ಥಳಗಳಲ್ಲಿ 'ನಲ್ಲಿ' (ಕೊಳಾಯಿ) ಯ ದ್ವಾರ ನೀರಿನ ವ್ಯವಸ್ಥೆ ಆದುದು ಇವರ ಕಾಲ ದಲ್ಲಿಯೇ, ಜಿಲ್ಲೆಗಳಲ್ಲಿಯೂ ವಿದ್ಯುಚ್ಛಕ್ತಿಯ ಬೆಳಕಿನ ವ್ಯವಸ್ಥೆಯಾದುದು ಇವರ ಕಾಲದಲ್ಲಿಯೇ. ಪ್ರಾಚ್ಯ ಸಂಶೋಧನ, ವಿದ್ಯುಚ್ಛಕ್ತಿ, ಸಹಕಾರ ಸಂಘ, ಒಕ್ಕಲತನ, ನಗರ ಸುಧಾರಣೆ, ಡ್ರೇನೇಜ್, ಸುದ್ದಿ, ಆಕಾಶವಾಣಿ, ಮುಂತಾದ ಖಾತೆಗಳ ಏರ್ಪಾಡು ನಮ್ಮ ಮಹಾಪ್ರಭುಗಳ ಅನುಗ್ರಹದ ಫಲ. ಕಾರಖಾನೆಗಳಲ್ಲಿ, ಷಾಹಾ ಬಾದಿನ ಸಿಮೆಂಟ್ ಕಾರಖಾನೆ, ಉಸ್ಮಾನ್‌ಷಾಹಿ ಮತ್ತು ಮೋಜಂಜಾಹಿ ಮಿಲ್ಲು ಗಳು, ಸಿಗರೇಟು, ಮ್ಯಾಚ್ ಕಾರಖಾನೆ, ಸಾಬೂನು ತಯಾರಿಸುವ ಕಾರಖಾನೆ, ಮುಂತಾದವು ಮಹತ್ವ ವುಳ್ಳವುಗಳಾಗಿವೆ. ಶಿಕ್ಷಣದ ವಿಷಯ ಒಂದು ಮಾತು, ಇವರು ರಾಜ್ಯಾಭಿಷಕ್ತರಾದ ಕಾಲದಲ್ಲಿ ಶಾಲೆಗಳ ಸಂಖ್ಯೆ (೧೦೩೬). ಓದುವವರ ಸಂಖ್ಯೆ (೬೬,೪೮೪) ಇತ್ತು ಈಗ ಶಾಲೆಗಳ ಸಂಖ್ಯೆ (೫,೨೨೪) ಇದೆ. ಓದುವವರ ಸಂಖ್ಯೆ (೩೮೪,೬೯೬) ಇದೆ. ಇವರು ಪಟ್ಟಾಭಿಷಕ್ತರಾದಾಗ್ಗೆ ಶಿಕ್ಷಣಕ್ಕಾಗಿ ವಿನಿ ಯೋಗಿಸುತ್ತಿದ್ದ ಹಣವು (೧೩,೯೯,೮೫೨) ರೂಪಾಯಿ. ಈಗ ಅದು ೧೨೪ ಲಕ್ಷ ರೂಪಾ ಯಿಗೆ ಏರಿದೆ. ಸ್ತ್ರೀ ವಿದ್ಯಾಭ್ಯಾಸದ ಬಗ್ಗೆ ವ್ಯವಸ್ಥೆಯಾಗಿದೆ. ಸ್ತ್ರೀಯರ ಪ್ರಾಥಮಿಕ ಶಿಕ್ಷಣದಿಂದ ವಿಶ್ವ ವಿದ್ಯಾಲಯದ ಶಿಕ್ಷಣದವರೆಗೆ ಏರ್ಪಾಡಾಗಿ ದೇಶದ ಲ್ಲೆಲ್ಲ ಶಾಲೆ ಕಾಲೇಜುಗಳು ಏರ್ಪಟ್ಟಿವೆ.

ಕಾಯದೆ ಮಂಡಲ, ಮಂತ್ರಿ ಮಂಡಲಗಳ, ರಚನೆ ಹಾಗು ವಿಸ್ತರಣೆಯು ಇವರ ಪವಿತ್ರ ಆಳಿಕೆಯಲ್ಲಿಯೇ ನಡೆದಿದೆ. 'ಪ್ರಜೆಗಳು ಆಡಳಿತದೊಡನೆ ಸಹಕರಿಸ ಬೇಕೆಂಬ' ಉದ್ದೇಶದಿಂದ ರಾಜ್ಯಾಂಗ ಸುಧಾರಣೆಗಳನ್ನೂ ಘೋಷಿಸಲಾಗಿದೆ· ಈ ಸುಧಾರಣೆಗೆಳಲ್ಲಿ ಸ್ಥಾನಿಕ ಸ್ವಾಯತ್ತತೆಯು ಮಹತ್ವದ್ದಾಗಿದೆ. ಈ ಸುಧಾರಣೆಗಳನ್ನು ಸ್ವಲ್ಪಸ್ವಲ್ಪವಾಗಿ ಜಾರಿಗೆ ತರಬೇಕೆಂಬ ಉದ್ದೇಶದಿಂದ ಒಬ್ಬ ಸಲಹೆಗಾರನನ್ನು ನಿಯ ಮಿಸಲಾಗಿದೆ.

ನಮ್ಮ ಮಹಾಪ್ರಭುಗಳ ಆಡಳಿತದಲ್ಲಿ ಧರ್ಮ ಮತ ಪಂಥಗಳ ಭೇದವಿಲ್ಲದೆ ಎಲ್ಲರೂ ಸುಶಿಕ್ಷಿತರಾಗಿ, ಸುಖದಿಂದ ಬಾಳುವ ಸ್ವಾತಂತ್ರ್ಯವನ್ನು ಅವರಿಗೆ ದಯ ಪಾಲಿಸಲಾಗಿದೆ. ಆದ್ದರಿಂದಲೇ ದೇಶದ ಪ್ರತಿಯೊಬ್ಬನೂ ರಾಜಭಕ್ತನಾಗಿದ್ದು ದೇಶ ಕ್ಕಾಗಿಯೂ ರಾಜನಿಗಾಗಿಯೂ ಆತ್ಮಾರ್ಪಣ ಮಾಡಲು ಸಿದ್ಧನಾಗಿದ್ದಾನೆ.

ರಾಯಚೂರು, ಕಲಬುರ್ಗಿ, ಬೀದರ್, ಹಾಗು ಉಸ್ಮಾನಾಬಾದು ಜಿಲ್ಲೆಯ ಕೆಲಭಾಗದಿಂದೊಡಗೂಡಿದ ಕರ್ನಾಟಕ ಪ್ರಾಂತವು, ಸಂಸ್ಥಾನದ ಮುಖ್ಯ ಭಾಗಗಳ ಲ್ಲೊಂದಾಗಿದೆ. ಇಲ್ಲಿಯ ಹವಾಮಾನ, ಭೂಮಿಯ ಗುಣ, ಜನರ ಸಂಸ್ಕೃತಿ, ನಡಾ ವಳಿ, ಮುಂತಾದವುಗಳ ದೃಷ್ಟಿಯಿಂದ ಈ ಪ್ರಾಂತದ ಜನರಿಗಿರುವ ಮೇಲ್ಮಟ್ಟವನ್ನು ನಾವು ಮರಾಠವಾಡಿ ಹಾಗು ತೆಲಂಗಾಣೆಯ ವಿಭಾಗದಲ್ಲಿ ಕಾಣಲಾರೆವು. (ಮಾನ್ಯ ಖೇಟ) ಮಳಖೇಡ, ಕಲ್ಯಾಣ, ನಾಗಾಾಯಿ, ಆನೆಗುಂದಿ, ಗುಡಗುಂಟಿ, ಸುರಪುರ, ಕೊಪ್ಪಳ, ಮುಂತಾದಸ್ಥಳಗಳಲ್ಲಿ ಹಿಂದೆ ಬೇರೆಬೇರೆಕಾಲದಲ್ಲಿ ಧಾರ್ಮಿಕಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಉಚ್ಚ ಸಂಸ್ಕೃತಿಯೊಡನೆ ಸಾಮ್ರಾಜ್ಯಗಳು ಸ್ಥಾಪಿತವಾಗಿ ದ್ದವು. ಕೃಷ್ಣಾ, ತುಂಗಭದ್ರಾ, ಮತ್ತು ಕೃಷ್ಣಾಭೀಮಾ, ನದಿಗಳ ಮಧ್ಯಭೂಮಿಯು ಯಾವಾಗಲೂ ವಿದ್ಯೆಗೆ ತವರಾಗಿದೆ. ಇಲ್ಲಿ ಉದ್ದಾಮ ಕವಿಗಳು ಜನಿಸಿ, ನಾಡಿನ ಸಂಸ್ಕೃತಿಯನ್ನು, ವಿಚಾರ ಸ್ವಾತಂತ್ರ್ಯವನ್ನು, ರಾಜಭಕ್ತಿಯನ್ನು ಬೆಳಗಿದ್ದಾರೆ ನಾನು ಮೇಲೆ ವಿವರಿಸಿರುವ ರಾಜ್ಯಗಳಲ್ಲಿ ಕನ್ನಡವೇ ರಾಜಭಾಷೆಯಾಗಿತ್ತು ಹಿಂದು ಸ್ಥಾನದ ಪ್ರಸಿದ್ಧ ಭಾಷೆಗಳಾದ ಮರಾಠಿ ಹಾಗು ತೆಲುಗು ಭಾಷೆಗಳಿಗಿಂತ ಕನ್ನಡವು ಪ್ರಾಚೀನವಾದದ್ದೆಂಬ ಅಂಶವು ಎಲ್ಲರಿಗೂ ತಿಳಿದದ್ದೆ. ಹೈದರಾಬಾದಿನ ಪ್ರಾಚ್ಯ ಸಂಶೋಧನ ಖಾತೆಯವರು ಸಂಗ್ರಹಿಸಿಟ್ಟಿರುವ ಪುಸ್ತಕಗಳಿಂದ, ಸಂಸ್ಕೃತದ ತರು ವಾಯ ಪಾಲಿ, ಕನ್ನಡಭಾಷೆಲಿಪಿಗಳ ಸ್ಥಾನವೆಂದು ವ್ಯಕ್ತವಾಗುತ್ತದೆ./ಕರ್ನಾಟಕದ ರಾಜ್ಯಾಡಳಿತವು ಯಾವಾಗಲೂ ಧರ್ಮಗಳ ತಾರತಮ್ಯವಿಲ್ಲದೆ, ದೇಶಪಾಂಡೆ, ಸರ್ ದೇಶಪಾಂಡೆ, ದೇಶಮುಖ ಸರ್ ದೇಶಮುಖ, ಕೋತ್ವಾಲ್ ಮುಂತಾದವರ ದ್ವಾರಾ ನಡೆಯುತ್ತಿತ್ತು. ಈಅಧಿಕಾರಿಗಳಿಂದ ಅಪರಾಧಗಳು ನಡೆದಾಗ ಅನೇಕ ಸಲ ಅವರ ಬದಲಾಗಿ ದೇಶದಲ್ಲಿರುವ ಇತರರನ್ನು ನಿಯಮಿಸಲಾಗುತ್ತಿತ್ತು. ಹೀಗೆ ದೇಶದ ಆಡ ಳಿತವು ದೇಶೀಯರಿಂದಲೇ ನಡೆಯುತ್ತಿತ್ತು.

ಈ ಅಧಿಕಾರಕ್ಕಾಗಿ ವತನದಾರರೇ ಇರಬೇಕಾಗಿದ್ದಿಲ್ಲ. ಅಯಾ ಅಧಿಕಾರ ವನ್ನು ವಹಿಸುವ ಯೋಗ್ಯತೆ, ರಾಜನಿಷ್ಠೆ, ಪ್ರಜಾಹಿತ, ಮುಂತಾದವುಗಳು ಇದ್ದರೆ ಸಾಕಾಗಿತ್ತು. ಇಂದಿಗೂ ನಮ್ಮ ಪ್ರಭುಗಳ ಆಶ್ರಯದಲ್ಲಿ ಕರ್ನಾಟಕದ ಅಸಂಖ್ಯಾತ

ಮಾಷದಾರರು, ವತನದಾರರು ಹಿಂದೆ ಅವರು ಸಲ್ಲಿಸಿದ ಸೇವೆಗಾಗಿ ದೊರೆತ ಇನಾಮುಗಳನ್ನು ವಿನಿಯೋಗಿಸುತ್ತಿದ್ದಾರೆ. ತಮ್ಮ ಸಂಸ್ಕೃತಿ ಅಳಿಯದಂತೆ ಅದನ್ನು ಉಳಿಸಿಕೊಳ್ಳುತ್ತಬಂದಿದ್ದರೂ, ಆಸಫಿಯಾ ರಾಜಮನೆತನದೊಡನೆ, ಕರ್ನಾಟಕದ ಮಾಷದಾರರೂ, ವತನದಾರರು, ಪ್ರಜೆಗಳು ಯಾವಾಗಲೂ ನಿಷ್ಠೆಯಿಂದ ವರ್ತಿಸು ತ್ತಬಂದಿದ್ದಾರೆ. ಎಂದೂ ಯಾರೂ ರಾಜ ಭಕ್ತಿಯಲ್ಲಿ ಎಳ್ಳಷ್ಟಾದರೂ ಕಡಮೆ ಯಾಗಿದ್ದರೆಂಬ ನಿದರ್ಶನವಿಲ್ಲ. ಬಂದೋಬಸ್ತಿನ ಆರಂಭದಿಂದ ಇಂದಿನವರೆಗೆ ಕರ್ನಾಟಕದ ಒಕ್ಕಲಿಗರು ತಮ್ಮ ಭೂಮಿಗಳನ್ನು ಅನುಭೋಗಿಸುತ್ತಿದ್ದು, ಭೂ ಕಂದಾಯವನ್ನು ಸಲ್ಲಿಸುವುದುರಲ್ಲಿ ಇವರೇ ಮುಂದು ಮುಂದಾಗಿದ್ದಾರೆ. ಒಟ್ಟಾರೆ ಕನ್ನಡಿಗರುತಮ್ಮ ಉಚ್ಚಸಂಸ್ಕೃತಿ ಹಾಗು ನಾಗರಿಕತೆಗಳಿಂದ ಇಂದಿಗೂಮಾನ್ಯತೆಯು ನ್ನು ಪಡೆದಿದ್ದಾರೆ. ಅವರ ಇತಿಹಾಸವು ಎಷ್ಟು ಉಜ್ವಲವಾಗಿದೆಯೋ ಅದೇರೀತಿಯಲ್ಲಿ, ಆಸಫಜಾಹಿ ರಾಜಮನೆತನದ ಇತಿಹಾಸದಲ್ಲಿ ಅವರ ರಾಜ ನಿಷ್ಠೆಯು ಅಷ್ಟೇಅಚಲ ವಾಗಿದೆ. ಆದ್ದರಿಂದಲೇ ಕನ್ನಡಿಗರು ಉಚ್ಚ ಶಿಕ್ಷಣವನ್ನು ಪಡೆದಿದ್ದಾರೆ. ಕನ್ನಡಿಗರಲ್ಲಿ ಪದವೀಧರರು, ವಕೀಲರು, ಅಡ್ವೊಕೇಟರು, ನ್ಯಾಯಾಧೀಶರು, ಇಂಜನೀಯರುಗಳು, ಪ್ರೊಫೇಸರರು, ಇದ್ದಾರೆ. ರಾಜ್ಯದ ಅಧಿಕಾರಿಗಳು ಇವರಿಗೆ ದೊರಕುತ್ತ ಬಂದಿವೆ. ಧರ್ಮಪಂಥಗಳ ಭೇದವಿಲ್ಲದೆ ಪ್ರಜಗಳೆಲ್ಲರಿಗೂ ದೊರೆತಿರುವ ಪ್ರಭುಗಳ ಕೃಪಾಶ್ರ ಯವು ಅನಾದೃಶವಾಗಿದೆ.

ಸೂ:– ಉರ್ದುಭಾಷೆಯಿಂದ ಕನ್ನಡಿಸಲಾಗಿದೆ.

—ಸಂ

# ಕನ್ನಡ ಸಾಹಿತ್ಯಕ್ಕೆ ಹೈದರಾಬಾದು ಸಲ್ಲಿಸಿದ ಸೇವೆ.

ವಿದ್ವಾನ್ ಮಾಸ್ತಿ ನರಸಿಂಗರಾಯರು, ಎಂ. ಎ., ಪಿ. ಒ. ಎಲ್.,
ಸುದ್ದಿ ಖಾತೆಯ ಕನ್ನಡ ಭಾಷಾಂತಕಾರರು.

ಶ್ರೀ. ನರಸಿಂಗರಾಯರು ಆಸ್ತಿಕರು. ವಿದ್ಯಾಭ್ಯಾಸದಲ್ಲಿ ವಿಶೇಷ ಆಸಕ್ತಿ. ಉಸ್ಮಾನಿಯಾ ವಿಶ್ವ ವಿದ್ಯಾನಿಲಯದಿಂದ ಕನ್ನಡ ತೆಗೆದುಕೊಂಡು ಬಿ. ಎ. ಪಾಸಾಗಿ ವಿದ್ಯಾರ್ಥಿವೇತನವನ್ನು ಪಡೆದು ಮೈಸೂರಿಗೆ ಹೋಗಿ ಕನ್ನಡ ಎಂ. ಎ. ಪರೀಕ್ಷೆಯನ್ನು ಮೊದಲನೆಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ಮದರಾಸು ವಿಶ್ವವಿದ್ಯಾನಿಲಯದ ಪಿ. ಒ. ಎಲ್. ಪರೀಕ್ಷೆಯನ್ನೂ ಪಾಸಾಗಿದ್ದಾರೆ. ಇವರು ಕವಿಗಳು, ಸಾಹಿತಿಗಳು. ಇವರ ಭಾಷಣ ವಿದ್ವತ್ಪೂರ್ಣ. ಇವರು ಕನ್ನಡ ಸಾಹಿತ್ಯ ಮಂಡಲವನ್ನು ಸ್ಥಾಪಿಸಿದರು. ಕರ್ನಾಟಕ ಸಾಹಿತ್ಯ ಮಂದಿರದ ಕಾರ್ಯದರ್ಶಿಗಳಾಗಿದ್ದಾರೆ. ೨೬ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ನೆರೆಯಿಸುವ ಹೆಣಗಾಟದಲ್ಲಿ ಇವರು ಸೂತ್ರಧಾರರು.

ಭಾಷೆಯ ಮೂಲಕ ಪ್ರಕಟವಾದ ಕಲಾನುಭವವೇ ಸಾಹಿತ್ಯ. ಸಾಹಿತ್ಯವು ಯಾವುದೋ ಒಂದ ವಿಶಿಷ್ಟ ಪರಿಸ್ಥಿತಿಯೊಂದರಿಂದ ಹುಟ್ಟಿದದು ಮಾತ್ರವೆಂದು ಭಾವಿಸಬಾರದು. ಜಾಗ್ರತ ಮತ್ತು ಸುಷುಮ್ನಾವಸ್ಥೆಗಳಮೇಲೆ ಜೀವನ ಮತ್ತು ವಾತಾವರಣಗಳು ಮಾಡಿದ ಪ್ರಭಾವದಿಂದ ಉಂಟಾದ ಅನುಭವಗಳಲ್ಲಿ ನಡೆದ

ಘರ್ಷಣದಿಂದಲೇ ಸಾಹಿತ್ಯದ ಕಿಡಿ ಹುಟ್ಟುವುದು. ಮನಶ್ಶಾಸ್ತ್ರದ, ಶಾಸ್ತ್ರೀಯ ಜಿಜ್ಞಾಸೆ ಇಲ್ಲಿ ಬೇಡ. ಕವಿ, ಮನುಷ್ಯನೆಂದೂ ಅವನಮೇಲೂ ಜೀವನವು ತನ್ನ ಪ್ರಭಾವವನ್ನು ನಡೆಸುವುದೆಂದು ನಂಬಿದರೆ ಸಾಕು. ಪ್ರಾಚೀನ ಲಾಕ್ಷಣಿಕರು ಪ್ರತಿಭೆಯನ್ನು ಅಮಾನುಷವೆಂದೂ ದೈವಿಕವೆಂದೂ ಭಾವಿಸಿದ್ದಾರೆ; ಭಾವಿಸಲಿ. ಆದರೆ ಚುರಕು ಗಣ್ಣಿನ ವಿಮರ್ಶಕರಿಗೆ ಪ್ರತಿಭೆ ಯೆಂದರೆ ಕವಿ ಹೃದಯದಮೇಲಾದ ಅನುಭವಗಳನ್ನು ವಿವರವಾಗಿಯಾಗಲೀ ಅಥವಾ ಅವನ್ನು ಕತ್ತರಿಸಿ, ಸಂಕ್ಷೇಪಿಸಿ ಹೇಳುವ ಒಂದು ಶಕ್ತಿ. ಪ್ರತಿಭೆಗೆ ಮೂಲ ನೆನಪು. ನೆನಪಿನ ನಿಧಿಯಿಂದ ಕವಿ ತನ್ನ ಕಾವ್ಯವನ್ನು ನೇಯುವನು.

ಯಾವುದಾದರೊಂದು ಗೇಶದಲ್ಲಿ ದೊಡ್ಡ ಕವಿ ಹುಟ್ಟಬೇಕಾದರೆ ಅಲ್ಲಿಯ ಪರಿಸ್ಥಿತಿಗಳು ಅವನ ಹುಟ್ಟಿಗೆ ಅನುಕೂಲಾಗಿರಬೇಕು. ಜೀವನವು ದೊಡ್ಡದಾದರೆ ಕವಿ ದೊಡ್ಡವನು. ಅದು ಅಲ್ಪವಾದರೆ ಕವಿ ಅಲ್ಪನೆ. ಕವಿ, ಜೀವನದಮೇಲೆ ಅಚ್ಚೊತ್ತಿದ್ದರೆ ಜೀವನವು ಅವನಮೇಲೆ ಅಚ್ಚೊತ್ತದೆ ಬಿಡುವದಿಲ್ಲ. ಅವನ ಸ್ಫೂರ್ತಿಗೆ ಜೀವನವು ಕಾರಣವಾದರೆ ಜೀವನವನ್ನು ಕಳೆಗಟ್ಟಲು ಅವನು ಕಾರಣನಾಗುವನು. ಆದುದರಿಂದ ಸಾಮಯಿಕ ಸಾಹಿತ್ಯಗಳ ಉತ್ಪಾದನೆಗೆ ತತ್ಕಾಲೀನ ಜೀವನವೇ ಕಾರಣ. ಒಂದು ಕಾಲದಲ್ಲಿ ಪ್ರಣಯ ಸಾಹಿತ್ಯ, ನೈತಿಕ ಸಾಹಿತ್ಯ, ಅಥವಾ ನಿಂದಕ ಸಾಹಿತ್ಯವು ಹುಟ್ಟುತ್ತದೆಂದರೆ ಆ ಕಾಲದ ಜೀವನವು ಅದರ ಉತ್ಪತ್ತಿಗೆ ಚೈತನ್ಯವನ್ನು ಕೊಡುವಂಥುದು ಎಂದಂತಾಯಿತು. ಮತ್ತು ಒಂದು ಸಾಹಿತ್ಯಕ್ಕೆ ಒಂದು ದೇಶವು ಮೂರುವಿಧವಾಗಿ ಸೇವೆಗಳನ್ನು ಸಲ್ಲಿಸಬಹುದೆಂದಂತಾಯಿತು. ಅದು ಉತ್ತಮ ಜೀವನವನ್ನು ಕಲ್ಪಿಸಬಹುದು. ಉತ್ತಮ ಕವಿಯನ್ನು ಸೃಷ್ಟಿಸಬಹುದು, ಜೀವನ ಮತ್ತು ಕವಿಗಳ ಅಭಿವ್ಯಕ್ತಿಗೆ ಭಾಷೆಯೊಂದನ್ನು ಸೃಷ್ಟಿಸಬಹುದು. ಇವು ಮೂರು ಬೇರೆಬೇರೆ ಪ್ರಮುಖವೇ ಆಗಿವೆ. ಹೈದರಾಬಾದು ಕನ್ನಡ ಸಾಹಿತ್ಯಕ್ಕೆ ಈ ಮೂರರಿಂದ ಯಾವ ಸೇವೆಯನ್ನು ಸಲ್ಲಿಸಿದೆ ಎಂಬುದನ್ನು ನೋಡುವ.

ನೆಟ್ಟಗೆ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುವದಕ್ಕಿಂತ ಮುಂಚೆ ಕನ್ನಡ ಸಾಹಿತ್ಯದ ಉಗಮಕ್ಕೆ ಸಾಧಕವಾದ ಜೀವನನ್ನು ಕುರಿತು ನಾವು ಕೊಂಚ ವಿವೇಚಿಸುವ. ಈ ಜೀವನವನ್ನು ತಿಳಿಯಲು ನಮಗೆ ಚರಿತ್ರೆಯೇ ಆಧಾರ. ಆದುದರಿಂದ ಚಾರಿತ್ರಿಕ ಸಂಗತಿಗಳನ್ನು ಪರಿಶೀಲಿಸೋಣ. ಕನ್ನಡ ಸಾಹಿತ್ಯವು ರೂಪತಾಳುವುದಕ್ಕಿಂತ ಮುಂಚೆ ಎಷ್ಟೋ ಶಿಲಾ ಲಿಪಿಗಳು ಕನ್ನಡ ಭಾಷೆಯಲ್ಲಿ ಪ್ರಕಟವಾಗಿದ್ದವು. ಯಾವ ಭಾಷೆಯೇ ಆಗಲಿ ರಾಜರ ಪೋಷಣೆಯಿದರೆ ಚನ್ನಾಗಿ ಬೆಳೆಯುವುದು. ಶಿಲಾ

ಲಿಪಿಗಳನ್ನು ಕನ್ನಡದಲ್ಲಿ ಬರೆಯಲು ಕಾರಣರಾದವರು ಕನ್ನಡ ಅರಸರಲ್ಲದೇ ಮತ್ತಾರು? ಕನ್ನಡವು ರಾಜಭಾಷೆಯಾದುದರಿಂದ ಅದು ಬಹಳ ವ್ಯಾಪಿಸಿಗೊಂಡಿತು. ಬನವಾಸಿಯ ಕದಂಬರಿಂದ ಮೊದಲ್ಗೊಂಡು ಮೊಹಮ್ಮದೀಯರ ಆಕ್ರಮಣದ ವರೆಗೆ ದಕ್ಷಿಣ ಭಾರತದ ಬಹು ದೊಡ್ಡ ಭಾಗವು ಕನ್ನಡಿಗರ ಕೈಯಲ್ಲಿದ್ದಿತು. ಕದಂಬ ರಾದಮೇಲೆ ಪಶ್ಚಿಮ ಚಾಳುಕ್ಯರು ಬನವಾಸಿಯನ್ನು ಹಿಡಿದರು. ಇವರನ್ನು ಲತ್ತೂರ ರಾಷ್ಟ್ರಕೂಟರು ಸೋಲಿಸಿ ರಾಜ್ಯವನ್ನು ಸ್ವಾಧೀನಪಡಿಸಿಕೊಂಡರು. ಲತ್ತೂರ ಎಂದರೆ ನಮ್ಮ ಸಂಸ್ಥಾನದ ಉಸ್ಮಾನಾಬಾದು ಜಿಲ್ಲೆಯಲ್ಲಿರುವ ಲಾತೂರೆ. ಈ ರಾಷ್ಟ್ರಕೂಟ ವಂಶವನ್ನು ತೈಲಪನು ಕ್ರಿ. ಶ. ೯೭೫ ರಲ್ಲಿ ಕೊನೆಗಾಣಿಸಿದನು. ಕಲ್ಯಾಣದ ಚಾಳುಕ್ಯರು ಹನ್ನೆರಡನೆಯ ಶತಮಾನದವರೆಗೆ ರಾಜ್ಯವಾಳಿ ಅಳಿದರು. ರಾಜ್ಯವು ಬಿಜ್ಜಳನ ಹಸ್ತಗತವಾಯಿತು. ಬಿಜ್ಜಳನ ಕಾಲದಲ್ಲಿ ರಾಜ್ಯದ ಆ ಕೇಂದ್ರ ಶಕ್ತಿ ಉಳಿಯಲಿಲ್ಲ. ಮಾಂಡಳಿಕರೆಲ್ಲರೂ ಸ್ವತಂತ್ರರಾದರು. ರಾಜ್ಯದ ಐಕ್ಯತೆ ಭಗ್ನವಾಯಿತು. ಕನ್ನಡಿಗರ ಪತನಕ್ಕೆ ಪ್ರಾರಂಭವಾಯಿತು. ಸೃಷ್ಟಿ, ಸ್ಥಿತಿ, ಲಯಗಳು ಪ್ರಪಂಚಕ್ಕೆ ಸಾಮಾನ್ಯವಾದುವುಗಳಾದುದರಿಂದ ಪ್ರತಿಯೊಂದು ಪದಾರ್ಥಕ್ಕೆ ಉಗಮ ಉಂಟು; ವಿಕಾಸಉಂಟು; ಅದರ ಜೊತೆಗೆ ವಿನಾಶವೂ ಉಂಟು. ಕನ್ನಡಿಗರ ಅವಸ್ಥೆಯೂ ಹೀಗೆಯೇ ಆಯಿತು. ಕನ್ನಡಿಗರ ರಾಜಕೀಯ ಆಧಿಪತ್ಯವು ಏಸಿಲ್ಲವೆಂದರೂ ನಾಲ್ಕನೆಯ ಶತಮಾನದಿಂದ ಪ್ರಾರಂಭವಾಗಿ ಹತ್ತನೆಯ ಶತಮಾನಕ್ಕೆ ಪರಾಕಾಷ್ಠದಶೆಗೆ ತಲ್ಪಿತು. ಹನ್ನೊಂದನೆಯ ಶತಮಾನದಿಂದ ಅವರ ಜೀವನವು ತಗ್ಗುತ್ತ ನಡೆಯಿತು ದಂತಿದುರ್ಗನು ಮಾನ್ಯ ಖೇಟದಲ್ಲಿ (ಮಳಖೇಡ) ತನ್ನ ರಾಜ್ಯವನ್ನು ಸ್ಥಾಪಿಸುವಷ್ಟು ಹೊತ್ತಿಗೆ ಕನ್ನಡ ಜನರಿಗೆ ಸಾಕಷ್ಟು ಶಕ್ತಿ ಬಂದು ಸ್ವಾತಂತ್ರ ಜನಾಂಗದಂತೆ ಪ್ರಗತಿ ಪರವೂ ಮತ್ತು ಅಭ್ಯುದಯ ಪರವೂ ಆದ ಜೀವನವನ್ನು ಸಾಗಿಸಲು ಕನ್ನಡಿಗರು ಸಮರ್ಥರಾಗಿದ್ದರು ರಾಷ್ಟ್ರಕೂಟ ಸಾಮ್ರಾಜ್ಯವು ೨೨೫ ವರ್ಷಗಳವರೆಗೆ ಬಾಳಿತು. ಕನ್ನಡವೇ ಅವರ ಮಾತಾಡುವ ಭಾಷೆಯಾಗಿತ್ತು.

ದಕ್ಷಿಣದಲ್ಲಿ ಜೈನಧರ್ಮವು ಕ್ರಿ.ಶ. ಪ್ರಾರಂಭದಿಂದಲೂ ತನ್ನ ವ್ಯಾಪ್ತಿಯನ್ನು ಪಡೆದಿದ್ದಿತು. ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳವರೆಗೆ ಮಹಾ ಕ್ಷಾಮವು ಪ್ರಾಪ್ತವಾಗಲು ಕೊನೆಯ ಶ್ರುತಿಕೇವಲಿಯಾದ ಭದ್ರ ಬಾಹುವು ತನ್ನ ಶಿಷ್ಯನಾದ ಮೌರ್ಯ ಸಾರ್ವಭೌಮ ಚಂದ್ರಗುಪ್ತನೊಡನೆ ಕ್ರಿ. ಪೂ. ಮೂರನೆಯ ಶತಮಾನದಲ್ಲಿ ದಕ್ಷಿಣಕ್ಕೆ ಬಂದಿದ್ದನೆಂಬ ಪ್ರತೀತಿಯಿದೆ. ಅಂತೂ ಆರನೆಯ ಶತಮಾನದಷ್ಟು ಹೊತ್ತಿಗೆ ಕನ್ನಡ ನಾಡಿನಲ್ಲೆಲ್ಲ ಜೈನಧರ್ಮವು ವ್ಯಾಪಿಸಿದ್ದಿತು. ಕೆಲವು ಜನ ರಾಷ್ಟ್ರ ಕೂಟ ಚಕ್ರವರ್ತಿಗಳು ಜೈನಧರ್ಮವನ್ನು ಸ್ವೀಕರಿಸಿ ಅದಕ್ಕೆ ರಾಜ ಪೋಷಣೆಯ

ಸ್ನಿತ್ತರು. ಜೈನಧರ್ಮಜ್ಞರು ತಮ್ಮ ಮತ ಪ್ರಚಾರಕ್ಕಾಗಿ ಒಂದು ಮಾಧ್ಯಮವನ್ನು ಹುಡುಕುತ್ತಿದ್ದರು. ಪ್ರಾಯಃ ಈ ಸಮಯದಲ್ಲಿ—ಏಕೆ ಅದಕ್ಕೂ ಪೂರ್ವದಲ್ಲಿಯೇ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ನೆರವಿನಿಂದ ಕನ್ನಡಭಾಷೆಯಲ್ಲಿ ಜೈನ ತತ್ವಗಳನ್ನು ಪ್ರಚುರ ಪಡಿಸಲು ಹವಣಿಸಿರಬಹುದು. ಬೌದ್ಧ ಸಾಹಿತ್ಯವೂ ಕನ್ನಡದಲ್ಲಿದ್ದಿರಬಹುದೆಂದು ಊಹೆ ಮಾಡುವವರು ಮಾಡುವರು. ಜನತೆಯಮಾತು ಕನ್ನಡ. ಅರಸರಮಾತು ಕನ್ನಡ. ಮತ್ತು ಧರ್ಮದ ಮಾಧ್ಯಮವೂ ಕನ್ನಡವಾದಮೇಲೆ ಕನ್ನಡಭಾಷೆಯ ಬೆಳವಣಿಗೆಗೆ ಗರಿಮೂಡಿತು. ಕನ್ನಡ ಸಾಹಿತ್ಯದ ಉಗಮಕ್ಕೆ ಸೆಲೆಯೊಡೆಯಿತು. "ವಿಮಲೋದಯ ನಾಗಾರ್ಜುನ ಸಮೇತ ಜಯಬಂಧು ದುರ್ವಿನೀತಾದಿಗಳ್" ಗ್ರಂಥಗಳನ್ನು ರಚಿಸಿರಬೇಕು ಆದರೆ ಅವು ಇಂದು ಉಪಲಬ್ಧವಿಲ್ಲ. ಕನ್ನಡ 'ಕವಿರಾಜಮಾರ್ಗ', ನೃಪತುಂಗನ ರಾಜಧಾನಿಯಾದ ಮಾನ್ಯ ಖೇಟದಲ್ಲಿ ನಿರ್ಮಾಣವಾಯಿತು. ಕೊಪಣನಗರ (ನಮ್ಮ ಇಂದಿನ ಕೊಪ್ಪಳ) ಪುಲಿಗೆರಿ ಮತ್ತು ಒಂಕುಂದಗಳ ಭಾಷೆ ಶ್ರೇಷ್ಠವಾದ ಭಾಷೆಯೆಂದು ಪರಿಗಣಿತವಾಯಿತು. ಏಕೆಂದರೆ ಅದು ಅರಸನ ಮಾತಾಗಿದ್ದಿತು. ಅರಸನ ಇಂಗ್ಲೀಷನ್ನು ಇಂಗ್ಲೀಷ ಸಾಹಿತ್ಯದಲ್ಲಿ ಬಳಸಿದಂತೆ ಅರಸನ ಕನ್ನಡವನ್ನು ಕನ್ನಡ ಸಾಹಿತ್ಯದಲ್ಲಿ ಬಳಸಿರಬೇಕು. ಈ ಬಳಕೆಯಾದ ಕನ್ನಡವೇ ತಿರುಳ್ಗನ್ನಡ . ಚಕ್ರವರ್ತಿಯ ಸನ್ನಿಧಿಯಲ್ಲಿ ಮಾನ್ಯಖೇಟ (ಮಳಖೇಡ) ದಲ್ಲಿ ಕನ್ನಡ ಸಾಹಿತ್ಯದ ಅಸ್ತಿಭಾರವು ಇದ್ದಿತೆಂದರೆ ಅತಿಶಯೋಕ್ತಿಯಾಗದು. ಮಾನ್ಯಖೇಟವು ಹೈದರಾಬಾದು ಸಂಸ್ಥಾನದಲ್ಲಿದೆ.

ಹೀಗೆ ಪ್ರಾರಂಭವಾದ ಕನ್ನಡ ಸಾಹಿತ್ಯವಾಹಿನಿ ಎಲ್ಲೆಲ್ಲಿ ಯಾವ ಯಾವ ಕಾಲುವೆಗಳಲ್ಲಿ ಹರಿದಿದೆಯೆಂಬುದನ್ನು ನೋಡೋಣ ಪೌರ್ವಾತ್ಯ ಜೀವನವು ಧರ್ಮ ಭಾವನೆಯಿಂದ ತುಂಬಿದೆ. ರಾಜಕೀಯ ಭಾವ ಅಥವಾ ಜಾಗೃತಿ ತೀರ ಇತ್ತೀಚಿನದು. ಧರ್ಮ ಪ್ರಧಾನವಾದ ಈ ನಾಡಿನ ಸಾಹಿತ್ಯವು ವಿಶೇಷವಾಗಿ ಧಾರ್ಮಿಕವಾಗಿದೆ. ಕರ್ನಾಟಕದಲ್ಲಿ ಮೂರು ದೊಡ್ಡ ಧಾರ್ಮಿಕ ಆಂದೋಳನಗಳಾದವು. ಸಾಹಿತ್ಯವೂ ಕೂಡ ತ್ರಿವಿಧವಾಯಿತು. ಜೈನ, ವೀರಶೈವ ಮತ್ತು ಬ್ರಾಹ್ಮಣ ಎಂದು ಕನ್ನಡ ಸಾಹಿತ್ಯವನ್ನು ಮೂರುಭಾಗವಾಗಿ ಹಂಚುವದುಂಟು. ಜೈನ ಮತ್ತು ವೀರಶೈವ ಸಾಹಿತ್ಯವು ಹೈದರಾಬಾದಿನಿಂದ ಹುಟ್ಟಿ ಬೆಳೆದವು; ಬ್ರಾಹ್ಮಣ ಸಾಹಿತ್ಯವು ಹೈದರಾಬಾದು ಸಂಸ್ಥಾನದ ಅಂಚಿನಲ್ಲಿ ಹುಟ್ಟಿದ್ದರೂ ಉತ್ತರಾವಸ್ಥೆಯಲ್ಲಿ ಈ ಆಂದೋಳನವನ್ನು ಪೋಷಿಸುತ್ತ ಬಂದವರು ಹೈದರಾಬಾದಿನವರು. ಕನ್ನಡ ಸಾಹಿತ್ಯವು ಧರ್ಮಮಯವಾಗಿದ್ದರೂ ಜೀವನದ ಉಳಿದ ಅಂಶಗಳ ಬಣ್ಣವು ಅದರಲ್ಲಿ ಸಾಕಷ್ಟಿದೆ. ನಾವು ಈಗ ಒಂದೊಂದು ಭಾಗವನ್ನು ಕೂಲಂಕಷವಾಗಿ ವಿವೇಚಿಸೋಣ.

ಜೈನ ಸಾಹಿತ್ಯವು ಸ್ಥೂಲವಾಗಿ 'ಕವಿರಾಜಮಾರ್ಗ' ದಿಂದ ಪ್ರಾರಂಭವಾಗುವದು. ಆದರೆ ಇದು ಲಾಕ್ಷಣಿಕ ಗ್ರಂಥ. ನಿಜವಾದ ಸಾಹಿತ್ಯವು, ಹತ್ತನೆಯ ಶತಮಾನದವರೆಗೆ ವಿಶೇಷವಾಗಿ ಹುಟ್ಟಿದಂತೆ ಅವುಗಳ ಆಧಾರವು ಸಿಕ್ಕಿಲ್ಲ. ಆದಿ ಕವಿಯಾದ ಪಂಪನು ಕನ್ನಡ ಕವಿ ಸಾಮ್ರಾಟನು. ಪಂಪನು ಹುಟ್ಟಿದುದು ಕನ್ನಡನಾಡಿನ ಪುಣ್ಯವಾದರೆ ಕನ್ನಡ ನಾಡಿನಲ್ಲಿ ಹುಟ್ಟಿದುದು ಅವನ ಪುಣ್ಯ. ಅದನ್ನೇ ಅವನು ತನ್ನ ಗ್ರಂಥದಲ್ಲಿ ಕೆಳಗಿನ ಈ ಪದ್ಯದಲ್ಲಿ ಹೇಳಿದ್ದಾನೆ

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಿಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯು ಮೇಣೋತಿರ್ದಪುದೆ ತೀರದೊಡ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೋಳ್ ಬನವಾಸಿ ದೇಶದೋಳ್ ||೧||

ತೆಂಕಣ ಗಾಳಿ ಸೋಕಿದೊಡ ಮೊಳ್ನುಡಿಗೇಳ್ದೊಡ ಮಿಂಪನಾಳ್ದಗೇ
ಯಂ ಕಿವಿವೊಕ್ಕೊಡಂ ಬೀರಿದ ಮಲ್ಲಿಗೆ ಗಂಡೊಡಮೊದಕೆಂದಲಂ
ಪಂಗೆಡೆ ಗೊಂಡೊಡಂ ಮಧು ಮಹೋತ್ಸವಮಾದೊಡಮೇನ ನೆಂಬೆವಾ
ರಂಕುಸ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ||೨||

ಪಂಪನಕಾಲಕ್ಕೆ ಜನತೆಯ ಜೀವನ ವೇನಿತ್ತೆಂದು ವಿಚಾರಿಸಿದರೆ ಪಂಪನಂಥ ಕವಿಗಳು ಅಂದು ಹುಟ್ಟಿದದುಕ್ಕೆ ಕಾರಣವು ತಿಳಿವುದು. ಬಂಗಾಳದ ಅರಸರು ತಮ್ಮ ಸೈನ್ಯದಲ್ಲಿ ಕರ್ನಾಟಕ ಮತ್ತು ಲಾಟ ದೇಶದಿಂದ ಜನರನ್ನು ತುಂಬಿದ್ದರೆಂಬ ಮಾತಿನಿಂದ ರಾಷ್ಟ್ರಕೂಟರ ರಾಜ್ಯದಲ್ಲಿ ಕ್ಷಾತ್ರ ತೇಜಸ್ಸಿನಿಂದ ಉಕ್ಕುತ್ತಿದ್ದ ಕೆಚ್ಚೆದೆಯ ವೀರರಿದ್ದರೆಂಬುವುದು ಗೊತ್ತಾಗಬಹುದು. ರಾಜಶೇಖರನು ತನ್ನ 'ಶಾಲಭಂಜಿಕೆ' ಯಲ್ಲಿ "ನಿಸರ್ಗೋದ್ಭವಾ ಏವ ಕರ್ನಾಟಾಃ" ಎಂದು ಹೊಗಳಿದ್ದಾನೆ. ರಾಷ್ಟ್ರಕೂಟರ ಕಾಲದಲ್ಲಿ ದಕ್ಷಿಣ ದೇಶಕ್ಕೆ ಬಂದ ರಾಜಕೀಯ ಪ್ರಾಧಾನ್ಯವು, ಪ್ರಾಚೀನ ಭಾರತದ ಚರಿತ್ರೆಯ ಇನ್ನಾವಕಾಲದಲ್ಲೂ ಬಂದಿಲ್ಲ ಈ ಮನೆತನದ ಪ್ರತಿಯೊಬ್ಬ ರಾಜನು ಒಳಗಣ ಬಂಡಾಯುಗಳನ್ನಾಗಲೀ ಅಥವಾ ಹೆಬ್ಬಯಕೆಯ ಹೊರಗಣ ದಿಗ್ವಿಜಯುಗಳನ್ನಾಗಲೀ ಮಾಡದೆ ಇರಲಿಲ್ಲ. ಆದುದರಿಂದ ಸಾಮ್ರಾಜ್ಯದ ಸೈನ್ಯಶಕ್ತಿ ಬಲಿಷ್ಠವೂ ಮತ್ತು ದಕ್ಷವೂ ಆಗಿರಬೇಕು. ಯೋಗ್ಯರಾದ ಸೇನಾಧಿಪತಿಗಳ ಕೈಯಲ್ಲಿ ಈ ಸೇನೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಕಾಠೇವಾಡಿನಿಂದ ಬಂಗಾಳದವರೆಗೆ ಪ್ರತಿಯೊಬ್ಬರನ್ನು ನಡುಗಿಸಿರಬೇಕು. ಸೈನ್ಯಗಳೆಂದರೆ ರಾಷ್ಟ್ರಕೂಟರು ಪ್ರತಿಯೊಬ್ಬ ಅರಸನನ್ನು ಸದೆದು ತಮಗೆ ಕಪ್ಪ ಕಾಣಿಕೆಗಳನ್ನು ಕೊಡುವಂತೆ ವಿಧೆಯ

ರನ್ನಾಗಿ ಮಾಡಿಕೊಳ್ಳುತ್ತಿದ್ದರೆಂದು ಸುಲೇಮಾನನು ಬರೆದಿದ್ದಾನೆ. ಸೈನ್ಯದ ಪ್ರಾಬಲ್ಯವು ಎಷ್ಟಿದ್ದಿತೆಂದರೆ ನಾಗರಿಕ ಜೀವನದ ಆಡಳಿತದಲ್ಲಿ ಪ್ರತಿಬಿಂಬಿತ ವಾಗಿದ್ದಿತು. ದಳಪತಿಗಳೇ ಪ್ರಾಂತಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಪುರಾಧಿಕಾರಿಗಳಾಗುತ್ತಿದ್ದರು. ಹೊರಗಣ ರಾಜರೊಡನೆ ಮತ್ತು ಒಳಗಣ ಮಾಂಡಲಿಕರೊಡನೆ ಯುದ್ಧಗಳು ಒಂದೇಸವನೆ ನಡೆಯುತ್ತಿದ್ದುದರಿಂದ ಇಡಿಯ ಜನಾಂಗದಲ್ಲಿ ಸೈನಿಕೋತ್ಸಾಹವು ತುಂಬ್ಬಿದ್ದಿತು: ಹಳ್ಳಿಗಳಲ್ಲೂ ಕದನ ಬಡಿದಾಟಗಳು ನಡದೇ ಇರುತ್ತಿದ್ದವು. ಎಲ್ಲ ವರ್ಗದವರು ಸೈನ್ಯದಲ್ಲಿ ಸೇರಬಹುದಾಗಿತ್ತು. ಬ್ರಾಹ್ಮಣರು ಕೂಡ ಸೈನದಲ್ಲಿ ಸೇರಿ ಯುದ್ಧಮಾಡುತ್ತಿದ್ದರು. ಜೈನಧರ್ಮದಲ್ಲಿ ಅಹಿಂಸಾ ವ್ರತವು ಪರಾಕಷ್ಠದಶೆಯನ್ನು ಮುಟ್ಟಿತ್ತಾದರೂ ಆಕಾಲದ ಜೈನಧರ್ಮೀಯರಲ್ಲಿ ಇದು ಹೆಂಗರುಳನ್ನು ತಂದಿದ್ದಿಲ್ಲ ಎಂಬುದಕ್ಕೆ ಪಂಪನೇ ಸಾಕ್ಷಿ.

ಈ ಕ್ಷಾತ್ರಯುಗವು ಕನ್ನಡ ಸಾಹಿತ್ಯವನ್ನು ಕ್ಷಾತ್ರಮಯ ಮಾಡಲು ಕಾರಣವಾಯಿತು. **ಪಂಪನು** ಹುಟ್ಟಿದ್ದು **ವೆಂಗಿಪಳು.** ಇದು **ಗೋದಾವರಿ** ಯಿಂದ ಹಿಡಿದು **ಮೂಸಿ** ನದಿಗಳ ನಡುವಣ ಪ್ರದೇಶವೆಂದು ಡಾ. ಆಲ್ಟೇಕರ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಪೋಷಕವಾಗಿ ಪಂಪನು ನಿಜಾಮಾಬಾದು ಜಿಲ್ಲೆಯಲ್ಲಿರುವ ಬೋದನದಲ್ಲಿ ಅರಿ ಕೇಸರಿ ರಾಜನ ಹತ್ತಿರ ದಂಡನಾಯಕನು ಮತ್ತು ಕವಿಯೂ ಆಗಿದ್ದನು. ಪಂಪನು **" ವಿಕ್ರಮಾರ್ಜುನ ವಿಜಯ "** ಮತ್ತು **'ಆದಿಪುರಾಣ'** ವೆಂಬ ಎರಡು ಗ್ರಂಥಗಳನ್ನು ಬರೆದಿದ್ದಾನೆ. ಅವುಗಳ ರಚನೆಯಾಗಿ ಇಂದಿಗೆ ಸರಿಯಾಗಿ ಸಾವಿರ ವರುಷಗಳಾದವು. ಮೊದಲನೆಯ ಗ್ರಂಥವು ಲೌಕಿಕ ವಾದುದು ಎರಡನೆಯದಾದ **' ಆದಿ ಪುರಾಣ '** ದಲ್ಲಿ ಜೈನಧರ್ಮದ ಪ್ರಥಮ ತೀರ್ಥಂಕರ ನಾದ ವೃಷಭನಾಥನ ಚರಿತೆಯಿದೆ. ' ಆರಂ ಕುಸ ಮಿಟ್ಟೊಡಂ ನೆನವುದಿವನಮನಂ ಬನವಾಸಿ ದೇಶಮಂ. ' ಕವಿತೆಯಲ್ಲಿ ಕವಿಚಕ್ರವರ್ತಿಯಾಗುವ ಪುಣ್ಯವು ಇವನಿಗೆ ಲಭಿಸಲಿಲ್ಲ ಲೋಕವು ಯೋಗ್ಯತೆಗೆ ಗೌರವವನ್ನು ಕೊಡುವ ದಿಲ್ಲವೆಂಬುದಕ್ಕೆ ಇದೊಂದು ಸಾಕ್ಷಿ. ಆದರೆ ಇಂಥ ಎಷ್ಟೋ ಕವಿಚಕ್ರವರ್ತಿಗಳನ್ನು ಒಳಗೊಳ್ಳ ಬಹುದಾದ ಕವಿತಾ ಗುಣಾರ್ಣವನಾಗಿದ್ದನಿವನು.

**ಪೊನ್ನ** ನೊಬ್ಬ ಕವಿ ಚಕ್ರವರ್ತಿ. ಇವನುಕ್ರಿ.ಶ. ೯೩೯-೯೬೮ ರವರೆಗೆ ಆಳಿದ ರಾಷ್ಟ್ರಕೂಟ ೩ ನೆಯ ಕೃಷ್ಣನ ಆಸ್ಥಾನ ಕವಿಯಾಗಿದ್ದನು. ಚಕ್ರವರ್ತಿಯು ಆಸ್ಥಾನದ ಕವಿಗೆ 'ಕವಿಚಕ್ರವರ್ತಿ' ಯೆಂಬುದು ಸೋಜಿಗವೇನು ? ಕನ್ನಡ ಸಾಹಿತ್ಯದ ಪ್ರಥಮ ಕವಿಚಕ್ರವರ್ತಿಯಾದವನು ಇವನು. ಉಪಲಬ್ಧವಿದ್ದ ಇವನ **ಶಾಂತಿಪುರಾಣ**

ಮತ್ತು ಉಪಲುಬ್ಧವಾಗದ **ಭುವನೈಕ ರಾಮಾಭ್ಯುದಯ** ಇವು ಪ್ರಸಿದ್ಧವಾದ ಗ್ರಂಥಗಳು ಶಾಂತಿ ಪುರಾಣದಿಂದ ಉತ್ತಮ ಕವಿ ಎಂಬ ಸೂಚನೆಯು ಕಂಡು ಬಂದಿದೆ ಇವನಿದ್ದುದು **ಮಾನ್ಯಖೇಟ**.

**ರನ್ನ**ನು ಕ್ಷಾತ್ರಯುಗದ ೩ ನೆಯ ಕವಿ. ಇವನು ಹುಟ್ಟಿದುದು **ಜಮುಖಂಡಿ** ಸಂಸ್ಥಾನದ **ಮುಧೋಳ**ದಲ್ಲಿ ಆದರೆ ಕೀರ್ತಿ ಪಡೆದುದು **ಕಲ್ಯಾಣದಲ್ಲಿ**. ಇವನು ಕುಲದಿಂದ ಬಳೆಗಾರನು. ಆದರೆ ಜೈನಮತಾವಲಂಬಿ. ತನ್ನ ಪ್ರತಿಭೆ ಮತ್ತು ಪಾಂಡಿತ್ಯದ ಬಲದಿಂದ ತೈಲಪನ ಆಸ್ಥಾನದಲ್ಲಿ ಕವಿಚಕ್ರವರ್ತಿಯಾಗಿದ್ದನು. ಇವನ ಎರಡು ಗ್ರಂಥಗಳು ಪಂಪನ ಎರಡು ಗ್ರಂಥಗಳಿಗೆ ಸಂವಾದಿಯಾಗಿವೆ. **ಗದಾಯು ದ್ಧವು** ವೀರ ಕಾವ್ಯವು. ಸತ್ಯಾಶ್ರಯ ಇರಿವಬೆಡಂಗನನ್ನು ಕವಿಭೀಮನೊಡನೆ ಹೋಲಿಸಿದ್ದಾನೆ. **ಅಜಿತನಾಥ ಪುರಾಣವು** ಎರಡನೆಯ ತೀರ್ಥಂಕರನ ಚರಿತೆ. ದಾನ ಚಿಂತಾಮಣಿಯಾದ ಅತ್ತಿ ಮಬ್ಬೆಯ ಪ್ರೇರಣೆಯಿಂದ ಇವನು ಇದನ್ನು ಬರೆ ದನು. ಇದೊಂದು ಸುಂದರವಾದ ಗ್ರಂಥ. ಕವಿಯಲ್ಲಿ ನಾಟಕೀಯತೆ ಹಬ್ಬಿದೆ. ಗದಾಯುದ್ಧವನ್ನು ನಾಟಕದಲ್ಲಿ ಪರಿವರ್ತಿಸಿದುದು ಇದಕ್ಕೆ ಸಾಕ್ಷಿ. ಪಾತ್ರಪೋಷಣೆ ಯಲ್ಲಿ ಇವನು ಪಂಪನ ಟಿಪ್ಪಣಿಕಾರನು.

ಕ್ಷಾತ್ರ ಯುಗವು **ರನ್ನ**ನಿಗೆ ಮುಗಿಯಿತು. ಹಿಂದಿನ ಶೌರ್ಯ, ವೀರ್ಯ, ಮತ್ತು ಪ್ರತಾಪಗಳು, ಮಾಯವಾಗಿ ಐಕ್ಯ ಮತ್ತು ಸಾಮರಸ್ಯಗಳು ಗಾಯಗೊಂಡು ಜೀವನ ನೀರಸವಾಯಿತು. ಅಹಿಂಸಾ ತತ್ವದ ಅಂಧ ವಿಶ್ವಾಸವು ಜನಾಂಗದಲ್ಲಿ ಕ್ಲೈಬ್ಯವನ್ನು ತಂದಿತು. ಜೀವನದಲ್ಲಿ ಒಡಕು ತಂದಿತು. ಇದರ ಪ್ರಭಾವವು ೧೧ನೆಯ ಮತ್ತು ೧೨ ನೆಯ ಶತಮಾನದ ಸಾಹಿತ್ಯದಲ್ಲಿ ಕಂಡುಬಂದಿತು. ಕವಿಗಳಲ್ಲಿ ಪ್ರತಿಭೆ ಕುಗ್ಗಿತು. ಇದ್ದ ಪ್ರತಿಭೆ ಅಡ್ಡದಾರಿ ಹಿಡಿಯಿತು. ವೀರ ಸಾಹಿತ್ಯದ ಬದಲು ಪಾರಿ ಭಾಷಿಕ ಸಾಹಿತ್ಯ ಇಲ್ಲವೆ ನಿಂದಾಪರ ಸಾಹಿತ್ಯವು ಪ್ರಾರಂಭವಾಯಿತು. **ಅಹವಮಲ್ಲ** ನಿಂದ ಪೋಷಿತನಾದ **ಶ್ರೀಧರಾಚಾರ್ಯನು** (೧೦೪೯) 'ಜಾತಕ ತಿಲಕ' ವನ್ನು ಬರೆದನು. **ಭುವನೈಕಮಲ್ಲನ** (೧೦೬೮–೧೦೭೬) ಸಾಮಂತನಾದ ಲಕ್ಷ್ಮಣನ ಮಂತ್ರಿಯಾದ **ಶಾಂತಿನಾಥನು** ಸುಕುಮಾರ ಚರಿತ್ರೆಯನ್ನು ಬರೆದನು. ಉದಯಾ ದಿತ್ಯನ ಸಂಧಿ ವಿಗ್ರಹಿಯಾದ **ನಾಗವರ್ಮಾಚಾರ್ಯನು ಚಂದ್ರ ಚೂಡಾಮಣಿ ಶತಕ**ವನ್ನು ಬರೆದನು. ಚಂದ್ರ ರಾಜನು ಮಾಚರಾಜನ ಪೋಷಣೆಯಲ್ಲಿ **ಮದನ ತಿಲಕವನ್ನು** ಬರೆದನು. ವಿಕ್ರಮಾದಿತ್ಯನ ತಮ್ಮನಾದ **ಕೀರ್ತಿವರ್ಮನು ಗೋವೈದ್ಯವನ್ನು ಬರೆದನು.**

ಬ್ರಹ್ಮಶಿವನು ಹೈದರಾಬಾದು ಪಟ್ಟಣದ ಹತ್ತಿರವಿರುವ ಪಟ್ಟಣಕೆರೆ (ಪಟನ್‌ಚರು) ಯ ನಿವಾಸಿ. ಇವನು 'ಸಮಯ ಪರೀಕ್ಷೆ' ಮತ್ತು 'ತ್ರೈಲೋಕ್ಯ ರಕ್ಷಾಮಣಿ ಶತಕ' ವನ್ನು ಬರೆದಿದ್ದಾನೆ. ಸಿಂದಾಪರ ಸಾಹಿತ್ಯದಲ್ಲಿ ಇವನ ಕೈ ಮೇಲು. ಇವನ ಶೈಲಿ ಚುರುಕಾಗಿದೆ.

ಮೇಲಿನ ಅಂಶಗಳನ್ನು ನೋಡಿದರೆ ಹೈದರಾಬಾದಿನಲ್ಲಿ ಕನ್ನಡ ಕಿಡಿಯ ಕಾವು ಕಡಮೆಯಾಗಿದ್ದರೂ ಆರಿದ್ದಿಲ್ಲವೆಂದು ಕಂಡುಬರುವದು.

ಧರ್ಮದ ಈ ತಿಕ್ಕಾಟವು ಸಮಾಜದಲ್ಲಿ ಶೈಥಿಲ್ಯವನ್ನು ತಂದು ಸಾಹಿತ್ಯದಲ್ಲಿ ಕೊಳಕನ್ನುಂಟುಮಾಡಿತು. ಜೀವನದಲ್ಲಿ ಸುಧಾರಣೆಯು ಆವಶ ಕವಾಗಿದ್ದಿತು. ಕಾಲವು ತನ್ನ ಆವಶ್ಯಕತೆಯನ್ನು ತಾನೇ ಕಲ್ಪಿಸಿಕೊಳ್ಳುವದು. **ಬಸವಣ್ಣ**ನು ಹುಟ್ಟಿದನು. ಸಮಾಜಕ್ಕೆ ಕಲ್ಯಾಣವನ್ನುಂಟುಮಾಡಿದನು. ಬಸವಣ್ಣನು ಕವಿಹೃದಯದ ತೀಕ್ಷ್ಣಭಕ್ತಿಯ ವೀರಮಾಹೇಶ್ವರನು. ಧರ್ಮವು ಅನುಭವಸಿದ್ಧವಾಗಬೇಕೆಂಬುದು ಆತನ ಹಟ. ಬಾಳು ಬೆಳಗಬೇಕೆಂಬುದು ಆತನ ಮತ. ಈ ಗುರಿಗಳನ್ನು ಸಾಧಿಸಲು **ಕಲ್ಯಾಣ**ದಲ್ಲಿ ಕಾಲೂರಿದನು. ಬಸವಣ್ಣನ ಈ ಸಾಮಾಜಿಕ ಜಾಗ್ರತೆಯ ಮತ್ತು ನೈತಿಕಸುಧಾರಣೆಯ ಕಳಕಳಿಯ ಕಾವು ಕನ್ನಡ ಸಾಹಿತ್ಯಕ್ಕೆ ತಗಲಿ ಅಪರಂಜಿ ಬಂಗಾರದ ವಚನಗಳು ಹುಟ್ಟಿದವು. ಕನ್ನಡಸಾಹಿತ್ಯದಲ್ಲ ಕನ್ನಡದೇವಿಗೆ ವಚನಗಳ ಮುಕುಟ ಧಾರಣವಾಯಿತು ಕಲ್ಯಾಣದಲ್ಲಿ. ಜೀವ ಬೆಳೆಯಿತು. ಜೀವನ ಬೆಳಗಿತು. ಜೊತೆ ಜೊತೆಗೆ ಕನ್ನಡಸಾಹಿತ್ಯ ಮತ್ತು ಭಾಷೆಗಳು ಬೆಳೆದವು. ಬಸವಣ್ಣನ ಕಾಲದ ವಚನ ಸಾಹಿತ್ಯದ ಈ ತಿಳಿಹೊಳೆಯಲ್ಲಿ ಮಹಾಪೂರ ಉಂಟಾಯಿತು. ಆತನ ಕಾಲವಾದ ಮೇಲೆ ಹುಚ್ಚು ಹೊಳೆ ಹರಿದು ಹೋಯಿತು ಮರಳು ಕಾಡಿನಲ್ಲಿ; ಉಸುಕು ವಾಹಿನಿಯನ್ನು ನುಂಗಿಬಿಟ್ಟಿತು.

ಮತ್ತೆ ಹಸಿವೆ ಆಯಿತು ಹೈದರಾಬಾದಿನಲ್ಲಿ. ವಿಜಯನಗರದಲ್ಲಿ ಶಿಲೆಯೊಡೆದ **ದಾಸಕೂಟದ** ಕಿರಿದೊರೆ ಹರಿದುಬಂದಿತು ಹೈದರಾಬಾದಿಗೆ. ಬರಡುಜೀವನದ ಬೇಸರದಿಂದ ಬಾಯ್‌ಬಿಡುವ ಜೀವಿಗಳಿಗೆ ಭಕ್ತಿಯ ಸುಧೆಯನ್ನು ಕುಡಿಸಿದರು ಹರಿದಾಸರು. ಉದಯ ರಾಗವನ್ನು ಹಾಡಿ ಎಬ್ಬಿಸಿದರು. ಸುಳಾದಿಗಳನ್ನು ಹಾಡಿ ಸವಿಯುಣಿಸನ್ನಿತ್ತರು. **ಹರಿಕಥಾಮೃತಸಾರ**ವನ್ನು ಜನತೆಯ ಕಿವಿಯಲ್ಲೆರೆದು ಜೀವನವನ್ನು ಪವಿತ್ರಗೊಳಿಸಿದರು. ಹಾಡಿದರು. ಪಾಡಿದರು. ತಣಿಸಿದರು. **ವಿಜಯದಾಸರು** ಚೀಕಲಪರವಿಯಲ್ಲಿ, **ಗೋಪಾಲದಾಸರು** ವೇಣಿಸೋಮಪುರದಲ್ಲಿ, **ಜಗನ್ನಾಥದಾಸರು** ಮಾನ್ವಿಯಲ್ಲಿ, **ಪ್ರಾಣೇಶದಾಸರು** ಲಿಂಗಸೂಗೂರಿನಲ್ಲಿ, ೫೦ ವರ್ಷ

ಗಳ ಹಿಂದೆ **ಗುರುವಿಜಯದಾಸರು** ಚಿಂತ್ರವೇಲಿಯಲ್ಲಿ, ನಡೆಯಿಸಿದ ಕನ್ನಡ ಸಾಹಿತ್ಯ ಸೇವೆ ಬರಬರುತ್ತ ಮುಕ್ತಾಯವಾಗುತ್ತಬಂದು ಕೊನೆಗೆ ಸ್ತಬ್ಧವಾಯಿತು.

ಮೇಲಿನದನ್ನು ಓದಿದಮೇಲೆ ಹೈದರಾಬಾದು ಮೊದಲಿನಿಂದ ಮೊನ್ನೆಮೊನ್ನೆಯ ವರೆಗೂ ಭಾಷೆ, ಸಾಹಿತ್ಯ, ಜೀವನ ಹೀಗೆ ಸಂಸ್ಕೃತಿಯ ಎಲ್ಲತರದ ಬೆಳೆವಣಿಗೆಗೆ ಅಗ್ರ ಗಾಮಿಯಾಗಿದೆ ಯೆಂದು ತಿಳಿದು ನಾವು ಹೆಮ್ಮೆಪಡಬೇಕಾಗಿದೆ.

ಇದೀಗ ಎಚ್ಚತ್ತ ಕಾಲ. ತಮ್ಮ ಕರ್ತವ್ಯವನ್ನು ಅರಿತಿದ್ದಾರೆ ಕನ್ನಡಿಗರು. ಗತ ವೈಭವದ ಮಹತ್ವವನ್ನು ಅರಿತು ಕಳವಳಪಡುತ್ತಿದ್ದಾರೆ. ನವಜಾಗೃತಿ ಯುಂಟಾ ಗಿದೆ. ಕರ್ತವ್ಯದಲ್ಲಿ ದೀಕ್ಷಾಬದ್ಧರಾಗಿದ್ದಾರೆ. ಇನ್ನು ಕನ್ನಡತಾಯಿಯ ಜೋಲ್ಮುಡಿ ಯಲ್ಲಿ ನರುಗಂಪಿನ ಸಮ್ಮ ಅರಲುಗಳು ಮುಗಮುಗಿಸಬೇಕು.

# ನಮ್ಮ ಅಧ್ಯಾತ್ಮ ಜೀವನ.

ಶ್ರೀ. ಗುಡಗುಂಟಿ ಕೃಷ್ಣಾಚಾರ್ಯ ಜೋಶಿ, ಬಿ. ಎ., ಎಲ್ ಎಲ್. ಬಿ.,
ಹೈಕೋರ್ಟ ವಕೀಲ, ಹೈದರಾಬಾದು.

ಶ್ರೀ. ಕೃಷ್ಣಾಚಾರ್ಯರು ರಾಯಚೂರು ಜಿಲ್ಲೆಯ ಗುಡಗುಂಟಿ ಸಂಸ್ಥಾನದ ಜೋಯಿಸರ ಮನೆತನದವರು. ಚಿಕ್ಕಂದಿನಲ್ಲಿ ಮನೆತನದ ಪದ್ಧತಿಯಂತೆ ಸಂಸ್ಕೃತ ಅಭ್ಯಾಸವೇ ನಡೆಯಿತು. ಆದರೆ ಮುಂದೆ ಇವರ ಸಹೋದರರಾದ ಶ್ರೀ. ಜಿ. ರಾಮಾಚಾರ್ಯರ ಪ್ರೇರಣೆಯಿಂದ ಇಂಗ್ಲಿಷ್ ಅಭ್ಯಾಸಕ್ಕೆ ಬರಬೇಕಾಯಿತು. ಇವರು ಚಿಂಚೋಳಿ, ಪುಣೆ, ಹೈದರಾಬಾದು ಮುಂತಾದ ಸ್ಥಳಗಳಲ್ಲಿ ತಮ್ಮ ಶಿಕ್ಷಣವನ್ನು ಪಡೆದರು. ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದಲೇ ಬಿ. ಎ. ಹಾಗು ಎಲ್ ಎಲ್. ಬಿ, ಪರೀಕ್ಷೆಗಳನ್ನು ಪಾಸುಮಾಡಿದರು.

ಶ್ರೀ. ಆಚಾರ್ಯರು ಆಸ್ತಿಕರು. ಸ್ವಧರ್ಮದಲ್ಲಿ ನಂಬಿಕೆಯನ್ನಿಟ್ಟು ಹೊಸ ಕಾಲದ ಹೊಳಪಿನಲ್ಲಿಯೂ ಅದನ್ನು ವಿವೇಕದಿಂದ ನಡೆಯಿಸಿಕೊಂಡು ಬಂದಿದ್ದಾರೆ. ಆಚಾರ್ಯರು ಸಾಕಷ್ಟು ಧನ ಸಂಪಾದಿಸಿ ಕೀರ್ತಿಯನ್ನು ಪಡೆದಿದ್ದಾರೆ. ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗ ವಹಿಸುತ್ತಾರೆ. ಹಿಂದೆ ಕರ್ನಾಟಕ ಸಂಘಕ್ಕೆ ಪೋಷಕರಾಗಿದ್ದರು. ಈಗ ನಿಜಾಂ ಕರ್ನಾಟಕ ಪರಿಷತ್ತಿನ ಕಾರ್ಯದರ್ಶಿಗಳು

ಹೈದರಾಬಾದ್ ಕನ್ನಡಿಗರ ಅತಿ ಮುಖ್ಯವಾದ ಒಂದು ಅವಶ್ಯಕತೆಯನ್ನು ಪೂರೈಸುವದರಲ್ಲಿ ಹೆಣಗಿ ಅವರಲ್ಲಿ ಯಶಸ್ಸಿನ ಮೆಟ್ಟಿಲನ್ನು ಕ್ರಮವಾಗಿ ಹತ್ತುತ್ತಲಿದ್ದಾರೆ. ಕರ್ನಾಟಕ ಶಾರದಾ ಕನ್ಯಾ ಪಾಠಶಾಲೆಯನ್ನು ಆರಂಭಿಸಿ ಅದರ ವ್ಯವಸ್ಥೆಯ ಹೊಣೆಯೆಲ್ಲವನ್ನೂ ಹೊತ್ತು, ಅದಕ್ಕೊಂದು ಸ್ವಂತ ಕಟ್ಟಡವನ್ನು ದೊರಕಿಸಿ ಈ ಸಂಸ್ಥೆಗೆ ಸ್ಥಿರತೆಯನ್ನು ತಂದಿದ್ದಾರೆ.

ಆಚಾರ್ಯರು, ಉತ್ತಮ ಲೇಖಕರು, ಭಾಷಣಕಾರರು; ಅವರ ವಿಷಯವಿವೇಚನೆಯು, ವಿದ್ವತ್ಪೂರ್ಣವೂ, ಕ್ರಮಬದ್ಧವೂ ಆಗಿರುತ್ತದೆ. ಈ ಲೇಖನದಲ್ಲಿ ಈ ಮಾತಿನ ಸತ್ಯಾಂಶವನ್ನು ಕಾಣಬಹುದು.

ಭರತಖಂಡದ ಅಧ್ಯಾತ್ಮ ಜೀವನದ ಇತಿಹಾಸವನ್ನು ತುಲನಾತ್ಮಕ ದೃಷ್ಟಿಯಿಂದ ನಿರೀಕ್ಷಿಸಿದರೆ ಕೃಷ್ಣಾ, ಭೀಮಾ, ತುಂಗಭದ್ರಾ, ಮುಂತಾದ ನದಿಗಳಿಂದ ಮೈದೊಳೆಯುತ್ತಿರುವ ಹೈದರಾಬಾದ್ ಕರ್ನಾಟಕವು ಅಧ್ಯಾತ್ಮ ಜೀವನದಲ್ಲಿ

ಪೂರ್ಣ ವಿಕಾಸ ಹೊಂದಿರುವದಲ್ಲದೆ ಕೆಲವು ಅಂಶಗಳಲ್ಲಿ ಇತರ ಪ್ರಾಂತಗಳನ್ನು ಮೀರಿದೆಯೆಂದು ಹೇಳಬಹುದಾಗಿದೆ. ಮುಟಮುರಿಯಿಂದ ಗಾಣಗಾಪುರದವರೆಗೆ, ಮತ್ತು ಕಲ್ಯಾಣದಿಂದ, ಕಿಷ್ಕಿಂಧೆ (ಆನೆಗುಂದಿ) ಯ ವರೆಗೆ ಹಬ್ಬಿರುವ ಪುರಾಣ ಪ್ರಸಿದ್ಧವಾದ ಈ ದಂಡಕಾರಣ್ಯವು. ಪ್ರಾಚೀನ ಕಾಲದಲ್ಲಿ ಋಷಿಗಳಿಗೆ ಆಶ್ರಮವಾ ವಾಗಿದ್ದು, ಅಧ್ಯಾತ್ಮ ವಿದ್ಯೆಗೆ ತವರುಮನೆಯಾಗಿತ್ತು. ಈ ಪುಣ್ಯಭೂಮಿಯಲ್ಲಿ ದೊಡ್ಡದೊಡ್ಡ ತತ್ವಜ್ಞಾನಿಗಳೂ, ಸಾಧು ಸತ್ಪುರುಷರೂ, ಮತಸ್ಥಾಪನಾಚಾರ್ಯರೂ, ಅವತಾರಮಾಡಿ ಮಧ್ಯಕಾಲದ ಅಧ್ಯಾತ್ಮಜೀವನದಲ್ಲಿ ಆಗಾಗ್ಗೆ ಪರಿವರ್ತನೆ ಮಾಡುತ್ತ ಸಮಾಜೋದ್ಧಾರವನ್ನು ಮಾಡಿದರು. ಅರ್ವಾಚೀನ ಕಾಲದಲ್ಲಿ, ಈ ನಾಡಿನ ಭಕ್ತಶಿಖಾಮಣಿಗಳಾದ ದಾಸವರ್ಗದವರು ಸಂಸ್ಕೃತಭಾಷೆಯಲ್ಲಿದ್ದ ಅಧ್ಯಾತ್ಮ ಭಂಡಾರವನ್ನು ಕನ್ನಡದಲ್ಲಿ ತಂದು ಜನಸಾಮಾನ್ಯಕ್ಕೂ, ಆಬಾಲ ವೃದ್ಧರಿಗೂ, ತತ್ವ ಜ್ಞಾನದ ಗುಟ್ಟನ್ನು ಸುಲಭವಾಗಿ ತಿಳಿಯುವಂತೆ ಮಾಡಿ, ಪರಂಪರಾ ಪ್ರಾಪ್ತವಾದ ಅಧ್ಯಾತ್ಮ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡಿದರು.

ಹೈದರಾಬಾದ್ ಕರ್ನಾಟಕದಲ್ಲಿರುವ ಪುಣ್ಯ ಕ್ಷೇತ್ರಗಳುಕೂಡ ಇಲ್ಲಿಯ ಅಧ್ಯಾತ್ಮ ಜೀವನದ ಪ್ರತಿಫಲಗಳಾಗಿವೆ. ಗಡಿನಾಡಿನ ಮೇಲಿದ್ದ ಶ್ರೀ ಮಂತ್ರಾಲಯ, ದಕ್ಷಿಣಕಾಶಿ ಯೆಂದು ಪ್ರಸಿದ್ಧವಾಗಿದ್ದ ಛಾಯಾ ಭಗವತಿ, ಶ್ರೀ ಅಮರೇಶ್ವರ ಕ್ಷೇತ್ರ, ಮಳಖೇಡದ ಶ್ರೀ ಟೀಕಾಕೃತ್ಪಾದರ ವೃಂದಾವನ, ಬೀದರಿನ ಝುರಣಿ ನರಸಿಂಹ ದೇವಾಲಯ. ಕಲಬುರ್ಗಿಯ ಶ್ರೀ ಶರಣಬಸವೇಶ್ವರಗುಡಿ, ಮಾಣಿಕನಗರದ ಶ್ರೀ ಪ್ರಭುಗಳ ದೇವಾಲಯ, ಇವೇ ಮುಂತಾದ ಪುಣ್ಯಕ್ಷೇತ್ರಗಳು, ಈ ನಾಡಿನ ಅಧ್ಯಾತ್ಮ ಜೀವನದಲ್ಲಿ ಜೀವವನ್ನು ಹುಟ್ಟಿಸುವವುಗಳಾಗಿವೆ.

ಸಾರಾಂಶವೇನಂದರೆ ಇಪ್ಪತ್ತನೆಯ ಶತಮಾನದ ಈ ಆಧಿಭೌತಿಕ ಯುಗದಲ್ಲಿ, ಪರಧರ್ಮ ಮತ್ತು ಪರ ಸಂಸ್ಕೃತಿಯಿಂದ ಕುಂದದೆ ಹೈದರಾಬಾದ್ ಕರ್ನಾಟಕದ ಅಧ್ಯಾತ್ಮಜೀವನವು ಸಮಾಜದ ಆತ್ಮಬಲವನ್ನು ಇಂದಿನವರೆಗೆ ಕಾಪಾಡಿಕೊಂಡು ಬಂದಿರುವದೆಂದು ಹೇಳಬಹುದು.

ಕೈಕೊಂಡ ವಿಷಯವನ್ನು ಕುರಿತು ಚರ್ಚಿಸುವದಕ್ಕಿಂತ ಮುಂಚೆ ಅಧ್ಯಾತ್ಮ ಶಾಸ್ತ್ರವನ್ನು ಸ್ವಲ್ಪ ತಾತ್ವಿಕ ದೃಷ್ಟಿಯಿಂದ ವಿಚಾರಮಾಡುವುದು ಅವಶ್ಯವಾಗಿದೆ. ಪ್ರಪಂಚದಲ್ಲಿ ಜಡವೂ, ಚೇತನವೂ, ಹೀಗೆ ಎರಡು ವಸ್ತು ತತ್ವಗಳಿರುವವು. ಜಡ ತತ್ವದ ಸಂಬಂಧವಾಗಿ ಚರ್ಚಿಸುವ ಶಾಸ್ತ್ರಕ್ಕೆ ವಿಜ್ಞಾನ ಇಲ್ಲವೇ ಆಧಿ ಭೌತಿಕ ವಿದ್ಯೆಯೆಂತಲೂ, ಮತ್ತು ಚೇತನ ತತ್ವವನ್ನು ಕುರಿತು ವಿಚಾರ ವಿನಿಮಯ ಮಾಡುವ

ಶಾಸ್ತ್ರಕ್ಕೆ ವೇದಾಂತ ಅಥವಾ ಅಧ್ಯಾತ್ಮ ವಿದ್ಯೆಯೆಂತಲೂ ಹೆಸರು. ಅಧ್ಯಾತ್ಮ ಶಾಸ್ತ್ರವನ್ನು ಎರಡು ವಿಧವಾಗಿ ವಿಂಗಡಿಸಬಹುದು. ಆತ್ಮಾನಾತ್ಮ ವಿಚಾರ ಅಥವಾ ತತ್ವಜ್ಞಾನದ ದ್ವಾರಾ ಪರತತ್ವವನ್ನು ಹೊಂದುವ ಜ್ಞಾನ ಮಾರ್ಗ; ಮತ್ತು ಕ್ಲಿಷ್ಟವಾದ ತಾತ್ವಿಕ ವಿಚಾರಗಳ ಗೊಡವಿಗೆ ಹೋಗದೆ, ಆತ್ಮೋನ್ನತಿಯನ್ನು ಮಾಡಿಕೊಳ್ಳಬೇಕೆಂಬ ಎರಡನೆಯದೇ ಉಪವಾಸನಾಮಾರ್ಗ. ಈಗ ಜಡತತ್ವದ ಚರ್ಚೆಯು ನಮಗೆ ಬೇಕಾಗಿಲ್ಲ. ಚೇತನ ತತ್ವಕ್ಕೆ ಆತ್ಮನೆಂಬ ಹೆಸರು. ಭಾರತೀಯ ತತ್ವಜ್ಞಾನದಲ್ಲಿ ಆತ್ಮಾನಾತ್ಮ ವಿಚಾರದ ಬಗ್ಗೆ ಅನೇಕ ಸಂಪ್ರದಾಯಗಳು ಹುಟ್ಟಿರುವವು. ಅವುಗಳಲ್ಲಿ ಮುಖ್ಯವಾಗಿ ಎರಡು ಪಂಥಗಳಿರುವವು. ಈ ಪಿಂಡ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿರುವ ಒಂದೇಒಂದಾದ ಆತ್ಮ ತತ್ವ ಉಂಟೆಂತಲೂ, ಇದರ ಹೊರತು ಜಡ, ಚೇತನವೂ ಬೇರೆ ಇಲ್ಲವೆಂತಲೂ, ಪ್ರತಿವಾದಿಸುವುದೇ ಅದ್ವೈತಮತ. ಚೇತನಕ್ಕಿಂತಲೂ, ಪರಮ ಚೇತನವೂ ಆತ್ಮಕ್ಕಿಂತಲೂ ಶ್ರೇಷ್ಠವಾದ ಪರಮಾತ್ಮನೆಂಬ ಒಂದು ಸ್ವತಂತ್ರ ತತ್ವವು ಮತ್ತು ಪರಮಾತ್ಮನ ಅಧೀನದಲ್ಲಿ ಭಾವ, ಅಭಾವಗಳೆಂಬ ಮತ್ತೊಂದು ಅಸ್ವತಂತ್ರ ತತ್ವವು; ಹೀಗೆ ಎರಡು ತತ್ವಗಳಿವೆಂದು ಹೇಳುವದು ದ್ವೈತಮತ. ಎರಡು ಪಂಥಗಳೂ ಅಧ್ಯಾತ್ಮ ಜೀವನದಲ್ಲಿ ಮುಖ್ಯವಾದವುಗಳು ಅಧ್ಯಾತ್ಮ ಜೀವನದಲ್ಲಿ ಮುಖ್ಯವಾದವುಗಳು. ಅಧ್ಯಾತ್ಮ ಜೀವನಕ್ಕೆ ಜಾಗ್ರತಿ, ಸ್ವಪ್ನ ಮತ್ತು ಸುಷುಪ್ತಿ ಹೀಗೆ ಮೂರು ಅವಸ್ಥೆಗಳುಂಟು ಅವುಗಳ ಪೈಕಿ ನಾವು ಚರ್ಚಿಸುವ ವಿಷಯವು ಮೊದಲನೆಯ ಅವಸ್ಥೆಗೆ ಸಂಬಂಧಪಟ್ಟಿರುವುದು.

ಮೇಲಿನ ವಿವೇಚನೆಯಿಂದ ಅಧ್ಯಾತ್ಮ ಜೀವನದ ತಾತ್ವಿಕ ರೂಪರೇಖೆ, ವಾಚಕರ ಲಕ್ಷ್ಯದಲ್ಲಿ ಬಂದಿರಬಹುದು. ತಾತ್ವಿಕ ದೃಷ್ಟಿಯಂತೆಯೇ ಅದನ್ನು ಅನುಷ್ಠಾನ ದೃಷ್ಟಿಯಿಂದಲೂ ಚರ್ಚಿಸಿದರೆ ಈ ವಿಷಯದಮೇಲೆ ಹೆಚ್ಚು ಪ್ರಕಾಶ ಬೀಳಬಹುದು ಮನುಷ್ಯನು ತನ್ನ ಆತ್ಮೋನ್ನತಿಗಾಗಿ ಮಾಡುವ ಚಟುವಟಿಕೆಗಳಿಗೆ ಸಾಧಾರಣವಾಗಿ ಅಧ್ಯಾತ್ಮ ಜೀವನ ವೆನ್ನಬಹುದು. ಆದರೆ ಅವನು ಈ ಪಾರ್ಥಿವ ಶರೀರಕ್ಕೆ ಆತ್ಮನೆಂದು ತಿಳಿದು ಪಂಚಮಹಾಭೂತಗಳಿಗೆ ಒಳಗಾಗಿ ಜಡಸಂಬಂಧವಾದ ಚಟುವಟಿಕೆಗಳಿಗೆ ಅಧ್ಯಾತ್ಮ ಜೀವನವೆಂದು ಭಾವಿಸಿ ಮೋಸಹೊಗುವನು. ಆತ್ಮನು ಜಡದಿಂದ ಕೇವಲ ಭಿನ್ನನನು ಎಂದು ತಿಳಿದುಕೊಳ್ಳುವುದು, ಮನುಷ್ಯನ ಮೊದಲನೆಯ ಕರ್ತವ್ಯ. ಈ ನಿಶ್ಚಯಜ್ಞಾನ ಹುಟ್ಟಿದರೆ ಪ್ರಾಪಂಚಿಕ ಸುಖದುಃಖಗಳಿಂದ ಅವರಿಗೆ ಬಿಡುಗಡೆಯಾಗಿ ಅವನ ಅಧ್ಯಾತ್ಮ ಜೀವನವು ಪ್ರಾರಂಭವಾಗುವುದು. ಆಮೇಲೆ ಅವನಲ್ಲಿರುವ ಮಮಕಾರ ಭಾವವು ಕ್ರಮೇಣ ಕಡಮೆಯಾಗುತ್ತ ಹೋಗುವುದು. ಅಂದಿನಿಂದ "ಆತ್ಮಾನಾಂ ಸತತಂ ರಕ್ಷೇತ್, ದಾರೈರಪಿ, ಧನೈರಪಿ." ಎಂಬಂತೆ ಅವನು ಆತ್ಮೋನ್ನತಿಯ ಮಾರ್ಗವನ್ನು ಅವಲಂಬಿಸುವನು.

ಭಾರತೀಯ ಪವಿತ್ರ ಗ್ರಂಥಗಳಲ್ಲಿ ಆತ್ಮೋನ್ನತಿಯ ಬಗೆಯನ್ನು ತಿಳಿಸಿ ಹೇಳಿರುವರು. ಮೇಲೆ ಸೂಚಿಸಿದಂತೆ ಪ್ರವೃತ್ತಿ ಮಾರ್ಗ ಮತ್ತು ನಿವೃತ್ತಿ ಮಾರ್ಗಗಳೆಂದು ಎರಡು ಪಂಥಗಳಿರುವವು. ಅನಾದಿ ಕಾಲದಿಂದ ಇವುಗಳ ಬಗ್ಗೆ ಮತಭೇದ ಇರುವದಲ್ಲದೆ, ಮತ ವಿರೋಧವು ಕೂಡ ಇರುವುದು. ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ. ಮಧ್ವಾಚಾರ್ಯ, ವಲ್ಲಭಾಚಾರ್ಯ, ಪ್ರಭೃತಿಗಳು ನಿವೃತ್ತಿ, ಸಂನ್ಯಾಸ, ಇಲ್ಲವೆ ಜ್ಞಾನಮಾರ್ಗಕ್ಕೆ ಪ್ರಶಸ್ತಿಯನ್ನು ಕೊಟ್ಟು ಪ್ರವೃತ್ತಿ ಮತ್ತು ಕರ್ಮ ಮಾರ್ಗವು ಶಾಸ್ತ್ರ ಸಮ್ಮತವಾಗಿದ್ದರೂ ಅದು ಜ್ಞಾನಕ್ಕೆ 'ಸಾಧಕವೆಂದು ಹೇಳುವರು. ಇದಕ್ಕೆ ವಿರೋಧವಾಗಿ " **ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸ ಕರಾಉಭೌ। ತಯೋಸ್ತು ಕರ್ಮ ಸಂನ್ಯಾಸಾತ್ಕರ್ಮ ಯೋಗೋ ವಿಶಿಷ್ಯತೆ.**"(ಗೀ. ಅ ೫ ಶ್ಲೋ. ೨.) ಎಂಬಂತೆ ಸಂನ್ಯಾಸ. ಕರ್ಮ ಈ ಉಭಯ ಮಾರ್ಗಗಳಿಂದಲೂ ಮೋಕ್ಷವಾಗುವುದು. ಆದರೆ ಇವುಗಳ ಪೈಕಿ ಜ್ಞಾನ ಮಾರ್ಗಕ್ಕಿಂತಲೂ ನಿಷ್ಕಾಮ ಕರ್ಮ ಮಾರ್ಗವೇ ಶ್ರೇಷ್ಠವೆಂದು ಕೆಲವು ಜನರು ಪ್ರತಿಪಾದಿಸುವರು. ಆಧುನಿಕ ಕಾಲದಲ್ಲಿ ದೇಶಕಾಲ ಪರಿಸ್ಥಿತಿಗನುಸರಿಸಿ ಕೈ. ವಾ. ಲೋಕಮಾನ್ಯ ಬಾಲ ಗಂಗಾಧರ ತಿಲಕರು, ಭಗದರ್ಪಣ ಬುದ್ಧಿಯಿಂದ ಫಲಾಪೇಕ್ಷೆಯಿಲ್ಲದೆ ಜನಕಾದಿಗಳಂತೆ ಲೋಕ ಸಂಗ್ರಹ ಮಾಡುತ್ತ ನಿಷ್ಕಾಮ ಕರ್ಮವನ್ನು ಆಚರಿಸಿ ತದ್ವಾರ ದೇಶೋದ್ಧಾರವನ್ನೂ, ಆತ್ಮೋದ್ಧಾರವನ್ನೂ, ಮಾಡಬೇಕೆಂದು ಹೇಳಿ ಅಧ್ಯಾತ್ಮ ಜೀವನದಲ್ಲಿ ಶಾಂತಿಯನ್ನು ಹುಟ್ಟಿಸಿದರು. ಈ ಉಭಯ ಮಾರ್ಗಗಳ ಮುಖ್ಯ ತತ್ವಗಳಿಂದ ಒಡಗೂಡಿದ ಇನ್ನೊಂದು ಭಕ್ತಿಮಾರ್ಗ ಉಂಟು. ಚೇತನನು (ಆತ್ಮನು) ಪರಮ ಚೇತನದಲ್ಲಿ (ಪರಮಾತ್ಮನಲ್ಲಿ) ಮಹಾತ್ಮೆ ಜ್ಞಾನ ಪೂರ್ವಕ ಸಧೃಡ ಸ್ನೇಹ ಮಾಡುವ ಕರ್ಮಕ್ಕೆ ಭಕ್ತಿ ಎನ್ನುವರು. ಜ್ಞಾನಯೋಗ. ಕರ್ಮಯೋಗ, ಇಲ್ಲವೇ ಭಕ್ತಿಯೋಗ ಇವುಗಳ ಪೈಕಿ ಯಾವ ಮಾರ್ಗವನ್ನು ಸ್ವೀಕರಿಸಿದರೂ ಶ್ರೇಯಸ್ಸು ಆಗುವದೆಂಬ ಮಾತು ನಿಶ್ಚಯ. ಆದರೆ " **ಆತ್ಮವತ್ ಸರ್ವ ಭೂತೇಷು** " ಎಂಬಂತೆ ವಿಶಾಲವಾದ ದೃಷ್ಟಿಯನ್ನಿಟ್ಟುಕೊಂಡು ಬಹುಜನರ ಬಹು ಸುಖಕ್ಕೆ ಹೋರಾಡುವ ಸಾಧಕನಿಂದ ಜನಸಾಮಾನ್ಯರ ಆತ್ಮೋನ್ನತಿಗೆ ಹೆಚ್ಚು ಅನುಕೂಲವಾಗುವುದು ಸಾರಾಂಶವೇನಂದರೆ ಹೈದರಾಬಾದ್ ಕರ್ನಾಟಕದಲ್ಲಿ ಕಾಲಕಾಲಕ್ಕೆ ಮಹಾನುಭಾವರು ಹುಟ್ಟಿ ಜನಸಾಮಾನ್ಯರ ಆತ್ಮೋನ್ನತಿಗಾಗಿ ಹೇಗೆ ಯತ್ನಿಸಿದರೆಂಬ ವಿಷಯವನ್ನು ಕುರಿತು ವಿಚಾರ ಮಾಡಬೇಕಾಗಿದೆ.

ಇಲ್ಲಿಯ ಅಧ್ಯಾತ್ಮ ಜೀವನವು ಬಹಳಮಟ್ಟಿಗೆ ವೇದ, ಸ್ಮೃತಿ ಪುರಾಣ, ಕಾವ್ಯಗಳ ಉದಾತ್ತ ತತ್ವಗಳ ತಳಹದಿಯಮೇಲೆ ಕಟ್ಟಲ್ಪಟ್ಟಿರುವುದು. ಭರತ ಖಂಡ

ದಲ್ಲಿ ಕಾಲಕಾಲಕ್ಕೆ ಮತಸ್ಥಾಪನಾಚಾರ್ಯರೂ, ಮಹಾತ್ಮರೂ, ಅವತಾರಮಾಡಿ ಧರ್ಮದಲ್ಲಿ ಪರಿವರ್ತನೆ ಮಾಡಿದಂತೆ ಆಗಾಗ್ಗೆ ಇಲ್ಲಿಯ ಅಧ್ಯಾತ್ಮ ಜೀವನದಲ್ಲಿಕೂಡ ಬದಲಾವಣೆಗಳಾದವು. ಇದೇ ಕಾರಣದಿಂದ ಈ ನಾಡಿನಲ್ಲಿ ಭಿನ್ನ ಭಿನ್ನ ಮತ ಮತ್ತು ಸಂಪ್ರದಾಯದವರು ವಾಸಿಸುತ್ತಿರುವರು ಈ ಭಿನ್ನ ಭಿನ್ನ ಧರ್ಮಗಳಲ್ಲಿ ಪರಸ್ಪರ ವಿರೋಧವು ಕೆಲವು ವಿಷಯಗಳಲ್ಲಿ ಕಂಡುಬಂದರೂ ಅದು ಧರ್ಮಾಚರಣೆ ಯಲ್ಲಿ ಇರುವದೇ ಹೊರತು, ಅಧ್ಯಾತ್ಮ ಜೀವನದಲ್ಲಿ ವಿಶೇಷ ಕಂಡುಬರುವದಿಲ್ಲ ಅಧ್ಯಾತ್ಮ ಜೀವನದ ಉದಾತ್ತ ತತ್ವಗಳಲ್ಲಿ ಎಲ್ಲರು ಸಮರಸರಾಗಿರುವರು.

ಪರಂಪರ ಪ್ರಾಪ್ತವಾದ ವೈಧಿಕ ಧರ್ಮವನ್ನು ಮೊದಲು ವಿರೋಧಿಸಿದವರು **ಬೌದ್ಧ** ಹಾಗು **ಜೈನ ಮತದವರು.** ಇವರು, ಯಜ್ಞ ಯಾಗ ಮುಂತಾದ ಕೆಲವು ವೈದಿಕ ಧರ್ಮಗಳ ಅಧ್ಯಾತ್ಮ ತತ್ವಗಳನ್ನೇ ಅನುಸರಿಸಿದರು. ಒಂದು ಸಾವಿರ ವರ್ಷ ಗಳ ಹಿಂದೆ ಮಳಖೇಡದ ನೃಪತುಂಗ ರಾಜನು ತನ್ನ ಕವಿರಾಜ ಮಾರ್ಗದಲ್ಲಿ

**ಅಧಿಕೃತ ಸತ್ಪುರುಷಾರ್ಥ ।**
**ಪ್ರಧಾನ ಧರ್ಮಾರ್ಥ ಕಾಮ ಮೋಕ್ಷಂಗಳವ ॥**
**ಬುಧ ಜನ ವಿವಿಕ್ತಕಾವ್ಯ ।**
**ಪ್ರಧಾರಿ ತಾರ್ಥಂಗಳ ಖಿಳ ಬುವನ ಹಿತಂಗಳ್ ॥**

(ಕವಿರಾಜ ಮಾರ್ಗ. ಶ್ಲೋಕ ೨೦)

ಎಂದು ಕಾವ್ಯ ಪ್ರಯೋಜನವನ್ನು ಹೇಳಿ ವೈದಿಕ ಧರ್ಮದ ಉದಾತ್ತ ತತ್ವಗಳನ್ನೇ ಪ್ರಚಾರ ಮಾಡಿರುವನು. ಹಿಂದಕ್ಕೆ ಈ ನಾಡಿನಲ್ಲಿ ಎಷ್ಟೋ ಜನ ಜೈನ ಸತ್ಪುರು ಷರು, ಕವಿಗಳು ಹುಟ್ಟಿ ಅನೇಕ ಕೃತಿಗಳಿಂದ ತಮ್ಮ ಪ್ರಭಾವವನ್ನು ಬೀರಿದರು ಈಗ ಜೈನರು ಅಲ್ಪ ಸಂಖ್ಯಾಕರಾಗಿ ರಾಯಚೂರು, ಕಲಬುರ್ಗಿ, ಮುಂತಾದ ಜಿಲ್ಲೆಗಳಲ್ಲಿ ಉಳಿದಿರುವರು. ಜೈನರಂತೆ ಈ ಪ್ರಾಂತದಲ್ಲಿ ಬೌದ್ಧ ಭಿಕ್ಷುಕಗಳು ಒಂದು ಕಾಲಕ್ಕೆ ವಾಸಿಸುತ್ತಿದ್ದರು. ಆದರೆ ಈಗ ಆ ಸಂಪ್ರದಾಯುದವರು ಕಂಡುಬರುವದಿಲ್ಲ.

ಜೈನ ಮತ್ತು ಬೌದ್ಧ ಧರ್ಮಗಳ ಪ್ರಾಬಲ್ಯದಿಂದ ವೈದಿಕ ಧರ್ಮವು ಕುಂದಿ ಹೋಗಿದ್ದು **ಶ್ರೀ ಆದಿ ಶಂಕರಾಚಾರ್ಯರು** ಅವತಾರಮಾಡಿ ಪುನಃ ವೈದಿಕ ಧರ್ಮವನ್ನೇ ಸ್ಥಾಪನೆ ಮಾಡಿದರೆಂದು ಹೇಳುತ್ತಾರೆ. ಶಂಕರ ಸಂಪ್ರದಾಯುವನ್ನು ಅನುಕರಣ ಮಾಡುವವರು ಎಷ್ಟೋಜನ ಈ ನಾಡಿನಲ್ಲಿರುವರು. ಆದರೆ, " **ಅಹಂ ಬ್ರಹ್ಮಾಸ್ಮಿ** " ಎಂಬ ಗಹನವಾದ ಅದ್ವೈತ ತತ್ವಜ್ಞಾನದ ಗೊಡವೆಗೆ ಹೋಗದೆ " **ಭಜಗೊವಿಂದಂ, ಭಜಗೋವಿಂದಂ, ಭಜಗೋವಿಂದಂ ಮೂಢಮತೇ** "

ಎಂದು ಆಚಾರ್ಯರು ಹೇಳಿದ ಸುಲಭವಾದ ಉಪಾಸನಾ ಮಾರ್ಗವನ್ನೇ ಅವಲಂಬಿಸಿದ ಜನರೇ ಬಹುಸಂಖ್ಯಾಕರರಾಗಿರುವರು. ಇವರ ಮತ್ತು ಇತರ ಪಂಥದವರ ಆಧ್ಯಾತ್ಮ ಜೀವನದಲ್ಲಿ ಉಪಾಸನಾ ದೃಷ್ಟಿಯಿಂದ ಹೆಚ್ಚು ಭೇದ ಇರುವದಿಲ್ಲ. ಶ್ರೀ ಶಂಕರಾಚಾರ್ಯರ ತತ್ವಜ್ಞಾನಕ್ಕಿಂತಲೂ, ಸ್ವಲ್ಪ ಭಿನ್ನವಾದ ತತ್ವಜ್ಞಾನವನ್ನು ಪ್ರಚಾರಮಾಡಿದ ಶ್ರೀ **ರಾಮಾನುಜಾಚಾರ್ಯರ** ಅನುಯಾಯಿಗಳು, ಸುರಪುರ, ಗದ್ವಾಲ್, ಮುಂತಾದ ಗ್ರಾಮುಗಳಲ್ಲಿ ಅಲ್ಪ ಸಂಖ್ಯಾಕರಾಗಿ ವಾಸಿಸುತ್ತಿದ್ದಾರೆ. ಇವರು ಶ್ರೀ ವೈಷ್ಣವರೆಂದು ಪ್ರಸಿದ್ಧರಾಗಿದ್ದು ಭಕ್ತಿ ಮಾರ್ಗವನ್ನೇ ಅವಲಂಬಿಸಿರು.

ಜೈನ ಬೌದ್ಧರ ತರುವಾಯ ಸುಮಾರು ಒಂದು ಸಾವಿರ ವರುಷಗಳಮೇಲೆ ಕೆಲವು ವಿಷಯುಗಳಲ್ಲಿ ಪುನಃ ವೈದಿಕ ಧರ್ಮವನ್ನು ವಿರೋಧಿಸಿದವರು, ಲಿಂಗಾಯತರು. ಈ ಮತ ಪ್ರವರ್ತಕರಾದ **ಶ್ರೀ ಬಸವಣ್ಣನವರು** ಹೈದರಾಬಾದ್ ಕರ್ನಾಟಕದ ಕಲ್ಯಾಣ ಪ್ರಾಂತದಲ್ಲಿ ವೀರಶೈವ ಮತ ಪ್ರಚಾರ ಮಾಡಿ ಲೋಕೋದ್ಧಾರವನ್ನು ಮಾಡಿದರು. ಇವರು ಯಜ್ಞಯಾಗಾದಿಗಳನ್ನು ಒಪ್ಪದಿದ್ದರೂ ಇವರ ಕೆಲವು ವಚನಗಳಿಂದ ವೀರಶೈವರುಕೂಡ ವೈದಿಕರೆಂದು ತಿಳಿದುಬರುತ್ತದೆ. ಹಾಗು,

**ಹುತ್ತು ಬಡಿದರೆ ಹಾವು ಸಾಯುಬಲ್ಲದೇ ಅಯ್ಯಾ।**
**ಅಘೋರ ತಪವ ಮಾಡಿದರೇನು ಅಂತರಂಗ,**
**ಆತ್ಮಶುದ್ಧವಿಲ್ಲದವ ನೆಂತು ನಂಬುವನಯ್ಯಾ,**
**ಕೂಡಲ ಸಂಗಮದೇವಾ ॥**

ಎಂದು ಹೇಳಿ ಅಧ್ಯಾತ್ಮ ಜೀವನಕ್ಕೆ ಆತ್ಮಶುದ್ಧಿಯೇ ತಳಹದಿಯೆಂದು ತಿಳಿಸಿದರು. ಧರ್ಮದ ಗುಟ್ಟನ್ನು ಅರಿಯದೆ ಪರಂಪರ ಪ್ರಾಪ್ತವಾದ ವೃದ್ಧಾಚಾರಕ್ಕೆ ಹೆಚ್ಚು ಮಹತ್ವ ಕೊಡುವ ದೋಷವನ್ನು ದೂರಮಾಡಲಿಕ್ಕೆ ಕೆಳಗಿನ ವಚನಗಳಲ್ಲಿ ಮಾರ್ಮಿಕವಾಗಿ ಹೇಳಿರುವರು.

**ಕಲ್ಲ ನಾಗರ ಕಂಡರೇ ಹಾಲನೆರೆಯೆಂಬರು**
**ದಿಟನಾಗರ ಕಂಡರೆ ಕೊಲ್ಲೆಂಬರಯ್ಯಾ**
**ಉಂಬುವ ಜಂಗಮ ಬಂದರೆ ನಡೆಯೆಂಬರು**
**ಉಣ್ಣದ ಲಿಂಗಕ್ಕೆ ಬೋನ ಹಿಡಿಯುವರಯ್ಯಾ**
**ಕೂಡಲ ಸಂಗಮದೇವಾ ॥**
**ದೇಹವೇ ದೇಗುಲವಾಗಿರಲು ಬೇರೆದೇಗುಲ ವೇಕಯ್ಯಾ**
**ಜೀವವೇ ಲಿಂಗವಾಗಿರಲು ಬೇರೆಲಿಂಗವೇಕಯ್ಯಾ**

**ಗುಹೇಶ್ವರಾ ನೀಕಲ್ಲಾದರೆ ನಾನೇನಪ್ಪೆನಯ್ಯಾ,**
**ಕೂಡಲ ಸಂಗಮದೇವಾ ||**

**'ಸತ್ಯಂ ವದ, ಧರ್ಮಂ, ಚರ'** ಮುಂತಾದ ವೈದಿಕ ಉದಾತ್ತ ತತ್ವಗಳನ್ನೇ **"ಕಳ ಬೇಡ, ಕೊಲಬೇಡ, ಹುಸಿಯು ನುಡಿಯಲು ಬೇಡ, ಮುನಿಯ ಬೇಡಾ".** ಎಂಬ ವಚನಗಳಿಂದ ಜನಸಾಮಾನ್ಯಕ್ಕೆ ನೀತಿಮಾರ್ಗವನ್ನು ತೋರಿಸಿದರು. ಹೈದರಾಬಾದ್ ಕರ್ನಾಟಕದಲ್ಲಿ ಶ್ರೀ ಬಸವಣ್ಣನವರ ಅನುಯಾಯಿಗಳಾದ ವೀರಶೈವರು ಬಹುಸಂಖ್ಯಾಕರಾಗಿದ್ದು ಅವರ ಅಧ್ಯಾತ್ಮ ಜೀವನವು ಪ್ರಶಂಶನೀಯವಾಗಿದೆ.

ಅನಾದಿ ಕಾಲದಿಂದ ಬಂದ ದ್ವೈತಸಿದ್ಧಾಂತವನ್ನು ತಿಳಿಸಿಕೊಟ್ಟು ಭಕ್ತಿಯೇ ಮುಕ್ತಿಗೆ ಸೋಪಾನವೆಂದು ಹೇಳಿ ಅಧ್ಯಾತ್ಮ ಜೀವನದಲ್ಲಿ ಕ್ರಾಂತಿಯನ್ನು ಮಾಡಿದ ದವರು, **ಶ್ರೀ ಮಧ್ವಾಚಾರ್ಯರು.** ಇವರ ದ್ವೈತ ಮತವನ್ನೇ ಎತ್ತಿ ಹಿಡಿದು ಈ ನಾಡಿನಲ್ಲಿ ಶ್ರೀಜಯತೀರ್ಥರು, ರಾಘವೇಂದ್ರಸ್ವಾಮಿಗಳು ಮುಂತಾದ ಮಹಾನುಭಾವರು ಮಾಧ್ವ ಶಾಸ್ತ್ರಕ್ಕೆ ಟೀಕೆ ಟಿಪ್ಪಣಿಗಳನ್ನು ಬರೆದು ಮತೋದ್ಧಾರ ಮಾಡಿದರು. ಜನಸಾಮಾನ್ಯರ ಕಲ್ಯಾಣಕ್ಕಾಗಿ **ದಾಸಕೂಟದ ವರ್ಗವರು** ಅಧ್ಯಾತ್ಮ ತತ್ವಗಳನ್ನು ಕನ್ನಡನುಡಿಯಲ್ಲಿ ಪ್ರಚಾರ ಮಾಡಿದರು. ಮತಪ್ರಚಾರವನ್ನು ಮಾಡುವ ಕಾಲಕ್ಕೆ ತಮ್ಮ ಸಂಪ್ರದಾಯಕ್ಕನುಸರಿಸಿ ಹೇಳಿದ ಮಾತುಗಳನ್ನು ಇತರ ಪಂಥದವರು ಒಪ್ಪದಿದ್ದರೂ ಈ ದಾಸಕೂಟದವರು ಹೇಳಿದ ಉಪಾಸನಾ ಮಾರ್ಗವನ್ನು ಭರತಖಂಡದವರಿಗಷ್ಟೇ ಅಲ್ಲ, ಇಡೀ ಜಗತ್ತಿನ ತತ್ವಜ್ಞಾನಿಗಳಿಗೆ ಒಪ್ಪಿಗೆಯಾಗದೇ ಇರಲಾರದು.

**ಆವಕುಲದವ ನಾದೊಡೇ। ನಿನ್ನಾವದೇಶ ದೊಳಿದ್ದೊಡೇ।**
**ನಾವಕರ್ಮವ ಮಾಡಲೇ। ನಿನ್ನಾವ ಕಾಲದಲಿ ||**

ಎಂದು ವಿಶ್ವ ಬಂಧುತ್ವವನ್ನು ಹೇಳಿ

**ಸರ್ವದೇಶವು ಪುಣ್ಯದೇಶವು। ಸರ್ವಕಾಲವು ಪರ್ವಕಾಲವು।**
**ಸರ್ವಜೀವರು ದಾನಪಾತ್ರರು ಮೂರು ಲೋಕದೋಳು।**
**ಸರ್ವಮಾತುಗಳೆಲ್ಲ ಮಂತ್ರವು।**
**ಸರ್ವ ಕೆಲಸ ಗಳೆಲ್ಲ ಪೂಜೆಯು।**

ಎಂಬ ಅನುಸಂಧಾನ ಮಾರ್ಗವನ್ನು ತೋರಿಸಿಕೊಟ್ಟಿರುವರು.

ಬಾಹ್ಯಶುದ್ಧಿಗೆ ಕಾರಣ ವಾಗುವ ಕರ್ಮಕ್ಕೆ ಅಂಟಿಕೊಂಡು ಅದನ್ನೇ

ಧರ್ಮವೆಂದುಭಾವಿಸುವ ಮಂದಮತಿಗೆ.

**ಓಡಿಹೋಗುವ ಮಡಿಯಮಾಡಿ ದಣಿಯಲುಬೇಡ**
**ನೋಡು ಸರ್ವತ್ರ ಹರಿರೂಪ**

ಎಂದು ಹೇಳಿ ವ್ಯಾಪ್ತ್ಯೋಪಾಸನದ ರಹಸ್ಯವನ್ನು ತೋರಿಸಿದ್ದಾರೆ.

ಇಂಥ ಮಹಾನುಭಾವರು ಹುಟ್ಟಿದ ಈ ಪುಣ್ಯಭೂಮಿಯಲ್ಲಿ ವಾಸಿಸುವ ಮಾಧ್ವರ ಅಧ್ಯಾತ್ಮ ಜೀವನವು ಉಜ್ವಲವಾಗಿದೆ.

ಪುರಾಣ ಇತಿಹಾಸಗಳನ್ನು ಬದಿಗಿಟ್ಟು ಕೇವಲ ವೇದಗಳನ್ನೇ ಅನುಸರಿಸುತ್ತ "**ಕೃಣ್ವಂತೋ ವಿಶ್ವಮಾರ್ಯಂ**" ಎಂದು ಹೊರಟಿರುವ ಆರ್ಯ ಸಮಾಜವು ಅಧ್ಯಾತ್ಮ ಜೀವನದಲ್ಲಿ ಹೊಸ ಚೇತನೆಯನ್ನು ಹುಟ್ಟಿಸುತ್ತಿರುವದು. ಈ ಮತ ಪ್ರಚಾರದಿಂದ ಸಾಮಾನ್ಯ ಜನರಲ್ಲಿ ಧರ್ಮ ಜಾಗ್ರತಿ ಹುಟ್ಟಿ ಆರ್ಯ ಸಂಸ್ಕೃತಿ ರಕ್ಷಣೆಯು ಒಳಿತಾಗಿ ನಡೆದಿರುವದು. ಈ ನಾಡಿನಲ್ಲಿ ಕ್ರೈಸ್ತರು ಮತ್ತು ಮೊಹಮ್ಮದೀಯರು, ಅಧ್ಯಾತ್ಮ ಜೀವನದಲ್ಲಿ ಪ್ರಗತಿಮಾಡಿರುವರು. ಇವರ ಉಪಾಸನಾ ಮಾರ್ಗಗಳು ವೈದಿಕ ಧರ್ಮದಿಂದ ಭಿನ್ನವಾಗಿದ್ದರೂ, ಅಧ್ಯಾತ್ಮ ಜೀವನದಲ್ಲಿ ಹೆಚ್ಚು ಭೇದವಿಲ್ಲ ವೆಂದು ಕಂಡುಬರುವದು. ಸರ್ವ ಧರ್ಮಗಳಲ್ಲಿ ಒಂದೇಪ್ರಕಾರದ ನೀತಿ ತತ್ವಗಳು ಅಡಕವಾಗಿರುವವು. ಕ್ರಿಸ್ತೀಯರ **ಸಮಾಜ ಸೇವೆಯ ಅಭಿಲಾಷೆಯು** ಮತ್ತು **ಮೊಹಮ್ಮದೀಯರ ಧರ್ಮಾಭಿಮಾನವು** ಅನುಕರಣೀಯವಾಗಿರುವವು.

ಮಾನವ ಜಾತಿಯ ಶಾಂತಿಸುಖಕ್ಕಾಗಿ ತಳಮಳಿಸುವ ಸತ್ಯ, ಅಹಿಂಸೆ ಮುಂತಾದ ವೈದಿಕ ಧರ್ಮದಲ್ಲಿರುವ ತತ್ವಗಳಿಂದೊಡಗೂಡಿದ ಅಧ್ಯಾತ್ಮ ಜೀವನವು ಭರತಖಂಡದ ಇತರ ಪ್ರಾಂತಗಳಂತೆ ಈ ಭಾಗದಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಾರಂಭವಾಗಿರುವದು. ಕುಲಗೋತ್ರಗಳನ್ನು ವಿಚಾರಿಸದೆ ದಾರಿದ್ರ್ಯ, ಅಜ್ಞಾನದಿಂದ ಪೀಡಿತರಾದ ಜನರಿಗೆ ಕೈಗಾರಿಕೆ ಮುಂತಾದ ಉದ್ಯೋಗಗಳಿಂದ ಅನ್ನವನು. ಕೊಡಿಸಿ, ಶಿಕ್ಷಣ ಪ್ರಚಾರದಿಂದ ಅವರನ್ನು ಸುಸಂಸ್ಕೃತರನ್ನಾಗಿ ಮಾಡುವದು ಪವಿತ್ರ ಕೆಲಸ. '**ಆತ್ಮವತ್ ಸರ್ವಭೂತೇಷಾಂ**' ಎಂಬಂತೆ ತನ್ನಂತೆ ಇತರರನ್ನು ಬಗೆದು ಲೋಕ ಸಂಗ್ರಹ ಮಾಡಿದರೆ ಸಮಾಜದ ಅಧ್ಯಾತ್ಮ ಜೀವನದ ಉನ್ನತಿಯಾಗುವುದು. ಇಂಥ ಅಧ್ಯಾತ್ಮ ಜೀವನದಿಂದ ಲಭಿಸುವ ಸುಖಶಾಂತಿಯು ವಿಶಿಷ್ಟ ಜಾತಇಲ್ಲವೆ ಪಂಥದ ಸಲುವಾಗಿ ಅಲ್ಲ. '**ಸರ್ವೇಜನಾಂ ಸುಖಿನೋಭವಂತು**' ಎಂದುಬಯಸುವದೇ ಇಂದಿನ ಹೈದರಾಬಾದ್ ಕರ್ನಾಟಕದ ಅಧ್ಯಾತ್ಮ ಜೀವನದಗುರಿಯಾಗಿದೆ.

---

# ನಮ್ಮ ಇಂದಿನ ಶಿಕ್ಷಣ ಸಮಸ್ಯೆಗಳು.

ಶ್ರೀ. ಪದ್ಮನಾಭಾಚಾರ್ಯ ಪುರಾಣೀಕ, ಎಂ. ಎಸ್ ಸಿ., ಕಲಬುರ್ಗಿ.

ಶ್ರೀ. ಪದ್ಮನಾಭರು, ಕಲಬುರ್ಗಿಯಲ್ಲಿರುವ ಕೀರ್ತಿವೆತ್ತ ಪುರಾಣಿಕರ ಮನೆಯಲ್ಲಿ ಜನ್ಮವನ್ನೆತ್ತಿದ್ದಾರೆ. ಇವರ ಪ್ರಾಥಮಿಕ, ಹಾಗು ಉನ್ನತ ಶಿಕ್ಷಣವು ಹುಟ್ಟಿದೂರಾದ ಕಲಬುರ್ಗಿಯಲ್ಲಿಯೇ ಜರುಗಿದವು. ಇವರ ಚುರಕತನ ಅದಕ್ಕೂ ಮಿಗಿಲಾಗಿ ಇವರಲ್ಲಿ ಮನೆಮಾಡಿಕೊಂಡಿರುವ ದಿಟ್ಟತನ, ಹಾಗು ಎಲ್ಲವನ್ನೂ ಮಾತಿನಲ್ಲಿಯೇ ತೇಲಿಸಿಬಿಡುವ ವಾಕ್ಸರಣೆ, ಮುಂತಾದವುಗಳು, ಮುಂದೆ ಉಸ್ಮಾನಿಯ ವಿಶ್ವ ವಿದ್ಯಾಲಯದಲ್ಲಿ ಇವರಿಗಾಗಿ, ಒಂದು ಉತ್ತಮ ಭವಿತವ್ಯತೆಯನ್ನು ತೋರಿದವು. ಇವರು ತಮ್ಮ ಇಂಟರ್‌ಮೀಜಿಯಟ್‌ನಲ್ಲಿ ವಿಜ್ಞಾನಶಾಸ್ತ್ರದಲ್ಲಿ ಅಖಂಡ ಸಂಸ್ಥಾನದಲ್ಲಿ ಪ್ರಥಮ ತರಗತಿಯನ್ನು ಪಡೆದಿದ್ದಕ್ಕಾಗಿ ಇವರಿಗೆ ಪ್ರಶಸ್ತಿ ವಿದ್ಯಾರ್ಥಿ ವೇತನವನ್ನು ಕೊಡಲಾಯಿತು. ಬಿ. ಎಸ್. ಸಿ., ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಲ್ಲಿ ಇವರು ಮೊದಲಿಗರು. ಮುಂದೆ ಎಂ. ಎಸ್. ಸಿ., ಯಲ್ಲಿಯೂ ಪ್ರಥಮಶ್ರೇಣಿಯಲ್ಲಿ ಪ್ರಥಮಸ್ಥಾನವನ್ನು ಪಡೆದರು. ಇವರಿಗೆ ಕನ್ನಡ ಚಟುವಟಿಕೆಗಳಲ್ಲಿ ಪೂರ್ಣ ಆಸಕ್ತಿ ಇದೆ. ವಿಜ್ಞಾನದಲ್ಲಿ ಸಂಶೋಧನೆಯ ಪ್ರೇಮವೂ ಬಲವಾಗಿದೆ. ಕಳೆದ ಎರಡು ವರ್ಷಗಳಿಂದ ಕಲಬುರ್ಗಿಯ ಸುಪ್ರಸಿದ್ಧ ಶಿಕ್ಷಣ ಸಂಸ್ಥೆಯಾದ ನೂತನ ವಿದ್ಯಾಲಯದ ಉನ್ನತ ಶಾಲೆಯಲ್ಲಿ ಅಧ್ಯಾಪಕರಾಗಿ ನಿಂತಿದ್ದಾರೆ. ಕನ್ನಡಿಗರು ಇಂದು ಎದುರಿಸುತ್ತಿರುವ ಕೊರತೆಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದ್ದಾರೆ.

---

ಭಾಷಾನುಸಾರವಾಗಿ ಹೈದರಾಬಾದು ಸಂಸ್ಥಾನದಲ್ಲಿ ಮೂರು ಭಾಗಗಳಿವೆ. ಒರಂಗಲ್, ಮೇದಕ್, ಸೂಬೆಗಳ ಸಂಪೂರ್ಣ ಭಾಗವು, ಕಲಬುರ್ಗಿ ಜಿಲ್ಲೆಯ ಕೊಡಂಗಲ್ ತಾಲೂಕು ಮತ್ತು ರಾಯಚೂರು ಜಿಲ್ಲೆಯ ಆಲಂಪೂರ ತಾಲೂಕು ಇವುಗಳನ್ನೊಳಗೊಂಡ ಭಾಗವು ನಿಜಾಮ ಆಂಧ್ರ ದೇಶಕ್ಕೆ ಸೇರಿದೆ. ಸಂಸ್ಥಾನದಲ್ಲಿ ತೆಲಗು ಮಾತಾಡುವವರ ಸಂಖ್ಯೆ ೭೦ ಲಕ್ಷ. ಔರಂಗಾಬಾದ ಸೂಬೆ, ಕಲಬುರ್ಗಿ ಸೂಬೆಯಲ್ಲಿ ಉಸ್ಮಾನಾಬಾದ ಜಿಲ್ಲೆ, ಮಹಾರಾಷ್ಟ್ರ. ಕಲುಬುರ್ಗಿ, ರಾಯಚೂರು ಜಿಲ್ಲೆ, ಬೀದರ್ ಜಿಲ್ಲೆಯ ೫ ತಾಲೂಕುಗಳು ನವಾಬ್ ಸಾಲಾರ್‌ಜಂಗರ ಕೊಪ್ಪಳ ಜಾಗೀರಿ, ಇಲ್ಲಿಯ ಕನ್ನಡ ಭಾಗ. ಕನ್ನಡಮಾತಾಡುವವರ ಜನಸಂಖ್ಯೆ ೧೭ ಲಕ್ಷ.

ಈ ಮೂರು ಪ್ರಾಂತಿಕ ಭಾಷೆಗಳಲ್ಲದೆ ಪಟ್ಟಣವಾಸಿಗಳಾದ ಮುಸಲ್ಮಾನರು ಉರ್ದು ಮಾತಾಡುವರು. ಹಳ್ಳಿಯ ಮುಸಲ್ಮಾನರು ಉರ್ದು ಭಾಷೆಗಿಂತ ತಮ್ಮ ಪ್ರಾಂತದ ಭಾಷೆಯನ್ನೇ ಹೆಚ್ಚಾಗಿ ಮಾತಾಡುವರು. ಅವರ ದಿನದ ವ್ಯವಹಾರಗಳು ಪ್ರಾಂತಿಕ ಭಾಷೆಯ ಮೂಲಕವೇ ಸಾಗುವವು.

ಹೈದರಾಬಾದು ಸಂಸ್ಥಾನದಲ್ಲಿ ಶಿಕ್ಷಣ ಖಾತೆಯು ೧೮೬೯ ರಲ್ಲಿ ಸ್ಥಾಪಿತವಾಯಿತು. ೨೫ ವರ್ಷಗಳ ವರೆಗೂ ಇದು ಒಂದು ಚಿಕ್ಕ ಖಾತೆಯೇ ಆಗಿದ್ದಿತು. ೧೮೭೦ ರಲ್ಲಿ ಸಂಸ್ಥಾನದ ಮೊದಲನೇ ಇಂಗ್ಲೀಷ ಹೈಸ್ಕೂಲ ಸ್ಥಾಪಿತವಾಗಿ, ಮುಂದೆ ೧೦ ವರ್ಷಗಳ ಅನಂತರ ಪ್ರತಿಯೊಂದು ಸುಭೆಯ ಕೇಂದ್ರಸ್ಥಾನದಲ್ಲಿ ಒಂದೊಂದು ಇಂಗ್ಲೀಷು ಹೈಸ್ಕೂಲುಗಳನ್ನು ಶಿಕ್ಷಣ ಖಾತೆಯವರು ಏರ್ಪಡಿಸಿದರು. ೨೦ ನೇಶತಮಾನದ ಆರಂಭದಲ್ಲಿ ಕ್ರಿಸ್ತಿ ಜನರ ಮಿಶನ್ ಶಾಲೆಗಳು ಸ್ಥಾಪಿತವಾಗಿ ಸಂಸ್ಥಾನವ ಎಲ್ಲ ಮಾಧ್ಯಮಿಕ ಶಾಲೆಗಳಲ್ಲಿ ಬಾಲಕರ ಶಿಕ್ಷಣವು ಇಂಗ್ಲೀಷ ಭಾಷೆಯ ಮುಖಾಂತರ ಸಾಗಿತು. ೧೯೧೮ ರಲ್ಲಿ ಉಸ್ಮಾನಿಯಾ ವಿಶ್ವ ವಿದ್ಯಾಲಯವು ಜನ್ಮ ತಾಳಿ ಉರ್ದು ಭಾಷೆಯಲ್ಲಿ ಶಿಕ್ಷಣವು ಆರಂಭವಾಯಿತು. ಮೊದಮೊದಲು ಹಿಂದು ಜನರು ಉಸ್ಮಾನಿಯಾ ವಿಶ್ವ ವಿದ್ಯಾಲಯದ ಬಗ್ಗೆ ವಿಶೇಷ ಆಸ್ಥೆ ತೋರಿಸಲಿಲ್ಲ. ಆದರೆ ಇತ್ತೀಚಿಗೆ ಆಡಳಿತದ ಒತ್ತಾಯದಿಂದ ಹಿಂದು ವಿದ್ಯಾರ್ಥಿಗಳು ವಿದ್ಯಾಲಯವನ್ನು ಸೇರಹತ್ತಿದ್ದಾರೆ. ೧೯೨೦ ರಲ್ಲಿ ಶಿಕ್ಷಣ ಖಾತೆಯ ವೆಚ್ಚವು ೧೪ ಲಕ್ಷ ರೂಪಾಯಿಗಿಂತಲು ಕಡಿಮೆ ಇದ್ದಿತು. ಆದರೆ ೧೯೩೪ ರಲ್ಲಿ ಈ ವ್ಯಯವು ಒಂದುಕೋಟಿ ರೂಪಾಯಿಆಯಿತು. ೧೩೪೩ ಫಸಲಿ ವರ್ಷದಿಂದ ೧೩೪೭ ಫಸಲಿ ವರ್ಷದವರೆಗೂ ಶಿಕ್ಷಣಖಾತೆಯ ವೆಚ್ಚವನ್ನು ಕೆಳಗೆ ವಿವರಿಸಲಾಗಿದೆ.

| ಫಸಲಿ ವರ್ಷ | ರೂಪಾಯಿಗಳಲ್ಲಿ ವೆಚ್ಚ |
|---|---|
| ೧೩೪೩ | ೧,೦೩,೫೯,೬೬೩ |
| ೧೩೪೪ | ೧,೦೩,೨೨,೮೧೫ |
| ೧೩೪೫ | ೮೪,೯೮,೩೮೨ |
| ೧೩೪೬ | ೮೪,೭೯,೬೦೯ |
| ೧೩೪೭ | ೯೮,೦೪,೯೭೭ |

ಸುಮಾರು ಒಂದು ಕೋಟಿ ರೂಪಾಯಿಗಳನ್ನು ಜನತೆಯ ವತಿಯಿಂದ ಆಡಳಿತವು ಶಿಕ್ಷಣ ಖಾತೆಯ ಸಲುವಾಗಿ ಖರ್ಚುಮಾಡಿದರೂ, ಇಲ್ಲಿಯ ಜನರ ಸಾಕ್ಷರತೆಯ ಪ್ರಮಾಣವು ಅತ್ಯಲ್ಪ. ೧೯೩೧ ನೇ ಜನಗಣನೆಮೇರೆಗೆ ಸಂಸ್ಥಾನದಲ್ಲಿಯ ಸಾಕ್ಷರತೆಯ ಪ್ರಮಾಣವು ಶೇಕಡ ೭.೮ ಇದ್ದು ೧೯೪೧ರ ಜನಗಣನೆ ಮೇರೆಗೆ ಶೇಕಡ ೮.೪ ಆಗಿದೆ. ಭಾರತದಲ್ಲಿಯ ಇನ್ನು ಕೆಲವು ಸಂಸ್ಥಾನಗಳಲ್ಲಿ ಶಿಕ್ಷಣಖಾತೆಯ ವೆಚ್ಚವು ಕಡಮೆ ಇದ್ದರೂ ಸಾಕ್ಷರತೆಯ ಪ್ರಮಾಣವು ಹೆಚ್ಚಾಗಿ ಕಂಡುಬರುತ್ತದೆ.

ಹಿಂದುಸ್ಥಾನದ ಪ್ರಮುಖ ಸಂಸ್ಥಾನಗಳಲ್ಲಿ ಸ್ತ್ರೀ ಪುರುಷರ ಸಾಕ್ಷರತೆಯ ಪ್ರಮಾಣವನ್ನು ಕೆಳಗೆ ವಿವರಿಸಲಾಗಿದೆ. ತುಲನಾತ್ಮಕ ದೃಷ್ಟಿಯಿಂದ ಈ ಸಂಖ್ಯೆಗಳು ಬಹಳ ಬೋಧಪ್ರದವಾಗಿವೆ.

| ಸಂಸ್ಥಾನ | ಸಾಕ್ಷರತೆಯ ಪ್ರಮಾಣವು | |
|---|---|---|
| | ಪುರು: ಸಾಕ್ಷರತೆ% | ಸ್ತ್ರೀ: ಸಾಕ್ಷರತೆ % |
| ಕೋಚಿನ್ | ೪೬ | ೨೨. |
| ಟ್ರಾವನ್‌ಕೋರ್ | ೪೦.೮ | ೧೬.೮ |
| ಬಡೋದಾ | ೩೩.೧ | ೭.೯ |
| ಮೈಸೂರು | ೧೭.೪ | ೧.೨ |
| ಇಂದೂರ | ೧೫.೭ | ೭.೩ |
| ಬೀಕಾನೇರ | ೮.೫ | ೦.೯ |
| ಹೈದರಾಬಾದ್ | ೮.೫ | ೧.೨ |
| ಕಾಶ್ಮೀರ | ೭.೦ | ೦.೬ |

ಸಾಕ್ಷರತೆಯ ಪ್ರಮಾಣದಿಂದ ೧ ಕೋಟಿ ೯೯ ಲಕ್ಷ ವಾರ್ಷಿಕ ಉತ್ಪನ್ನಿರುವ ಬೀಕಾನೇರ ಸಂಸ್ಥಾನವು ಹಾಗು ೯ ಕೋಟಿ ೧೬ ಲಕ್ಷ ಉತ್ಪನ್ನಿರುವ ಹೈದರಾಬಾದು ಸಂಸ್ಥಾನವು ಒಂದೆ ಮಟ್ಟಕ್ಕೆ ಸೇರಿವೆಯೆಂಬುದು ಆಶ್ಚರ್ಯಕರವಾದ ಮಾತಲ್ಲವೆ?

ಹೈದರಾಬಾದು ಸಂಸ್ಥಾನದಲ್ಲಿ ಸಾಕ್ಷರತೆಯಇಷ್ಟು ಅಲ್ಪ ಪ್ರಮಾಣವಿರಲು ಆಡಳಿತ ಶಿಕ್ಷಣ ಧೋರಣೆಯೇ ಮೂಲಕಾರಣ. ೨೧, ೨೨೩ ಹಳ್ಳಿಗಳನ್ನೊಳಗೊಂಡ

ಸಂಸ್ಥಾನದಲ್ಲಿ ೪೮೪೩ ಪ್ರಾಥಮಿಕ ಶಾಲೆಗಳಿವೆ. ಹೈದರಾಬಾದು ಪಟ್ಟಣವೊಂದರಲ್ಲಿಯೇ ೧೬೮ ಪ್ರಾಥಮಿಕ ಶಾಲೆಗಳಿದ್ದು ಇತರ ದೊಡ್ಡ ಪಟ್ಟಣಗಳಲ್ಲಿ ಹತ್ತಾರು ಪ್ರಾಥಮಿಕ ಶಾಲೆಗಳಿರುವ ಮೂಲಕ ಹಳ್ಳಿಗಳ ಪಾಲಿಗೆ ಪ್ರಾಥಮಿಕ ಶಾಲೆಗಳ ಸಂಖ್ಯೆ ಬಹಳ ಕಡಮೆಯಾಗುವದು. ತೀರ ವಳಭಾಗದಲ್ಲಿರುವ ಗೌಡ ಶಾನಭೋಗರು ಕೂಡ ನಿರಕ್ಷರಿರುತ್ತಾರೆಂಬುದು ಅನುಭವದ ಮಾತಾಗಿದೆ. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಹಳ್ಳಿಗಳ ಸಂಖ್ಯೆ, ಪ್ರಾಥಮಿಕ ಶಾಲೆಗಳ ಸಂಖ್ಯೆ ಮತ್ತು ಸಾಕ್ಷರತೆಯ ಪ್ರಮಾಣವು ಕೆಳಗಿನಂತಿದೆ.

| ಜಿಲ್ಲೆ | ಹಳ್ಳಿಗಳ ಸಂಖ್ಯೆ | ಶಾಲೆಗಳ ಸಂಖ್ಯೆ | ಸಾಕ್ಷರತೆ |
|---|---|---|---|
| ಕಲಬುರ್ಗಿ | ೧,೧೩೬ | ೪೫೦ | ಶೇಕಡ ೨. ೭ |
| ರಾಯಚೂರ | ೧,೭೪೮ | ೩೬೯ | ಶೇಕಡ ೪. ೮ |
| ಬೀದರ್ | ೧,೪೩೩ | ೩೪೬ | ಶೇಕಡ ೩. ೫. |

ಕಲಬುರ್ಗಿಯ ಜಿಲ್ಲೆಯಲ್ಲಿ ಹಳ್ಳಿಗಳ ಸಂಖ್ಯೆ ಕಡಮೆಇದ್ದು, ಶಾಲೆಗಳ ಸಂಖ್ಯೆ ಹೆಚ್ಚಾಗಿದ್ದರೂ ರಾಯಚೂರು ಜಿಲ್ಲೆಗಿಂತಲು ಸಾಕ್ಷರತೆಯ ಪ್ರಮಾಣವು ಕಡಮೆ. ಜನಸಾಮಾನ್ಯರ ಭಾಷೆಯಲ್ಲದ ಬೇರೆ ಭಾಷೆಯಲ್ಲಿ ಇಲ್ಲಿಯ ಪ್ರಾಥಮಿಕ ಶಿಕ್ಷಣವಾಗುವದೆ ಸಾಕ್ಷರತೆಯ ಈ ಅಲ್ಪ ಪ್ರಮಾಣಕ್ಕೆ ಕಾರಣ. ಕಲಬುರ್ಗಿ ಮತ್ತು ಬೀದರ್ ಜಿಲ್ಲೆಯ ಜನರು ಮಾತಾಡುವ ಭಾಷೆ ಕನ್ನಡವಿದ್ದರೂ ಕೆಲವು ಐತಿಹಾಸಿಕ ಕಾರಣಗಳ ಮೂಲಕ ಮರಾಠಿಭಾಷೆಯ ವರ್ಚಸ್ಸು ಇಲ್ಲಿ ಜನತೆಯಮೇಲೆ ಹೆಚ್ಚಾಗಿ ಕಂಡುಬರುತ್ತದೆ. ಈಗ ಕೆಲವು ವರ್ಷಗಳ ಮೊದಲು ಕಲಬುರ್ಗಿ ಜಿಲ್ಲೆಯ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಮರಾಠಿ ಭಾಷೆಯಲ್ಲಿ ಶಿಕ್ಷಣ ಕೊಡುತ್ತಿದ್ದರು. ಬೀದರ್ ಜಿಲ್ಲೆಯ ಪ್ರಾಥಮಿಕ ಶಾಲೆಗಳಲ್ಲಿ ಇಂದಿಗಾದರೂ ಮರಾಠಿಯಲ್ಲಿಯೇ ಶಿಕ್ಷಣ ಕೊಡಲಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಮಾತ್ರ ಪ್ರಾಥಮಿಕ ಶಿಕ್ಷಣ ಕ್ರಮವು ಕನ್ನಡದಲ್ಲಿಯೇ ಜರಗುತ್ತಲಿದೆ. ಮಾತ್ರಭಾಷೆಯಲ್ಲಿದ್ದ ಅನ್ಯ ಭಾಷೆಯಲ್ಲಿ ಬಾಲಕರ ಶಿಕ್ಷಣವು ಆರಂಭವಾದರೆ, ಅವರ ಬೌದ್ಧಿಕ ಪ್ರಗತಿ ಕುಂಠಿತ ವಾಗುವದಲ್ಲದೆ ಕೆಲವು ದಿನಗಳಾದನಂತರ, ಬಾಲ್ಯದಲ್ಲಿ ಕಲಿತಷ್ಟುಕೂಡ ಮರೆತುಬಿಡುವದು ಸಹಜವಾದಮಾತು. ಆದುದರಿಂದಲೆ ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಸಾಕ್ಷಕೆತೆಯ ಪ್ರಮಾಣವು ರಾಯಚೂರಗಿಂತಲೂ ಕಡಮೆ ಇದ್ದುದು ಕಂಡುಬರುತ್ತಿದೆ.

ತಮ್ಮ ಜನತೆಯ ಶಿಕ್ಷಣದ ಪ್ರಗತಿಯಸಲುವಾಗಿ ನಿಜಾಮ ಕನ್ನಡಿಗರು ಸಲ್ಲಿಸಿದ ಸೇವೆ ತೀರ ಕಡಮೆ. ಹೈದರಾಬಾದ್ ಕರ್ನಾಟಕದಲ್ಲಿ ಕ್ರಿಸ್ಚನ್ ಮಿಶನ್ ಶಾಲೆಗಳನ್ನು ಬಿಟ್ಟರೆ ಒಟ್ಟು ಐದು ಖಾಸಗಿ ಶಾಲೆಗಳುಂಟು. ಕಲಬುರ್ಗಿಯಲ್ಲಿಯ

ನೂತನ ವಿದ್ಯಾಲಯು ಶಾಲೆ, ಯಾದಗಿರಿಯ ಶಂಕರ ಸಂಸ್ಕೃತ ಪಾಠಶಾಲ, ರಾಯಚೂರಿನ ಹಮ್ದರ್ದ ಹೈಸ್ಕೂಲು, ಕುಕುನೂರಿನ ವಿದ್ಯಾನಂದ ಗುರಕುಲ. ಚಿಂಚೋಳಿಯ ಉಸ್ಮಾನಿಯಾ ಮಿಡ್ಲಸ್ಕೂಲು. ಕಲಬುರ್ಗಿ ಜಿಲ್ಲೆಯ ಸೇಡಮ ತಾಲೂಕನಲ್ಲಿ ಮಾಧ್ಯಾಮಿಕ ಶಾಲೆಯು ಜನರ ಅಸಹಾಯದ ಮೂಲಕ ಮುಚ್ಚಲಾಗಿದೆ. ಕಲಬುರ್ಗಿ ನೂತನ ವಿದ್ಯಾಲಯದಲ್ಲಿ ಐದು ವರ್ಷಗಳಹಿಂದೆ ಪ್ರಾಥಮಿಕ ಶಿಕ್ಷಣವು ಮರಾಠಿ ಯೊಂದರಲ್ಲಿಯೇ ಕೊಡಲಾಗುತ್ತಿತ್ತು. ಆದರೆ ಈಗ ಕನ್ನಡ ಪ್ರಾಥಮಿಕ ವಿಭಾಗವನ್ನು ತೆರೆಯಲಾಗಿದೆ. ಈ ವಿದ್ಯಾಲಯದಲ್ಲಿ ಮರಾಠಿಕನ್ಯಾಶಾಲೆಇದ್ದು ವಿದ್ಯಾಲಯುವ ಸಂಚಾಲಕರು ಕನ್ನಡ ಕನ್ಯಾಶಾಲೆಯನ್ನು ತೆರೆದಿಲ್ಲ. ಯಾದಗಿರಿಯ ಸಂಸ್ಕೃತ ಪಾಠಶಾಲೆ ೧ ಲಕ್ಷ ರೂಪಾಯಿಗಳ ಸ್ವತಂತ್ರ ನಿಧಿಯಿಂದ ನಡೆಯುವ ಒಂದು ಸ್ವತಂತ್ರ ಲಿಂಗಾಯತ ಸಂಸ್ಥೆ. ಆದರೆ ಆಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ೩೭ ಮಾತ್ರ. ಹೈದರಾಬಾದ್ ಕರ್ನಾಟಕದ ಲಿಂಗಾಯತರು ಆ ಶಾಲೆಗೆ ತೋರಿಸಿದ ಅನಾಸ್ಥೆಯಿಂದ ಅದಕ್ಕೆ ಈ ದುಸ್ಥಿತಿ ಬಂದೊದಗಿದೆ. ರಾಯಚೂರಿನ ಹಮದರ್ದ ಹೈಸ್ಕೂಲು ಮತ್ತು ಕುಕುನೂರಿನ ವಿದ್ಯಾನಂದ ಗುರುಕುಲಗಳ ಆರ್ಥಿಕ ಪರಿಸ್ಥಿತಿ ಚನ್ನಾಗಿಲ್ಲ. ಆರ್ಥಿಕ ಸಹಾಯದ ಅಭಾವದಿಂದಾಗುವ ಎಲ್ಲ ದುರವಸ್ಥೆಗಳಿಗೆ ಈ ಸಂಸ್ಥೆಗಳು ಈಡಾಗಿವೆ. ಯಾದಗಿರಿಯ ಸಂಸ್ಕೃತ ಪಾಠಶಾಲೆ ಬಿಟ್ಟು ಇನ್ನುಳಿದ ಮೂರಾರು ಖಾಸಗಿ ಶಾಲೆಗಳಿಗೆ ಆಡಳಿತದಿಂದ ವಾರ್ಷಿಕ ಧನ ಸಹಾಯವು ಸಿಕ್ಕುತ್ತದೆ. ಆದುದರಿಂದ ತಮ್ಮದೇ ಆದ ಒಂದು ಸ್ವತಂತ್ರ ಧೋರಣದಿಂದ ಶಿಕ್ಷಣ ಕಾರ್ಯವನ್ನು ಸಾಗಿಸಲು ಶಕ್ಯವಿಲ್ಲ. ಸರಕಾರಿ ಮತ್ತು ಖಾಸಗಿ ಶಾಲೆಗಳ ಶಿಕ್ಷಣ ಕ್ರಮವು ಒಂದೇ ಇದ್ದ ಮೂಲಕ ಆ ಕ್ರಮ ದಲ್ಲಿದ್ದ ನ್ಯೂನತೆಗಳು ಎಲ್ಲ ತರದ ಶಾಲೆಗಳಲ್ಲಿಯೂ ಕಂಡುಬರುತ್ತವೆ. ನಮ್ಮ ಆಡಳಿತವು ಖಾಸಗಿ ಶಾಲೆಗಳನ್ನು ತೆರೆಯುವದರಬಗ್ಗೆ ನಿರ್ಬಂಧಗಳನ್ನು ಹಾಕುವ ಒಂದು ಕಟ್ಟಪ್ಪಣೆಯನ್ನು ಹೊರಡಿಸಿ ಈಗಾಗಲೆ ಬಹಳ ವರ್ಷಗಳಾದವು. ಆಕಟ್ಟಪ್ಪಣೆಯ ಪರಿಣಾಮವಾಗಿ ಹಳ್ಳಿಗಳಲ್ಲಿ ನುರಾರು ಅಯ್ಯನವರ ಶಾಲೆಗಳು ಮುಚ್ಚಲ್ಪಟ್ಟವೆ.

ಶಿಕ್ಷಣದ ಪ್ರಾಥಮಿಕ ಅವಸ್ಥೆ ಮುಗಿದ ನಂತರ, ೫ ನೆಯ ವರ್ಗದಿಂದ ಶಿಕ್ಷಣದ ಎಲ್ಲ ತರಗತಿಗಳಲ್ಲಿ ಉರ್ದು ಭಾಷೆಯಲ್ಲಿಯೇ ಶಿಕ್ಷಣವಾಗಬೇಕೆಂದು ಶಿಕ್ಷಣ ಖಾತೆಯ ಕಟ್ಟಪ್ಪಣೆಇದೆ. ಗಡಿನಾಡಿನ ಪ್ರಾಂತಗಳಾದ ಮದ್ರಾಸ, ಮುಂಬೈ, ಮತ್ತು ಮಧ್ಯ ಪ್ರಾಂತಗಳಲ್ಲಿ ಮಾಧ್ಯಮಿಕ ಶಿಕ್ಷಣದ ಭಾಷೆ ವಿದ್ಯಾರ್ಥಿಗಳ ಮಾತೃಭಾಷೆಯಿದ್ದರೂ ನಮ್ಮ ಸಂಸ್ಥಾನದಲ್ಲಿ ಮಾತ್ರ ಮಾಧ್ಯಾಮಿಕ ಶಿಕ್ಷಣವು ಬಹುಜನ ವಿದ್ಯಾರ್ಥಿಗಳ ಮಾತೃ ಭಾಷೆಯಲ್ಲದ ಉರ್ದು ಭಾಷೆಯಲ್ಲಿ ನಡೆಯುವದು ನಮ್ಮ

ಲ್ಲಿಯ ಶಿಕ್ಷಣ ಕ್ರಮದಲ್ಲಿರುವ ತಾತ್ವಿಕ ಕುಂದನ್ನು ತೋರಿಸುತ್ತದೆ. ಮಾತೃಭಾಷೆಯಲ್ಲಿ ಶಿಕ್ಷಣವು ಸಿಗದೆ ಹೋದರೆ ವಿದ್ಯಾರ್ಥಿಗಳ ನಿರ್ಮಾಣಶಕ್ತಿ, ಬೌದ್ಧಿಕ ಪ್ರಗತಿ ಕುಂಠಿತ ವಾಗುವ ದಲ್ಲದೆ ಆಜನತೆಯ ಸಾಂಸ್ಕೃತಿಕ ಅದಃಪತನವಾಗುವದು. ಇದು ಕಲಬುರ್ಗಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಎರಡು ವಿಧದಿಂದ ಆಗಹತ್ತಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಮಾತೃ ಭಾಷೆಯಲ್ಲದ ಮರಾಠಿಯ ಮೂಲಕ, ಮುಂದೆ ಮಾಧ್ಯಮಿಕ ಶಿಕ್ಷಣದಲ್ಲಿ ಉರ್ದು ಮೂಲಕ-ಕನ್ನಡ ಅರಸುಮನೆತನಗಳಿದ್ದ ಬಸವೇಶ್ವರನ ಕಾರ್ಯ ಭೂಮಿಯಾದ ಈ ಪ್ರಾಂತದ ಕನ್ನಡಿಗರಿಗೆ ಆಗಿರುವ ದುರವಸ್ಥೆ ತೀರ ಶೋಚನೀಯ.

ಮಾಧ್ಯಮಿಕ ಶಿಕ್ಷಣ ಕ್ರಮದಲ್ಲಿ ನಮ್ಮ ಪ್ರಾಂತಿಕ ಭಾಷೆಗಳಿಗೆ ಯಾವ ಸ್ಥಾನವುಇಲ್ಲ. ಈ ಭಾಷೆಗಳ ಅಭ್ಯಾಸವು ಐಚ್ಛಿಕ ವಿಷಯವಾಗಿದೆ. ಇವುಗಳ ಜೊತಿಯಲ್ಲಿ ವಿಜ್ಞಾನ ಮತ್ತು ಗಣಿತವು ಕೂಡ ಐಚ್ಛಿಕ ವಿಷಯಗಳಾಗಿವೆ. ಆದುದರಿಂದ ಮಾತೃಭಾಷೆಯ ಅಭ್ಯಾಸ ಮಾಡುವವರೆಗೆ, ವಿಜ್ಞಾನದ ಅಭ್ಯಾಸವು ಆಗುವಂತಿಲ್ಲ. ಆದ್ದರಿಂದಲೇ ವಿದ್ಯಾರ್ಥಿಗಳು ಕನ್ನಡವನ್ನುಬಿಟ್ಟು ವಿಜ್ಞಾನ ಅಥವಾ ಗಣಿತವನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಳ್ಳುತ್ತಾರೆ. ಈ ಯೋಜನೆಯ ಮೂಲಕ ಶಿಕ್ಷಣಕ್ರಮದ ಯಾವಭಾಗದಲ್ಲಿಯೂ ಹುಡುಗರ ಮಾತೃಭಾಷೆಯ ಅಭ್ಯಾಸಕ್ಕೆ ಆಸ್ಪದವೇ ಇಲ್ಲದಂತಾಗಿದೆ.

| ಇ. ವರ್ಷ | ಸಾಕ್ಷರ ಹಿಂದು ಹೆಂಗಳೆಯರ ಪ್ರಮಾಣ | ಸಾಕ್ಷರಮುಸಲ್ಮಾನ ಹೆಂಗಳೆಯರ ಪ್ರಮಾಣ | ಸಾಕ್ಷರ ಹಿಂದು ಪುರುಷರ ಪ್ರಮಾಣ | ಸಾಕ್ಷರ ಮುಸಲ್ಮಾನ ಪುರುಷರ ಪ್ರಮಾಣ |
|---|---|---|---|---|
| ೧೮೮೧ | .೦೪ | .೦೨ | ೨.೯ | ೪.೯ |
| ೧೮೯೧ | .೧ | .೩ | ೩.೪ | ೬.೨ |
| ೧೯೦೧ | .೧೯ | .೧ | ೨.೫ | ೫.೫ |
| ೧೯೧೧ | .೧೯ | ೧.೨ | ೨.೩ | ೫.೯ |
| ೧೯೨೧ | .೩ | ೩ | ೨.೬ | ೮.೯ |
| ೧೯೩೧ | .೬ | ೩.೪ | ೩.೩ | ೧೦.೪ |
| ೧೯೪೧ | ಇನ್ನು | ಸಂಖ್ಯೆಗಳು | ಪ್ರಕಟವಾಗಿಲ್ಲ | |

ಹೆಣ್ಣು ಹುಡುಗಿಯರಿಗೆ ೭ ನೇ ವರ್ಗದವರೆಗೂ ಮಾತೃಭಾಷೆಯಲ್ಲಿಯೇ ಶಿಕ್ಷಣವು ಸಿಕ್ಕುತ್ತದೆ. ಆದರೆ ಉರ್ದು ಭಾಷೆಯ ಅಭ್ಯಾಸವು ಆವಶ್ಯಕವಾಗಿದೆ. ಆದುದರಿಂದ ಎಷ್ಟೋ ಹುಡುಗಿಯರು ಪ್ರಾಥಮಿಕ ಶಿಕ್ಷಣವಾದಮೇಲೆ ಮುಂದಿನ ಶಿಕ್ಷಣವನ್ನು ನಿಲ್ಲಿಸಿಬಿಡುತ್ತಾರೆ. ಹಿಂದು ಮುಸಲ್ಮಾನ ಸ್ತ್ರೀ ಪುರುಷರ ಸಾಕ್ಷರತೆಯ ಪ್ರಮಾಣವನ್ನು ಹಿಂದೆ ಕೊಡಲಾಗಿದೆ.

ಅರ್ಧಶತಕದಲ್ಲಿ ಹಿಂದು ಸುಶಿಕ್ಷಿತ ಸ್ತ್ರೀಯರ ಸಂಖ್ಯೆ ಪ್ರತಿ ಹತ್ತುಸಾವಿರಕ್ಕೆ ನಾಲ್ಕರಿಂದ ೬ ಕ್ಕೆ ಬಂದಿದೆ. ಆದರೆ ಮುಸಲ್ಮಾನ ಸುಶಿಕ್ಷಿತ ಸ್ತ್ರೀಯರ ಸಂಖ್ಯೆ ೧೦ ಸಾವಿರಕ್ಕೆ ೨ ರಿಂದ ೩೦ಕ್ಕೆ ಏರಿದೆ. ಅದರಂತೆ ಹಿಂದು ಸಾಕ್ಷರ ಪುರುಷರ ಸಂಖ್ಯೆ ೨೯೦ ರಿಂದ ೩೩೦ಕ್ಕೆ ಏರಿದೆ. ಆದರೆ ಮುಸಲ್ಮಾನ ಸಾಕ್ಷರ ಪುರುಷರ ಸಂಖ್ಯೆ ೪೯೦ ರಿಂದ ೧೦೪೦ಕ್ಕೆ ಏರಿಬಂದಿದೆ. ಇದರಿಂದ ಒಂದು ಸಂಗಡದ ಪ್ರಗತಿ ಅವರ ಮಾತೃಭಾಷೆಯ ಮೂಲಕ ಶಿಕ್ಷಣ ಸಿಗುವುದರಿಂದ, ಇನ್ನೊಂದು ಸಂಗಡದ ಅವನತಿ, ಮಾತೃಭಾಷೆಯಲ್ಲದ ಅನ್ಯ ಭಾಷೆಯಲ್ಲಿ ಶಿಕ್ಷಣ ಸಿಗುವುದರಿಂದ ಹೇಗೆಆಗುವದೆಂಬ ಕಥೆಯು ಮೇಲಿನ ಸಂಖ್ಯೆಗಳ ತುಲನೆಯಿಂದ ಸ್ಪಷ್ಟವಾಗುವದು.

ಉಚ್ಚ ಶಿಕ್ಷಣ ಕ್ರಮದಲ್ಲಿಯೂ ನಮ್ಮ ಪ್ರಾಂತಿಕ ಭಾಷೆಗಳಿಗೆ ಯಾವ ಸ್ಥಾನವೂ ಇಲ್ಲ. ವೈಜ್ಞಾನಿಕ ಯುಗದಲ್ಲಿ ವಿಜ್ಞಾನ ವಿಷಯಗಳನ್ನು ಬಿಟ್ಟು ಕನ್ನಡವಾಗಲಿ ಅಥವಾ ಇನ್ನುಳಿದ ಪ್ರಾಂತಿಕ ಭಾಷೆಗಳಾಗಲಿ, ಕಲಾಶಾಲೆಯ ವರ್ಗಗಳಲ್ಲಿ ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳುವವರ ಸಂಖ್ಯೆ ಬಹಳ ಕಡಮೆ. ಹೈದರಾಬಾದ್ ಉಸ್ಮಾನಿಯಾ ಕಾಲೇಜಿನಲ್ಲಾಗಲಿ, ಕಲಬುರ್ಗಿಯ ಇಂಟರ್ ಮೀಡಿಯಟ್ ಕಾಲೇಜಿನಲ್ಲಿಯಾಗಲಿ, ಕನ್ನಡ ತೆಗೆದುಕೊಳ್ಳುವವರ ಸಂಖ್ಯೆ ತೀರ ಕಡಮೆ.

ಆದುದರಿಂದ ಶಿಕ್ಷಣದ ಪ್ರಾಥಮಿಕ ತರಗತಿಯಿಂದ ಉಚ್ಚ ತರಗತಿಯವರೆಗೂ ವಿದ್ಯಾರ್ಥಿಗಳ ಮಾತೃಭಾಷೆಯ ಅಭ್ಯಾಸವು ಆವಶ್ಯಕ ವಿಷಯವಾಗಿಡಿಸಲು ದೀರ್ಘ ಪ್ರಯತ್ನವಾಗಬೇಕು. ಇಲ್ಲದೆ ಹೋದರೆ ಇನ್ನು ಕೆಲವು ವರ್ಷಗಳನಂತರ ಮೂರು ಪ್ರಾಂತಿಕ ಭಾಷೆಗಳ ಅವಸ್ಥೆ ಏನಾಗುವದೆಂಬುದು ಕಲ್ಪನೆಗೆ ನಿಲುಕದ ಮಾತಾಗಿದೆ.

ಜನಸಾಮಾನ್ಯರ ಶಿಕ್ಷಣವಸಲುವಾಗಿ ಶಾಲೆಗಳ ಜೊತೆಗೆ ವಾಚನಾಲಯ ಗ್ರಂಥಾಲಯಗಳ ಅವಶ್ಯಕತೆ ಇದೆ ವಾಚನಾಲಯ ಆಂದೋಲನವು ಇಲ್ಲಿಯ ಆಂಧ್ರ ದೇಶದಲ್ಲಿ ಹೆಚ್ಚಾಗಿ ಬೆಳೆದು ಎಲ್ಲ ತಾಲೂಕು ಸ್ಥಲಗಳಲ್ಲಿಯೂ ಮತ್ತೆ ಕೆಲವು ದೊಡ್ಡ ಹಳ್ಳಿಗಳಲ್ಲಿಯೂ ತೆಲುಗು ವಾಚನಾಲಯಗಳು ಸ್ಥಾಪಿತವಾಗಿವೆ. ಮಹಾರಾಷ್ಟ್ರದಲ್ಲಿ

ಕೂಡ ವಾಚನಾಲಯುಗಳು ಇವೆ. ಅದರಂತೆ ಹೈದರಾಬಾದ್ ಕರ್ನಾಟಕದಲ್ಲಿ ವಾಚನಾಲಯುಗಳೂ, ಗ್ರಂಥಾಲಯುಗಳು, ಸಾಕಷ್ಟು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ನಿಜಾಮು ಕರ್ನಾಟಕದ ಕೇಂದ್ರಸ್ಥಾನವಾದ ಕಲಬುರ್ಗಿಯಲ್ಲಿ ಎರಡು ಗ್ರಂಥಾಲಯುಗಳು, ಮೂರು ವಾಚನಾಲಯುಗಳು ಇವೆ. ಕಲಬುರ್ಗಿಯ ಜನಸಂಖ್ಯೆಯನ್ನು ನೋಡಿದರೆ ೫೦ ಸಾವಿರ ಜನರಿಗೆ ಮೂರು ವಾಚನಾಲಯುಗಳು ಸಾಲವು. ರಾಯಚೂರು ಪಟ್ಟಣದಲ್ಲಿ ವಾಚನಾಲಯುಗಳಿವೆ. ಆದರೆ ಸಾಕಷ್ಟು ಸಂಘಟಿತವಾಗಿಲ್ಲ. ಹೈದರಾಬಾದ್ ಕರ್ನಾಟಕದ ತಾಲೂಕುಗಳಲ್ಲಿ ಅಲ್ಲಲ್ಲಿ ವಾಚನಾಲಯು, ಗ್ರಂಥಾಲಯುಗಳಿದ್ದರೂ ಕಾರ್ಯ ತೃಪ್ತಿಕರವಾಗಿ ನಡೆದಿಲ್ಲ.

ಜನತೆಯ ಸಂಸ್ಕೃತಿ ಮತ್ತು ಆ ಜನರಾಡುವ ಭಾಷೆಯ ಪ್ರಗತಿ ಆಯಾ ಭಾಷೆಯಲ್ಲಿಯ ಗ್ರಂಥ ನಿರ್ಮಾಣ ಶಕ್ತಿಯಿಂದ ಗೊತ್ತಾಗುತ್ತದೆ· ಹೈದರಾಬಾದು ಸಂಸ್ಥಾನದಲ್ಲಿ ಕಳೆದ ಹತ್ತು ವರ್ಷಗಳಲ್ಲಿ, ವಿವಿಧ ಭಾಷೆಗಳಲ್ಲಿ ಬರೆದ ಗ್ರಂಥಗಳ ಸಂಖ್ಯೆ ಮತ್ತು ಆ ಭಾಷಗಳಾಡುವವರ ಸಂಖ್ಯೆಯ ಪ್ರಮಾಣ ಮತ್ತು ನಿಯತಕಾಲ ಪತ್ರಿಕೆಗಳ ಸಂಖ್ಯೆ ಕೆಳಗೆ ಕೊಡಲಾಗಿದೆ.

| ಭಾಷೆ | ಜನಸಂಖ್ಯೆಯ ಶೇಕಡ ಪ್ರಮಾಣ | ಗ್ರಂಥಗಳ ಸಂಖ್ಯೆ | ನಿಯಮಿತ ಕಾಲಿಕೆ ಪತ್ರಿಕೆಗಳ ಸಂಖ್ಯೆ |
|---|---|---|---|
| ತೆಲಗು | ೫೦ | ೨೫೩ | ೮ |
| ಮರಾಠಿ | ೨೭.೫ | ೧೫೫ | ೩ |
| ಕನ್ನಡ | ೧೨.೫ | ೪೨ | ೪ |
| ಉರ್ದು | ೧೦.೦ | ೨,೨೨೩ | ೩೪ |

ಮೇಲಿನ ವಿವರವನ್ನು ನೋಡಿದರೆ ಮೂರು ಪ್ರಾಂತಿಕ ಭಾಷೆಗಳಿಗೆ ಸಿಗುವ ಪ್ರೋತ್ಸಾಹವು ಎಷ್ಟಿದೆ, ಮತ್ತು ಉರ್ದು ಭಾಷೆಯ ಪ್ರಗತಿ ಹೇಗಿದೆಂಬುದು ಆಯಾ ಭಾಷೆಗಳಲ್ಲಿ ಬರೆದಗ್ರಂಥಗಳ ಸಂಖ್ಯೆಯಿಂದ ಕಂಡುಬರುವುದು. ನಿಯತ ಕಾಲಿಕ ಪತ್ರಿಕೆಗಳ ಸಂಖ್ಯೆಯು ಕೂಡ ಪ್ರಾಂತಿಕ ಭಾಷೆಗಳಲ್ಲಿ ಬಹಳ ಕಡಮೆ. ಹೈದರಾಬಾದು ಸಂಸ್ಥಾನದಲ್ಲಿ ಪ್ರಕಟವಾಗುವ ಕನ್ನಡ ನಿಯತಕಾಲಿಕ ಪತ್ರಿಕೆಗಳ ಸಂಖ್ಯೆ ನಾಲ್ಕು. ಹೈದರಾಬಾದಿನ ಸುದ್ದಿ ಖಾತೆಯಿಂದ ಹೊರಡುವ ಮಾಸಪತ್ರಿಕೆ ಹೈದರಾಬಾದ ಸಮಾಚಾರ ಒಂದು. ಹೈದರಾಬಾದು ಮದ್ಯಪಾನ ನಿರೋಧಕ ಸಭೆಯಿಂದ ಹೊರ

ಡುವದು ಎರಡನೇ ಮಾಸಿಕ ಪತ್ರಿಕೆ. ಸಹಕಾರ ಕೇಂದ್ರ ಸಮಿತಿಯವರು ಹೊರಡಿಸುತ್ತಿರುವ 'ಗ್ರಾಮ ಸುಧಾರಕವು' ಮೂರನೆಯದು. ಈ ಮೂರು ಪತ್ರಿಕೆಗಳು ಸರಕಾರಿ ಪತ್ರಿಕೆಗಳು. ರಾಯಚೂರಿನಿಂದ 'ದಕ್ಕನ್ ಪ್ರಭಾತ್' ಎಂಬ ವಾರ ಪತ್ರಿಕೆ ಹೊರಟಿದೆ. ಇದು ತನ್ನ ಧ್ಯೇಯ, ಉದ್ದೇಶ, ದೃಷ್ಟಿಗಳನ್ನು ವಿಸ್ತರಿಸಿ ಹೈದರಾಬಾದಿನ ಎಲ್ಲ ಕನ್ನಡಿಗರಿಗೆ ತಕ್ಕ ಸೇವೆ ಸಲ್ಲಿಸಬೇಕಾಗಿದೆ.

ಒಟ್ಟಿನಮೇಲೆ ಹೈದರಾಬಾದ್ ಕರ್ನಾಟಕವು ಶಿಕ್ಷಣ ಪ್ರಗತಿ ಪಥದಲ್ಲಿ ಬಹಳೇ ಹಿಂದುಳಿದದದ್ದೆಂಬುದು ನಿರ್ವಿವಾದವಾದ ಮಾತು. ಶಿಕ್ಷಣವೇ ಆಗಲಿ ಇನ್ನಾವಕಾರ್ಯವೇ ಆಗಲಿ, ನಮ್ಮ ನಾಡಿನಲ್ಲಿ ಪ್ರಗತಿಮಾರ್ಗದಲ್ಲಿ ನಡೆಯಬೇಕಾದರೆ, ಆಡಳಿತದ ಅಚ್ಚುಕಟ್ಟಾದ ಧೋರಣೆ, ಧನವಂತರ ಧನಸಹಾಯ, ಮತ್ತು ಕಾರ್ಯಕರ್ತರ ಕಾರ್ಯ ದಕ್ಷತೆ ಇವೆಲ್ಲವುಗಳ ಸಂಗಮವಾಗಬೇಕು. ಪ್ರಭುತ್ವದಿಂದ ಸಹಾಯ, ಅನುಕೂಲತೆ ಮುಂತಾದವುಗಳ ಆಶೆಯನ್ನಿಡದೆ ನಮ್ಮ ಭಾಷೆಯ ಏಳ್ಗೆಗಾಗಿ ಸ್ವತಃ ಉದ್ಯಮವನ್ನು ಕೈಗೊಳ್ಳಬೇಕಾಗಿದೆ. ಈ ವಿಷಯದಲ್ಲಿ ಸರಕಾರವು ತನ್ನ ಸಹಕಾರವನ್ನೀಯುವದಾದರೆ ಅದರಿಂದ ಪ್ರಯೋಜನ ಪಡೆಯಬಹುದಾಗಿದೆ. ಹೈದರಾಬಾದ್ ಕರ್ನಾಟಕದಲ್ಲಿ ದೇಶಮುಖ, ದೇಶಪಾಂಡೆಯರು, ಮತ್ತು ದೊಡ್ಡದೊಡ್ಡ ವ್ಯಾಪಾರಿಗಳು ಧನವಂತರ ಗುಂಪಿಗೆ ಸೇರಿದವರು. ಕಲಬುರ್ಗಿ ಮತ್ತು ಬೀದರ್ ಜಿಲ್ಲೆಯ ದೇಶಮುಖ, ದೇಶಪಾಂಡೆಯರು ವಿಶೇಷವಾಗಿ ಮರಾಠಿಮಾತನ್ನೇ ಆಡುವರು. ಹಲವು ವರ್ಷಗಳ ಹಿಂದೆ ಧನಿಕ ಬ್ರಾಹ್ಮಣ ಸಮಾಜವು ಮರಾಠಿ ಮಾತನ್ನಾಡುವದು ಸುಧಾರಣೆಯ ಲಕ್ಷಣವೆಂದು ತಿಳಿಯುತ್ತಿದ್ದರು. ಇತ್ತೀಚೆಗೆ ಈ ದೃಷ್ಟಿ ಹೋಗಹತ್ತಿದೆ. ಅದರೆ ಈ ವಿಚಾರಗಳು ಸಮೂಲ ನಾಶವಾದ ಹೊರತು ನಮ್ಮ ಭಾಷೇ ಬದುಕುವಂತಿಲ್ಲ. ನಮ್ಮ ಸಂಸ್ಕೃತಿ ಉಳಿಯುವಂತಿಲ್ಲ. ಧನಿಕವರ್ಗದ ಇನ್ನೊಂದು ಭಾಗವು ಹೈದರಾಬಾದ್ ಕರ್ನಾಟಕದ ವರ್ತಕರದು. ಇವರು ಸಾರ್ವಜನಿಕ ಶಿಕ್ಷಣ ಕಾರ್ಯದ ನೇತೃತ್ವವನ್ನು ವಿಶೇಷ ಪ್ರಮಾಣದಲ್ಲಿ ವಹಿಸಬೇಕು.

ವಾಚನಾಲಯಗಳು ಹೇರಳವಾಗಿ ಬೆಳೆಯಬೇಕು. ಪ್ರತಿಯೊಂದು ಊರಲ್ಲಿ ಕರ್ನಾಟಕಸಂಘಗಳ ಸ್ಥಾಪನೆಯಾಗಬೇಕು. ಇವೆಲ್ಲ ಕಾರ್ಯಗಳಿಗಿಂತ ಮಹತ್ವನಾದ ಕಾರ್ಯವೆಂದರೆ ನಮ್ಮ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡದ ಮೂಲಕವೇ ಶಿಕ್ಷಣವಾಗಬೇಕು. ಉಚ್ಚ ಶಿಕ್ಷಣದಲ್ಲಿ ಕನ್ನಡಿಗರಿಗಾಗಿ ಕನ್ನಡವು ಅವಶ್ಯಕ ವಾಗಬೇಕು. ಹೀಗಾದರೆ ಹೈದರಾಬಾದ್ ಕರ್ನಾಟಕವು ನೆರೆಯ ಪ್ರಾಂತಗಳೊಡನೆ ಸಮಾನವಾಗಿ, ಎಲ್ಲ ಚಳವಳಿಯಲ್ಲಿ ಸಹಭಾಗಿಯಾಗಿ ಮುಂದೆನುಗ್ಗುವದು.

# ನಮ್ಮ ಆರ್ಥಿಕ ಮತ್ತು ಕೈಗಾರಿಕೆಯ ಸ್ಥಿತಿ ಗತಿ.

ಶ್ರೀ. ಮಧ್ವರಾವ್, ಆನ್ವರಿ.

ಹೈದರಾಬಾದ್ ಕೋಆಪರೇಟಿವ್ ಇನ್ಸುರೆನ್ಸ ಸುಸೈಟಿಯ ಮ್ಯಾನೇಜರರಾಗಿರುವ ಶ್ರೀ. ಮಧ್ವರಾಯರು, ಗುಡಗುಂಟಿ ಸಂಸ್ಥಾನದ ಸನ್ಮಾನ್ಯ ದಿವಾನರ ಮನೆತನಕ್ಕೆ ಸಂಬಂಧ ಪಟ್ಟವರು. ತಾಯ್ತಂದೆಗಳು ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದರಿಂದ ಶಿಕ್ಷಣದೊಡನೆ, ಜೀವನೋಪಾಯಕ್ಕಾಗಿಯೂ ಚಿಕ್ಕ ವಯಸ್ಸಿನಿಂದಲೇ ಹೋರಾಡಬೇಕಾಗಿ ಬಂತು. ಇವರ ಸತತೋದ್ಯೋಗ, ಬುದ್ಧಿವಂತಿಕೆ, ಚಾಣಾಕ್ಷತನಗಳೇ ಈ ಹೋರಾಟದಲ್ಲಿ ಯಶಸ್ಸನ್ನು ತಂದುಕೊಟ್ಟು ಅವರನ್ನೀಗ ಹೈದರಾಬಾದಿನ ಪ್ರತಿಯೊಂದು ಪಂಗಡದ ಜನರಲ್ಲಿಯೂ ಸರ್ವಪ್ರಿಯರನ್ನಾಗಿ ಮಾಡಿವೆ. ಶ್ರೀ. ಆನ್ವರಿಯವರು ಪ್ರಭುತ್ವದ ಅಧಿಕಾರ ವರ್ಗದಲ್ಲಿ ಸಾಕಷ್ಟು ಸರ್ವ ಪ್ರಿಯತೆಯನ್ನು ಪಡೆದಿರುವಂತೆಯೇ ಸಾರ್ವಜನಿಕ ಜೀವನದಲ್ಲೂ ಸೇವೆ ಸಲ್ಲಿಸಿ ಮಾನ್ಯತೆಯನ್ನು ಪಡೆದಿದ್ದಾರೆ. ಸಹಕಾರ ಚಳವಳಿಯ ವಿಷಯವಾಗಿ ಸಾಕಷ್ಟು ಅಭ್ಯಸಿಸಿಕೊಂಡಿದ್ದಾರೆ.

ರಾಯರು ಸಾಹುಕಾರ ಸಂಘದ, ನೃಪತುಂಗಶಾಲೆಯ ಸಹಕಾರ್ಯದರ್ಶಿಗಳು. ಪ್ರೇಮನಗರ ಕಾಲನಿ ಸಹಕಾರಸಂಘದ ಹಾಗು ಕರ್ನಾಟಕ ಸಾಹಿತ್ಯ ಮಂದಿರಗಳ ಉಪಾಧ್ಯಕ್ಷರು. ಗ್ರ್ಯಾಜುಯೇಟ್ಸ ಅಸೋಸಿಯೇಷನ್‌ನ ಆಶ್ರಯದಲ್ಲಿ ಕೆಲಸ ಮಾಡುತ್ತಿರುವ (ಮಾಷಿಕಮೆಟೀ) "ಅರ್ಥಿಕ ಸಂಘದ" ಕೋಶಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇನ್ನು ಅನೇಕ ಶೈಕ್ಷಣಿಕ ಮತ್ತು ವ್ಯವಹಾರಿಕ ಸಂಸ್ಥೆಗಳ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿದ್ದಾರೆ. ಇವರು ಸದಸ್ಯರಾಗಿರದಿದ್ದ ಕನ್ನಡ ಸಂಸ್ಥೆಗಳು ತೀರ ವಿರಳ. ಇವರು ಉತ್ತಮ ಭಾಷಣಕಾರರು. ಸಹಕಾರ ಚಳವಳಿ, ಗ್ರಾಮಸುಧಾರಣೆ, ಬ್ಯಾಂಕಿಂಗ್, ಆರ್ಥಿಕ ಸಮಸ್ಯೆ, ವಿಮಾ, ಮುಂತಾದ ವಿಷಯಗಳಮೇಲೆ ಆಗಾಗ ರಾಯರ ಲೇಖನಗಳು ಸ್ಥಾನಿಕ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುತ್ತವೆ.

---

ಜಗತ್ತಿನ ಆರ್ಥಿಕ ಪರಿಸ್ಥಿತಿಯು ಬಹಳ ಗೊಂದಲದಲ್ಲಿದೆ. ಯುದ್ಧವು ನಡೆದಿರುವವರೆಗೂ ನಮಗೆ ಇದರಿಂದ ಬಿಡುಗಡೆಯಿಲ್ಲ. ಈ ಪರಿಸ್ಥಿತಿಯ ಗಾಳಿಯು ಹಿಂದುಸ್ಥಾನದಲ್ಲಿ ಬಹಳ ದೂರದವರೆಗೆ ಬೀಸಿದೆ. ಹಿಂದೂ ದೇಶವು ಯುದ್ಧದ ದುಷ್ಪರಿಣಾಮಗಳನ್ನು ನಿವಾರಿಸುವಲ್ಲಿಯೂ, ಅಥವಾ ಯುದ್ಧದಿಂದ ಒದಗಬಹುದಾದ ಸತ್ಪರಿಣಾಮಗಳಿಂದ ಸಂಪೂರ್ಣವಾಗಿ ಲಾಭ ಪಡೆಯುವಲ್ಲಿಯೂ ಕೃತಕಾರಿಯಾಗಿರುವುದೆಂದು

ಹೇಳುವಹಾಗಿಲ್ಲ. ಪ್ರಕೃತ ಪರಿಸ್ಥಿತಿಯನ್ನನುಲಕ್ಷಿಸಿದರೆ, ಯುದ್ಧಾನಂತರದಲ್ಲಿ ಆಗುವ ಪರಿಸ್ಥಿತಿಯನ್ನು ಆಲೋಚಿಸಲೂ ಹೆದರಿಕೆಯಾಗಿದೆ. ಮುಂದಾಗುವ ಬದಲಾವಣೆಗಳನ್ನು ಈಗಿನಿಂದಲೇ ಊಹಿಸುವದು ಕಠಿಣ. ಆದರೆ ಇಂದಿನವರೆಗೆ ಆದ ನಮ್ಮ ಅನುಭವಗಳಿಂದ ಹಿಂದುಸ್ಥಾನಕ್ಕೆ ಮುಂಬರುವ ಕಾಲವು ಗಾಡಾಂಧಕಾರದಲ್ಲಿದೆಯೆನ್ನಬಹುದು. ವಿವಿಧ ಜನಾಂಗಗಳ ಆರ್ಥಿಕ ಸಂಬಂಧಗಳು ಹೊಸರೂಪ ಪಡೆಯಲಿವೆ. ಸಂಪ್ರದಾಯವಾಗಿ ಬಂದ ವ್ಯಾಪಾರವಿಂದು ನಮ್ಮದಾಗಿ ಉಳಿದಿಲ್ಲ. ಅದು ನಿಂತು ಹೋಗಿದೆ. ಇಲ್ಲವೆ ಬೇರೆಯವರ ಅಧೀನವಾಗಿದೆ. ನಮಗೆ ಹೊಸ ವ್ಯಾಪಾರಸ್ಥಳಗಳನ್ನು ಹುಡುಕಬೇಕಾಗಿದೆ. ಪರದೇಶಗಳೊಡನೆ ಹೊಸ ಆರ್ಥಿಕ ಸಂಬಂಧವನ್ನು ಬೆಳೆಯಿಸಬೇಕಾಗಿದೆ. ಇದರಿಂದ ಕಚ್ಚಾಮಾಲುಗಳನ್ನು ಸರಬರಾಯಿ ಮಾಡುತ್ತಿರುವ ಪರದೇಶದ ಪೇಟೆಗಳ ಮೇಲಿರುವ ನಮ್ಮಭಾರವು ಕೆಲಮಟ್ಟಿಗೆ ತಗ್ಗುವದು. ಈ ಕೆಲಸದಲ್ಲಿ ಹೊಸ ಪರಿಸ್ಥಿತಿಯನ್ನು ಸರಿಯಾಗಿ ಗಮನಿಸಬೇಕು. ನಮ್ಮ ಆರ್ಥಿಕ ಸ್ಥಿತಿಯನ್ನು ಮುಂಚಿತವಾಗಿಯೇ ಸುಧಾರಿಸಲಾಗದಿದ್ದರೆ ಮುಂದೆ ನಾವು ಕಾಲಕ್ಕೆ ಸರಿಯಾಗಿ ನಡೆಯಲಾರೆವು. ಆದರೆ ಈ ಸಂದರ್ಭದಲ್ಲಿ ಭವಿಷ್ಯದ ಏಳ್ಗೆಯ ವಿಷಯವಾಗಿ ನಿಷ್ಕಾರಣವಾದ ನಿರಾಶೆಗೆ ಅವಕಾಶವಿಲ್ಲ. ಸದ್ಯಃ ಬೇಕಾದದ್ದೆಂದರೆ ಪ್ರಭುತ್ವ ಮತ್ತು ಪ್ರಜೆಗಳ ಮಧ್ಯೆ ಸುವ್ಯವಸ್ಥಿತವಾದ ಪ್ರಯತ್ನ.

ಇವೆಲ್ಲವೂ, ಯುದ್ಧದ ತರುವಾಯ ಆಗುವ ಪರಿಣಾಮಗಳನ್ನು ಕುರಿತು ಪ್ರತಿಯೊಬ್ಬ ಕೈಗಾರಿಕನೂ ಆಲೋಚಿಸುವಂತೆ ಮಾಡಿವೆ. ಈ ಯುದ್ಧವು ತೂಕಡಿಸುತ್ತಿರುವ ಕೈಗಾರಿಕರಿಗೆ ಒಂದು ವಿಧದಿಂದ ಉತ್ತೇಜನ ಕೊಟ್ಟಂತಾಗಿದೆ.

ನಮಗೆ ಈಗ ಪೂರ್ಣ ಹಿಂದುಸ್ಥಾನದ ವಿಷಯ ಬೇಕಾಗಿಲ್ಲ. ನಮಗೆ ಹೆಚ್ಚಾದ ಯೋಚನೆಯು ನಮ್ಮ ಸಂಸ್ಥಾನದ, ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕ ಭಾಗದ ವಿಷಯವಾಗಿದೆ. ನಮ್ಮ ಕೈಗಾರಿಕೆಗಳ ಹಿಂದಿನ ಮತ್ತು ಇಂದಿನ ಪರಿಸ್ಥಿತಿಯನ್ನು ನೋಡಿ ಅವುಗಳನ್ನು ಕಳೆದುಂಬಿಸುವದಕ್ಕೂ, ಊರ್ಜಿತಾವಸ್ಥೆಗೆ ತರುವುದಕ್ಕೂ ತಕ್ಕ ಉಪಾಯಗಳನ್ನು ಕಲ್ಪಿಸಬೇಕು. ಹೈದರಾಬಾದು ಕೈಗಾರಿಕೆಗಳ ಪ್ರಯತ್ನದಲ್ಲಿ ಬಹಳ ಹಿಂದುಳಿದ ಸಂಸ್ಥಾನವೆಂದು ಇದಕ್ಕೆ ಹೆಸರು ಬಂದಿದೆ. ಆದರೂ ಇಲ್ಲಿರುವ ನೈಸರ್ಗಿಕ ಆಕರಗಳನ್ನು ಕ್ರಮಬದ್ಧವಾಗಿ ಬೈಲಿಗೆ ತರಬೇಕಾಗಿದೆ. ಈತರದ ನಿದಾನವಾದ ಬೆಳೆವಣಿಗೆಗೆ ಎರಡು ಕಾರಣಗಳು. ಮೊದಲನೆಯ ಕಾರಣವೆಂದರೆ ಸರಕುಗಳ ಆಮದುರಫ್ತಿಗಾಗಿ ಸಂಸ್ಥಾನಕ್ಕೆ ಒಂದಾದರೂ ಬಂದರ ವಿರದೆ ಇದ್ದುದು. ಚಿಕ್ಕ ಮತ್ತು ದೊಡ್ಡಪ್ರಮಾಣದ ಕೈಗಾರಿಕೆಗಳಲ್ಲಿ ತಮ್ಮ ಹಣವನ್ನು ವಿನಿಯೋಗಿಸುವದಕ್ಕೆ ಧನವಂತರು ಆಸಕ್ತಿಯನ್ನು ತೋರಿಸದೆ ಇರುವುದು ಎರಡನೆಯ ಕಾರಣ.

ಇದುವರೆಗೆ ನಡೆಯಿಸಿದ ಪ್ರಯತ್ನಗಳು ಅಸಮರ್ಪಕವು, ಅರೆ ಮನಸ್ಸಿನವು ಇಲ್ಲವೆ ಸ್ವಾರ್ಥಸಾಧಕವೂ ಆಗಿವೆ.

ಒಕ್ಕಲತನದ ತರುವಾಯ ಕೈಗಾರಿಕೆಯಲ್ಲಿಯೇ ಹೆಚ್ಚು ಜನರು ಸೇರಬಹುದು. ಕೈಗಾರಿಕೆಗಳ ಪುನರ್ವ್ಯವಸ್ಥೆ ಮಾಡುವಾಗ, ಆ ಕೈಗಾರಿಕೆಯು ಸ್ವತಂತ್ರವಾಗಿದ್ದುದು, ಹಾಗು ಅದು ಕೆಲಸಗಾರರಿಗಾಗಿಯೇ ಇದೆ ಯೆಂಬುದು ಕೆಲಸಗಾರರಿಗೆ ಮನವರಿಕೆಯಾಗುವಂತೆ ಮಾಡಬೇಕು; ಇದೇ ಅಗತ್ಯ. ಈಗಿನಕಾಲದ ಕೈಗಾರಿಕೆಯ ಪುನರ್ವ್ಯವಸ್ಥೆಯಲ್ಲಿ ಇದೂ ಒಂದು ಮುಖ್ಯಾಂಶವಾಗಿದೆ. ಇಲ್ಲವಾದರೆ ವೈಯಕ್ತಿಕವಾಗಿ ಲಾಭ ಪಡೆಯುವ ಬಂಡವಾಲಗಾರರ ಹಾಗು ಪ್ರಭುತ್ವದ ಪ್ರಯತ್ನಗಳು ವಿಷಾದಕರವಾದ ರೀತಿಯಲ್ಲಿ ವಿಫಲವಾಗುವವು.

ಜನಗಳು ಅನಕ್ಷರತೆ, ಅಜ್ಞಾನತೆಯಲ್ಲಿದ್ದರೂ ತಮ್ಮ ದುಃಖಕರವಾದ ಸ್ಥಿತಿಯನ್ನು ತಿಳಿದುಕೊಳ್ಳುವವರಾಗಿದ್ದಾರೆ; ತಮ್ಮ ದುಡಿತದ ವಿಷಯದಲ್ಲಿ ತಮ್ಮ ಜವಾಬುದಾರಿಯೂ, ಹಿಡಿತವೂ ಇರಬೇಕೆಂಬುದನ್ನು ಇವರು ಬಂಡವಾಲಗಾರರಿಗೆ ಮನವರಿಕೆ ಮಾಡಿಸುವ ಪಥದಲ್ಲಿದ್ದಾರೆ. ಈ ಧೋರಣವನ್ನು ಸನ್ನಿವೇಶ ಬಲದಿಂದ ಅದುಮಬಹುದು. ಆದರೆ ಈ ಹಣವನ್ನಂಕೆಯಲ್ಲಿಟ್ಟುಕೊಂಡವರು ತಾವೊಬ್ಬರೇ ಲಾಭಪಡೆಯುವ ಭಾಧ್ಯತೆಗಳನ್ನು ಮನಃಪೂರ್ವಕವಾಗಿಯೇ ಬಿಟ್ಟುಬಿಡುವ ಪ್ರಸಂಗ ಬಂದೀತು. ಹಿಂದುಸ್ತಾನದ ದೊಡ್ಡ ಕೈಗಾರಿಕೆಯ ಪಟ್ಟಣಗಳು ಇದಕ್ಕೆ ತಕ್ಕ ಉದಾಹರಣೆಗಳಾಗಿವೆ. ದುಡಿತದ ಚಳವಳಿಗೆ ಇಲ್ಲಿ ನಮ್ಮ ಸಂಬಂಧವಿಲ್ಲ. ಆದರೆ ಕೈಗಾರಿಕೆಗಳ ವಿಚಾರ ಮಾಡುವಾಗ ಅದರ ವಿಷಯ ಹೇಳುವದು ಅನಿವಾರ್ಯ. ಅಧಿಕಾರಿ (ಬಂಡವಾಲಗಾರರು) ಮತ್ತು ಕೂಲಿ, ಈ ಇಬ್ಬರನ್ನು ಸಮಾಧಾನಪಡಿಸುವ ಮಾರ್ಗವನ್ನು ಅನುಸರಿಸಬೇಕು. ಅದು 'ಎಲ್ಲರಿಗೋಸುಗ ಒಬ್ಬನು ಒಬ್ಬನಿಗೋಸುಗ ಎಲ್ಲರೂ' ಎಂಬುದು. ಇದೇ ತತ್ವದಮೇಲೆ ಆರಂಭಿಸಿದ ಅಥವಾ ವ್ಯವಸ್ಥಿತವಾದ ಕೈಗಾರಿಕೆಗಳು ಎಂದೂ ಭಂಗ ವಾಗಲಾರವು. ನಮ್ಮ ಸಂಸ್ಥಾನದ ಕೈಗಾರಿಕೆಗಳನ್ನು ಹೀಗೆ ವಿಂಗಡಿಸಬಹುದು.

೧. ಮನೆಯ ಕೈಗಾರಿಕೆಗಳು ಅಥವಾ ಹಳ್ಳಿಯ ಕೈಗಾರಿಕೆಗಳು.

೨. ದೊಡ್ಡ ಪ್ರಮಾಣದ ಕೈಗಾರಿಕೆಗಳು.

ಹಳ್ಳಿಯ ಕೈಗಾರಿಕೆಗೆ ಸಂಬಂಧಿಸಿದ ಅಧಿಕಾರ ಯುಕ್ತವಾದ ಆಧಾರಗಳಮೇರೆಗೆ ಮನೆಯ ಕೈಗಾರಿಕೆಗಳ ಲಕ್ಷಣವು ಇದು. ಕೆಲಸವಿಲ್ಲದವನಿಗೆ, ಮನೆಯಲ್ಲಿಯೇ ಒಂಟಿಗನಾಗಿ ಯಂತ್ರದ ಸಹಾಯವಿಲ್ಲದೆ ಕೆಲಸವನ್ನು ಕಲ್ಪಿಸಿಕೊಟ್ಟು ಅದಕ್ಕೆ ತಕ್ಕ ಪ್ರತಿ

ಫಲವನ್ನು ಆವಸಿಗೆ ಒದಗಿಸುವದೇ ಮನೆಯ ಕೈಗಾರಿಕೆ. ಇಂಥ ಕೈಗಾರಿಕೆಗಳ ಸಾಮಾನುಗಳು ಆಗಲೇ ಮತ್ತು ಅಲ್ಲಿಯೇ ಉಪಯೋಗಿಸಲ್ಪಡುವವು. ಆದಕಾರಣ ಕೆಳಗಿನ ಕೈಗಾರಿಕೆಗಳನ್ನು ಈ ಪಂಕ್ತಿಯಲ್ಲಿ ಸೇರಿಸುತ್ತೇವೆ.

೧. ಕೈ ನೂಲು, ನೇಯ್ಗೆ.
೨. ತೊಗಲಿನ ಕೈಗಾರಿಕೆ.
೩. ಕಟ್ಟಿಗೆಯ ಕೆಲಸ.
೪. ಮಾಳಿ ಉಪ್ಪಿನ ತಯಾರಿಕೆ.
೫. ಕುಂಬಾರಿಕೆ.
೬. ಬೆಲ್ಲದ ತಯಾರಿಕೆ.
೭. ಕಮ್ಮಾರಿಕೆ.
೮. ದಂತದ ಮತ್ತು ಕಲಾಬತ್ತಿನ ಕೆಲಸ.
೯. ಬಣ್ಣಗಾರಿಕೆ, ಅಚ್ಚಿನ ಕೆಲಸ.
೧೦. ಕೈಕಾಗದದ ತಯಾರಿಕೆ.
೧೧. ನಾರಿನ ಕೈಗಾರಿಕೆ.

ಇವು ಒಕ್ಕಲತನದ ತರುವಾಯ ಪ್ರಸಿದ್ಧವಾದ ಹಳ್ಳಿಯ ಕೈಗಾರಿಕೆಗಳು. ಒಕ್ಕಲತನದ ಅನಂತರ, ನೇಯ್ಗೆಯ ಕೆಲಸದಲ್ಲಿ ಹೆಚ್ಚು ಜನರು ತೊಡಗಿದ್ದಾರೆ. ಹಳ್ಳಿಯ ಕೈಗಾರಿಕೆಯ ಇತಿಹಾಸ ಇಲ್ಲಿ ಅಪ್ರಸ್ತುತ. ಒಂದು ಮಾತಿನಲ್ಲಿ ಹೇಳುವದಾದರೆ ಈ ಕೈಗಾರಿಕೆಗಳು ಸ್ವತಂತ್ರ ವೃತ್ತಿಗಳು. ಹಿಂದಿನ ಇತಿಹಾಸದಿಂದ ತಿಳಿದು ಬರುವದೇನಂದರೆ ಕಸಬುದಾರನಲ್ಲದವನಿಗೆ ಇವುಗಳಲ್ಲಿ ಎಡೆಯಿಲ್ಲ. ಒಕ್ಕಲಿಗನು ಎಂದಿಗೂ ಒಳ್ಳೇ ನೇಕಾರ ನಾಗಲಾರ. ಇದು ಎಲ್ಲ ಕೈಗಾರಿಕೆಗಳಿಗೆ ಅನ್ವಯಿಸುವದು. ಆದಕಾರಣ ಈಗ ನಾವು ಇವು ಹೇಗೆ ನಡೆಯುತ್ತವೆ ಯೆಂಬುದನ್ನು ನೋಡಬೇಕು. ಮತ್ತು ಇವುಗಳ ಪ್ರಗತಿಗೆ ಪ್ರಯತ್ನಮಾಡಬೇಕು.

ಕರ್ನಾಟಕವು ಮೇಲೆ ಹೇಳಿದ ಕೈಗಾರಿಕೆಗಳಲ್ಲಿ ಕೊನೆಯ ಎರಡನ್ನು ಬಿಟ್ಟು ಪ್ರಸಿದ್ಧವಾಗಿದೆ. ಮಹಬೂಬನಗರ ಕನ್ನಡಭಾಗ, ಕಲಬುರ್ಗಿಯ ಜಿಲ್ಲೆಯ ಸುರಪುರ, ರಾಯಚೂರ ಜಿಲ್ಲೆಯ ಕುಷ್ಟಗಿ, ಆಲಂಪೂರ, ಗದ್ವಾಲ್, ನೇಯಿಗೆಯ ಕೈಗಾರಿಕೆಗೆ ಬಹಳ ಪ್ರಸಿದ್ಧಿಪಡದಿವೆ. ಗದ್ವಾಲ್ ಖಾದಿ ವಸ್ತ್ರದ ಉತ್ಪಾದನೆಗೆ ಕೇಂದ್ರವಾಗಿದೆ. ಮಹಬೂಬನಗರದ ಕಂಬಳಿಗಳು, ಮಸ್ಕಿ, ಕಿನ್ಹಾಳ, ಹನಮಸಾಗರ, ಬಳಗಾನೂರ, ಸುರಪುರ, ಮೋಣೆಥಾಳ ಸೀರೆಗಳು, ಯರಗೇರಿಯ ದೋತರ, ಅಂಗಿ, ಬಟ್ಟೆಗಳು ಈಗಲೂ ಪ್ರಸಿದ್ಧವಾಗಿವೆ. ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ, ಬೀದರಿನ ಚರ್ಮದ ಕೆಲಸವು ಸುಪ್ರಸಿದ್ಧವಾಗಿದೆ. ಮತ್ತು ಯಂತ್ರದಿಂದ ತಯಾರಾದ ಸರಕುಗಳೊಂದಿಗೆ ಸ್ಪರ್ಧಿಸುತ್ತದೆ. ಗಂಗಾವತಿ ತಾಲೂಕಿನ ಕನಕಗಿರಿ ಮತ್ತು ಕಲಬುರ್ಗಿ, ಜಿಲ್ಲೆಯ ಸುರಪುರವು ಈಗಲೂ ಆಟದ ಸಾಮಾನಗಳ ತಯಾರಿಕೆಯ ಕೇಂದ್ರಗಳಾಗಿವೆ. ಈ ಕೈಗಾರಿಕೆಗಳು ಸುತ್ತಮುತ್ತಿನ ಜನರ ಅವಶ್ಯಕತೆಗಳನ್ನು

ಪೂರೈಸುವದಲ್ಲದೆ, ಈ ಕೈಗಾರಿಕೆಗಳಿಲ್ಲದ ಬೇರೆ ಸ್ಥಳಗಳಲ್ಲಿಯೂ ಇವುಗಳ ಮಾರಾಟ ಬೇಕಾದಷ್ಟು ಆಗುತ್ತದೆ. ಈಗಲೂ ಅಲ್ಲಿಯ ಬಹುಜನರು ಹೊರಗಿನ ಸಾಮಾನು ಗಳಿಗಿಂತಲೂ ಇವುಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಬೀದರಿನ ಪಾತ್ರೆ ಗಳು, ಗುಂಡಿಗಳು ಬಹಳ ಪ್ರಸಿದ್ಧವಾಗಿವೆ. ಈ ಕೈಗಾರಿಕೆಗಳಿಗೆ ತಕ್ಕ ಬೆಂಬಲವಿಲ್ಲ ದಿರುದವು ವಿಷಾದಕರ ಸಂಗತಿ. ಸ್ವಲ್ಪ ದಿನಗಳಲ್ಲಿಯೇ ಸಂಪೂರ್ಣವಾಗಿ ಅಳಿದು ಹೋಗುತ್ತವೋ ಎಂಬ ಭೀತಿ. ಕಾರಣಗಳು ಸ್ಪಷ್ಟ.

**ಪುವರುಜ್ಜೀವನದ ಉಪಾಯುಗಳು.**

ಮೇಲಿನ ಚರ್ಚೆಯಿಂದ ಹೈದರಾಬಾದ್ ಕರ್ನಾಟಕವು ಸ್ಥಳೀಯ ಜನರ ಆವಶ್ಯಕತೆಗಳನ್ನು ಪೂರೈಸುವದಕ್ಕೆ ಸಮರ್ಥವಾಗಿದೆಯೆಂದು ಸಿದ್ಧವಾಯಿತು. ಕಣ್ಮರೆ ಯಾದ ಕೈಗಾರಿಕೆಗಳು ಪುನಃ ಮೈದೋರುವಂಥ, ಕೈ ಬಿಡುತ್ತಿರುವ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವಂಥ ಕಾರ್ಯಕ್ರಮುವನ್ನು ಕೈಕೊಳ್ಳಬೇಕು.

ಎರಡು ವಿಧವಾದ—ಮುಖ್ಯವಾಗಿ ಸಹಕಾರಸಂಘದ ನಿಯಮಕ್ಕನುಸರಿಸಿ ದಂಥ—ಸಂಘಗಳನ್ನು ಏರ್ಪಡಿಸಬೇಕು. ಒಂದು, ಪದಾರ್ಥಗಳನ್ನು ತಯಾರಿಸುವ ವರಿಗಾಗಿ. ಇನ್ನೊಂದುವಿನಿಯೋಗಿ ಸುವವರಿಗಾಗಿ, ಎಲ್ಲೆಲ್ಲಿ ಈ ಕೈಗಾರಿಕೆ ಗಳಿವೆಯೋ ಅಥವಾ ಒಂದುಕಾಲದಲ್ಲಿ ಇದ್ದವೋ, ಅಂಥಲ್ಲಿಈ ತರದ ಸಂಘಗಳನ್ನು ಏರ್ಪಡಿಸಬೇಕು. ಈತರದಎರಡೂ ಸಂಘಗಳಲ್ಲಿಪರಸ್ಪರ ಸಹಕಾರವಿರಬೇಕು. ಇದರಿಂದಉತ್ಪಾದನೆಯೂ ಅದರವಿನಿಯೋಗವೂ,ಸಮರ್ಪಕವಾಗಬಲ್ಲದು. ಇದರಿಂದಈ ಒಂದೊಂದು ವಿಧದಸಂಘ ಗಳಿಗೆಒಂದುಸುಸಂಘಟಿತವಾದ ಕೇಂದ್ರ ಸಂಸ್ಥೆಯವ್ಯವಸ್ಥೆ ಯಾಗುವದು. ಈಸಂಸ್ಥೆಗಳು ಸಾಧ್ಯವಾದ ಉತ್ಪಾದನೆ ಮಾಡುವದರಲ್ಲಿಯೂ ಹಾಗು ವಿನಿಯೋಗ ಮಾಡುವಲ್ಲಿಯೂ ಶಾಸ್ತ್ರೀಯ ಮತ್ತು ಇತರ ಸಹಾಯವನ್ನು ಮಾಡಿಮಾರ್ಗದರ್ಶಿ ಯಾಗುವವು. ಈಎರಡು ಸಂಸ್ಥೆಗಳು ಕೈಗಾರಿಕೆಯ ಏಳ್ಗೆಗೆ ಸಂಬಂಧಿಸಿದ ಪುಸ್ತಕಗಳನ್ನು ಹೊರಡಿಸುವ ಮೂಲಕ ವಾಗಿ ಸಹಾಯ ಮಾಡುವವು. ಇದರಿಂದ ಪ್ರಚಾರವೂ ಪರಿಣಾಮಕರವಾಗಿಆಗುವದು. ಕೆಲಸವು ತಕ್ಕ ಉತ್ಸಾಹದಿಂದ ನಡೆದರೆ ಸರಕಾರವು ಸ್ವಭಾವಿಕವಾಗಿ ಸಹಾಯ ಮಾಡು ವದು. ಈಮಾತು ಕೆಲವರಿಗೆ ಹೊಸದೆಂದು ತೋರಬಹುದು. ಆದರೆ ಬೇರೆ ಬೇರೆ ಪ್ರಾಂತ ಗಲ್ಲಿನಡೆದಿರುವ ಕಾರ್ಯಗಳ ಅನುಭವದಮೇಲಿಂದ ಇದನ್ನು ಹೇಳಲಾಗಿದೆ. ಇಲ್ಲಿ ಮದ ರಾಸು ಪ್ರಾಂತೀಯ ನೇಕಾರರ ಸಂಘವನ್ನು ಉದಾಹರಣೆಗಾಗಿ ತೆಗೆದುಕೊಳ್ಳಬ ಹುದು. ಈ ಸಂಘವು ಎಲ್ಲ ಪ್ರಾಥಮಿಕ ಸುಸೈಟಿಗಳ ಒಂದು ಸಂಘಟಿತವಾದ ಸಂಘ ವಾಗಿದೆ. ಇದು ಪ್ರಾಂತೀಯ ಪ್ರಭುತ್ವದ ಆಶ್ರಯದಲ್ಲಿ ಸ್ವತಂತ್ರವಾದ ಮಂಡಲ ದೊಡನೆ ಕೆಲಸ ಮಾಡುತ್ತದೆ.

ಸುಮಾರು ೧೧ ರಿಂದ ೧೨ ಕೋಟಿ ರೂಪಾಯಿಯವರೆಗೆ ನಿತ್ಯ ಉಪಯೋಗದ ಸರಕುಗಳನ್ನು ನಾವು ಹೊರಗಿನಿಂದ ತರಿಸಿಕೊಳ್ಳುವೆವು. ಮತ್ತು ೭ ಕೊಟಿಯಷ್ಟು ಕಚ್ಚಾ ಸಾಮಾನುಗಳನ್ನು (ರಾ ಮೆಟೀರಿಯಲ್ಸ್) ಹೊರಗೆ ಕೊಡುವೆವು. ನಾವು ಮನಸ್ಸು ಮಾಡಿದರೆ 'ದೇಶೀವ ಕೈಗಾರಿಕೆಗಳಿಗೆ' ಸಹಾಯ ಮಾಡಿ ಈ ರೀತಿ ದುಡ್ಡು ಸಂಸ್ಥಾನದ ಹೊರಗೆ ಹೋಗುವದನ್ನು ತಡೆಗಟ್ಟಲು ಶಕ್ತರಾಗುವೆವು.

ನಮ್ಮಲ್ಲಿ ಪ್ರಮಾಣಿಕರು ಮತ್ತು ಉತ್ಸಾಹಿಗಳೂ ಆದ ಕೆಲಸಗಾರರ ನ್ಯೂನತೆ ಇದೆ. ಓದಿಕೊಂಡ ಪ್ರತಿಯೊಬ್ಬ ಯುವಕನೂ ತಿಂಗಳಿಗೆ ೩೦ ರೂಪಾಯಿಯ ಸಂಬಳದ ನೌಕರಿಯ ಬೆನ್ನು ಹತ್ತುವನು. ಅಥವಾ ತಾನು ತನ್ನ ದೇಶಕ್ಕೆ ಯಾವ ಹಿತವನ್ನು ಮಾಡಬಹು ದೆಂಬದನ್ನು ವಿಚಾರಿಸದೆ, ರಾಜಕೀಯ ಚಳವಳಿಯಲ್ಲಿ ಪ್ರವೇಶಿಸುವನು. ತಮ್ಮ ದೇಶ ಸೇವೆ ಮಾಡುವ ಯುವಕರು ತಮ್ಮ ಹಳ್ಳಿಗಳಿಗೆ ಹೋಗಬೇಕು. ಅಲ್ಲಿ ಯಾವ ಕೈಗಾರಿಕೆಗಳಿವೆಯೆಂದು ಕಂಡು ಅವುಗಳ ಊರ್ಜಿತ ಸ್ಥಿತಿಗಾಗಿ ಏನುಮಾಡಬೇಕೆಂಬುದನ್ನು ಗುರುತು ಹಚ್ಚಬೇಕು. ಪ್ರತಿಯೊಬ್ಬ ವಿದ್ಯಾವಂತನೂ ಈ ದಾರಿಯನ್ನೇ ಹಿಡಿಯಬೇಕೆಂಬುದು ನಮ್ಮ ಅರ್ಥವಲ್ಲ. ಇದೆಲ್ಲವೂ ಅವರವರ ಅಭಿರುಚಿಗಳನ್ನವಲಂಬಿಸಿದೆ. ಈ ಅಭಿರುಚಿಯನ್ನು ಹುಟ್ಟಿಸಬೇಕು. ಇದು ಯಾರು ಮಾಡಬೇಕಾದ ಕೆಲಸ ? ಸರಕಾರವು ಮೊದಲು ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸಬೇಕೆಂದು ಸುಲುಭವಾಗಿ ನಾವು ಹೇಳಬಹುದು. ಮತ್ತು ಸರಕಾರವು ಇಂಥ ಯುವಕರಿಗೆ ಪ್ರಾರಂಭವಸ್ಥೆಯಲ್ಲಿ ಸಹಾಯದ ಭರವಸೆ ಕೊಡಬೇಕು. ಎರಡನೇಯದಾಗಿ ಮೂರು ಭಾಷಾವಾರಿ ಪ್ರಾಂತಗಳ ಮುಖಂಡರು ಇಂಥ ಸ್ವಾರ್ಥವಿಲ್ಲದ ಕೆಲಸಗಾರರನ್ನು ತಯಾರಿಸಬೇಕು. ಮತ್ತು ಅವರನ್ನು ಈ ಕೆಲಸಗಳಲ್ಲಿ ತೊಡಗಿಸಬೇಕು. ಸರಕಾರವೂ ಜನತೆಯೂ ಪರಸ್ಪರ ಸಹಕಾರದಿಂದ ಈ ವಿಷಯದಲ್ಲಿ ಬೇಕಾದಷ್ಟು ಕೆಲಸ ಮಾಡಬಹುದು.

## ದೊಡ್ಡ ಪ್ರಮಾಣದ ಕೈಗಾರಕೆಗಳು.

ನಾವು ಆರಂಭದಲ್ಲಿ ಹೇಳಿರುವಂತೆ, ಕೆಲವೊಂದು ಮಹತ್ವದ ಮತ್ತು ಅವಶ್ಯಕವಾದ ಕೈಗಾರಿಕೆ ಗಳನ್ನು ಬೇಗನೇ ಆರಂಭಿಸುವ, ಅಥವಾ ಈಗಾಗಲೇ ಕೆಲಸ ಮಾಡುತ್ತಿದ್ದು ಆರಂಭದೆಶೆಯಲ್ಲಿರುವಂಥ ಹಾಗು ಬಂಡವಾಲದ ಅಭಾವದಿಂದ ಊರ್ಜಿತ ಸ್ಥಿತಿಯನ್ನು ಕಾಣದಿರುವಂಥ ಕೈಗಾರಿಕೆಗಳಿಗೆ ಸಹಾಯವನ್ನೀಯುವ ವಿಚಾರವನ್ನು ಮಾಡಬೇಕು. ಗೃಹ ಕೈಗಾರಿಕೆಗಳೊಡನೆ, ದೊಡ್ಡಪ್ರಮಾಣದ ಕೈಗಾರಿಕೆಗಳನ್ನೂ ಹೇಗೆ ಆರಂಭಿಸಬೇಕೆಂಬ ಪ್ರಶ್ನೆಯು ಉದ್ಭವಿಸಬಹುದು. ಇದು

ಸ್ಪಷ್ಟವಾಗಿದೆ. ಆಧುನಿಕ ಜೀವನದ ಕೆಲವು ಅವಶ್ಯಕತೆಗಳನ್ನು ಗೃಹ ಕೈಗಾರಿಕೆಗಳಿಂದ ಪೂರೈಸುವದು ಸಾಧ್ಯವಿಲ್ಲ. ಆದ್ದರಿಂದಲೇ ದೊಡ್ಡಪ್ರಮಾಣದ ಕೈಗಾರಿಕೆಗಳಿಗೆ ಸಾಕಷ್ಟು ಆಸ್ಪದವಿದೆ.

ಹೈದರಾಬಾದ್ ಕರ್ನಾಟಕವು, ನಮ್ಮ ದೇಶದಲ್ಲಿ ಹತ್ತಿಯ ಬೆಳೆಯ ದೃಷ್ಟಿಯಿಂದ ಎರಡನೆಯ ದರ್ಜೆಯಲ್ಲಿದೆ. ಖಾಸಗಿ ಜನರಿಂದ ಆರಂಭಿಸಿದ ಬಟ್ಟೆಯ ಗಿರಿಣಿಯೊಂದು ಈಗ ಅನೇಕ ವರ್ಷಗಳಿಂದ ಕಲಬುರ್ಗಿಯಲ್ಲಿ ಯಶಸ್ವಿಯಾಗಿ ನಡೆದಿದೆ. ಆದಾಗ್ಯೂ ಈ ಪ್ರಾಂತದಲ್ಲಿ ಬೆಳೆಯುವ ವಿಪುಲವಾದ ಹತ್ತಿಯು ಇನ್ನೂ ಪರಪ್ರಾಂತಗಳಿಗೆ ಹೊಗುತ್ತಲಿವೆ. ರಾಯಚೂರಿನಲ್ಲಿ ಇನ್ನೊಂದು ಬಟ್ಟೆಯ ಗಿರಿಣಿಯನ್ನು ಆರಂಭಿಸಿ ಹತ್ತಿಯು ಹೋಗುವದನ್ನು ಸಂಪೂರ್ಣವಾಗಿ ನಿಲ್ಲಿಸಬಹುದು. ರಾಯಚೂರು ವ್ಯಾಪಾರದ ದೃಷ್ಟಿಯಿಂದ ಸಂಸ್ಥಾನದಲ್ಲಿರುವ ಮುಖ್ಯ ನಗರಗಳಲ್ಲೊಂದಾಗಿದೆ. ಇಲ್ಲಿಯ ಹವಾಮಾನ ಹಾಗು ನೈಸರ್ಗಿಕಗಳು ಯಾವುದೇ ಗಿರಿಣಿಗಾಗಲೀ ಅನುಕೂಲವಾಗಿವೆ. ಈಗ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿರುವ ಬಂಗಾರದ ಕಣಿಯು ರಾಯಚೂರ ಜಿಲ್ಲೆಯ ಹಟ್ಟಿಯಲ್ಲಿದೆ. ಹೈದರಾಬಾದ್ ಕರ್ನಾಟಕವು ಬರಗಾಲಕ್ಕೂ ಹಾಗು ಮಳೆಯ ಅಭಾವಕ್ಕೂ ಹೆಸರಾಗಿದೆಯಾದರೂ, ಇದರಿಂದ ಒಕ್ಕಲತನಕ್ಕೆ ಧಕ್ಕೆತಗಲಿದೆಯೇ ವಿನಾ ಸಾಮಾನ್ಯವಾಗಿ ವ್ಯಾಪಾರವು ಮತ್ತು ಹಣದ ವ್ಯವಹಾರವು ಅಷ್ಟು ಅಸಮಾಧಾನಕರವಾಗಿಲ್ಲ. ಕೂಡಿಟ್ಟಲ್ಲಿಯೇ ಹಣವು ಕುಳಿತಿದೆ. ಈ ಹಣವನ್ನು ಕೈಗಾರಿಕೆಗಳಿಗಾಗಿ ವಿನಿಯೋಗಿಸಿದ್ದರೆ, ಕೆಳತರಗತಿಯ ಜನರು ಈಗಿನಷ್ಟು ದುಃಖಪಡುತ್ತಿರಲಿಲ್ಲ. ಇಂತಹ ಕೈಗಾರಿಕೆಗಳು, ನಿರುದ್ಯೋಗಿಗಳಾದ ಸುಸಿಕ್ಷಿತ ತರುಣರಿಗೂ ಮತ್ತು ಉಳುವದಕ್ಕೆ ಭೂಮಿಯಿಲ್ಲದ ಸಾಮಾನ್ಯಜನರಿಗೂ ಉದ್ಯೋಗವನ್ನು ಒದಗಿಸಿ, ಅವರನ್ನು ಸಂರಕ್ಷಿಸಬಲ್ಲವು. ಹೀಗೆ ಇಲ್ಲದುದರಿಂದ ಬಹಳಜನರು ಕೂಲಿಗಾಗಿ ದೊಡ್ಡ ಪಟ್ಟಣಗಳಿಗೆ ಹೋಗುತ್ತಿದ್ದಾರೆ.

ಹೈದರಾಬಾದ್ ಕರ್ನಾಟಕದಲ್ಲಿ (ಸಹಕಾರ ಬ್ಯಾಂಕುಗಳನ್ನು ಬಿಟ್ಟು) ಹನ್ನೆರಡಕ್ಕಿಂತ ಹೆಚ್ಚು ಖಾನಗಿ ಬ್ಯಾಂಕುಗಳಿವೆ. ಇವು ಸಾಲಕೊಡುವ ಕೆಲಸದ ಹೊರತು ಬೇರೆ ವ್ಯವಹಾರವನ್ನೇ ಮಾಡುತ್ತಿದ್ದಿಲ್ಲ. ಇದು ಅಜ್ಞಾನಿಗಳಾದ ಜನಸಾಮಾನ್ಯರ ಲೂಟಿಯಲ್ಲದೆ ಮತ್ತೇನಲ್ಲ. ಈ ಬ್ಯಾಂಕುಗಳು ಕೆಲವು ಕೈಗಾರಿಕೆಗಳನ್ನು ಆರಂಭಿಸಿ, ದೇಶಕ್ಕೆ ಉತ್ತಮ ರೀತಿಯಲ್ಲಿ ಸೇವೆಯನ್ನೇಕೆ ನೀಡಬಾರದು?

ಸರಕಾರವು ಕೆಲವೊಂದು ಕೈಗಾರಿಕೆಗಳಲ್ಲಿಯೇ ಹೇರಳವಾದ ಧನವನ್ನು ವಿನಿಯೋಗಿಸಿ, ಈ ಹಣವನ್ನು ಅನುಗಾಲವೂ ಪಾಲಿನ ರೂಪದಲ್ಲಿಯೇ ತೊಡಗಿಸಿಟ್ಟಿರುವ

ಧೋರಣೆಯು ಕೂಡ ಉಚಿತವಾಗಿಲ್ಲ. ಹೀಗಾಗಿ, ಧನದ ಅಭಾವದಿಂದ ಹೊಸ ಕೈಗಾರಿಗಗಳನ್ನು ಆರಂಭಿಸುವವರನ್ನು ತಡೆಗಟ್ಟಿದಂತಾಗುತ್ತದೆ. ಸರಕಾರವು ಆರಂಭದಲ್ಲಿ ಬಂಡವಾಲಗಾರರಿಗೆ ಭರವಸೆ ಕೊಡುವದಕ್ಕಾಗಿ, ಆಯಾ ಕೈಗಾರಿಕೆಗಳಲ್ಲಿ ಅಗತ್ಯವಿದ್ದಷ್ಟು ಹಣವನ್ನು ಕೆಲವು ದಿವಸಗಳ ಮಟ್ಟಿಗೆ ಹಾಕಬೇಕು. ಈ ಕೈಗಾರಿಕೆಗಳು ಸಾಕಷ್ಟು ಬೆಳಿದನಂತರ, ಸರಕಾರದ ಪಾಲಿನ ಹಣವನ್ನು ಜನತೆಗೆ ಕೊಂಡುಕೊಳ್ಳಲು ಬಿಟ್ಟುಕೊಡಬೇಕು. ಹೀಗೆ ಜನತೆಯಿಂದ ಬರುವ ಹಣವನ್ನು ಈ ವಿಧದ ಕೈಗಾರಿಕೆಯಲ್ಲಿ ವಿನಿಯೋಗಿಸಿ, ಸರಕಾರವು ತನ್ನ ಹಣವನ್ನು ತೆಗೆದುಕೊಂಡು ಪುನಃ ಹೊಸ ಕೈಗಾರಿಕೆಯನ್ನು ಆರಂಭಿಸಬೇಕು. ಇದರಿಂದ ಆಯಾ ಸಂಸ್ಥೆಗಳ ಕಾರ್ಯಗಳ ದೀರ್ಘವಾದ ಮೇಲ್ವಿಚಾರಣೆಯ ಭಾರವು ಸರಕಾರಕ್ಕೆ ತಪ್ಪುವದಲ್ಲದೆ, ಇಂಥ ಲಾಭದಾಯಕ ಪಾಲುಗಳನ್ನು ಕೊಳ್ಳಲು ಜನತೆಗೆ ಆಸ್ಪದವನ್ನು ದೊರಕಿಸಿಕೊಟ್ಟಂತಾಗುವದು. ಪೇಟಿಯಲ್ಲಿ ಈ ಪಾಲುಗಳು ದೊರೆಯದಂತಾದಾಗ ಸರಕಾರವು ಪೇಟಯ ದರಕ್ಕೆ ತಕ್ಕಂತೆ ಬೆಲೆಯನ್ನು ಏರಿಸಿ ಪಾಲುಗಳನ್ನು ಮಾರಬಹುದು. ಹೀಗೆ ಸರಕಾರದವರಲ್ಲಿಯೂ ಪ್ರಜೆಗಳಲ್ಲಿಯೂ ಸಹಕಾರತಾ ಬುದ್ಧಿಯಿಂದ ಕಾರ್ಯಗಳು ನಡೆಯುತ್ತಿದ್ದರೆ, ದೇಶದ ಅರ್ಥಿಕ ಪರಿಸ್ಥಿತಿಯ ಸುಧಾರಣೆಗೊಂಡು, ಕೈಗಾರಿಕೆಯ ಪುರೋಭಿವೃದ್ಧಿ ಹೊಂದುವದರಲ್ಲಿ ಯಾವ ಸಂದೇಹವೂ ಇಲ್ಲ.

# ನಮ್ಮ ಸಾರ್ವಜನಿಕ ಚಟುವಟಿಕೆಗಳು.

ಶ್ರೀ. ಕಂದಿ ಶ್ರೀನಿವಾಸರಾಯರು, ದೇಶಮುಖ.
ಹೈಕೋರ್ಟ ವಕೀಲ (ಹೈದರಾಬಾದು)

ಕೋಡಂಗಲ್ ತಾಲೂಕಿನ ಹುಸನಾಬಾದ್ ಗ್ರಾಮದ ಜೊಯಿಸರ ಮನೆತನಕ್ಕೆ ಸೇರಿದವರು. ಆದರೆ ಮೇದಕ್ ಜಿಲ್ಲೆಯ ಕಂದಿದೇಶಮುಖರ ಮನೆತನಕ್ಕೆ ದತ್ತ ಬಂದಿದ್ದಾರೆ. ಇವರ ಶಿಕ್ಷಣ ಹೈದರಾಬಾದಿನಲ್ಲಿಯೇ ಆಯಿತು. ನಿಜಾಮ ಕಾಲೇಜಿನ ಇಂಟರ್ ಮೀಡಿಯಟ್ ಪಾಸಾಗಿ ೧೩೪೫ ನೆಯ ಫಸಲಿಯಲ್ಲಿ ಹೈಕೋರ್ಟ ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೩೪೬ ರಿಂದ ವಕೀಲಿಯನ್ನು ಮಾಡುತ್ತಲಿದ್ದಾರೆ.

ಶ್ರೀ. ಕಂದಿಯವರು ಹುಟ್ಟಿದ ತಾಲೂಕಿನಲ್ಲಿ ತೆಲಗು ಹೆಚ್ಚಿದ್ದರೂ ಮಾಧ್ವರಾದುದರಿಂದ, ಮನೆಯಲ್ಲಿ ಕನ್ನಡದ ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದಾರೆ. ಆಂಧ್ರ ದೇಶದಲ್ಲಿ ಬಂದು ನೆಲಿಸಿದುದರಿಂದ ತೆಲಗನ್ನು ವ್ಯಾಯುಣಿಸಿಕೊಂಡಿದ್ದಾರೆ. ಹೀಗೆ ರಾಯರು ಆಂಧ್ರ ಕರ್ನಾಟಕ ಭಾಷೆ ಹಾಗು ಸಂಸ್ಕೃತಿಗಳನ್ನು ಸಮನ್ವಯಮಾಡಿಕೊಂಡಿದ್ದಾರೆ.

ಹೈದರಾಬಾದಿನ ಕರ್ನಾಟಕ ತರುಣರ ತಂಡಕ್ಕೆ ಉಪಾಧ್ಯಕ್ಷರಾಗಿದ್ದು ಅದಕ್ಕೆ ಬಹಳ ಬೆಂಬಲವನ್ನಿತ್ತು ಕಾರ್ಯಮಾಡಿಸಿದರು. ಮುಂದೆ ಕರ್ನಾಟಕ ಸಾಹಿತ್ಯಮಂದಿರಕ್ಕೆ ಕಾರ್ಯದರ್ಶಿಗಳಾಗಿದ್ದು ಅದರ ಆರಂಭ ದೆಶೆಯಲ್ಲಿ ರಾಯರು ತಮ್ಮ ಸರಳತನದಿಂದಲೂ, ಶ್ರದ್ಧೆಯಿಂದಲೂ ಬಹಳ ದುಡಿದು ಅದಕ್ಕೊಂದು ಸ್ಥಿರತೆಯನ್ನು ತಂದುಕೊಟ್ಟರು. ಅವರ ಆ ದುಡಿತದ ಫಲದಿಂದಲೇ ಇಂದು ಸಾಹಿತ್ಯಮಂದಿರವು ಯಶಸ್ವಿಯಾಗಿ ನಡೆದಿದೆ. ಈಗಲೂ ರಾಯರು ಮಂದಿರದ ಕಾ. ನಿ. ಸಭೆಯ ಸದಸ್ಯರು. ನಿಜಾಮ ಕರ್ನಾಟಕ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು.

---

ಜನತಾ ಸೇವೆಯೇ ಜನಾರ್ಧನ ಸೇವೆ ಯೆಂಬ ಅಭಿಪ್ರಾಯವನ್ನೇ ನಿಮ್ಮಲ್ಲಿಯ ಎಲ್ಲರಿಗಿಂತಲೂ ದೊಡ್ಡ ಮನುಷ್ಯನು ನಿಮ್ಮ ಸೇವಕರಾಗಿರಬೇಕು'. ಎಂದು ಏಸುಕ್ರೀಸ್ತರು ಸಮರ್ಥಿಸಿದ್ದಾರೆ.

ಮಾನವ ಸಮಾಜ ರಚನೆ, ಕಾಲಮಾನ ಪರಿಸ್ಥಿತಿ ಮುಂತಾದವುಗಳಿ ಗನುಸರಿಸಿ ಸಮಾಜದಲ್ಲುಂಟಾಗುವ ಏರಿಳಿತಗಳನ್ನು, ವಿಷಮತೆಯನ್ನು ಹೋಗಲಾಡಿಸಿ, ಅದನ್ನು

ಸಾಮುದಾಯಿಕಪ್ರಗತಿಗಾಗಿ ಸರಿಪಡಿಸುವದೇ ಸಾರ್ವಜನಿಕ ಕಾರ್ಯವೆಂದು ಸ್ಥೂಲವಾಗಿ ಹೇಳಬಹುದು. ಈ ದೃಷ್ಟಿಯಿಂದ ಇಂದಿನ ಸಮಾಜಕ್ಕೆ ಈ ಕೆಳಗಿನ ವಿಷಯಗಳಲ್ಲಿ ಸುಧಾರಣೆಯ ಅಗತ್ಯವಿದೆ ಯೆಂದು ಧಾರಾಳವಾಗಿ ಹೇಳಬಹುದು. ಈ ವಿಷಯಗಳನ್ನು ಬೇರೆಬೇರೆಯಾಗಲಿ, ಕೆಲವನ್ನಾಗಲಿ, ತಮ್ಮ ಕಾರ್ಯರಂಗವನ್ನಾಗಿ ಮಾಡಿಕೊಂಡು ಅವುಗಳ ಸಾಮುದಾಯಿಕ ಪ್ರಗತಿಗಾಗಿ ಪ್ರಯತ್ನಿಸುವುದಾವರೆ ಅವೆಲ್ಲವನ್ನೂ ಸಾರ್ವಜನಿಕ ಚಟುವಟಿಕೆಗಳೆಂದು ಹೇಳಬಹುದು.

ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ರಂಗಗಳಲ್ಲಿ ಅವಶ್ಯಕವಾದ ಮಾರ್ಪಾಟುಗಳಿಗಾಗಿ ತಕ್ಕ ವಾತಾವರಣವನ್ನು ಹುಟ್ಟಿಸಿ ಜೀವನದಲ್ಲಿ ಸಾಮೂಹಿಕವಾಗಿ ಶಾಂತಿಮಯವಾದ ಸಾಮರಸ್ಯವನ್ನುಂಟುಮಾಡಬೇಕಾಗಿದೆ.

ಮಾನವನು ಹುಟ್ಟಾ ಪರೋಪಕಾರಿಯಾಗಿರುವದರಿಂದ ಸಮಾಜ ಸೇವೆಗಾಗಿ ವೈಯ್ಯಕ್ತಿಕವಾಗಿ ತನ್ನ ಸುತ್ತಲಿರುವ ಸನ್ನಿವೇಶಕ್ಕನುಸರಿಸಿ ತನ್ನದೇ ಆದ ದಾರಿಯನ್ನು ಹುಡುಕುವದು ಸಹಜ. ಆದರೆ ಒಂದು ಸಮಾಜ, ಒಂದು ಜನಾಂಗ, ಒಂದುರಾಷ್ಟ್ರ, ಇವುಗಳ ಸಾಮೂಹಿಕ ಚಟುವಟಿಕೆಯಲ್ಲಿ ತಾನೂ ಬೆರೆತು ಅದರೊಡನೆ ಸಹಕರಿಸಿದರೆ ಒಳಿತಾಗುವದು.

ಇಂತಹ ಪ್ರತಿಯೊಬ್ಬ ಕೆಲಸಗಾರನಿಗೆ ಸಮಾಜ ಸೇವೆಯ ಉತ್ಕಟೇಚ್ಛೆ ಇರಬಹುದು; ಆದರೆ ತಾನು ಆರಿಸಿಕೊಂಡ ಕ್ಷೇತ್ರದಲ್ಲಿ ಒಳ್ಳೆಯ ವಿಷಯಜ್ಞಾನವಿರದೆ ಯಾವ ಕೆಲಸವೂ ಸಾಧ್ಯವಾಗುವದಿಲ್ಲ. ತಾನಾಯ್ದ ವಿಷಯದ ಬಗ್ಗೆ, ಜಗತ್ತಿನ ಪಂಡಿತರ ಅಭಿಪ್ರಾಯಗಳನ್ನು ತಿಳಿದು ಆ ವಿಷಯದಲ್ಲಿ ಜಗತ್ತಿನಲ್ಲಿರುವ ಪ್ರಗತಿಪರವಾದ ರಾಷ್ಟ್ರಗಳಲ್ಲಿ ನಡೆದಿರುವದನ್ನು ಮನನಮಾಡಿಕೊಂಡು, ತಾನಿರುವ ಸನ್ನಿವೇಶ, ಸಾಮಾಜ, ಪರಿಸ್ಥಿತಿಗೆ ಯಾವದು ಒಳಿತೆಂಬುದನ್ನು ನಿರ್ಣಯಿಸ ಬೇಕಾಗುವದು. ಇದರ ಜೊತೆಗೆ ದೇಶಾಟನೆಮಾಡಿ ಪ್ರತ್ಯಕ್ಷವಾಗಿ ಪರಿಸ್ಥಿತಿಗಳನ್ನು ತಿಳಿದುಕೊಳ್ಳುವದು ಕೂಡ ಆವಶ್ಯಕವಾದದ್ದು. ಇಂತಹ ಪೂರ್ವಸಿದ್ಧತೆಯುಳ್ಳುವರೂ, ಮೇಲೆ ವಿವರಿಸಿದ ಮಾನಸಿಕ ಹಾಗು ಬೌದ್ಧಿಕ ಗುಣವುಳ್ಳ ಕೆಲಸಗಾರರೇ ದೇಶಕ್ಕೆ ಸರಿಯಾದ ಸೇವೆಯನ್ನು ಸಲ್ಲಿಸಬಲ್ಲರು. ನಾಯಕರಲ್ಲಂತೂ ಈ ಲಕ್ಷಣಗಳು ಇದ್ದೇ ತೀರಬೇಕು.

ಕೆಲಸಗಾರರು ತಾವು ಕೈಕೊಂಡಿರುವ ಕೆಲಸದ ಮಹತ್ವಕ್ಕನುಸರಿಸಿ ಅವರು ಅದಕ್ಕಾಗಿ ತಮ್ಮ ವೇಳೆಯನ್ನು ಸಮರ್ಪಿಸಬೇಕು. ತಮ್ಮ ಇಡೀ ಜೀವನವನ್ನೇ ಸಮರ್ಪಿಸಿದ ನಾಯಕರಮೇಲೆಯೇ ದೇಶದ ಉದ್ಧಾರ ಅವಲಂಬಿಸಿರುತ್ತದೆ. ಇಂತಹ

ನಾಯಕರ ಸಹಾಯಕ್ಕಾಗಿ, ಸಂಪೂರ್ಣವೇಳೆಯನ್ನು ಕೊಡಬಲ್ಲ ಕೆಲವು ಕಾರ್ಯಕರ್ತರ ಆವಶ್ಯಕತೆಯಂತೂ ಇದ್ದೇ ಇರುತ್ತದೆ. ಇವರಲ್ಲದೆ, ಆಗಾಗ್ಗೆ ಪ್ರಾಸಂಗಿಕವಾಗಿ ಸಮಯಕೊಟ್ಟು ಕೆಲಸಮಾಡುವವರು ಹೆಚ್ಚಾಗಿಬೇಕು.

ಇಂತಹ ಕೆಲಸಗಾರರಲ್ಲಿರಬೇಕಾದ ಯೋಗ್ಯತೆ, ಶ್ರದ್ಧೆ (ಸಿನ್ಸರಟಿ ಆಫ್ ಪರಪಸ್) ಯ ಜೊತೆಗೆ ಅವರಲ್ಲಿ ಸಹನಶೀಲತೆ, ಧೈರ್ಯ ಸಾಹಸಗಳು, ಕಾರ್ಯದ ಹಿಡಿತ ಇರಬೇಕಾದದ್ದು ಅಗತ್ಯ.

ಸಾರ್ವಜನಿಕ ಕೆಲಸದ ಸ್ವರೂಪ, ಉದ್ದೇಶ, ಹಾಗು ಕೆಲಸಗಾರರ ಯೋಗ್ಯತೆ ಮುಂತಾದವುಗಳನ್ನು ವಿವೇಚಿಸಿದ ತರುವಾಯ, ಹೈದರಾಬಾದ್ ಕರ್ನಾಟಕದ ಪರಿಸ್ಥಿತಿಗನುಸರಿಸಿ ಸಾರ್ವಜನಿಕ ಚಟುವಟಿಕೆಗಳನ್ನು ರೂಪಗೊಳಿಸುವಾಗ ನಮ್ಮ ಮೇಲಿರುವ ತ್ರಿವಿಧವಾದ ಹೊಣೆಗಾರಿಕೆಯನ್ನರಿಯಬೇಕು. ಹಿಂದಕ್ಕೆ ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿದ ಕನ್ನಡನಾಡು ನಾಲ್ಕುಭಾಗವಾಗಿ ಒಡೆದುದರಿಂದ ನಮ್ಮ ಈ ಭಾಗವನ್ನು ಆಳುತ್ತಿರುವ ಮಹಾಪ್ರಭುಗಳಲ್ಲಿ ನಮಗಿರುವ ಅಚಲವಾದ ಪ್ರಭುಪರಾಯಣತೆಯನ್ನು ಕಾಯ್ದು ಕೊಳ್ಳಬೇಕು. ಹೈದರಾಬಾದ್ ಸಂಸ್ಥಾನದ ಇತರ ಭಾಗಗಳ ಜನರೊಡನೆ ಸಹಕರಿಸಿ ವಿರಾಟ್ ಹೈದರಾಬಾದಿನ ಏಕಮೇವದ್ವೀಯವಾದ ಸಾಮೂಹಿಕ ಪ್ರಗತಿಯನ್ನನುಲಕ್ಷಿಸಬೇಕು. ನಮ್ಮ ಭಾಷೆ ಹಾಗು ಇತಿಹಾಸಕ್ಕನುಸರಿಸಿ ಅಖಿಲ ಕನ್ನಡ ನಾಡಿನ ಬಾಂಧವರೊಡನೆ ನಮ್ಮ ಸಾಂಸ್ಕೃತಿಕ ಏಕರೂಪತೆಯನ್ನು ಕಾಯ್ದುಕೊಳ್ಳಬೇಕು. ಈ ಮಹತ್ತರವಾದ ಹೊಣೆಗಾರಿಕೆಗಳಿಗನುಸರಿಸಿ ಕನ್ನಡಿಗರ ಏಳ್ಗೆಗಾಗಿ ನಮ್ಮಲ್ಲಿ ನಡೆದಿರುವ ಚಟುವಟಿಕೆಗಳನ್ನು ವಿಸ್ತಾರವಾಗಿ ವಿವರಿಸಬೇಕಾದರೆ ಪ್ರತ್ಯೇಕಗ್ರಂಥವೇ ಬೇಕಾದೀತು. ಆದ್ದರಿಂದ ಸ್ಥೂಲವಾದ ಒಂದು ರೂಪರೇಖೆಯನ್ನು ಸಂಕ್ಷೇಪವಾಗಿ ಇಲ್ಲಿ ಕೊಡಲಾಗುವದು.

ನಮ್ಮಲ್ಲಿ ಸಾರ್ವಜನಿಕ ಚಟುವಟಿಕೆಗಳು ಆರಂಭವಾಗುವ ಮುಂಚೆ ಇತರ ಕಡೆಗೆ ನಡೆದಿರುವ ಚಟುವಟಿಕೆಗಳನ್ನೂ ಗಮನಿಸೋಣ.

ಹತ್ತೊಂಬತ್ತನೆಯ ಶತಮಾನದ ಕಡೆಯ ಭಾಗವು ಹಿಂದುಸ್ತಾನದಲ್ಲಿ ಈಗಿನ ಸಾರ್ವಜನಿಕ ಚಟುವಟಿಕೆಯ ರೂಪಕ್ಕೆ ಉದಯಕಾಲವೆನ್ನಬಹುದು. ಸಾರ್ವಜನಿಕ ಜೀವನವು ಕ್ರಮೇಣ ವಿಕಾಸ ಹೊಂದಿ ವಿವಿಧ ರಂಗಗಳಲ್ಲಿ ನಾನಾವಿಧವಾದ ರೂಪಗಳಲ್ಲಿ ಹೊರಹೊಮ್ಮಿತು. ಸಾಮಾನ್ಯವಾಗಿ ಎಲ್ಲಕಡೆಗೂ ಜನಜಾಗ್ರತಿಯಾಯಿತು. ಅದರಂತೆ ನಮ್ಮ ಸಂಸ್ಥಾನದವರಿಗೂ ಹೊಸ ಬೆಳಕು ಕಣ್ಣಿಗೆ ಬಿತ್ತು. ಆದ್ದರಿಂದಲೇ ನಮ್ಮ ಸಂಸ್ಥಾನದಲ್ಲಿಯೂ ರಾಷ್ಟ್ರೀಯ ಮಹಾಸಭೆಯ ಶಾಖೆ, ಆರ್ಯ ಸಮಾಜ,

ಹಿಂದೂ ಪ್ರಜಾಮಂಡಳ, ಅಂಜುಮನ್ ಇತ್ತಿಹಾದುಲ್ಮುಸಲ್ಮೀನ್, ವೀರಶೈವ ಪರಿಷತ್ತು, ಮುದಿರಾಜ ಪರಿಷತ್ತು, ಆಂಧ್ರ, ಮಹಾರಾಷ್ಟ್ರಪರಿಷತ್ತುಗಳು, ಪ್ರಜಾಶಿಕ್ಷಣ ಪರಿಷತ್ತು ಮುಂತಾದವುಗಳುಹುಟ್ಟಿ ತಮ್ಮದೇಆದ ಒಂದು ಧ್ಯೇಯವನ್ನಿಟ್ಟುಕೊಂಡು ಸಂಸ್ಥಾನದಲ್ಲೆಲ್ಲ ತಮ್ಮ ಯೋಗ್ಯತೆಗನುಸರಿಸಿ ಕೆಲಸಮಾಡುತ್ತಬಂದಿವೆ. ನೆರೆಯ ಕನ್ನಡಪ್ರಾಂತ ಗಳಲ್ಲಿಯೂ ಶೈಕ್ಷಣಿಕ, ಸಾಹಿತ್ಯ, ಮುಂತಾದ - ಚಟುವಟಿಕೆಗಳು ಆಗಲೇಆರಂಭವಾಗಿದ್ದವು. ನಮ್ಮಲ್ಲಿಯು ಜನರೂ ಹೊಸ ಶಿಕ್ಷಣದ ಬೆಳಕಿಗೆ ಸಾವಕಾಶವಾಗಿ ಬರತೊಡಗಿನರು. ಇಲ್ಲಿಯೂ ಸ್ವಭಾಷೆ, ಸ್ವಸಂಸ್ಕೃತಿಯ ಪುನರುಜ್ಜೀವನದ ಹೆಬ್ಬಯಕೆಯು ತಲೆದೋರಹತ್ತಿತು. ರಾಯಚೂರು, ಕುಕುನೂರು, ಯಾದಗಿರಿ, ಕಲಬುರ್ಗಿ, ಸೇಡಂ, ಚಿಂಚೋಳಿ, ಮುಂತಾದ ಸ್ಥಳಗಳಲ್ಲಿ ಸಾರ್ವಜಸಿಕ ಶಾಲೆಗಳು ಏರ್ಪಟ್ಟು ಶಿಕ್ಷಣರಂಗದಲ್ಲಿ ನಾಕಷ್ಟು ಸೇವೆಯನ್ನು ಸಲ್ಲಿಸತೊಡಗಿದವು. ಅನೇಕ ಸುಶಿಕ್ಷಿತರು ತಮ್ಮ ಪ್ರಯತ್ನದಿಂದ ವಾಚನಾಲಯ, ಗ್ರಂಥಾಲಯ, ಕರ್ನಾಟಕ ಸಂಘಗಳನ್ನು ಸ್ಥಾಪಿಸಿ, ಗಣೇಶಚೌತಿ ನಾಡಹಬ್ಬ ಮುಂತಾದ ಉತ್ಸವಗಳನ್ನು ನೆರವೇರಿಸಿ ಜನಜಾಗ್ರತೆಗೆ ದಾರಿಮಾಡಿಕೊಟ್ಟರು. ಆಧುನಿಕ ಪದ್ಧತಿಗನುಸರಿಸಿ ಸಾಮೂಹಿಕ ಪ್ರಯತ್ನದಿಂದ ಬ್ಯಾಂಕುಗಳನ್ನು ಗಿರಣಿಗಳನ್ನು ಸ್ಥಾಪಿಸಿದರು.

ರಾಯಚೂರು ವ್ಯಾಪಾರದ ಕೇಂದ್ರವಾಗಿರುವಂತೆಯೇ ಚಟುವಟಿಕೆಗಳ ಕೇಂದ್ರವೂ ಆಗಿದೆ. ಅನೇಕ ವಾಚನಾಲಯ, ಗ್ರಂಥಾಲಯಗಳುಇವೆ. ನಾಡಹಬ್ಬವೂ ಜರುಗುತ್ತದೆ. ಕನ್ನಡಭಾಷೆ, ಸಂಸ್ಕೃತಿಯ ಏಳ್ಗೆಗಾಗಿ ನಡೆದಿರುವ ಚಟುವಟಿಕೆಗಳನ್ನು ನಾವಿಲ್ಲಿ ಕಾಣುತ್ತೇವೆ. ರಾಯಚೂರು ಜಿಲ್ಲೆಯ ಸುಮಾರಾಗಿ ಎಲ್ಲ ತಾಲೂಕುಗಳಲ್ಲಿಯೂ ವಾಚನಾಲಯಗಳಿವೆ. ರಾಯಚೂರಲ್ಲಿರುವ ಶಾರದಾ ಕನ್ಯಾಶಾಲೆ, ಹಮದರ್ದ ಶಾಲೆಗಳೂ, ಶೈಕ್ಷಣಿಕ ರಂಗದಲ್ಲಿ ತಕ್ಕಷ್ಟು ಸೇವೆಯನ್ನು ಸಲ್ಲಿಸುತ್ತಲಿವೆ. ಕೊಪ್ಪಳವು ಕೂಡ ವ್ಯಾಪಾರದ ಕೇಂದ್ರ. ಮದರಾಸು ಮುಂಬಯಿ ಪ್ರಾಂತಗಳು ತೀರ ಪತ್ತಿರದಲ್ಲಿವೆ. ಇಲ್ಲಿ ಕನ್ನಡ ಚಟುವಟಿಕೆಗಳು ಬೇಕಾದಷ್ಟು ನಡೆಯುತ್ತವೆ. ಕರ್ನಾಟಕ ಸಂಘಗಳಿವೆ. ಜಿಲ್ಲೆಯ ಅನೇಕ ಕಸ್ಬಾ ಹಾಗು ಗ್ರಾಮಗಳಲ್ಲಿಯೂ ವಾಚನಾಲಯಗಳಿವೆ. ಕುಕನೂರು ವಿದ್ಯಾನಂದ ಗುರುಕುಲವು ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತಲಿದೆ.

ಕಲಬುರ್ಗಿ ಜಿಲ್ಲೆಯ ತಾಲೂಕುಗಳಲ್ಲಿಯೂ ಇತ್ತೀಚೆಗೆ ಸರಕಾರಿ ಶಾಲೆಗಳಲ್ಲಿ ಕನ್ನಡಕ್ಕೂ ಸ್ಥಾನ ಕೊಟ್ಟಿರುವದರಿಂದ ಜನರಲ್ಲಿ ಕನ್ನಡದ ಬಗ್ಗೆ ಆದರಹುಟ್ಟಿದೆ. ಕಲಬುರ್ಗಿಯಲ್ಲಿ ಕರ್ನಾಟಕ ಸಂಘ, ಸಾಹಿತ್ಯ ಸಂಘಗಳು ಏರ್ಪಟ್ಟಿವೆ. ಸಾರ್ವಜನಿಕ ಶಾಲೆಗಳಲ್ಲಿಯೂ, ಕನ್ನಡ ಅಭ್ಯಾಸದ ಏರ್ಪಾಡಾಗಿದೆ. ಕವಿಗಳು, ಲೇಖಕರು ಕಲಾವಿದರು ಉದಯಿಸಿದ್ದಾರೆ.

ಸುರಪುರದಲ್ಲಿ ಕರ್ನಾಟಕ ಸಂಘವು ಕೆಲಸಮಾಡುತ್ತಿದೆ. ಗ್ರಂಥಾಲಯ, ವಾಚನಾಲಯುಗಳನ್ನು ನಡೆಯಿಸುತ್ತಲಿದೆ. ನಾಡಹಬ್ಬ ನಡೆಯುತ್ತದೆ.

ಚಿಂಚೋಳಿ, ಸುಲಹೆಪೇಟೆ, ಚಿಟಗೊಪ್ಪ, ತಾಂಡೂರ ಮುಂತಾದ ಸ್ಥಳಗ ಕರ್ನಾಟಕ ಸಂಘ ವಾಚನಾಲಯುಗಳಿವೆ. ನಾ ಡ ಹ ಬ್ಬ ಮುಂತಾದ ಉತ್ಸವಗಳೂ ಜರುಗುತ್ತವೆ.

ಇತ್ತೀಚಿಗೆ ಬೀದರಿನಲ್ಲಿ ಸಾರ್ವಜನಿಕ ಸಭೆ, ಉತ್ಸವಗಳಲ್ಲಿ ಕನ್ನಡ ಭಾಷಣ ಗಳೂ ಆಗುತ್ತಲಿವೆ. ಕನ್ನಡ ಶಾಲೆಯ ಸ್ಥಾಪನೆಯೂ ಆಗಿದೆ. ಹೈದರಾಬಾದ್ ನಗರದಲ್ಲಿಯು ಶಾಲೆ, ಗ್ರಂಥಾಲಯ, ವಾಚನಾಲಯ, ಸಂಘಗಳು ಸ್ಥಾಪಿತವಾಗಿವೆ.

ಹೀಗೆ ಸ್ವಭಾಷೆ, ಸ್ವಸಂಸ್ಕೃತಿಯ ಪುನರುದ್ಧಾರದ ಆಂದೋಲನವು ಕರ್ನಾಟಕ ಸಂಘ, ವಾಚನಾಲಯ, ಶಾಲೆಗಳ ರೂಪದಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿತು. ನಾಡ ಹಬ್ಬ ಮುಂತಾದ ಸಾಂಸ್ಕೃತಿಕ ಹಬ್ಬಗಳು ಜರುಗ ತೊಡಗಿದವು. ಬರಬರುತ್ತ ಹೊಸಕಾಲದ ಸಾಹಿತ್ಯ ಹೊನಲಿನಲ್ಲಿ ಸಾಹಿತಿಗಳು, ಕವಿಗಳು, ಪಂಡಿತರು, ಕಲಾವಿದರು, ವಾಗ್ಮಿಗಳು, ಲೇಖಕರು, ತಲೆಯೆತ್ತ ಹತ್ತಿದರು. ಅಖಿಲಕರ್ನಾಟಕಸಾಹಿತ್ಯ ಪರಿಷತ್ತಿನ ಅಧಿವೇಶನಗಳನ್ನು ನಮ್ಮ ಪ್ರಾಂತದಲ್ಲಿ ನೆರೆಯಿಸಿ, ಸಾಂಸ್ಕೃತಿಕ ಏಕರೂಪತೆಗೆ ತಕ್ಕ ರಂಗವನ್ನು ಸಿದ್ಧಗೊಳಿಸಲಾಯಿತು.

ಈ ಎಲ್ಲ ಚಟುವಟಿಕೆಗಳಲ್ಲಿ ಭಾಗ ವಹಿಸಿ ಕಾರ್ಯ ಪ್ರವೃತ್ತರಾದ ಕೆಲವು ಕೆಲಸಗಾರರಲ್ಲಿ ಹೈದರಾಬಾದ್ ಕನ್ನಡಿಗರ ಎಲ್ಲತರದ ಏಳ್ಗೆಗಾಗಿ ಹೆಣಗಾಡುವ ಕೇಂದ್ರ ಸಂಸ್ಥೆಯನ್ನು ಸ್ಥಾಪಿಸುವ ಹಂಬಲವೂ ಉದಯಸಿತು. ಅದರ ಪರಿಣಾಮವೇ ನಿಜಾಂ ಕರ್ನಾಟಕ ಪರಿಷತ್ತು.

ನಿಜಾಂ ಕರ್ನಾಟಕ ಪರಿಷತ್ತು ಈಗ ಎರಡುಸಲ ತನ್ನ ಅಧಿವೇಶನವನ್ನು ನೆರೆಯಿಸಿ ಕನ್ನಡಿಗರಲ್ಲಿ ಭಾಷೆ ಹಾಗು ಸಂಸ್ಕೃತಿಯ ಜಾಗೃತಿಯನ್ನುಂಟುಮಾಡಿದೆ. ತಾಲೂಕು, ಜಿಲ್ಲಾ, ನಗರಸಮಿತಿಗಳನ್ನು ಸ್ಥಾಪಿಸಿ ಸಾಕ್ಷರತಾ ಪ್ರಸಾರದ ಕಾರ್ಯವನ್ನು ಆರಂಭಿಸಿದೆ. ಪರಿಷತ್ತಿನ ಪ್ರಯತ್ನದಿಂದಲೇ ಬೀದರಿನಲ್ಲೀಗ ಕನ್ನಡದ ಧ್ವನಿ ಕೇಳಬರುತ್ತಲಿದೆ.

ಹೀಗೆ ಈ ೨೫-೩೦ ವರ್ಷಗಳಿಂದ ವಿಕಾಸಹೊಂದಿ ರೂಪಗೊಂಡು ಕಾರ್ಯೋನ್ಮುಖವಾಗಿರುವ ಸಾರ್ವಜನಿಕ ಜೀವನವು, ಹೈದರಾಬಾದ್ ಕನ್ನಡಿಗರಿಗೆ ಪ್ರತಿಯೊಂದು ಕ್ಷೇತ್ರದಲ್ಲಿಯು ತಮ್ಮ ಸ್ಥಾನಮಾನವನ್ನು ಕಾಯ್ದುಕೊಳ್ಳುವ ಶಕ್ತಿ

ಯನ್ನು ನೀಡಿದೆ; ಉದಯವಾಗಿರುವ ನವ ಚೈತನ್ಯವನ್ನು ಕೇಂದ್ರೀಕರಿಸಿ ನಾಡಿನ ಏಳ್ಗೆಗಾಗಿ ಅದನ್ನು ಪ್ರವರ್ತಿಸುವಂತೆ ಮುಂದುವರಿಯುವದರಲ್ಲಿ ನಾವು ಯಶಸ್ವಿಗಳಾಗಿ ಇತರ ಬಾಂಧವರೊಡನೆ ಸರಿಜೋಡಿಗಳಾಗಿ ಬಾಳಬೇಕೆಂಬುದೇ ನಮ್ಮ ಹಾರೈಕೆ.

---

## ಕನ್ನಡದ ಮುನ್ನಡೆಗೆ ಪೋಷಕವಾದ.

### ಕೆಲವು ಸಾರ್ವಜನಿಕ ಸಂಸ್ಥೆಗಳು

---

### ಹೈದರಾಬಾದು.

ನಿಜಾಮು ಕರ್ನಾಟಕ ಪರಿಷತ್ತು. ನೃಪತುಂಗ ಮಿಡ್ಲಸ್ಕೂಲ (ಸರಕಾರದ ಸಹಾಯವಿದೆ). ಶಾರದಾ ಕನ್ಯಾ ಪಾಠಶಾಲೆ. (ಸ್ವತಂತ್ರ ಕಟ್ಟಡವಿದೆ, ಸರಕಾರದ ಸಹಾಯವಿದೆ). ಕರ್ನಾಟಕ ಸಾಹಿತ್ಯಮಂದಿರ (ಶಾಶ್ವತ ನಿಧಿಯಿದೆ). ಸಂಗ್ರಾಮ ವಾಚನಾಲಯ. ನಿಜಾಂಕರ್ನಾಟಕ ವಿದ್ಯಾರ್ಥಿ ಸಂಘ. ಬಾಲಕರ್ನಾಟಕ ಸಂಘ. ಸಾಹಿತ್ಯಮಂಡಲ. ವೀರಶೈವ ಪರಿಷತ್ತು. ವೀರಶೈವ ತರುಣಸಂಘ. ನಿಜಾಂ ಕರ್ನಾಟಕ ಎಜುಕೇಶನಲ್ ಸುಸೈಟಿ. ವೆಂಕಟೇಶ ಮೆಮೋರಿಯಲ್ ಸ್ಕೂಲ ಶಾಲಿಬಂಡೆ (ಕಟ್ಟಡವಿದೆ. ೧೫ ಸಾವಿರದ ಆಸ್ತಿಯಿದೆ).

### ರಾಯಚೂರು.

ಹಮದರ್ದ ಹೈಸ್ಕೂಲು (ಸ್ವತಂತ್ರ ಕಟ್ಟಡವಿದೆ). ಶಾರದಾ ಕನ್ಯಾಶಾಲೆ ಹರಿಜನಶಾಲೆ. ವೀರಶೈವ ಬೋರ್ಡಿಂಗು. ಕರ್ನಾಟಕ ತರುಣ ಸಂಘ. ಸಾಹಿತ್ಯ ಸೇವಾಸಂಘ. ಭಾರತ ರೀಡಿಂಗ್ ರೂಮು. ಶಾರದಾವಾಚನಾಲಯ ಸಿಂಧನೂರು. ಕರ್ನಾಟಕ ವಾಚನಾಲಯ ಗಂಗಾವತಿ. ಉಸ್ಮಾನಿಯಾ ಕನ್ನಡ ವಾಚನಾಲಯ ಲಿಂಗಸುಗೂರು. ಕರಿವೀರ ವಾಚನಾಲಯ ಹನುಮಸಾಗರ. ಶ್ರೀ ವಿಠ್ಠಲ ವಾಚನಾಲಯ ಹನುಮಸಾಗರ. ಸಾರ್ವಜನಿಕ ವಾಚನಾಲಯ ಕುಷ್ಟಗಿ. ಕ್ರಿಶ್ಚನ್ ಸ್ಕೂಲ ರಾಯಚೂರು. ಕ್ರಿಶ್ಚನ್ ಸ್ಕೂಲ ಮುದುಗಲ್, ಕವಿತಾಳ.

### ಕೊಪ್ಪಳ.

ಗಜಾನನ ವಾಚನಾಲಯ (ಸ್ವಂತ ಕಟ್ಟಡವಿದೆ). ವೀರಶೈವ ಸಂಘ. ಕರ್ನಾಟಕ ಸಂಘ. ವಿದ್ಯಾನಂದ ಗುರುಕುಲ ಕುಕನೂರು (ಸ್ವಂತ ಕಟ್ಟಡದ ಪ್ರಯತ್ನ

ನಡೆದಿದೆ). ವಾಚನಾಲಯ ಕಿನ್ನಾಳ. ವಾಚನಾಲಯ ಇಟಗಿ. ಹರಿಜನಸೇವಕ ಸಂಘ, ಆಡೂರು. ವೀರಶೈವ ತರುಣ ಸಂಘ, ಚಿಕೇನ ಕೊಪ್ಪ. ಯಲಬುರ್ಗಿ ವಾಚನಾಲಯ.

## ಕಲಬುರ್ಗಿ.

ಕನ್ನಡ ಸಾಹಿತ್ಯ ಸೇವಾಸಂಘ. ವೀರಶೈವ ಬಂಧು ಸಮಾಜ, ವಾಚನಾಲಯ. ಕರ್ನಾಟಕ ವಿದ್ಯಾರ್ಥಿ ಸಂಘ. ನೂತನ ವಿದ್ಯಾಲಯ (ಸ್ವಂತ ಕಟ್ಟಡವಿದೆ, ಸರಕಾರದ ಸಹಾಯವಿದೆ). ಅಕ್ಕ ಮಹಾದೇವಿ ಕನ್ಯಾಪಾಠಶಾಲೆ (ಸರಕಾರದ ಸಹಾಯ)

## ಸುರಪುರ.

ಕರ್ನಾಟಕ ಸಂಘ, (ಸ್ವಂತಕಟ್ಟಡವಿದೆ. ನಿಧಿ ಇದೆ).

## ಯಾದಗಿರಿ.

ಶಂಕರ ಸಂಸ್ಕೃತ ಕಾಲೇಜು (ಸ್ವಂತಕಟ್ಟಡವಿದೆ, ಶಾಶ್ವತ ನಿಧಿ ಇದೆ). ಅಖಿಲ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಾಂತೀಯ ಸಮಿತಿ.

## ಚಿಂಚೋಳಿ.

ಉಸ್ಮಾನಿಯಾ ಮಿಡ್ಲಸ್ಕೂಲು, ಚಿಂಚೋಳಿ. ಭಾರತ ವಾಚನಾಲಯ, ಚಿಂಚೋಳಿ. ಕರ್ನಾಟಕ ವಾಚನಾಲಯ ಸುಲಹೆ ಪೇಟೆ.

## ಬೀದರ್.

ಕರ್ನಾಟಕ ವಿದ್ಯಾಲಯ. ವಿದ್ಯಾರ್ಥಿ ವಾಚನಾಲಯ. ಸಾರ್ವಜನಿಕ ವಾಚನಾಲಯ. ಕ್ರಿಶ್ಚನ್ ಶಾಲೆ.

## ನಾರಾಯಣ ಖೇಡ.

ಶ್ರೀರಾಮ ವಾಚನಾಲಯ.

## ಭಾಲ್ಕಿ.

ಸಾರ್ವಜನಿಕ ವಾಚನಾಲಯ.

# ನಮ್ಮ ನಾಡಿನ ಸ್ತ್ರೀಯರ ಶಿಕ್ಷಣ.

ಶ್ರೀಮತಿ ವಿಮಲಾಬಾಯಿ, ಮೇಲ್ಕೋಟೆ.

ಇವರು ಹೈದರಾಬಾದಿನ ಸುಪ್ರಸಿದ್ಧ ಕನ್ನಡ ಮಹಿಳೆಯರು. ಆಗಿನ ಹೈದರಾಬಾದಿನಲ್ಲಿ ಸಾಧ್ಯವಿದ್ದ ಶಿಕ್ಷಣವನ್ನು ಪಡೆದಿದ್ದಾರೆ. ಇಂದಿಗಾದರೂ ಅವರು ತಮ್ಮ ವಿದ್ಯಾ ಸಾಧನೆಯನ್ನು ಮುಂದೆ ಸಾಗಿಸಿಕೊಂಡು ಬಂದಿದ್ದಾರೆ. ಇವರು ಖಾದಿ ಪ್ರೇಮಿಗಳು. ಹೈದರಾಬಾದಿನ ಖಾದಿ ಪ್ರಚಾರ ಸಂಘದಲ್ಲಿ ಆಸಕ್ತಿಯಿಂದ ಕೆಲಸಮಾಡುತ್ತಾರೆ. ಸ್ಥಳಿಕ ಕನ್ನಡ ಚಟುವಟಿಕೆಗಳಲ್ಲಿ ಯಾವಾಗಲೂ ಮುಖ್ಯ ಭಾಗವನ್ನು ವಹಿಸುತ್ತಾರೆ. ಬೀದರಿನಲ್ಲಿ ಕೂಡಿದ ನಿಜಾಮ ಕರ್ನಾಟಕ ಪರಿಷತ್ತಿನ ದ್ವಿತಿಯಾಧಿವೇಶನದ ಮಹಿಳಾ ಸಮ್ಮೇಲನದ ಅಧ್ಯಕ್ಷರಾಗಿ ನಮ್ಮ ನಾಡಿನ ಹೆಣ್ಣುಮಕ್ಕಳ ಮುಖಂಡತ್ವನನ್ನು ವಹಿಸಿದ್ದಾರೆ. ೨೬ ನೆಯ ಅಖಿಲ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿದ್ದು ಅವಿಂಶ್ರಾತವಾಗಿ ದುಡಿಯುತ್ತಲಿದ್ದಾರೆ. ಈ ಲೇಖನದಲ್ಲಿ ತಮ್ಮ ಸೋದರಿಯರಿಗಾಗಿ ಅವರಿಗಿರುವ ಅಭಿಮಾನವು ಚೆನ್ನಾಗಿ ವ್ಯಕ್ತವಾಗುವದು.

---

ಸ್ತ್ರೀ ಶಿಕ್ಷಣದ ಸಮಸ್ಯೆಯು ಕಳೆದ ಐವತ್ತು ವರ್ಷಗಳಿಂದ ಹಿಂದುಸ್ಥಾನದಲ್ಲಿ ಮಹತ್ವವನ್ನು ಪಡೆಯುತ್ತ ಬಂದಿದೆ. ಆದರೆ ನಮ್ಮ ಸಂಸ್ಥಾನದಲ್ಲಿ ಮಾತ್ರ ಕೆಲವು ವರ್ಷಗಳಿಂದ ಇಲ್ಲಿಯ ಸರಕಾರದವರು ಹಾಗು ಇತರ ಸಾರ್ವಜನಿಕ ಮುಖಂಡರು ಇತ್ತ ತಮ್ಮ ಲಕ್ಷ್ಯವನ್ನು ಕೊಡಹತ್ತಿದ್ದಾರೆ. ಕಾಲದ ಪ್ರಭಾವದಿಂದಲೂ, ಜನತೆಯಲ್ಲಿ ವ್ಯೆದೋರಿರುವ ಜಾಗ್ರತೆಯಿಂದಲೂ, ದಿನದಿನಕ್ಕೆ ಈ ಪ್ರಶ್ನೆಗೆ ವಿಶೇಷ ಪ್ರಾಮುಖ್ಯತೆ ಬರಹತ್ತಿದೆ. ಈ ಎಚ್ಚತ್ತ ಕಾಲದಲ್ಲಿಯೂ, ಸ್ತ್ರೀ ಶಿಕ್ಷಣದ ಪ್ರಗತಿಯ ಮಾರ್ಗದಲ್ಲಿ ಬರುವ ಅನೇಕ ಎಡರುಗಳುಂಟು. ಆದರೂ ಅವುಗಳಿಗೆ ಇಂಬುಗೊಡದೆ ಎದುರಿಸಿ ಮುಂದಿನ ಸಂತತಿಯ ಮಾತೆಯರ ಸರ್ವತೋಮುಖ ಉನ್ನತಿಗಾಗಿ ಕೃಷಿ ಮಾಡುವದು ಇಂದಿನ ನಾಗರಿಕರ ಆದ್ಯಕರ್ತವ್ಯವಾಗಿದೆ. ಈ ದೃಷ್ಟಿಯಿಂದ ನಡೆದಿರುವ ಶೈಕ್ಷಣಿಕ ಆಂದೋಲನದಲ್ಲಿ ಹೈದರಾಬಾದ್ ಕರ್ನಾಟಕವು ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡು ತಾಯಿನಾಡಿನ ಏಳ್ಗೆಗಾಗಿ ನೆರೆಹೊರೆಯ ಪ್ರಾಂತದವರೊಡನೆ ಸಮಜೋಡಿಗಳಾಗಿ ಹೆಣಗಾಡುವದು ಆವಶ್ಯಕ.

ಈ ಒಂದು ಖಂಡಿತವಾದ ಗುರಿಯನ್ನಿಟ್ಟುಕೊಂಡು ನಮ್ಮನಾಡಿನಲ್ಲಿ ಯಾವ ಯಾವ ಸಂಸ್ಥೆಗಳು ಹೆಣ್ಣುಮಕ್ಕಳ ಪ್ರಗತಿಗಾಗಿ ಎಲ್ಲಿಯವರೆಗೆ ಪ್ರಯತ್ನ ನಡೆಸಿವೆ ಎಂಬುದನ್ನು ಹೇಳುವದು ಈ ಚಿಕ್ಕ ಲೇಖನದ ಉದ್ದೇಶವಾಗಿದೆ. ಮೊದಲು, ನಮ್ಮ ಸಂಸ್ಥಾನದ ಶಿಕ್ಷಣ ಪರಿಸ್ಥಿತಿಯ ಸ್ಥೂಲ ಪರಿಚಯವನ್ನು ಮಾಡಿ ಕೊಡುವದು ಅವಶ್ಯವಾಗಿದೆ. ಶಿಕ್ಷಣ ಖಾತೆಗಾಗಿ ಒಂದುಕೋಟಿಗಿಂತ ಹೆಚ್ಚಾಗಿ ರೂಪಾಯಿಗಳನ್ನು ಪ್ರತಿವರ್ಷ ವಿನಿಯೋಗಿಸುತ್ತಿದ್ದರೂ, ಸಂಸ್ಥಾನದಲ್ಲಿ ಒಟ್ಟು ಓದುಬರೆಹ ಬರುವವರ ಸಂಖ್ಯೆ ನೂರಕ್ಕೆ ೭ ಕ್ಕಿಂತ ಹೆಚ್ಚಿಲ್ಲ. ಇದರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಇನ್ನೂಕಡಮೆ. ಈ ಅಂಶಗಳನ್ನು ಅನುಲಕ್ಷಿಸಿ "ನಾವು ಬಹಳ ಹಿಂದೆ ಉಳಿದಿದ್ದೇವೆ. ಪ್ರಯತ್ನ ಮಾಡತಕ್ಕದ್ದು " ಎಂದು ಬೇರೆ ಹೇಳಬೇಕಾಗಿಲ್ಲ. ಈ ಚಿಕ್ಕ ಲೇಖನದಲ್ಲಿ ಮೈಸೂರು, ಟ್ರಾವನ'ಕೋರ್, ಹಾಗು ಬಡೋದಾ ಮುಂತಾದ ಸಂಸ್ಥಾನಗಳ ಜೊತೆಗೆ ನಮ್ಮಲ್ಲಿಯ ಪರಿಸ್ಥಿತಿಯನ್ನು ತೂಗಿತೋರಿಸಿ ಎಲ್ಲರಿಗೂ ಗೊತ್ತಿದ್ದ ಕಾರಣಗಳನ್ನೇ ಪುನಃ ಇಲ್ಲಿ ಕಾಣಿಸುವದು ಅನವಶ್ಯಕ.

ಇಂತಹ ಸನ್ನಿವೇಶದಲ್ಲಿ ಹೆಣ್ಣುಮಕ್ಕಳ ಶಿಕ್ಷಣದ ಬೆಳವಣಿಗೆಗಾಗಿ ದುಡಿಯಬೇಕಾಗಿ ಬಂದಿದೆ. ಜನತೆಯಲ್ಲಿ ಮೊದಮೊದಲು ಈ ವಿಷಯವಾಗಿ ಕಂಡುಬರು ಬರುತ್ತಿದ್ದ ಉದಾಸೀನತೆಯು, ನಿರುತ್ಸಾಹವು ಕಾಲದ ಮಹಾತ್ಮೆಯಿಂದ ಸಾವಧಾನನವಾಗಿ ದೂರವಾಗುತ್ತಿದ್ದರೂ, ಇನ್ನೂ ಸಮಾಧಾನಕರವಾದ ವಾತಾವರಣ ಕಲ್ಪಿತವಾಗಿಲ್ಲ. ಸಮಾಜದಲ್ಲಿ ಪ್ರಚಲಿತವಿರುವ ಬಾಲವಿವಾಹ ಮುಂತಾದ ಕುರುಡ ರೂಢಿಗಳೇ ನಮ್ಮ ಅಧೋಗತಿಯ ಮುಖ್ಯಕಾರಣವೆಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲ. ಒಂದು ಕಡೆ ಈ ಹಾನಿಕಾರಕ ಸಂಪ್ರದಾಯಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರೆ ಇನ್ನೊಂದುಕಡೆ ಅವರಿಗೆ ಆದರ್ಶ ಜೀವನದ ಧ್ಯೇಯ ಸಾಧನೆಗಾಗಿ ಬೇಕಾಗುವ ಶಿಕ್ಷಣದ ವ್ಯವಸ್ಥೆಯನ್ನು ಮಾಡಿಕೊಡುವದು ಅತ್ಯಗತ್ಯ ಕಾರ್ಯವಾಗಿದೆ. ಇದೇ ಸಂಬಂಧದಲ್ಲಿ ಶಿಕ್ಷಣದ ಮಾಧ್ಯಮವು ವಿದ್ಯಾರ್ಥಿನಿಯರ ತಾಯಿನುಡಿಯೇ ಇರತಕ್ಕದ್ದೆಂದು ಹೇಳಿಬಿಡುವದು ಅವಶ್ಯಕವೆನಿಸುತ್ತದೆ. ಅವರೇ ಇಷ್ಟಪಟ್ಟಲ್ಲಿ ಇತರ ಬೇಕಾದ ಭಾಷೆಯನ್ನು ಕಲಿಯಲು ಆಸ್ಪದವಿರತಕ್ಕದ್ದು. ಈ ಮೇಲಿನ ಮಟ್ಟಕ್ಕೆ ಬಾಹ್ಯವಾದ ಶಿಕ್ಷಣ ಪದ್ಧತಿಯು ಹೆಣ್ಣುಮಕ್ಕಳ ಉನ್ನತಿಗೆ ಪ್ರತಿಕೂಲ.

ಈ ಮೇಲೆ ವಿವರಿಸಿದ ದೃಷ್ಟಿಯಿಂದ ಹೆಣ್ಣುಮಕ್ಕಳ ಶಿಕ್ಷಣದ ಕಾರ್ಯ ನಡೆದಿಲ್ಲವಾದರೂ ಅದನ್ನೇ ತಮ್ಮ ನೀತಿಯನ್ನಾಗಿಟ್ಟುಕೊಂಡು ಪ್ರಗತಿಪರ ವಿಚಾರ ಕೆಲವೊಂದು ಸಂಸ್ಥೆಗಳು ನಮ್ಮಲ್ಲಿ ಇಂದು ಅಸ್ತಿತ್ವದಲ್ಲಿ ಬಂದಿವೆ. ಇವುಗಳಿಗೆ ಜನತೆಯಿಂದ ಬೇಕಾದ ಸಹಾನುಭೂತಿಯು ದೊರೆತಿದ್ದಾದರೆ ನಮ್ಮನಾಡಿನ ಹೆಣ್ಣುಮಕ್ಕಳ

ಕಲ್ಯಾಣವಾಗುವುದರಲ್ಲಿ ಯಾವ ಸಂದೇಹವಿಲ್ಲ. ಹೈದರಾಬಾದು ರಾಜಧಾನಿಯಲ್ಲಿ ಇಪ್ಪತ್ತು ಸಾವಿರಕ್ಕೆ ಮೇಲ್ಪಟ್ಟು ಕನ್ನಡಿಗರಿದ್ದು ಅವರಿಗೆ ಕನ್ಯಾ ಪಾಠಶಾಲೆಯು ಬಹಳ ದಿನಗಳ ಅವಶ್ಯಕತೆಯಾಗಿತ್ತು. ಆ ಒಂದು ಆವಶ್ಯಕತೆಯನ್ನು, ಇದೀಗ ಶ್ರೀ. ಶಾರದ ಕನ್ಯಾಪಾಠಶಾಲೆಯು ಪೂರೈಸಹತ್ತಿದೆ. ಈ ಎರಡುವರ್ಷಗಳ ಅವಧಿಯಲ್ಲಿಯೇ ಅದಕ್ಕೊಂದು ಸ್ಥಿರ ಸ್ವರೂಪ ಬರುತ್ತಿದ್ದುದನ್ನು ನೋಡಿದರೆ ಯಾರಿಗೆತಾನೆ ಸಂತೋಷವಾಗದು? ಕನ್ನಡಿಗರ ಕೇಂದ್ರಸ್ಥಾನವಾದ ಕಲಬುರ್ಗಿಯಲ್ಲಿ ಕನ್ನಡ ಮಕ್ಕಳಿಗೆ ಮೊನ್ನೆಮೊನ್ನೆಯವರೆಗೂ ಶಿಕ್ಷಣಕ್ಕೆ ಅವಕಾಶವಿರಲಿಲ್ಲ. ಆದರಲ್ಲಿಯಂತೂ ಹೆಣ್ಣುಮಕ್ಕಳ ಪಾಡು ದೇವರೇಬಲ್ಲ. ಆ ಒಂದು ಅನಾನುಕೂಲತೆಯನ್ನು ಅಕ್ಕಮಹಾದೇವಿಯ ಕನ್ಯಾಶಾಲೆಯು ತಕ್ಕಮಟ್ಟಿಗೆ ಹೋಗಲಾಡಿಸಿದೆ. ಬೀದರಿನಲ್ಲಿ ಕನ್ನಡ ಹೋಗಿ ಅದರ ನೆರಳಿದೆ. ಅದೂ ಅಲ್ಲಿನ ಮೆಥಡಿಸ್ಟ ಚರ್ಚಿನವರ ಕೃಪೆಯಿಂದ. ಅವರಿಂದ ಸ್ಥಾಪಿತವಾದ ಕನ್ಯಾಶಾಲೆಯು ಬಹಳ ಸಿತ್ತಿನಿಂದ ನಡೆದಿದೆ. ರಾಯಚೂರಾದರೂ ಈ ರಂಗದಲ್ಲಿ ಪ್ರಯತ್ನ ಮಾಡಹತ್ತಿದೆ. ಅಲ್ಲಿಯ ಶ್ರೀ ಶಾರದಾ ಕನ್ಯಾ ಪಾಠಶಾಲೆಯು ಬಹಳ ಚನ್ನಾಗಿ ನಡೆಯುತ್ತಲಿದೆ. ಕೊಪ್ಪಳದಂಥ ಸ್ಥಳದಲ್ಲಿ ಇದುವರೆಗೂ ಯಾವ ಕನ್ಯಾಶಾಲೆ ಇರದಿರುವುದು ವಿಷಾದದ ಸಂಗತಿ. ಈ ಪ್ರಕಾರದ ಖಾನಗಿ ಪ್ರಯತ್ನಗಳು ಕನಿಷ್ಠಪಕ್ಷಕ್ಕೆ ಎಲ್ಲ ತಾಲೂಕು ಸ್ಥಳಗಳಲ್ಲಿ ನಡೆದರೆ ಬಹಳ ನೆಟ್ಟಗಿದೆ.

ಹೀಗೆ ಸ್ತ್ರೀ ಶಿಕ್ಷಣದ ಸಮಸ್ಯೆಯನ್ನು ಬಿಡಿಸುವುದಕ್ಕೆ ಶಾಲೆಗಳು ದೇಶದ ಮೂಲೆಮೂಲೆಗಳಲ್ಲಿ ಏರ್ಪಡಬೇಕಾಗಿದೆ. ನಮ್ಮ ಪುರಾತನ ಸಂಸ್ಕೃತಿಯ ತಳಹದಿಯಮೇಲೆ ಹೊಸ ಬೆಳಕಿನಲ್ಲಿ ಸುಸಂಸ್ಕೃತ ಜೀವನವು ರೂಪುಗೊಳ್ಳುವ ಸಂಧಿಕಾಲವಿದು. ಈ ಸಂಧಿಕಾಲದಲ್ಲಿ ಆಗಬೇಕಾದ ಪರಿವರ್ತನೆಗಳೂ, ಸಹಜವಾಗಿಯೇ ಆಗುವವು. ಆದ್ದರಿಂದ ಸ್ತ್ರೀಯರಲ್ಲಿ ಜಾಗ್ರತಿಯನ್ನುಂಟುಮಾಡಿ, ಅವರಲ್ಲಿ ಕರ್ತವ್ಯದ ಅರಿವನ್ನುಂಟುಮಾಡಬೇಕಾದರೆ ಸುಸಂಘಟಿತವಾಗಿ ಕಾರ್ಯ ನಡೆಯಬೇಕು. ಈ ಕಡೆಗೆ ನಮ್ಮ ನಾಡಿನ ವಿದ್ಯಾವತಿಯರಾದ ಮಹಿಳೆಯರು, ಮುಖಂಡರೂ, ಕಾರ್ಯ ಕರ್ತರು ಗಮನಿಸಿ ಈ ಕಾರ್ಯವನ್ನು ಮುಂದುವರಿಸಬೇಕಾಗಿದೆ.

# ಹೈದರಾಬಾದಿನ ರಾಜ್ಯಾಡಳಿತ ಕ್ರಮ.

ಶ್ರೀ ಪುರಾಣೀಕ, ಜಯಾಚಾರ್ಯ ಹೈಕೋರ್ಟ ವಕೀಲ, ಹೈದರಾಬಾದು.

ಶ್ರೀ ಜಯಾಚಾರ್ಯರು ರಾಯಚೂರು ಜಿಲ್ಲೆಯ ಹನಮಸಾಗರದವರು. ತುಮರಿಕೊಪ್ಪ ಇವರ ಜಾಗೀರಿ ಹಳ್ಳಿ. ಇವರ ತಂದೆ ಶ್ರೀ ತಿಮಣಾಚಾರ್ಯರು ಸುಂಕದ ಖಾತೆಯಲ್ಲಿ ಆಡೀಟರ್‌ರಾಗಿದ್ದಾರೆ. ಮ್ಯಾಟ್ರಿಕ್ ಪರೀಕ್ಷೆಯನ್ನು ಮೊದಲನೇ ತರಗತಿಯಲ್ಲಿ ತೇರ್ಗಡೆಹೊಂದಿ, ಕನ್ನಡದಲ್ಲಿ ಇಡೀ ಸಂಸ್ಥಾನದಲ್ಲಿಯೇ ಮೊದಲನೆಯ ನಂಬರನ್ನು ಪಡೆದರು. ಮುಂದೆ ಹೈಕೋರ್ಟ ವಕೀಲಿಯನ್ನು ೧೩೪೫ ನೆಯ ಫಸಲಿಯಲ್ಲಿ ಪಾಸಾದರು. ಅದೇ ವರುಷವೇ ವಕೀಲಿಯನ್ನು ಸ್ವತಂತ್ರವಾಗಿಯೇ ಆರಂಭಿಸಿದರು. "ಜೂನಿಯರ್" ಆಗಿ ಕೆಲಸಮಾಡುವುದು ಸ್ವಾಭಿಮಾನದ ಕೆಚ್ಚುಳ್ಳ ಆಚಾರ್ಯರಿಗೆ ಸರಿಬೀಳಲಿಲ್ಲ. ಸ್ವಾಭಿಮಾನಕ್ಕೆ ತಕ್ಕ ಸಾಹಸವೂ ಅವರಲ್ಲಿದೆ. ಅಂತೆ ಅಲ್ಪ ಅವಧಿಯಲ್ಲಿಯೇ ತಮ್ಮ ವೃತ್ತಿಯಲ್ಲಿ ಸಾಕಷ್ಟು ಬೆಳೆದು ಸ್ಥಿರವಾಗಿದ್ದಾರೆ. ಇಂಥ ಸ್ವತಂತ್ರವೃತ್ತಿಯುಳ್ಳವರು ಸಾರ್ವಜನಿಕ ಕಾರ್ಯಗಳಲ್ಲಿ ಭಾಗ ವಹಿಸುವರೆಂದು ಬೇರೆ ಹೇಳಬೇಕಾಗಿಲ್ಲ. ನೃಪತುಂಗಶಾಲೆ ಸಾಹಿತ್ಯ ಮಂದಿರ, ಸಾಹಿತ್ಯ ಮಂಡಲ, ಮುಂತಾದ ಅನೇಕ ಕನ್ನಡ ಸಂಸ್ಥೆಗಳಲ್ಲಿ ಆಸಕ್ತಿಯಿಂದ ಕೆಲಸಮಾಡುತ್ತಲಿದ್ದಾರೆ. ಕನ್ನಡ ಸಾಹಿತ್ಯ ಬೆಳೆದು, ಕನ್ನಡಿಗರು ಜ್ಞಾನದ ಬೆಳಕನ್ನು ಕಂಡು, ಪ್ರಗತಿಪಥಕ್ಕೆ ಬರಬೇಕೆಂದು ಹಂಬಲಿಸುವವರಲ್ಲಿ ಆಚಾರ್ಯರೂ ಒಬ್ಬರು.

ಹೈದರಾಬಾದಿನ ಇಂದಿನ ಆಡಳಿತ ಕ್ರಮವನ್ನು ಹೇಳುವ ಮುಂಚೆ ಆಡಳಿತದ ಮುಖ್ಯ ತಳಹದಿಯ ಸ್ವರೂಪವನ್ನು, ಹಾಗು ಈ ತಳಹದಿಯಮೇಲೆ ಇಲ್ಲಿಯವರೆಗೆ ಬೆಳೆದು ಬಂದಿರುವ ರಾಜ್ಯಪದ್ಧತಿಯನ್ನು ಸಂಕ್ಷೇಪವಾಗಿ ವಿವರಿಸಲಾಗಿದೆ.

ಹಿಂದುಸ್ಥಾನದ ಎಲ್ಲ ದೇಶೀ ಸಂಸ್ಥಾನಗಳಲ್ಲಿ ಪುರಾತನ ಕಾಲದಿಂದ ಆಯಾ ಸಂಸ್ಥಾನಾಧಿಪತಿಯು ಸ್ವಾಯತ್ತತೆಯಿಂದ ರಾಜ್ಯಾಡಳಿತವನ್ನು ನಡೆಯಿಸುತ್ತ ಬಂದಿರುವದುಂಟು. ಅಂತೇ ಸಂಸ್ಥಾನಾಧಿಪತಿಯೇ ಎಲ್ಲ ನ್ಯಾಯ ಹಾಗು ಅಧಿಕಾರಗಳ ಉಗಮಸ್ಥಾನವಾಗಿದ್ದು, ಪ್ರಭುತ್ವವು ಆತನಲ್ಲಿ ಅಂತರ್ಗತವಾಗಿರುತ್ತದೆ.

ನಮ್ಮನ್ನಾಳಿದ ನಿಜಾಮಪ್ರಭುಗಳಾದ ನವ್ವಾಬ್ ಮೀರ್ ಮಹಬೂಬ್ ಅಲಿಖಾನ್ ಬಹಾದ್ದೂರ್ ಅವರು ಕ್ರಿ. ಶ. ೧೮೯೨ ರಲ್ಲಿ 'ಕಾನೂನ್ಚೆ ಮುಬಾರಕ್ಕ'ನ್ನು ಜಾರಿಗೆ ತರುವಾಗ "ಈ ಸಂಸ್ಥಾನದಲ್ಲಿ ಮೊದಲಿದ್ದುದೆಂದರೆ ವೈಯಕ್ತಿಕ ಆಡಳಿತ ಮೊದಲನೇ ಸಾಲಾರ್‌ಜಂಗ್‌ರು ಇದನ್ನು ಶಾಸನಬದ್ಧವಾಗಿ ಕ್ರಮಗೊಳಿಸಿದರು".

ಎಂದು ಅಪ್ಪಣೆ ಕೊಡಿಸಿದ್ದಾರೆ. ಅಂದಮೇಲೆ ಅದಕ್ಕೂ ಮೊದಲು ಅಸಫಜಾಹಿ ರಾಜರೆಲ್ಲರೂ ಆಡಳಿತದ ಸೂತ್ರಗಳನ್ನು ದಿವಾನರುಗಳಿಗೆ ಒಪ್ಪಿಸುತ್ತ ಬಂದಿದ್ದ ರೆಂಬುದು ಸತ್ಯವಾಗಿದೆ. ಈ ದಿವಾನರುಗಳು ತಮಗುಚಿತವಾದ ರೀತಿಯಲ್ಲಿ ರಾಜ್ಯ ಕಾರಭಾರವನ್ನು ನಡೆಯಿಸಿದರು. ದೇಶಮುಖ, ಸರ್‌ದೇಶಮುಖ, ದೇಶಪಾಂಡೆ ಸರ್‌ದೇಶಪಾಂಡೆ, ಮುಂತಾದವರದ್ವಾರಾ ಕಂದಾಯ ವಸೂಲಿಯಲ್ಲಿಯೋ ಎಲ್ಲವೂ ಪರಿಯವಸಾನವಾಗುತ್ತಿತ್ತು. ಈ ವತನದಾರರು ಆಯಾವಿಭಾಗಗಳಲ್ಲಿ ಸರ್ವಾಧಿಕಾರಿ ಗಳಾಗಿರುತ್ತಿದ್ದರು. ಆದರೆ ಮೀರ್ ತಹನಿಯತ್ ಅಲಿಖಾನ್ ಅಫ್ಜಲುದ್ದೌಲ ಬಹಾದ್ದೂರ್ ಐದನೆಯ ಆಸಫಜಾಹ ಅವರ ಕಾಲದಲ್ಲಿದ್ದ ದಿವಾನರಾದ ಮೊದಲ ನೆಯ ಸರ್ ಸಾಲಾರ್ ಜಂಗ್ ಬಹಾದ್ದೂರ್ ಅವರು ಜಿಲ್ಲಾಬಂಧಿಯನ್ನು ಮಾಡಿ, ತಹಶಿಲ್ದಾರ್, ತಾಲೂಕದಾರ್, ಸುಬೇದಾರರನ್ನು ನಿಯಮಿಸಿದರು. ಭೂಮಿಯ ಅಳತೆಯಾದುದು ಆಗಲೇ. ಇವರೇ ಭೂಕಂದಾಯ ವಸೂಲಿಯ ಯೋಗ್ಯ ವ್ಯವಸ್ಥೆ ಗೊಳಿಸಿದುದು. ಕೋತ್ವಾಲಿ, ನ್ಯಾಯಶಾಖೆಗಳನ್ನು ಏರ್ಪಡಿಸಿದರು. ಈ ಕ್ರಮವು ವ್ಯವಸ್ಥಿತ ರೀತಿಯಿಂದ ರೂಪುಗೊಳ್ಳುತ್ತ ಆಡಳಿತವು ಒಂದು ಹಿಡಿತಕ್ಕೆ ಬಂತು. ತಹ ಶಿಲ್ದಾರರು, ತಾಲೂಕದಾರರು ಹಾಗು ಸುಬೇದಾರರು, ತಮ್ಮ ತಮ್ಮ ವಿಭಾಗಗಳ ಆಡಳಿತಕ್ಕೆ ಜವಾಬುದಾರರಾಗಿರುತ್ತಿದ್ದರಾದರೂ ದಿವಾನರೇ ಎಲ್ಲಕ್ಕೂ ಜವಾಬುದಾ ರರು. ಈ ಪದ್ಧತಿಯು ನವ್ವಾಬ್ ಮೀರ್ ಮಹಾಬೂಬ ಅಲಿಖಾನ್ ಬಹಾದ್ದೂರ್ ಅವರ ಕಾಲದವರೆಗೆ ನಡೆದುಬಂತು. ಇವರು ಮೊದಲನೆಯ ಸಾಲಾರ್‌ಜಂಗರು ಮಾಡಿದ ವ್ಯವಸ್ಥೆಗಳಲ್ಲಿರುವ ಕುಂದು ಕೊರತೆಗಳನ್ನು ವಿವರಿಸುತ್ತ ರಾಜ್ಯಕ್ರಮದಲ್ಲಿ ಹೊಸ ಸುಧಾರಣೆಗಳನ್ನು ಮಾಡಬೇಕೆಂಬ ದೃಷ್ಟಿಯಿಂದ, ಮತ್ತು ರೈತರ ಹಿತದ ದೃಷ್ಟಿಯಿಂದ ಕ್ರಿ. ಶ, ೧೮೯೨ ರಲ್ಲಿ 'ಕಾನೂನ್ಚೆ ಮುಬಾರಕ್' ಅನ್ನು ಹೊರಡಿಸಿದರು. ಇದಕ್ಕನುಸರಿಸಿ 'ಕ್ಯಾಬಿನೆಟ್ ಕೌನ್ಸಿಲು' ಹಾಗು 'ಲೆಜಿಸ್‌ಲೇಟಿವ್ ಕೌನ್ಸಿಲು' (ಕಾಯದೇ ಮಂಡಲ) ಗಳ ರಚನೆಯಾಯಿತು.

ಈ 'ಕಾನೂನ್ಚೆ ಮುಬಾರಕ್ಕಿನ' ಮೂರನೆಯ ಕಲಮಿನಲ್ಲಿ "ಕ್ಯಾಬಿನೆಟ್ ಕೌನ್ಸಿಲ" ನ್ನು ಹೀಗೆ ವರ್ಣಿಸಲಾಗಿದೆ.

"ಕ್ಯಾಬಿನೆಟ್ ಕೌನ್ಸಿಲು ನಿಜಾಮ ಪ್ರಭುಗಳ ಆಜ್ಞೆಗೆ ಒಳಪಟ್ಟು ರಾಜ್ಯಾಡ ಳಿತವನ್ನು ನಡೆಯಿಸುವದರಲ್ಲಿ, ಘೋಲ್ಪಟ್ಟ ರಾಜ್ಯಾಧಿಕಾರಿ ಮಂಡಲವಾಗಿದೆ. ಈ ಮಂಡಲದಲ್ಲಿ ಮಂತ್ರಿ; ಈತನೇ ಅಧ್ಯಕ್ಷ; ಸಹಾಯಕರಾದ ಮಂತ್ರಿಗಳು ತಾತ್ಕಾಲಿಕ ವಾಗಿ; ನಿಜಾಮಪ್ರಭುಗಳವರು ಯೋಗ್ಯರೆಂದು ಭಾವಿಸಿ ಆಗಾಗ ನೇಮಿಸುವ ಕೆಲ ವರು, ಇರಬೇಕಾದುದು. ಕ್ಯಾಬಿನೆಟ್ ಕೌನ್ಸಿಲಿನ ತೀರ್ಮಾನವನ್ನು ಕಾರ್ಯ

ರೂಪದಲ್ಲಿ ತರುವುದೇ ಮಂತ್ರಿಯ ಕರ್ತವ್ಯ. ಆದರೆ ಹೀಗೆ ಇರುವ ಕೌನ್ಸಿಲು ರಾಜ್ಯ ನಿರ್ವಾಹಾಧಿಕಾರವನ್ನು ನಡೆಸದು."

ಈ "ಕಾನೂನ್ಚೆ ಮುಬಾರಕ್" ಗೆ ಅನುಸರಿಸಿ ಸ್ಥಾಪಿತವಾದ ಕಾಯದೇ ಮಂಡಲ ಸ್ವಲ್ಪ ಹೆಚ್ಚುಕಡಮೆಯಾಗಿ ಈಗಲೂ ಕೆಲಸ ಮಾಡುತ್ತಲಿದೆ. ಇದರ ವಿವರಣೆ ಮುಂದೆ ಕೊಡಲಾಗುವದು.

**ಮಂತ್ರಿ ಮಂಡಲ (ಬಾಬೆ ಹುಕೂಮತ್)**:— ಕ್ಯಾಬಿನೆಟ್ಟ ಕೌನ್ಸಿಲು ಕ್ರಿ. ಶ. ೧೯೧೪ ರ ವರೆಗೆ ನಡೆದುಬಂತು. ಮುಂದೆ ಈಗ ಆಳುವ ನಿಜಾಮಪ್ರಭುಗಳು ಕೆಲ ಅವಧಿಯವರೆಗೆ ಮಂತ್ರಿಗಳ ಸಹಾಯವಿಲ್ಲದೆ ಆಡಳಿತ ಸೂತ್ರಗಳನ್ನು ತಾವೇ ಸ್ವಂತಾಗಿ ವಹಿಸಿದ್ದರು. ಈ ಅವಧಿಯಲ್ಲಿ ಅವರಿಗುಂಟಾದ ಅನುಭವಗಳಿಗನುಸಾರವಾಗಿ, ೧೩೨೯ ನೆಯ ಫಸಲಿಯಲ್ಲಿ ಈ ಗಿರುವ ಮಂತ್ರಿ ಮಂಡಲವನ್ನು ಸ್ಥಾಪಿಸಿದರು. ಈಗ ಮಂತ್ರಿ ಮಂಡಲವು ಹೀಗಿದೆ.

೧. ಮುಖ್ಯ ಮಂತ್ರಿ (ಸದರೆ ಆಜಂ)
೨. ಹಣಕಾಸಿನ, ಶಿಕ್ಷಣ ಮಂತ್ರಿ.
೩. ಭೂಕಂದಾಯ ಮಂತ್ರಿ.
೪. ನ್ಯಾಯ ಖಾತೆಯ ಮಂತ್ರಿ.
೫. ದಂಡಿನ ಮಂತ್ರಿ.
೬. ರಾಜಕೀಯ ಮಂತ್ರಿ.
೭. ಸಾರ್ವಜನಿಕ ಕಾರ್ಯಗಳ ಮಂತ್ರಿ (ತಾಮೀರಾತ್).

ಈ ಮಂತ್ರಿ ಮಂಡಲವು ಸಂಸ್ಥಾನದ ಎಲ್ಲ ಮಹತ್ವದ ವಿಷಯಗಳಲ್ಲಿ ತಾನು ಮಾಡಿದ ನಿರ್ಣಯಕ್ಕೆ ಪ್ರಭುಗಳಿಂದ ಸಮ್ಮತಿಪಡೆದು ಕಾರ್ಯದಲ್ಲಿ ತರುವುದು. ಈ ಮಂತ್ರಿಗಳೆಲ್ಲರನ್ನು ಪ್ರಭುಗಳೇ ನಿಯಮಿಸುವರು. ಮಂತ್ರಿಗಳು ಕಾರ್ಯದರ್ಶಿಗಳ ಹಾಗು ಆಯಾ ಖಾತೆಯ ಮುಖ್ಯಾಧಿಕಾರಿಗಳದ್ವಾರಾ ಕಾರ್ಯಗಳನ್ನು ನಡೆಯಿಸುವರು.

ಕೆಲವು ದಿನಗಳವರೆಗೆ ತಹಸಿಲ್ದಾರ, ತಾಲುಕದಾರರಿಗೆಯೇ ನ್ಯಾಯ ತೀರ್ಪಿನ ಅಧಿಕಾರಗಳಿದ್ದವು. ಆದರೆ ಮುಂದೆ ನ್ಯಾಯಾಧೀಶರನ್ನು ಬೇರೆ ನಿಯಮಿಸುವ ಪದ್ಧತಿ ಜಾರಿಗೆ ಬಂತು. ಈ ಪದ್ಧತಿ ಬ್ರಿಟಿಶ ಹಿಂದುಸ್ಥಾನದಲ್ಲಿ ಕೂಡ ಇಲ್ಲ.

**ಕಾಯದೇಮಂಡಲ:–** ಹಿಂದೆ ವಿವರಿಸಿದಂತೆ 'ಕಾನುನ್ಚೆ ಮುಬಾರಕ್ಕಿಗೆ ಅನುಸರಿಸಿ ಸ್ಥಾಪಿತವಾದ ಕಾಯದೇ ಮಂಡಲದಲ್ಲಿ ಆಗಾಗ ಬದಲಾವಣೆಗಳಾಗಿ ಈಗ ಅದರ ಸ್ವರೂಪವು ಹೀಗಿದೆ.

ಕಾಯದೇ ಮಂಡಲದಲ್ಲಿ ಒಟ್ಟು ೨೦ ಜನ ಸದಸ್ಯರು. ೨೦ ರ ಪೈಕಿ ೧೮ ಜನ ಸಾಧಾರಣ ಸದಸ್ಯರು; ಇಬ್ಬರು ಅಸಾಧಾರಣ ಸದಸ್ಯರು.

೧೮ ಜನ ಅಸಾಧಾರಣ ಸದಸ್ಯರಲ್ಲಿ ೧೨ ಜನ ಸರಕಾರಿ ಅಧಿಕಾರಿಗಳು. ೬ ಜನ ಅಧಿಕಾರಿಗಳಲ್ಲದವರು. ೧೨ ಜನ ಅಧಿಕಾರಿಗಳಲ್ಲಿ ಪ್ರಧಾನ, ನ್ಯಾಯಾಧೀಶ ಶಾಸನ ಸಲಹೆಗಾರ, ನ್ಯಾಯಖಾತೆಯ ಕಾರ್ಯದರ್ಶಿ, ಈ ಮೂವರು ಯಾವಾ ಗಲು ಇರಬೇಕಾದ ಸದಸ್ಯರು. ಉಳಿದ ಒಂಭತ್ತು ಜನ ಇತರ ಅಧಿಕಾರಿಗಳು.

೬ ಜನ ಅಧಿಕಾರಿಗಳಲ್ಲದವರಲ್ಲಿ ೪ ಜನ ಆರಿಸಿ ಬಂದವರು. ಇಬ್ಬರು ನಾಮ ನಿರ್ದೇಶವಾದವರು. ೪ ಜನರಲ್ಲಿ ಇಬ್ಬರು ವಕೀಲರ ಸಂಗಡದಿಂದ ಆರಿಸಿ ಬಂದವರು. ಇನ್ನಿಬ್ಬರು ಜಾಗಿರದಾರರ ಸಂಗಡದಿಂದ ಆರಿಸಿ ಬಂದವರು.

ಸಾವುಕಾರ ಸಂಗಡದಿಂದ ಒಬ್ಬ ನನ್ನು, ಪಾಯಗಾ ಇಲಾಖೆಯ ಮೀರ್ ಮಜ್ಲಿಸ ನನ್ನು ನಾಮನಿರ್ದೇಶ ಮಾಡಲಾಗುವುದು.

**ಕಾಯದೇ ಮಂಡಲದ ಕಾರ್ಯಕ್ಷೇತ್ರ:**–ಕಾಯದೇ ಮಂಡಲವು ಕಾಯ ದೆಯ ವಿಷಯಗನ್ನು ಪರಿಯಾಲೋಚಿಸಿ, ಮಸೂದೆಗಳನ್ನು ಅಂಗೀಕಾರಕ್ಕಾಗಿ ಮಂಡಿ ಸುವುದು.

ಈ ಕೆಳಗಿನ ವಿಷಯಗಳ ಮಸೂದೆಗಳನ್ನು ಮಂಡಿಸಬೇಕಾದರೆ ಮುಖ್ಯ ಮಂತ್ರಿಗಳ ಅಪ್ಪಣೆ ಪಡೆಯಬೇಕು.

೧. ಭೂಕಂದಾಯ, ಸರಕಾರಿ ಸಾಲ, ಸರಕಾರಿ ಬೊಕ್ಕಸಕ್ಕೆ ತಗಲುವ ಭಾರ.
೨. ಸಂಸ್ಥಾನದಲ್ಲಿ ವಾಸಿಸುವ ಯಾವುದೇ ಸಂಗಡದ ಧಾರ್ಮಿಕ ವಿಷಯ.
೩. ಸಂಸ್ಥಾನದ ಸೇನೆಯ ಶಿಕ್ಷಣ ಹಾಗು ಅದರ ತರಬೇತು.
೪. ಬ್ರಿಟಿಷ್ ಸರಕಾರ ಹಾಗು ನಿಜಾಮ ಸರಕಾರಗಳ ಸಂಬಂಧ.
೫. ಕಾಯದೆ ಮಂಡಲದ ಸಂಘಟನೆ.
೬. ಸದ್ಯಃ ಪ್ರಚಾರದಲ್ಲಿರುವ ಪ್ರಭುಗಳವರ ಮಹದಾಜ್ಞೆಗಳಿಗೆ ಯಾವ ರೀತಿಯಿಂದಲಾದರೂ ಅಸಂಬದ್ಧವಾಗಿರುವ ವಿಷಯಗಳು.

ಈ ವಿಷಯಗಳ ಕಾಯದೆಗಳು ಒಂದುವೇಳೆ ಮುಖ್ಯಮಂತ್ರಿಗಳ ಸಮ್ಮತಿ ಯಿಂದ ಕಾಯದೇ ಮಂಡಲದಲ್ಲಿ ಪಾಸಾದರೂ, ಇವು ಪ್ರಭುಗಳ ಸಮ್ಮತಿಯ ವಿನಾ ಜಾರಿಗೆ ಬರಲಾರವು.

ಹಿಂದುಸ್ಥಾನದಲ್ಲಿ ಸಂಯುಕ್ತ ಘಟನೆ ಜಾರಿಗೆ ತರಬೇಕೆಂಬ ಯೋಜನೆಯು ಬಂದಮೇಲೆ ದೇಶೀ ಸಂಸ್ಥಾನದಲ್ಲೆಲ್ಲ ರಾಜ್ಯಾಂಗ ಸುಧಾರಣೆಗಳನ್ನು ಕಾಲಕ್ಕನು ಗುಣವಾಗಿ ಜಾರಿಯಲ್ಲಿ ತಂದರು. ನಮ್ಮ ಪ್ರಭುಗಳು ಕೂಡ ಈಗಿರುವ ರಾಜ್ಯಕ್ರಮ ವು ಸುಧಾರಿಸುವದಕ್ಕಾಗಿ ಪ್ರಜೆರು ಆಡಳಿತದೊಡನೆ ಸಹಕರಿಸಬೇಕೆಂಬ ಉದ್ದೇಶ

ದಿಂದ ಕೆಲವು ಸಲಹೆ ಸೂಚನೆಗಳನ್ನು ಕೊಡಬೇಕೆಂದು ದಿವಾನ್ ಬಹಾದ್ದೂರ್ ಆರ್ವಾಮುದು ಐಂಗಾರ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕ್ರಿ. ಶ. ೧೯೩೮ ರಲ್ಲಿ ನಿಯಮಿಸಿದರು. ಈ ಐಂಗಾರ ಸಮಿತಿಯು ಒಂದು ವರದಿಯನ್ನು ತಯಾರಿಸಿ ಸರಕಾರದವರಲ್ಲಿ ಮುಂಡಿಸಿತು. ಸರಕಾರವು ಈ ವರದಿಯನ್ನನುಲಕ್ಷಿಸಿ ತನ್ನ ಶಿಫಾರಸುಗಳನ್ನು ಮಂಜೂರಿಗಾಗಿ ಪ್ರಭುಗಳ ಸನ್ನಿಧಿಗೆ ಕಳಿಸಿತು. ಪ್ರಭುಗಳು ಈ ರಾಜ್ಯಾಂಗ ಸುಧಾರಣೆಗಳಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಅವುಗಳನ್ನು ೧೩೪೯ ನೆಯ ಫಸಲಿಯಲ್ಲಿ ಪ್ರಕಟಿಸಿದರು. ಈ ರಾಜ್ಯಾಂಗ ಸುಧಾರಣೆಗಳನ್ನು ನಿಧಾನವಾಗಿ ಜಾರಿಯಲ್ಲಿ ತರಲಾಗುವುದೆಂದು ಮೊನ್ನೆ ತಾನೇ ಸರಕಾರದವರು ಪ್ರಕಟಿಸಿದ್ದಾರೆ.

ನಮ್ಮ ಪ್ರಭುಗಳು ಸಾಂಘಿಕ ಆಡಳಿತಕ್ಕೆ ಮಹತ್ವಕೊಟ್ಟು ಪ್ರಜೆಗಳ ಅಳೇಕ ಹಿತಗಳನ್ನು ಗಮನಿಸಿ ಮಾಡಿರುವ ಈ ಘೋಷಣೆಯು ಸಂಸ್ಥಾನದ ಎಲ್ಲ ಭಾಗದಲ್ಲಿಯೂ ಸ್ವಾಗತಿಸಲಾಗಿದೆ. ಈ ಸುಧಾರಣೆ ಗನುಸರಿಸಿ ಅಧಿಕಾರಿಗಳಿಲ್ಲದವರ ಬಹುಸಂಖ್ಯೆಯುಳ್ಳ ೮೫ ಜನ ಸದಸ್ಯರನ್ನೊಳಗೊಂಡು ಔದ್ಯೋಗಿಕ ತಳಹದಿಯಮೇಲೆ ರಚಿತವಾದ ಒಂದು ಕಾಯದೆ ಮಂಡಲವನ್ನು, ಧಾರ್ಮಿಕ ವ್ಯವಸ್ಥೆ ಮುಂತಾದ ಒಟ್ಟು ಆರು ಕಾಯದೆ ಬದ್ಧ ಸಲಹೆಗಾರರ ಮಂಡಲಗಳನ್ನು ಯೋಜಿಸಲಾಗಿದೆ. ಗ್ರಾಮ ಪಂಚಾಯತಿ, ಜಿಲ್ಲಾ ಪೌರ ಸಭೆ, ಕಸ್ಬಾ ಕಮೀಟಿ ಜಿಲ್ಲಾ ಬೋರ್ಡು, ಹೈದರಾಬಾದಿನ ಪೌರ ಸಭೆ ಮುಂತಾದವುಗಳು ಏರ್ಪಡುವವು. ಇವು ಕೂಡ ಔದ್ಯೋಗಿಕ ತಳಹದಿಯಮೇಲೆ ರಚಿತವಾಗುವವು. ಈ ಎಲ್ಲ ಸಂಸ್ಥೆಗಳಲ್ಲಿಯೂ ಸಂಯುಕ್ತ ಚುನಾವಣೆಯನ್ನು ನಡೆಯಿಸಲಾಗುವದು.

ಈ ಸುಧಾರಣೆಗಳ ಯೋಜನೆಯಲ್ಲಿ ಐಂಗಾರ ಸಮಿತಿಯ ಸಲಹೆ ಸೂಚನೆಗಳನ್ನು ಸಾಕಷ್ಟು ಗಮನಿಸಲಾಗಿದೆ. ಪ್ರಜೆರಿಗೆ ರಾಜ್ಯಾಡಳಿತದಲ್ಲಿ ಭಾಗವಹಿಸಲು ಈ ಸುಧಾರಣೆಗಳು ತಳಹದಿಯಾಗಬಹುದು.

ಒಟ್ಟಾರೆ, ಕಾಲಕಾಲಕ್ಕೆ ರಾಜ್ಯಕ್ರಮದಲ್ಲಿ ಬದಲಾವಣೆಯಾಗುತ್ತ ಬಂದಿರುವುದು ಕೇವಲ ಜನತೆಯ ಆಶೆ ಆಕಾಂಕ್ಷೆಗಳಿಗನುಸರಿಸಿ ಎಂದು ಹೇಳುವಂತಿಲ್ಲವಾದರೂ ರಾಜ್ಯ ಕ್ರಮವು ಹೊಸದಾಗಿ ರೂಪಗೊಳ್ಳುವಾಗ ಜನತೆಯ ಬೇಡಿಕೆಗಳ ಒತ್ತಾಯದ ಪರಿಣಾಮ ಆಗಿಲ್ಲವೆಂದು ಹೇಳುವಹಾಗಿಲ್ಲ. ಸರಿ, ಕಾಲ ಕಾಲಕ್ಕೂ ಪ್ರಜೆರು ತಮ್ಮ ಮನೋರಥಗಳನ್ನೂ, ಆಶೆ ಆಕಾಂಕ್ಷೆಗಳನ್ನೂ ಸರಕಾರಕ್ಕೆ ತಿಳಿಯಪಡಿಸುವದು ಸರಕಾರವು ಕಾಲಮಾನ ಪರಿಸ್ಥಿತಿಗನುಸರಿಸಿ ರಾಜ್ಯಕ್ರಮದಲ್ಲಿ ಮಾರ್ಪಾಡು ಮಾಡುವುದು ಸಹಜವಾಗಿದೆ. ಇದರಿಂದಲೇ ದೇಶದುನ್ನತಿಯಾಗಬಲ್ಲದು.


ಹೈದರಾಬಾದ್ ಸಂಸ್ಥಾನ
ಮಹಾರಾಷ್ಟ್ರ
ತೆಲಂಗಾಣ
ಕರ್ನಾಟಕ
ಗುರುತು
ಕಸ್ಬಾ
ತಾಲೂಕು
ಜಿಲ್ಹೆ
ಪವಿತ್ರಕ್ಷೇತ್ರ
ರಾಜಧಾನಿ
ಐತಿಹಾಸಿಕ ಸ್ಥಳ
ಗಿರಿಗಳು
ನದಿಗಳು
ಉಗಿಬಂಡಿಮಾರ್ಗ
ಮೇರೆ
ಹೈದರಾಬಾದ್ ಕರ್ನಾಟಕ
ನಾಂದೇಡು
ನಿಜಾಮಾಬಾದು
ಕಲ್ಯಾಣ
ಭೀಮಾ ನದಿ
ಕೃಷ್ಣಾ ನದಿ
ರಾಯಚೂರು
ಮಹಬೂಬನಗರ
ಮುಂಬಯಿ ಪ್ರಾಂತ
ಮದರಾಸು ಪ್ರಾಂತ
ತುಂಗಭದ್ರಾ ನದಿ

## ಕೆಲವು ಸಂಖ್ಯೆಗಳು.

| | ಹೈದರಾಬಾದು ಸಂಸ್ಥಾನ | ಕನ್ನಡ ಪ್ರಾಂತ |
|---|---|---|
| ಕ್ಷೇತ್ರ | † ೧,೦೦,೪೫೯ ಚೌ. ಮೈ. | ೧೧,೪೧೯ ಚೌ. ಮೈ. |
| ಜನಸಂಖ್ಯೆ | ೧ ಕೋಟಿ ೮೦ ಲಕ್ಷ | ಸುಮಾರು ೩೦ ಲಕ್ಷ (ಕನ್ನಡಿಗರು ಸುಮಾರು ೨೦ ಲಕ್ಷ) |
| ಹಳ್ಳಿಗಳ ಸಂಖ್ಯೆ | ೨೧,೬೯೭ | ೪,೫೯೬ |
| ಪಟ್ಟಣಗಳ ಸಂಖ್ಯೆ | ೧೩೩ | ೪೨ |
| ಭೂಕಂದಾಯ | ೮೯೨.೬೪ ಲಕ್ಷ ರೂ. | ೪೬.೮೯ ಲಕ್ಷ ರೂ |

† ವರ್ಹಾಡ ಪ್ರಾಂತವನ್ನು ಬಿಟ್ಟು ಕ್ಷೇತ್ರ, ೮೨,೬೯೮ ಚೌ. ಮೈ.

# ಪರಿಚಯವಿಭಾಗ

## ಪರಿವಿಡಿ


ಸಂಸ್ಥಾನಾಧೀಶರು, ಜಾಗೀರದಾರರು, ದೇಸಾಯಿ ದೇಶಮುಖರು ೧

ಸರಕಾರಿ ಅಧಿಕಾರಿಗಳು. ೧೧

ವಕೀಲರು ೨೫

ಖಾನಗಿ ಡಾಕ್ಟರರು, ವೈದ್ಯರು. ೪೧

ಸಾಹುಕಾರರು, ವ್ಯಾಪಾರಿಗಳು. ೪೬

ನಾಡನುಡಿಯ ಸೇವಕರು. ೫೨

## ಕೆಲವು ಸಂಖ್ಯೆಗಳು.

| | ಹೈದರಾಬಾದು ಸಂಸ್ಥಾನ | ಕನ್ನಡ ಪ್ರಾಂತ |
|---|---|---|
| ಕ್ಷೇತ್ರ | † ೧,೦೦,೪೫೯ ಚೌ. ಮೈ. | ೧೧,೪೧೯ ಚೌ.ಮೈ. |
| ಜನಸಂಖ್ಯೆ | ೧ ಕೋಟಿ ೮೦ ಲಕ್ಷ | ಸುಮಾರು ೩೦ ಲಕ್ಷ (ಕನ್ನಡಿಗರು ಸುಮಾರು ೨೦ ಲಕ್ಷ) |
| ಹಳ್ಳಿಗಳ ಸಂಖ್ಯೆ | ೨೧,೬೯೭ | ೪,೫೯೬ |
| ಪಟ್ಟಣಗಳ ಸಂಖ್ಯೆ | ೧೩೩ | ೪೨ |
| ಭೂಕಂದಾಯ | ೮೯೨.೬೪ ಲಕ್ಷ ರೂ. | ೪೬.೮೯ ಲಕ್ಷ ರೂ |

† ವರ್ಹಾಡ ಪ್ರಾಂತವನ್ನು ಬಿಟ್ಟು ಕ್ಷೇತ್ರ, ೮೨,೬೯೮ ಚೌ. ಮೈ.

# ಪರಿಚಯವಿಭಾಗ

---

## ಪರಿವಿಡಿ


| | | |
|---|---|---|
| | ಸಂಸ್ಥಾನಾಧೀಶರು, ಜಾಗೀರದಾರರು, ದೇಸಾಯಿ ದೇಶಮುಖರು | ೧ |
| ೨ | ಸರಕಾರಿ ಅಧಿಕಾರಿಗಳು. | ೧೧ |
| ೩ | ವಕೀಲರು | ೨೫ |
| ೪ | ಖಾನಗಿ ಡಾಕ್ಟರರು, ವೈದ್ಯರು. | ೪೧ |
| ೫ | ಸಾಹುಕಾರರು, ವ್ಯಾಪಾರಿಗಳು. | ೪೬ |
| ೬ | ನಾಡನುಡಿಯ ಸೇವಕರು. | ೫೨ |

# ನವ್ವಾಬ್ ಸಾಲಾರ್‌ಜಂಗ್ ಬಹಾದ್ದೂರ್ ಅವರ ಜಾಗೀರಿ



ಆಳುವ ನವ್ವಾಬ್ ಸಾಲಾರ್‌ಜಂಗ್ ಬಹಾದ್ದೂರ್

## ಕೊಪ್ಪಳ.

ನವ್ವಾಬ್ ಸಾಲಾರ್‌ಜಂಗ್ ಬಹಾದ್ದೂರ್ ಅವರ ಜಾಗೀರುಗಳಲ್ಲಿ ಕೊಪ್ಪಳ ಜಿಲ್ಲೆಯು ಕನ್ನಡ ಪ್ರಾಂತಕ್ಕೆ ಸೇರಿದ ರಾಯಚೂರು ಜಿಲ್ಲೆಯಲ್ಲಿದೆ. ಅವರ ಜಾಗೀರಿಯ ದೊಡ್ಡ ಭಾಗ ಕೊಪ್ಪಳ. ಎಲಬುರ್ಗಿ, ಕೊಪ್ಪಳ, ಹೀಗೆ ಎರಡು ತಾಲೂಕುಗಳು. ಒಟ್ಟು ಗ್ರಾಮುಗಳು ೨೭೧. ಜನಸಂಖ್ಯೆ ಒಂದುಲಕ್ಷ ಅರವತ್ತಾರುಸಾವಿರ. ಇಲ್ಲಿಯ ಭೂಮಿ ಫಲವತ್ತಾದುದು. ವಾರ್ಷಿಕಉತ್ಪನ್ನ ಸುಮಾರು ಎಂಟು ಲಕ್ಷಗಳವರೆಗೆ ಇದೆ. ಇಲ್ಲಿಯ ಆಡಳಿತ ಕ್ರಮ, ಖಾಲಸಾ ಇಲಾಖೆಗೆ ಸರಿಗಟ್ಟುವಂತಿದೆ. ಕೊಪ್ಪಳದಲ್ಲಿ ಒಂದು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಉನ್ನತ ಶಾಲೆ ಇರುವುದಲ್ಲದೆ, ಬಹುತೇಕ ಹಳ್ಳಿ, ಹಳ್ಳಿಗೂ ಶಾಲೆಗಳ ಏರ್ಪಾಟಿದೆ. ಈ ಜಿಲ್ಲೆಯ ಒಂದುಕಡೆ ಮದರಾಸು, ಇನ್ನೊಂದುಕಡೆ ಮುಂಬಯಿ, ಪ್ರಾಂತಗಳಿವೆ. ಹೀಗೆ ಈ ಎರಡು ಪ್ರಾಂತಗಳಿಗೆ ಸೇರಿದ ಹೊಸಪೇಟೆ, ಹಾಗು ಗದಗು ತಾಲೂಕುಗಳ ಮಧ್ಯದಲ್ಲಿದ್ದ ಕಾರಣ, ಇಲ್ಲಿಯ ಜನತೆಯಲ್ಲಿ ಅಸಾಧಾರಣವಾದ ಜಾಗ್ರತೆ ಕಂಡುಬರುತ್ತದೆ. ಅಲ್ಲದೆ ಉನ್ನತ ಶಿಕ್ಷಣವನ್ನುಪಡೆದ ಜನರಾದರೂ ಹೆಚ್ಚಿಗೆ ಇದ್ದಾರೆ. ತುಂಗಭದ್ರಾ ನದಿಯಿಂದ ನೀರಾವರಿಯೂ ಆಗುತ್ತಲಿದೆ. ಕಬ್ಬು, ಭತ್ತ, ಬೆಳೆಯುತ್ತದೆ. ಇಲ್ಲಿ ಸಕ್ಕರೆಯ ಗಿರಣಿಗೂ ಹಾಗು ಇತರ ಔದ್ಯೋಗಿಕ ಪ್ರಯತ್ನಗಳಿಗೂ ಸಾಕಷ್ಟು ಆಸ್ಪದವಿದೆ. ಈ ಎಲ್ಲ ಸಲಕರಣೆಗಳು ಒದಗಿದರೆ ಕೊಪ್ಪಳವು ನಮ್ಮ ಸಂಸ್ಥಾನದಲ್ಲಿಯೇ ದೊಡ್ಡ ನಗರವಾಗಬಹುದು. ಜಾಗೀರನ್ನಾಳುವ ಈಗಿನ ಮೂರನೆಯ ಸಾಲಾರ್‌ಜಂಗ್ ಬಹಾದ್ದೂರರಾದ ಅಮೀರೆ ಕಬೀರ್ **ನವ್ವಾಬ್ ಮೀರ್ ಯುಸುಫ್ ಅಲೀಖಾನ ಬಹಾದ್ದೂರ್ ಅವರು** ಆ ಭವಿತವ್ಯತೆಯ ತಳಗಲ್ಲನ್ನು ಹಾಕಹತ್ತಿದ್ದಾರೆ. ಕೊಡುಗೈಯವರೂ, ಪ್ರಗತಿಪ್ರಿಯರೂ ಆದ ನವ್ವಾಬರ ಆಡಳಿತದಲ್ಲಿ ಕೊಪ್ಪಳ ಜಿಲ್ಲೆಯು ಕಾಲಕ್ಕೆತಕ್ಕಂತೆ ಮುಂದುವರಿಯುವದರಲ್ಲಿ ಯಾವ ಸಂದೇಹವಿಲ್ಲ.

## ಗದ್ವಾಲ್ ಸಂಸ್ಥಾನ.

ಗದ್ವಾಲ್ ಸಂಸ್ಥಾನ ರಾಯಚೂರ ಜಿಲ್ಲೆಯಲ್ಲಿದೆ. ಸುಮಾರು ೧೨೦೦ ಚೌರಸಮೈಲು ಇದರಕ್ಷೇತ್ರ; ಕಳೆದ ಜನಪರಿಗಣನೆಯಂತೆ, ಜನಸಂಖ್ಯೆ ಒಂದುಲಕ್ಷ ಹತ್ತುಸಾವಿರ. ೧೨೨ ಹಳ್ಳಿಗಳಿವೆ. ಸುಮಾರು ೯ ಲಕ್ಷ ಉತ್ಪನ್ನ. ಸಂಸ್ಥಾನದ ಇತಿ ಹಾಸ ೧೩ ನೆಯ ಶತಮಾನದಿಂದ ಆರಂಭವಾಗಿದೆಯೆಂದು ತಿಳಿದುಬರುತ್ತದೆ.

ಸಾಮ್ರಾಟ ಔರಂಗಜೇಬನ ಜೈತ್ರಯಾತ್ರೆಯಲ್ಲಿ ಈ ಸಂಸ್ಥಾನವು ಸಹಾ ಯವನ್ನು ನೀಡಿ ಅವರೊಡನೆ ಗೆಳೆತನ ಬೆಳೆಯಿಸಿ ಅವರ ಆಶ್ರಯವನ್ನು ಪಡೆಯಿತು. ಆ ಮೊಗಲ ಬಾದಶಹರಿಗೆ ಈ ಸಂಸ್ಥಾನವು ನೀಡಿದ ಸಹಾಯಕ್ಕಾಗಿ ಬಾದಶಹರು ಬರೆದ ಪತ್ರಗಳಲ್ಲಿ ಇವರ ಸಹಾಯದ ಉಪಕಾರ ಸ್ಮರಿಸಲಾಗಿದೆ. ಇಷ್ಟೇಅಲ್ಲ ಈ ತೆರನಾದ ಸಹಾಯ ಮುಂದೆಯೂ ನೀಡುವದಾದರೆ ' ಕರ್ನಾಟಕಪ್ರಾಂತವನ್ನೇ ನಿಮಗೆ ಕೊಡಲಾಗುವದೆಂದು ' ಕೂಡ ಒಂದು ಪತ್ರದಲ್ಲಿ ಉಲ್ಲೇಖವಿದೆ.

ಕ್ರಿ. ಶ. ೧೭೨೩ ರಲ್ಲಿ ಈ ಸಂಸ್ಥಾನವು ನಿಜಾಮರ ಆಡಳಿತಕ್ಕೆ ಬಂತು. ಅಲ್ಲಿಂದ ಇಂದಿನವರೆಗೆ ನಿಜಾಮ ರಾಜ್ಯಕ್ಕೆ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಬಂದಿದೆ.

ರಾಜಾ ಸೀತಾರಾಮ ಭೂಪಾಲರಮರಣವಾದುದರಿಂದ, ೧೯೨೮ ಇಸವಿಯಲ್ಲಿ ನಿಜಾಮಸರಕಾರವು ಈ ಸಂಸ್ಥಾನದ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡಿತು. ಆದರೆ ೧೯೩೪ರಲ್ಲಿ ಪುನಃ ಈ ವ್ಯವಸ್ಥೆಯನ್ನು ಸಂಸ್ಥಾನದ ಮಹಾರಾಣಿ ಯವರಾದ ಆದಿಲಕ್ಷ್ಮಮ್ಮ ನವರಿಗೆ ಒಪ್ಪಿತು.

ಈ ಮಹಾರಾಣಿಯವರಿಗೆ ಗಂಡುಮಕ್ಕಳಿಲ್ಲ. ತಮ್ಮ ಮಗಳ ಮಗನಾದ ಶ್ರೀಮಂತ ರಾಜಾಕೃಷ್ಣರಾಮ ಭೂಪಾಲರನ್ನು ದತ್ತಕ್ಕೆ ತೆಗೆದುಕೊಂಡಿದ್ದಾರೆ. ಇವರು ಈಗ ಜಾಗೀರದಾರರ ಕಾಲೇಜಿನಲ್ಲಿ ಓದುತ್ತಿದ್ದಾರೆ.

ಗದ್ವಾಲದ ಆಂತರಿಕ ವ್ಯವಸ್ಥೆ ಸಂಸ್ಥಾನಕ್ಕೆ ಸಂಭಂಧಿಸಿದೆ. ರಾಜಧಾನಿಯಾದ ಗದ್ವಾಲದಲ್ಲಿ ಹೈಸ್ಕೂಲು, ಆಸ್ಪತ್ರೆ, ಹೆರಿಗೆ ಆಸ್ಪತ್ರೆಗಳಿವೆ. ನ್ಯಾಯದಸ್ಥಾನವಿದೆ. ಈ ಸಂಸ್ಥಾನದ ಕೆಲವು ಹಳ್ಳಿಗಳಲ್ಲಿ ಹಾಗು ಗದ್ವಾಲದಲ್ಲಿ ಕನ್ನಡಿಗರಿದ್ದಾರೆ. ಅನೇಕ ದಾಸರು ಈ ಸಂಸ್ಥಾನದಲ್ಲಿಯೇ ಹುಟ್ಟಿದ್ದಾರೆ. ಕನ್ನಡಕ್ಕೆ ತಕ್ಕ ನ್ಯಾಯ್ಯತೆಸಂಸ್ಥಾನದಲ್ಲಿ ದೊರಕಬೇಕಾಗಿದೆ. ಇಲ್ಲಿಯ ಖಾದಿ ಉತ್ಪಾದನೆಯ ಕೆಂದ್ರಕ್ಕೆ ಇವರ ಆಶ್ರಯವಿದೆ.

ಗದ್ವಾಲ್ ಸಂಸ್ಥಾನವು ಪ್ರತಿವರ್ಷವೂ ಕಾರ್ತಿಕ ಹಾಗು ಮಾಘ ಮಾಸಗಳಲ್ಲಿ ಸುಮಾರು ೪೦ ಸಾವಿರ ರೂಪಾಯಿಗಳನ್ನು ಧಾರ್ಮಿಕ, ಸಮಾಜಿಕ,ಸಾಹಿತ್ಯ ಮುಂತಾದ ಸಾರ್ವಜನಿಕ ಸಂಸ್ಥೆಗಳಿಗೂ, ಪಂಡಿತರಿಗೂ ದಾನವಾಗಿ ಕೊಡುತ್ತದೆ. ಇಂಥ ಔದಾರ್ಯ ನಾವು ಇತರ ಸಂಸ್ಥಾನಗಳಲ್ಲಿ ಕಾಣುವದಿಲ್ಲ. ಈ ಔದಾರ್ಯ ಸದಾ ಬೆಳಗುತ್ತಿರಲಿ.

---

## ಗುಡಗುಂಟಿ ಸಂಸ್ಥಾನ.

ಕರ್ನಾಟಕ ಭಾಗದಲ್ಲಿರುವ ದೊಡ್ಡ ಸಂಸ್ಥಾನಗಳಲ್ಲಿ ಇದು ಮೂರನೆಯದು. ರಾಯಚೂರು ಜಿಲ್ಲೆಗೆ ಸೇರಿದೆ. ಸುಪ್ರಸಿದ್ಧ ಬಂಗಾರದ ಗಣಿ ಇದೇಸಂಸ್ಥಾನದ ಹಟ್ಟಿಯಲ್ಲಿದೆ. ೪೧ ಹಳ್ಳಿಗಳ ಈ ಸಂಸ್ಥಾನಕ್ಕೆ ಸುಮಾರು ಎಪ್ಪತ್ತು ಸಾವಿರ ಉತ್ಪನ್ನವಿದೆ. ಸಂಸ್ಥಾನಕ್ಕೆ ಪೋಲಿಸು ದಳವಿದೆ. ನ್ಯಾಯಾಸ್ಥಾನವಿದೆ. ಸಂಸ್ಥಾನದ ಮುಖ್ಯ ಸ್ಥಳವಾದ ಗುಡಗುಂಟಿಯಲ್ಲಿ ಒಂದು ಆಸ್ಪತ್ರೆ, ಒಂದು ಪ್ರಾಥಮಿಕ ಶಾಲೆಇವೆ. ಈಗ ಸಂಸ್ಥಾನಾಧೀಶರಾಗಿರುವ ರಾಜಾ ಜಡಿಸೋಮಪ್ಪ ನಾಯಕರು ಹೈದರಾಬಾದು ನಗರದಲ್ಲಿ ವಾಸಿಸುತ್ತಾರೆ. ಸಂಸ್ಥಾನದ ಕಾರಭಾರಗಳಲ್ಲಿ ಇಲ್ಲಿಂ ಆಸಕ್ತಿಯನ್ನು ವಹಿಸುತ್ತಾರೆ. ಕನ್ನಡಭಾಷೆ ಹಾಗೂ ಸಂಸ್ಕೃತಿಗಳ ಬಗ್ಗೆ ರಾಜಾ ಸಾಹೇಬರಿಗೆ ತುಂಬಾ ಆದರವಿದೆ.

---

## ಆನೆಗುಂದಿ ಸಂಸ್ಥಾನ.

ಪುರಾಣ ಪ್ರಸಿದ್ಧವಾದ ಕಿಷ್ಕಿಂಧಾ ನಗರವೇ ಆನೆಗುಂದಿಯೆಂದು ಐತಿಹ್ಯವಿದೆ. ಹಿಂದಕ್ಕೆ ಆನೆಗುಂದಿಯು ಕನ್ನಡ ಸಾಮ್ರಾಟರ ರಾಜಧಾನಿಯಾಗಿತ್ತು. ಇಂದು ಈ ಸಂಸ್ಥಾನಕ್ಕೊಳಪಟ್ಟಿರುವ ಹಳ್ಳಿಗಳು ೨೧ ಮಾತ್ರ. ವಾರ್ಷಿಕ ಉತ್ಪನ್ನ ಸುಮಾರು ೨೮ ಸಾವಿರ. ಈಗ ಈ ಸಂಸ್ಥಾನಾಧೀಶರಾದ ಕೃಷ್ಣದೇವರಾಯರು ವಿಶ್ವವಿದ್ಯಾಲಯದಲ್ಲಿ ಉಚ್ಚ ಶಿಕ್ಷಣವನ್ನು ಪಡೆದು ಪದವೀಧರರಾಗಿದ್ದಾರೆ.

---

## ಚಿಂಚೋಳಿ.

ಕಲಬುರ್ಗಿ ಜಿಲ್ಲೆಯ ತಾಲೂಕಾದ ಚಿಂಚೋಳಿಯಲ್ಲಿ ಅನೇಕ ಜಾಗೀರುಗಳಿವೆ. ಅವುಗಳಲ್ಲಿ ಚಿಂಚೋಳಿಯ ಜಾಗಿರಿಯು ದೊಡ್ಡದು. ಇದರ ಒಟ್ಟು ವಾರ್ಷಿಕ ಉತ್ಪನ್ನ ಸುಮಾರು ಒಂದು ಲಕ್ಷ. ಸಂಸ್ಥಾನದ ಆಡಳಿತವು ರಾಣೀ ಲಕ್ಷ್ಮೀಬಾಯಿಯವರ ನೇತೃತ್ವದಲ್ಲಿದೆ. ಇವರು ತಮ್ಮ ಭಾಗದಲ್ಲಿ ಶಿಕ್ಷಣಕ್ಕಾಗಿ ಒಳ್ಳೇ ಆಶ್ರಯವನ್ನು ಕೊಟ್ಟಿದ್ದಾರೆ. ಚಿಂಚೋಳಿಯಲ್ಲಿರುವ ಉಸ್ಮಾನಿಯಾ ಸ್ಕೂಲಿಗೆ ಧನ ಸಹಾಯವನ್ನು ಮಾಡುತ್ತಾರೆ. ಇವರು ಬಹಳ ಉದಾರ ಹೃದಯಿಗಳು. ಶಿಕ್ಷಣ ಮುಂತಾದ ಚಟುವಟಿಕೆಗಳಿಗೆ ಯಾವಾಗಲೂ ಯೋಗ್ಯ ಆಶ್ರಯವನ್ನು ಕೊಡುತ್ತಾರೆ. ಸ್ತ್ರೀ ಶಿಕ್ಷಣದ ಉನ್ನತಿಗಾಗಿ ಇವರಿಗೆ ವಿಶೇಷ ಆಸಕ್ತಿಯಿದೆ.

## ಬಹರೀ ಬಹಾದ್ದೂರ್ ರಾಜಾ ಶ್ರೀ ಕೃಷ್ಣಪ್ಪನಾಯಕರು, ಸುರಪುರ.

ಇವರು ಸುರಪುರ ಸಂಸ್ಥಾನದ ಇಂದಿನ ಪೀಠಾಧಿಕಾರಿಗಳು. ಇವರಿಗೆ ೬ ಜಾಗೀರುಗಳಿವೆ. ಉತ್ಪನ್ನ ಸರಾಸರಿ ೬೦ ಸಾವಿರ. ಇಲ್ಲಿಯ ಕರ್ನಾಟಕ ಸಂಘಕ್ಕೆ ಮಹಾಪೋಷಕರು. ಸಂಘದ ಜಾಗೆಯನ್ನು ದಾನವಾಗಿ ಕೊಟ್ಟಿದ್ದಾರೆ. ಧಾರ್ಮಿಕ ಮತ್ತು ಉದಾರ ಧೋರಣೆಯ ಗುಣದವರು. ಬೇಟೆಯಾಡುವದರಲ್ಲಿ ಎತ್ತಿದಕ್ಕೈ. ಇವರಿಗೆ ಮ್ಯಾಜಿಸ್ಟ್ರೇಟರ ಅಧಿಕಾರವಿದೆ. ಮಕ್ಕಳಿಗೆ ಉಚ್ಚ ಶಿಕ್ಷಣ ಕೊಡಿಸಿದ್ದಾರೆ.

## ಸಾಧು ಶ್ರೀ ಶರಣಬಸಪ್ಪ ಅಪ್ಪ ಕಲಬುರ್ಗಿ.

ಸಾಧು ಶರಣಬಸಪ್ಪ ಅಪ್ಪ ಅವರೆಂದರೆ ಯಾರು ಎಂದು ಹೇಳುವುದು ಅಗತ್ಯವಿಲ್ಲ. ಅವರು ಅಖಿಲ ಕನ್ನಡ ನಾಡಿನ ಭಕ್ತ ಸಮಾಜಕ್ಕೆ ಚಿರಪರಿಚಿತರಾಗಿದ್ದಾರೆ. ಕಳೆದ ೧೨೦ ವರ್ಷಗಳಿಂದ ಈ ಸಂಸ್ಥಾನವು ಜನತೆಯ ಆತ್ಮೋನ್ನತಿಯ ಸಲುವಾಗಿ ಹೆಣಗಾಡುತ್ತಿದೆ. ಈಗ ಅದರ ನೇತೃತ್ವ ಶ್ರೀ ಸಾಧು ದೊಡ್ಡಪ್ಪ ಅಪ್ಪ ಅವರ ಕೈಯಲ್ಲಿದೆ. ಸಾಧಾರಣವಾಗಿ ಜನರಲ್ಲಿಇವರು ಶರಣಬಸಪ್ಪ ಅಪ್ಪ ಅವರುಎಂಬ ಹೆಸರಿನಿಂದ ಪರಿಚಿತರಾಗಿದ್ದಾರೆ. ಇದರ ಕಾರಣ ಇವರ ಸರಳತನ, ಸೌಜನ್ಯತೆ, ಹಾಗು ಪರಮಾತ್ಮನಲ್ಲಿ ಇವರಿಗಿರುವ ಅಪಾರಭಕ್ತಿ. ಇವರು ಗಾದಿಗೆ ಶಾ. ಶ. ೧೮೩೬ ರಲ್ಲಿ

ಬಂದರು. ಅಂದಿನಿಂದ ಇಂದಿನವರೆಗೆ ತಮ್ಮ ತೇಜಸ್ಸಿನಿಂದಲೂ, ತಪಸ್ಸಿನ ಸಾಮರ್ಥ್ಯ ಯಿಂದಲೂ, ಭಕ್ತಜನ ಸಮೂಹದಲ್ಲಿ ಬಹಳ ಪ್ರೀತಿಗೆ ಪಾತ್ರರಾಗಿದ್ದಾರೆ. ಅಪ್ಪಅವರು ದೊಡ್ಡ ಯೋಗಿಗಳು. ದಿನಂಪ್ರತಿ ಎಲ್ಲರಿಗಾಗಿ ನಡೆಯುವ ದಾಸೋಗದಲ್ಲಿ ಒಪ್ಪತ್ತು ಊಟಮಾಡಿದರೆ ತೀರಿತು. ಇದೇ ಇವರ ಆಹಾರ. ಅಪ್ಪ ಅವರಲ್ಲಿರುವ ಇನ್ನೊಂದು ವೈಶಿಷ್ಟ್ಯವೇನೆಂದರೆ, ತಮ್ಮ ಮಗಳಾದ ಅಕ್ಕಮಹಾದೇವಿಯರ ಸ್ಮಾರಕಾರ್ಥವಾಗಿ



ಕಲಬುರ್ಗಿಯ ಇತಿಹಾಸ ಪ್ರಸಿದ್ಧ ಶ್ರೀ ಶರಣ ಬಸಪ್ಪ ಅಪ್ಪ ಅವರ ದೇವಾಲಯ.

ಹೆಣ್ಣುಮಕ್ಕಳಿಗಾಗಿ ಕನ್ನಡಶಾಲೆಯನ್ನು ಸ್ಥಾಪಿಸಿ, ಕಲಬುರ್ಗಿಯಲ್ಲಿ ಕನ್ನಡ ಪುನರುಜ್ಜೀವನದ ಕಾರ್ಯಕ್ಕೆ ತಮ್ಮ ಮಂಗಲಮಯ ಆಶೀರ್ವಾದಗಳನ್ನು ಸಲ್ಲಿಸಿದಂತೆ ಆಗಿದೆ. ಎಲ್ಲಜಾತಿಯ ಜನರು ಇವರನ್ನು ಪೂಜ್ಯಭಾವದಿಂದ ನೋಡುತ್ತಾರೆ. ಇವರು ತಪಸ್ವಿಗಳು. ಎಲ್ಲರಿಗೂ ತಮ್ಮ ಅಭಯದ ಹಸ್ತವನ್ನು ಯಾವಾಗಲೂ ನೀಡುತ್ತಾರೆ.

## ಶ್ರೀ ರಾಯ್ ಪಾಂಡುರಂಗ ರಾಯರು ದೇಶಮುಖ, ಕಲಬುರ್ಗಿ.



ಪಾಂಡುರಂಗರಾಯರು ದೇಶಮುಖ

ಕಲಬುರ್ಗಿಯ ಸುಪ್ರಸಿದ್ಧ ದೇಶಮುಖರಾದ ರಾಯ್ ಪಾಂಡುರಂಗ ರಾಯರಮನೆತನದ ಇತಿಹಾಸ ಸುಮಾರು ಐದುನೂರು ವರ್ಷಗಳ ಆಚಿನದು. ಇವರಲ್ಲಿರುವ ಆದಿಲ್‌ಷಾಹಿ, ಆಲಮ್‌ಗೀರಿ ಮತ್ತು ನಿಜಾಂ ಅಲಿಖಾನ್ ಬಹಾದ್ದೂರರ ಸನದುಗಳಿಂದ ಇವರ ಪೂರ್ವಿಜರ ಮಹತ್ವಪೂರ್ಣ ವ್ಯಕ್ತಿತ್ವದಗುರುತು ಚೆನ್ನಾಗಿ ಆಗುತ್ತದೆ. ಇತ್ತೀಚಿನ ಪತ್ರವ್ಯವಹಾರಗಳು ಮರಾಠಿಯಲ್ಲಿ ನಡೆದಿದ್ದರೂ, ಇವರ ಮೂಲ ಪುರುಷರ ರುಜುಗಳು ಕನ್ನಡದಲ್ಲಿ ಕಂಡುಬರುವುದರಿಂದ ಇವರು ಅಚ್ಚ ಕನ್ನಡಿಗರೆಂದು ತಿಳಿಯುತ್ತದೆ. ಅನಂತಮೂದ ಅರಸು ಇವರ ಮೂಲ ಪುರುಷರು. ಇವರ ಪರಂಪರೆಯಲ್ಲಿ ೧೭ನೇಯವರೇ ಶ್ರೀ. ರಾಯ್ ಪಾಂಡುರಂಗರಾಯರು. ಇವರು ದೇಶಮುಖ ಶ್ರೀ ದೇವರಾಯರ ದತ್ತಪುತ್ರರು. ಆಗ ಸಿಗುತ್ತಿದ್ದ ಇಂಗ್ಲೀಷ, ಉರ್ದು ಮುಂತಾದ ಭಾಷೆಗಳ ಶಿಕ್ಷಣವನ್ನು ಪಡೆದ ನಂತರ ವಕೀಲಿಯ ಪದವಿಯನ್ನು ಸಂಪಾದಿಸಿದರು. ೧೩೩೭ ನೇ ಫಸಲಿಯಿಂದ ಆನ್ರರರಿ ಮೆಜಿಸ್ಟ್ರೇಟರಾಗಿರುವರು. ೧೩೪೦ ನೇ ಫಸಲಿಯಿಂದ ಇವರಿಗೆ ಮೊದಲನೆಯ ತರಗತಿಯ ಮೆಜಿಸ್ಟ್ರೇಟರ ಅಧಿಕಾರಗಳನ್ನು ಕೊಡಲಾಗಿದೆ. ಕಾರಣ ಇವರ ಗಣನೆಯು ಆನರೆರಿ ಜಜ್‌ರಲ್ಲಿ ಆಗುತ್ತಿದೆ. ಸ್ಥಳೀಕ ಲೋಕಲ್‌ಫಂಡ್ ಸಮಿತಿಯ ಹಾಗು ಮಾರ್ಕೆಟಿಂಗ್ ಸಭೆಯ ಸದಸ್ಯರಾಗಿ ಜನರ ಉನ್ನತಿಗಾಗಿ ಹೆಣಗುತ್ತಿದ್ದಾರೆ. ರಾಯರು ಸರಳ ಸ್ವಭಾವದವರು. ಬಡಬಗ್ಗರಿಗೆ ಯೋಗ್ಯ ಸಹಾಯಮಾಡಲು ಸದಾಸಿದ್ಧರಿರುತ್ತಾರೆ. ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಆಶ್ರಯವನ್ನು ಕೊಡುತ್ತಾರೆ. ಇವರು ಆಸ್ತಿಕರು. ತಮ್ಮ ಧರ್ಮದಂತೆ ವರ್ತಿಸಿ ಭಗವದ್ಭಕ್ತರೆಂದು ಹೆಸರಾಗಿದ್ದಾರೆ. ಇವರ ಸಾಮರಸ್ಯಜೀವನವು ಅಧಿಕಾರಿಗಳಲ್ಲಿಯೂ, ಸಾರ್ವಜನಿಕರಲ್ಲಿಯೂ, ಭಿನ್ನಮತ ಪಂಗಡದ ಅನುಯಾಯಿಗಳಲ್ಲಿಯೂ ಇವರಿಗಾಗಿ ವಿಶೇಷವಾದ ಗೌರವ ತಂದಿದೆ.

## ಶ್ರೀ ರಾಯರ್ ಕೃಷ್ಣರಾಯರು ದೇಶಮುಖ, ಕಲಬುರ್ಗಿ.



ಶ್ರೀ ಕೃಷ್ಣರಾಯರು ದೇಶಮುಖ

ಕಲಬುರ್ಗಿಯ ಸುಪ್ರಸಿದ್ಧ ವತನದಾರ ನಾಗರಿಕರು. ಶಿಕ್ಷಣ ಪುಣೆಯ ಕೃಷಿಕ ಕಾಲೇಜಿನಲ್ಲಿ ಆಗಿದೆ. ರಾಯರು ಚಿಕ್ಕಂದಿನಿಂದಲೇ ದೇಶಮುಖಿಯ ಜವಾಬ್ದಾರಿಯನ್ನು ಚನ್ನಾಗಿ ಅರಿತಿದ್ದಾರೆ. ಆಗರ್ಭ ಶ್ರೀಮಂತರಾದರೂ, ಇವರಿಗೆ ಇಲ್ಲದ ದುಂದುಗಾರಿಕೆಯು ಸೇರುವುದಿಲ್ಲ. ಸಾಮಾಜಿಕ ವ್ಯವಹಾರದಲ್ಲಿ ಇವರು ಯಾವಾಗಲೂ ಸುಧಾರಕರು. ಪಾತ್ರಾಪಾತ್ರದ ವಿಚಾರಮಾಡಿ ದಾನ ಮಾಡುವವರೂ, ಸಮಾಜ ಸೇವೆಯನ್ನು ಸಲ್ಲಿಸುವವರೂ, ರಾಯರಿಂದ ಬಹಳ ಕಲಿಯಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿಯೇ ಉನ್ನತ ಶಿಕ್ಷಣ ಸಂಸ್ಥೆಯಾದ ನೂತನ ವಿದ್ಯಾಲಯವೇ ರಾಯರ ಸಾರ್ವಜನಿಕ ಕಾರ್ಯರಂಗ. ತಮ್ಮ ತಪಸ್ಸಿನ ಫಲದಿಂದ ಅದನ್ನು ಕಾಲೇಜನ್ನಾಗಿ ನೋಡಬೇಕೆಂದು ಇವರಿಗೆ ಹೆಬ್ಬಯಕೆ. ಶಾಲೆಗಾಗಿ ಭವ್ಯವಾದ ಕಟ್ಟಡವನ್ನು ಕಟ್ಟಿಸುವ ಪ್ರಯತ್ನದಲ್ಲಿದ್ದಾರೆ. ಸ್ತ್ರೀ ಶಿಕ್ಷಣಕ್ಕೆ ಪ್ರತ್ಯೇಕ ಏರ್ಪಾಟುಮಾಡಲಾಗಿದೆ. ಅಂತೆಯೇ ರಾಯರ ಮಾತೆಂದರೆ ಕಲಬುರ್ಗಿಯಲ್ಲಿ ಅಷ್ಟು ಮನ್ನಣೆ. ಇವರಲ್ಲಿ ಕನ್ನಡದ ಪ್ರೇಮ ಹೆಚ್ಚುತ್ತಲಿದೆ.

---

## ಶ್ರೀಮಂತ ಸ್ವಾಮಿರಾವ್ ದೇಸಾಯಿ ಮೋಹೇಥಾಳು.

ಮೋಹೇಥಾಳು ೨೫ ಗ್ರಾಮಗಳ 'ಬಿಲ್‌ಮುಕ್ತಾ'. ರಾಯಚೂರು ಜಿಲ್ಲೆಯಲ್ಲಿದೆ. ವಾರ್ಷಿಕ ಉತ್ಪನ್ನ ಸುಮಾರು ನಲವತ್ತು ಸಾವಿರ.

ಶ್ರೀಮಂತ ಸ್ವಾಮಿರಾಯರು ಈ ಸಂಸ್ಥಾನದ ಈಗಿನ ದೇಸಾಯಿಯವರು. ಚಿಕ್ಕಂದಿನಲ್ಲಿಯೇ ಇವರ ತಂದೆಯವರು ಸ್ವರ್ಗಸ್ಥರಾದುದರಿಂದ ಉಚ್ಚ ಶಿಕ್ಷಣದ ಇವರ ಆಶೆ ಅಳಿಯಿತು. ಅಧಿಕಾರ ಸೂತ್ರಗಳನ್ನು ವಹಿಸುವುದು ಅನಿವಾರ್ಯವಾಯಿತು. ಆದರೂ ಇವರು ಸ್ವಪ್ರಯತ್ನದಿಂದಲೇ ಅಸಾಧಾರಣ ವಿದ್ವತ್ತೆಯನ್ನು ಗಳಿಸಿದ್ದಾರೆ. ಕನ್ನಡದಲ್ಲಿವರು ನುರಿತವರು. ಸಂಸ್ಕೃತ, ಹಿಂದಿ, ಉರ್ದು, ಇಂಗ್ಲಿಷ ಭಾಷೆಗಳನ್ನು ಚನ್ನಾಗಿ ಬಲ್ಲರು. ಸಾವಿರಾರು ಪುಸ್ತಕಗಳ ಭಾಂಡಾರ ಇವರದಿದೆ.

ಕನ್ನಡ ಸಾಹಿತ್ಯಕ್ಕಿವರ ಹಣ ಹೊಳೆಯಾಗಿ ಹರಿದಿದೆ. ಇವರ ಸಹಾಯ ಸಹಕಾರಗಳಿಂದ ವರ್ಷಾಶನಗಳಿಂದ ಸಾಗಿದ ಪುಸ್ತಕ ಪತ್ರಿಕೆಗಳು, ಸಂಘ ಸಂಸ್ಥೆಗಳು ಹೇರಳವಾಗಿವೆ. ವಿದ್ಯಾಪ್ರದಾನ ಮಾಡುವ ಪಂಡಿತರು ಅದೆಷ್ಟೋ ಇದ್ದಾರೆ.

ಧನಿಯರು ತುಂಬಾ ಆಸ್ತಿಕರು. ಅನೇಕ ದೇವಾಲಯಗಳ ಜೀರ್ಣೋದ್ಧಾರ ಅದರ ಫಲ! ಇವರಿಗೆ ಸಂಗೀತ ನಾಟ್ಯಗಳಲ್ಲಿ ಅಭಿರುಚಿಯಿದೆ. ಆರ್ತರಿಗೆ, ಬಡವರಿಗೆ ಇವರದು ಮುಕ್ತದ್ವಾರ. ಜಿನ್ನಿಂಗ್ ಫ್ಯಾಕ್ಟರಿಯನ್ನು ಸ್ಥಾಪಿಸಿಯು, ಕೃಷಿಕರ್ಮವನ್ನು ವಿಕಾಸಗೊಳಿಸಿಯು ಬಡಕುಟುಂಬಗಳಿಗೆ ನಿರಂತರ ಉದ್ಯೋಗವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಜನತೆಯ ಆರ್ಥಿಕ ಸುಧಾರಣೆಗಾಗಿ ಒಂದು 'ಷಹರಿಬ್ಯಾಂಕ'ನ್ನು ಸ್ಥಾಪಿಸಿ, ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಬಡರೋಗಿಗಳಿಗಾಗಿ ಧರ್ಮಾರ್ಥ ಆಸ್ಪತ್ರೆಯನ್ನೂ ಕಟ್ಟಿಸಿದ್ದಾರೆ.

ಇವರು ಡಿಸ್ಟ್ರಿಕ್ಟ ಲೋಕಲ್ ಬೋರ್ಡಿಗೆ ತಾಲೂಕಿನ ಪರವಾಗಿ ಪ್ರತಿನಿಧಿಗಳು. ಮಹಾಪ್ರಭುಗಳಾದ ನಮ್ಮ ಹುಜೂರರವರ ರಜತ ಮಹೋತ್ಸವದಲ್ಲಿ ಗೌರವಾರ್ಥ ಇವರಿಗೆ ಪದಕವೊಂದುಬಂದಿದೆ.

---

## ಶ್ರೀ ಪುಟ್ಟಪ್ಪ ರಾಜರು, ಸುರಪುರ.

ಇವರು ರಾಜಾ ಕೃಷ್ಣಪ್ಪನಾಯಕರ ಬೀಗರು. ಇವರಿಗೂ ೮ ಜಾಗೀರುಹಳ್ಳಿಗಳಿವೆ.

---

## ಶ್ರೀಮಂತ, ಶ್ರೀಮಾನ್ ಶ್ರೀನಿವಾಸರಾವ್ ಜಮುದಾರಖಾನೆ, ಸುರಪುರ.

ಇವರಿಗೂ ಜಹಾಗೀರುಂಟು. ದೇಶಮುಖಿಯಿದೆ. ಇವರಅಣ್ಣಂದಿರಾದ ಶ್ರೀಮಾನ್ ವೆಂಕಟರಾಯರು ತಮ್ಮ ದೇಶಮುಖಿಯ ಗ್ರಾಮವಾದ ಹುಣಸಿಗಿಯಲ್ಲಿದ್ದಾರೆ. ಶ್ರೀ ಶ್ರೀನಿವಾಸರಾಯರು ಇಲ್ಲಿಯ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾರೆ. ಪ್ರಗತಿಯಮಾರ್ಗದವರು. ಹಸನ್ಮುಖಿಗಳು. ದಾನಿಗಳು. ಕನ್ನಡಿಗರ ಪ್ರಗತಿಗಾಗಿ ಹಾತೊರೆಯುತಿದ್ದಾರೆ.

---

## ಶ್ರೀಮಂತ ಶ್ರೀಮಾನ್ ಮುಜುಮುದಾರ ಭೀಮರಾಯರು, ಸುರಪುರ.

ಇವರ ತಂದೆಯವರಾದ, ಶ್ರೀ. ಲಿಂಗೋಪಂತರು, ಸುರಪುರ ಸಂಸ್ಥಾನವನ್ನು ತಿರುಗಿ ಪಡೆಯುವ ಸಲುವಾಗಿ ತುಂಬಾ ಪ್ರಯತ್ನಪಟ್ಟು ಅದರಲ್ಲಿಯೇ ಕಾಲ

ವಾದರು. ಶ್ರೀ ಭೀಮರಾಯರು ಶಿಸ್ತಿನವರು. ಪೇಶ್ವೆ ಥಾಟಿನವರು. ೧೦ ಸಾವಿರ ಉತ್ಪನ್ನದಾರರು. ೨ ಜಾಗೀರಿಗಳಿವೆ. ಸಗರ ನಾಡಿನಲ್ಲಿ ಇವರ ಹೊಲವಿಲ್ಲದ ಊರಿಲ್ಲ.

---

## ಶ್ರೀಮಾನ್ ಇಟಿಗೆಪಲ್ಲಿ ಬಾಪುರಾಯರು ದೇಶಪಾಂಡೆ, ಬೀದರ್.

ಮನೆತನದ ಇತಿಹಾಸ ಆದಿಲ್‌ಷಾಹಿ ಕಾಲದ ಆಚಿನದು. ಇವರ ಪೂರ್ವಿಜರು ವಿಜಾಪೂರದಿಂದ ಬೀದರ್ ಜಿಲ್ಲೆಗೆ ಆಗಿನ ರಾಜಾಧಿಕಾರಿಗಳಾಗಿ ಆಗಮಿಸಿದರು. ಇವರು ೧೨೨ ಗ್ರಾಮಗಳ ಜಮೀನದಾರರು. ರಾಯರ ಅಭ್ಯಾಸ ಪುಣೆಯ ಫರ್ಗ್ಯುಶನ್ ಕಾಲೇಜಿನಲ್ಲಿ ಆಗಿದೆ. ಇವರು ಆಗರ್ಭ ಶ್ರೀಮಂತರಾದರೂ ಕಾರ್ಯ ದಕ್ಷತೆಯು, ನ್ಯಾಯ ದೃಷ್ಟಿಯು ಹಾಗು ಮುತ್ಸದ್ದಿತನವೂ ದಂಗುಬಡಿಸುವಂತಹವು. ಇವರ ಪ್ರಭು ಪರಾಯಣತೆಯು ಆದರ್ಶಪೂರ್ಣ. ಸರಾಗವಾಗಿ ಸಾಗುವ ಸಾರ್ವಜನಿಕ ಚಟುವಟಿಕೆಗಳೆಂದರೆ ರಾಯರಿಗೆ ಪಂಚಪ್ರಾಣ. ಈ ಎಲ್ಲ ವೈಶಿಷ್ಟ್ಯಗಳಿಂದ ಸಾರ್ವಜನಿಕರಲ್ಲಿಯೂ, ಉನ್ನತ ಅಧಿಕಾರಿಗಳಲ್ಲಿಯೂ, ವಿಶ್ವಾಸವನ್ನು ಸಂಪಾದಿಸಿಕೊಂಡಿದ್ದಾರೆ. ರಾಯರು ಬೀದರ್ ಅಲ್ಲ-ಇಡೀ ಸಂಸ್ಥಾನದ ವತನದಾರರ ಕಣ್ಣೆಂದರೆ ಅತಿಶಯೋಕ್ತಿಯಲ್ಲ. ಈಗಾಗಲೆ ರಾಯರು ಜಿಲ್ಲೆಯ ಲೋಕಲ್ ಬೋರ್ಡಿನ ಸದಸ್ಯರಾಗಿಯೂ ಜಿಲ್ಲೆಯ ಮುನ್ಸಿಪಾಲ್ಟಿಯ ಸದಸ್ಯರಾಗಿಯೂ, ಜಿಲ್ಲೆಯ ಜೀವರಕ್ಷಾ ಸಂಸ್ಥೆಯ ಕಾರ್ಯದರ್ಶಿಗಳಾಗಿಯೂ, ಅವಿಶ್ರಾಂತವಾಗಿ ಜನತೆಯ ಹಿತಕ್ಕಾಗಿ ದುಡಿದಿದ್ದಾರೆ. ಇವರಿಗೆ ಗ್ರಾಮೋದ್ಧಾರ ಚಳವಳಿಯಲ್ಲಿ ಪೂರ್ಣಆಸಕ್ತಿಯಿದೆ. ಗ್ರಾಮೋದ್ಧಾರದ ಜಿಲ್ಲಾಸಮಿತಿಯ ಸದಸ್ಯರಾಗಿ ಆ ಕಾರ್ಯ ಮುಂದುವರಿಸಿದ್ದಾರೆ. ಸುಪ್ರಸಿದ್ಧ ಶಿಕ್ಷಣ ಸಂಸ್ಥೆಯಾದ ಮೋಮಿನಾಬಾದಿನ ನೂತನ ವಿದ್ಯಾಲಯದ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾಗಿ ಅದರ ಉನ್ನತಿಗಾಗಿ ಬಹಳವಾಗಿ ಹೆಣಗಾಡ ಹತ್ತಿದ್ದಾರೆ. ರಾಯರ ವಯಸ್ಸು ೪೩. ಇವರಿಂದ ಜನತೆಯ ಕಲ್ಯಾಣದ ಬಹಳ ಕಾರ್ಯಗಳು ಜರುಗ ಬೇಕಾಗಿವೆ.

---

## ರಾಜಾ ಶ್ರೀನಿವಾಸರಾವ್ ಕಾರವಾನ್‌ಕರ್.

ಇವರು ಮುಂಬಯಿಪ್ರಾಂತದ ನ್ಯಾಮ್ಯ ಮನೆತನದವರು. ಇಲ್ಲಿಯ ಕಾರವಾನ ಜಾಗೀರದಾರರ ಮನೆತನಕ್ಕೆ ದತ್ತಕ್ಕೆ ಬಂದಿದ್ದಾರೆ. ಇವರ ವಾರ್ಷಿಕ ಉತ್ಪನ್ನ ಸುಮಾರು ೨೫ ಸಾವಿರ. ಮುಂಬೈ ವಿಶ್ವವಿದ್ಯಾನಿಲಯದಿಂದ ಬಿ.ಎ.,ಎಲ್ಎಲ್.ಬಿ., ಪಾಸಾದರು. ಮುಂದೆ ಇಂಗ್ಲಂಡಿಗೆಹೋಗಿ ಬಾರ್-ಎಟ್-ಲಾ

ಪಾಸಾಗಿ ಬಂದರು. ರಾಜಾ ಶಾಮರಾಜ ಬಹಾದ್ದೂರ್ ಅವರ ಸೋದರಿಯವರೊಡನೆ ಇವರ ವಿವಾಹ ವಾಗಿದೆ.

ಇವರು ಒಂದೆರಡು ವರ್ಷ ವಕೀಲಿ ಮಾಡಿದರು. ಆಮೇಲೆ ಎನ್. ಎಸ್. ರೇಲ್ವೆಯ ಸ್ಟೋರ್ ಡಿಪಾರ್ಟಮೆಂಟಿನ ಅಸಿಸ್ಟೆಂಟಕಂಟ್ರೋಲರ್ ರಾಗಿ ಉದ್ಯೋಗದಲ್ಲಿ ಸೇರಿದರು. ಈಗಲೂ ಅಲ್ಲಿಯೇ ಕೆಲಸಮಾಡುತ್ತಿದ್ದಾರೆ. ಹಿಂದೆ ಕನ್ನಡ ಚಟುವಟಿಕೆಗಳಿಗೆಲ್ಲ ಪೋಷಕರಾಗಿದ್ದರು. ಇಂದಿಗೂ ಕನ್ನಡಕ್ಕಾಗಿ ಸಹಾಯ ಬೇಡಿದಾಗ ದೊರೆಯುತ್ತದೆ.

---

## ಕಲ್ಯಾಣಿ ಜಾಗೀರಿ.

ಕಲ್ಯಾಣವು ಹಿಂದಕ್ಕೆ ಕನ್ನಡಿಗರ ರಾಜಧಾನಿಯಾಗಿತ್ತು. ಈಗಲೂ ನವ್ವಾಬ್ ಮುಜಫರುದ್ದೌಲಾ ಸಾಹೇಬರ ಜಾಗೀರಿಯ ಮುಖ್ಯ ಸ್ಥಳವಾಗಿದೆ. ಇಲ್ಲಿಯ ಆಂತರಿಕ ವ್ಯವಸ್ಥೆ ಜಾಗೀರದಾರರಿಗೆ ಸಂಬಧಿಸಿದ್ದು. ಈ ಜಾಗೀರಿಯ ವ್ಯವಸ್ಥೆಯು ಚೆನ್ನಾಗಿದೆಯೆಂದು ಹೇಳಲಾಗುತ್ತಿದೆ. ಶಿಕ್ಷಣದಲ್ಲಿ ಕನ್ನಡದ ಏರ್ಪಾಟಾಗುವುದಕ್ಕೆ ಜಾಗೀರಿಯಿಂದಲೂ ನೆರೆವು ದೊರೆಯಬೇಕಾಗಿದೆ.

---

## ಶ್ರೀ ಅಡವಿರಾಯರು, ಜಮೀನದಾರ ಮುಧೋಳ.

ಇವರು ಕೊಪ್ಪಳ ವತನದಾರರು. ಹಾಗೆಯೇ ಸಾರ್ವಜನಿಕ ಕಾರ್ಯಕರ್ತರು. ಪ್ರತಿಯೊಂದು ಸಂಸ್ಥೆಯಲ್ಲಿ ಮುಂದುವರಿದು ಕೆಲಸ ಮಾಡುತ್ತಾರೆ. ಶ್ರೀ ಅಡವಿರಾಯರು ಈ ಚಿಕ್ಕ ವಯಸ್ಸಿನಲ್ಲಿಯೇ ತಮ್ಮ ಉದಾರ ಮನಸ್ಸಿನಿಂದ ಎಲ್ಲರಲ್ಲಿಯೂ ಗೌರವವನ್ನು ಪಡೆದಿದ್ದಾರೆ. ಸಾಹಿತ್ಯ ಸಮಾಜಿಕ ಮುಂತಾದ ಚಟುವಟಿಕೆಗಳಿಗೆ ತಮ್ಮ ಬೆಂಬಲವನ್ನು ಸದಾ ಕೊಡಲು ಸಿದ್ಧರಿರುತ್ತಾರೆ.

---

## ಡಾಕ್ಟರ್ ಬಿ. ಕೆ. ಬಾದಾಮಿಯವರು.

ಇವರು ಮುಂಬಯಿ ಪ್ರಾಂತದವರು. ನಿಜಾಂ ಸರಕಾರದ ಪಶು ವೈದ್ಯ ಖಾತೆಯ ಮುಖ್ಯಾಧಿಕಾರಿಗಳು. ಉನ್ನತ ಅಧಿಕಾರಗಳಲ್ಲಿರುವ ಕನ್ನಡಿಗರಲ್ಲಿ ಇವರೂ ಒಬ್ಬರು. ಕನ್ನಡ ಚಟುವಟಿಕೆಗಳಲ್ಲಿ ಇವರಿಗೆ ಸಹಾನುಭೂತಿಯಿದೆ. ತಕ್ಕ ಆಶ್ರಯ ವನ್ನೂ ನೀಡುತ್ತಾರೆ.

---

## ಶ್ರೀ. ಅರ್. ಸಿ. ಐಂಗಾರ್ಯರು.

ಇವರು ಮೈಸೂರು ಪ್ರಾಂತದವರು. ಹೈದರಾಬಾದಿಗೆಬಂದು ಬಹಳ ವರ್ಷ ಗಳಾದವು. ಇವರು ಹೋದ ವರ್ಷದ ವರೆಗೆ ಪೋಲೀಸು ಖಾತೆಯ ಮುಖ್ಯಾಧಿ ಕಾರಿಗಳಲ್ಲೊಬ್ಬರಾಗಿದ್ದರು. ಈಗ ನಿವೃತ್ತರಾಗಿ ಪೆಟ್ರೋಲ ನಿಯಂತ್ರಣ ಅಧಿಕಾರಿ ಗಳಾಗಿದ್ದಾರೆ. ಕನ್ನಡ ಸಾಹಿತ್ಯ ಬೆಳವಣಿಗೆಯ ಕಾರ್ಯದಲ್ಲಿ ಇವರಿಗೆ ಸಹಾನು ಭೂತಿಯಿದೆ. ೨೬ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ತಮ್ಮ ನೆರ ವನ್ನಿತ್ತು ಈ ಮಾತನ್ನು ಸಿದ್ಧಗೊಳಿಸಿದ್ದಾರೆ.

---

## ಶ್ರೀ. ಪಾಂಪಾಡ ಗುಂಡೇರಾಯರು.

ಇವರು ಬೀದರ್ ಜಿಲ್ಲೆಯವರು. ಇವರ ಪೂರ್ವಿಜರು ಹೈದರಾಬಾದಿ ನಲ್ಲಿ ಬಂದು ನೆಲಸಿ ಇಂದಿಗೆ ಸುಮಾರು ಒಂದು ಶತಮಾನದಮೇಲೆ ಆಯಿತು. ಶ್ರೀ. ಪಾಂಪಾಡರು ಮಹಾರಾಜಾ ಬಾಹಾದ್ದೂರ್ ಕೃಷ್ಣ ಪ್ರಸಾದರ ಸಂಸ್ಥಾನದ ಶೆಷನ್ಸ ಜಜ್ಜರು. ತಮ್ಮ ನಿಸ್ಪೃಹತೆಯಿಂದಲೂ, ಪ್ರಭು ಪರಾಯಣತೆಯಿಂದಲೂ, ಇಲ್ಲಿಯ ರಾಜ್ಯಾಡಳಿತದಲ್ಲಿ ವಿಶೇಷ ಗೌರವವನ್ನು ಸಂಪಾದಿಸಿದ್ದಾರೆ. ರಾಯರು ಧರ್ಮಾಭಿಮಾನಿಗಳು. ಇವರ ಆ ಚ ರ ಣ ಶೀ ಲ ತೆ, ಇವರನ್ನು ಸಾಧು ಸಂತರ ಯೋಗ್ಯತೆಗೆ ಮುಟ್ಟಿಸುತ್ತದೆ. ಮೊನ್ನೆ ತಾನೆ ತಮ್ಮ ಸಾಕು ಮಗನ ಅಕಾಲ ವಿಯೋಗ ವ್ಯಥೆಗೆ ಗುರಿಯಾಗಿದ್ದಾರೆ. ತಮ್ಮ ಮಗನ ಸ್ಮಾರಕಾರ್ಥವಾಗಿ ಕರ್ನಾ ಟಕ ಎಜುಕೇಷನಲ್ ಸುಸೈಟಿಗೆ ಸುಮಾರು ೧೮ ಸಾವಿರ ರೂಪಾಯಿಗಳ ಸ್ಥಾವರ ಹಾಗು ಜಂಗಮಾಸ್ತಿಯನ್ನು ಕೊಟ್ಟು ಕನ್ನಡಿಗರಿಗೆ ತ್ಯಾಗದ ಪಾಠವನ್ನು ಹಾಕಿ ಕೊಟ್ಟಿದ್ದಾರೆ.

---

## ಪ್ರೊ. ಎಸ್. ಕೇಶವ ಐಂಗಾರ್ಯ, ಎಮ್. ಎ.,

ಇವರು ನಿಜಾಮುಕಾಲೇಜಿನಲ್ಲಿ ಅರ್ಥಶಾಸ್ತ್ರ ಅಧ್ಯಾಪಕರು. ಇವರು ಅರ್ಥ ಶಾಸ್ತ್ರದಲ್ಲಿ ಉದ್ದಾಮ ಪಂಡಿತರು. ಹೈದರಾಬಾದಿನ ಆರ್ಥಿಕ ಸಂಶೋಧನೆಯನ್ನು ಮಾಡಿ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ಕೆಲವು ವರ್ಷ ಸಹಕಾರ ಖಾತೆಯಲ್ಲಿ ಅಸಿಸ್ಟೆಂಟ ರಜಿಸ್ಟ್ರಾರರಾಗಿಯೂ, ಸುದ್ದಿ ಖಾತೆಯ ಅಧಿಕಾರಿಗಳಾ ಗಿಯೂ ಕೆಲಸಮಾಡಿದರು. ಇವರ ಪಾಂಡಿತ್ಯ, ಗಾಂಭೀರ್ಯ, ಶೀಲಗಳು ಹೈದರಾ ಬಾದಿನಲ್ಲಿ ಅವರಿಗೊಂದು ವಿಶಿಷ್ಟವಾದ ವ್ಯಕ್ತಿತ್ವವನ್ನು ತಂದುಕೊಟ್ಟಿವೆ,

---

## ಡಾ. ಎಲ್. ಜಿ. ಕುಲಕರ್ಣಿ,

**ಬಿ. ಎ ಜಿ., ಎಮ್. ಎಸ್ ಸಿ., ಪಿ. ಎಚ್. ಡಿ., (ಅಮೇರಿಕಾ**



ಡಾ. ಎಲ್. ಜಿ. ಕುಲಕರ್ಣಿ.

ಇವರು ಸಂಸ್ಥಾನದ ಕೃಷಿ ಖಾತೆಯ ಉನ್ನತ ಅಧಿಕಾರಿಗಳಲ್ಲಿ ಒಬ್ಬರು. ಇವರೀಗ ಇಲ್ಲಿಯ ಹಿಮಾಯತಸಾಗರದ ಸುಪ್ರಸಿದ್ಧ ಕೃಷಿಕ ಪ್ರಯೋಗಶಾಲೆಯಲ್ಲಿ ಸಂಶೋಧನೆಯನ್ನು ನಡೆಸಿ ದ್ದಾರೆ. ಇವರು ಹುಟ್ಟಿದೂರು ಧಾರವಾಡ. ಶಿಕ್ಷಣ ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿಯೇ ಆಯಿತು. ಅಲ್ಲಿಂದಲೇ ಕೃಷಿಕಶಾಸ್ತ್ರದಲ್ಲಿ ಬಿ.ಎ ಜಿ., ಪದವಿಯನ್ನು ಒಳ್ಳೇ ತರಗತಿಯಲ್ಲಿ ಸಂಪಾದಿಸಿದೊಡನೆಯೇ ಮುಂಬಯಿ ಸರಕಾರದ ವರು ಇವರನ್ನು ಅಧಿಕಾರಿಗಳನ್ನಾಗಿ ನಿಯಮಿ ಸಿದರು. ತೃಪ್ತಿಕರವಾದ ವೇತನವನ್ನು ಪಡೆದು ಸೌಖ್ಯದಿಂದ ಇರಬಹುದಾಗಿತ್ತು. ಆದರೆ ಇವರ ವಿಜ್ಞಾನತೃಷೆಯು ಸಂಯುಕ್ತ ರಾಷ್ಟ್ರವಾದ ಅಮೇರಿಕಾಕ್ಕೆ ಕರೆದುಕೊಂಡು ಹೋಯಿತು. ಅಲ್ಲಿಯ ಖ್ಯಾತಿವೆತ್ತಿದ (Minnisota) ಮಿನ್ನಿ-ಸೋಟಾ ವಿಶ್ವವಿದ್ಯಾನಿಲಯದಲ್ಲಿ ಅಖಂಡ ಮೂರು ವರ್ಷಗಳವರೆಗೆ Plant genities and plant physiology ಎಂಬ ವಿಷಯಗಳಮೇಲೆ ಉನ್ನತ ಅಭ್ಯಾಸವನ್ನು ಮುಂದುವರಿಸಿದರು. Wheat ruog ನ ಮೇಲೆ ಇವರು ಒಪ್ಪಿಸಿದ Thesis ಗಾಗಿ ಪಿ. ಹೆಚ್. ಡಿ., ಪದವಿಯನ್ನು ಸಲ್ಲಿಸ ಲಾಯಿತು. ಶ್ರೀ ಕುಲಕರ್ಣಿಯವರು ಕರ್ನಾಟಕ ಸಾಹಿತ್ಯ ಮಂದಿರದ ಅಧ್ಯಕ್ಷರಾ ಗಿಯೂ, ನೃಪತುಂಗ ಕನ್ನಡಶಾಲೆಯ ಹಾಗು ಶಾರದಾ ಕರ್ನಾಟಕ ಕನ್ಯಾಶಾಲೆಯ

ಕಾರ್ಯ ನಿರ್ವಾಹಕ ನಮಿತಿಗಳ ಸದಸ್ಯರಾಗಿಯು ಕನ್ನಡಿಗರ ಶಿಕ್ಷಣದ ಪ್ರಗತಿಗಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹೈದರಾಬಾದಿನಲ್ಲಿ ನೆರೆಯಲಿರುವ ೨೬ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಸಮಿತಿಯ ಕೋಶಾಧ್ಯಕ್ಷರಾಗಿ ದುಡಿಯುತ್ತ ಲಿದ್ದಾರೆ. ಇವರಿಂದಿನ್ನೂ ಕನ್ನಡ ಜ್ಞಾನ ಭಾಂಡಾರದ ಬೆಳವಣಿಗೆಯಾಗಬೇಕಾಗಿದೆ.

---

## ಶ್ರೀಮಾನ್ ರಾಘವೇಂದ್ರರಾವ್, ಗುಂಡೇರಾವ ಮಣೂರಕರ್.

ಹೈದರಾಬಾದ ಸ್ಟೇಟಬ್ಯಾಂಕಿನ ಕ್ಯಾಷಿಯರ್



ರಾಘವೇಂದ್ರರಾವ್, ಮಣೂರಕರ್

ಇವರು ನಮ್ಮ ಸಂಸ್ಥಾನದಲ್ಲಿರುವ ನವ್ವಾಬ್ ಮೊಯಿನುದ್ದೌಲಾ ಪಾಯಗಾ ಇಲಾಖೆಗೆಸೇರಿದ ಮಣೂರಿನವರು. ಇವರ ಪ್ರಾಥಮಿಕ ಶಿಕ್ಷಣವು ಬಿಜಾಪೂರದಲ್ಲಿಯೇ ಆಯಿತು. ಕ್ರಿ ಶ. ೧೮೦೮ ರಲ್ಲಿ ಮೆಟ್ರಿಕ್ ಪರೀಕ್ಷೆಯಾದಮೇಲೆ ಮಾರಿಸ್ ಕಾಲೇಜ್ ನಾಗಪುರದಲ್ಲಿ ಇಂಟರಿನಲ್ಲಿ ಸೇರಿದ ರಾದರೂ ಪ್ರಕೃತಿ ಕೆಟ್ಟಿದ್ದರಿಂದ ಮುಂದಿನ ಅಭ್ಯಾಸವನ್ನು ನಿಲ್ಲಿಸಿದರು. ಕ್ರಿ. ಶ. ೧೯೧೫ ರಲ್ಲಿ ಇಂಪೀರಿಯಲ್ ಬ್ಯಾಂಕ್ ಸೋಲಾಪೂರದಲ್ಲಿ ೨೫ ರೂ. ಸಂಬಳದಮೇಲೆ ಕಾರಕೂನರಾದರು. ಆದರೇನು? ಅವರ ಸತತೋದ್ಯೋಗ, ಶಿಸ್ತು, ಕಾರ್ಯದಕ್ಷತೆ ಮುಂತಾದ ಸದ್ಗುಣಗಳೇ ಅವರನ್ನು ದಿನದಿನಕ್ಕೆ ಮೇಲಕ್ಕೇರಿಸುತ್ತ ನಡೆದವು.

ವಿವಿಧ ಸ್ಥಳಗಳಲ್ಲಿರುವ ಈಬ್ಯಾಂಕಿನ ಶಾಖೆಗಳಲ್ಲಿ ಕೆಲಸಮಾಡಿ ಪ್ರಗತಿ ಪಡೆದರು. ಹೈದರಾಬಾದಿನ ಶಾಖೆಯಲ್ಲಿ ಖಜಾನದಾರರಾಗಿ ಕೆಲವು ವರ್ಷ ಕೆಲಸ ಮಾಡಿದಮೇಲೆ ೧೯೪೧ ರಲ್ಲಿ ಬ್ಯಾಂಕಿನವರು, ಅವರ ಉತ್ತಮ ಸೇವೆಗೆ ಮೆಚ್ಚಿ, ಹೈದರಾಬಾದ ಸ್ಟೇಟ ಬ್ಯಾಂಕಿನಲ್ಲಿ ೫೦೦ ರೂ. ಸಂಬಳದಮೇಲೆ ಕ್ಯಾಷಿಯರ್ ಸ್ಥಲವನ್ನು ಒಪ್ಪಿಕೊಳ್ಳಲು ಸಮ್ಮತಿಯನ್ನು ಕೊಟ್ಟರು. ಈಗ ಇದೇ ಕೆಲಸದಮೇಲೆ ಇದ್ದಾರೆ. ಬ್ಯಾಂಕಿನ ಕೆಲಸದಲ್ಲಿ ಇವರಿಗಿದ್ದ ಅತಿಶ್ರದ್ಧೆ, ಕಾರ್ಯಸಕ್ತಿಗಳು, ಅವರನ್ನು ಇತರ ಯಾವ ಚಟುವಟಿಕೆಗಳಿಗೆ ಕಡೆಗೂ ಬಿಟ್ಟಿಲ್ಲ. ಆದರೂ ಆರ್ಥಿಕ ಪರಿಸ್ಥಿತಿಯು ಸುಧಾರಿಸಿಕೊಂಡು ಕನ್ನಡಿಗರು ಓಡುವ ಜಗತ್ತಿನೊಡನೆ ಕಲೆತು ನಡೆಯು ವಷ್ಟು ಪ್ರಗತಿಪರವಾಗಬೇಕೆಂದು ಹಂಬಲಿಸುವವರಲ್ಲಿ ರಾಯರೂ ಒಬ್ಬರು.

## ಶ್ರೀ. ವೆಂಕೋಬರಾವ್ ಸೇಡಂ, ಬಿ. ಎ. ತಹಶೀಲದಾರರು ಯಾದಗಿರಿ.

ಇವರು ಸೇಡಂದವರು. ಇವರ ಪ್ರಾಥಮಿಕ, ಮಾಧ್ಯಾಮಿಕ ಶಿಕ್ಷಣ ಕಲಬುರ್ಗಿಯಲ್ಲಿ ಆಯಿತು. ಒಳ್ಳೇ ಚುರುಕು ಬುದ್ಧಿಯುಳ್ಳವರು. ಶಾಲೆಯ ಎಲ್ಲ ಚಟುವಟಿಕೆಗಳಲ್ಲಿ ಭಾಗ ತೆಗೆದುಕೊಳ್ಳುತ್ತಿದ್ದರು. ಮುಂದೆ ಕಾಲೇಜ ಅಭ್ಯಾಸವು ಉಸ್ಮಾನಿಯಾ ವಿಶ್ವ ವಿದ್ಯಾಲಯದಲ್ಲಿ ಆಗಿ ಬಿ. ಎ. ಪದವಿಯನ್ನು ಹೊಂದಿದರು. ಕಾಲೇಜಿನಲ್ಲಿ, ಡಿಬೇಟಿಂಗ್ ಮತ್ತು ಡ್ರಾಮಾಗಳಲ್ಲಿ ಭಾಗ ತೆಗೆದುಕೊಳ್ಳುವುದಲ್ಲದೆ ಉರ್ದು ಭಾಷೆಯ ಕವಿಗಳಾದ್ದರಿಂದ ಉರ್ದು ಕವಿಸಮ್ಮೇಳನಗಳಲ್ಲಿ ಕೂಡ ಭಾಗ ವಹಿಸಿ ಇತರ ಒಳ್ಳೇ ಉರ್ದು ಕವಿಗಳನ್ನು ಕೂಡ ಬೆರಗುಗೊಳಿಸುತ್ತಿದ್ದರು.

ಮೊದಲು ಇವರು ತಹಶೀಲ ಕುಷ್ಟಗಿಯ ಪೇಷಕಾರರಾಗಿ ಸರಕಾರಿ ಉದ್ಯೋಗದಲ್ಲಿ ಸೇರಿದರು. ಕಳಕಳಿಯಿಂದಲೂ, ನಿಸ್ಪೃಹತೆಯಿಂದಲೂ, ಕೆಲಸ ಮಾಡಿ ಹೆಸರಾದರು. ಆಗ್ಗೆ ಇವರು ಗೌಡ ಕುಲಕರ್ಣಿಯವರಿಗೋಸುಗ ಕನ್ನಡದಲ್ಲಿ 'ಮಾರ್ಗ ದರ್ಶಕ'ವೆಂಬ ಪುಸ್ತಕವನ್ನು ಎರಡು ಭಾಗಗಳಲ್ಲಿ ಪ್ರಕಟಿಸಿದ್ದಾರೆ. ಇದೇ ಕಾಲದಲ್ಲಿ ಇವರು ಬಂದೋಬಸ್ತ ಟ್ರೇನಿಂಗಿಗೆ ಕಳಿಸಲ್ಪಟ್ಟರು. ಆಗ್ಗೆ ಇವರು ಎಲ್ಲ ತಹಶೀಲದಾರ ಮುಂತಾದವರಗಳಲ್ಲಿ ಮೊದಲನೇಯವರಾಗಿ ಪಾಸಾಗಿ ಒಳ್ಳೇ ಹೆಸರನ್ನು ಪಡೆಯುವದಲ್ಲದೆ "ಮುರಕ್ಕೆ ಬಂದೋಬಸ್ತ" ನ್ನು ತಯಾರಿಸಿದರು. ಇವನ್ನು ಅಚ್ಚುಮಾಡಿಸಿ ಸಂಸ್ಥಾನದಲ್ಲೆಲ್ಲ ಕಳಿಸಲಾಯಿತು.

ಯಾದಗಿರಿ, ದೊಡ್ಡ ತಾಲುಕಾದರೂ ಇವರು ದಕ್ಷತೆಯಿಂದಲೂ, ನಿಸ್ಪೃಹತೆಯಿಂದಲೂ ಕೆಲಸಮಾಡಿ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. "ಮಿರರ್ ಅಫ್ ಯಾದಗೀರ್" ಅನ್ನು ಬರೆದು ಮೊನ್ನೆ ಸರ್ ಹೈದರ್ ನವಾಜ್ ಜಂಗರು ಬಂದಾಗ್ಗೆ ಒಪ್ಪಿಸಿದರು. ಪ್ರಧಾನರು ಇವರನ್ನು ಪ್ರಶಂಸಿದರು. ಇವರು, ಕನ್ನಡಿಗರು ಬೆಳೆದು ಎಲ್ಲರೊಡನೆ ಸರಿಜೋಡಿಗಳಾಗಬೇಕೆಂಬ ಬಯಕೆಯುಳ್ಳವರು. ಅದಕ್ಕಾಗಿ ತಮ್ಮಿಂದಾಗುವ ಆಶ್ರಯವನ್ನು ನೀಡುತ್ತಾರೆ.

## ಶ್ರೀ ವೆಂಕೋಬರಾಯರು ತಾಲೂಕೆದಾರ, ಕೊಪ್ಪಳ ಸ್ಟೇಟ್.

ಇವರನ್ನು ಶ್ರೀ.ಅಡವಿರಾಯರೆಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಇವರು ಮಹಾ ಸಾಹಸಿಗರು. ಸಣ್ಣತನದಿಂದಲೇ ಕೊಪ್ಪಳ ಜಾಗೀರಿ ಸರಕಾರದಲ್ಲಿ ಸಾಧರಣ ನೌಕರಿಯನ್ನು ಹಿಡಿದು ಖಾನಗಿ ರೀತಿಯಿಂದ ಅಭ್ಯಾಸಮಾಡಿ ವಕೀಲಿ

ಪಾಸಾದರು. ಇವರು ಕೆಲವು ದಿನಗಳವರೆಗೆ ಹೈದರಾಬಾದಿನಲ್ಲಿ ಸ್ವತಂತ್ರವಾಗಿ ವಕೀಲಿಮಾಡಿ ಸಾಲಾರ್ ಜಂಗ್ ಬಾಹಾದ್ದೂರರವರ ಸ್ಟೇಟಿನಲ್ಲಿ ಮುನ್ಸಿಫರಾಗಿ ಕೆಲಸಮಾಡಿದರು. ತಮ್ಮ ಮುನಸಿಫಿಯಕಾಲದಲ್ಲಿ ನಿಷ್ಪಕ್ಷಪಾತತನದಿಂದ ಕೆಲಸ ಮಾಡಿ ತಮ್ಮ ನವ್ವಾಬ್ ಸಾಹೇಬರ ವಿಶ್ವಾಸಕ್ಕೆ ಪಾತ್ರರಾದರು. ಮುಂದೆ ಇವರ ಪ್ರಮಾಣಿಕತನಕ್ಕೆ ಮೆಚ್ಚಿ ಇವರನ್ನು ತಾಲೂಕದಾರರನ್ನಾಗಿ ಮಾಡಲಾಯಿತು. ದುಂದಗಲ್, ಕೊಪ್ಪಳ ಮುಂತಾದ ಸ್ಥಳಗಳಲ್ಲಿ ತಾಲೂಕದಾರರಾಗಿ ಕೆಲಸಮಾಡಿ ಜನತೆಯ ಪ್ರಿತಿಗೆ ಪಾತ್ರರಾಗಿದ್ದಾರೆ.

ರಾಯರು ಸರಳ ಸ್ವಭಾವದವರು. ಇಲ್ಲದ ಗೋಜಿಗೆ ಹೋಗದೆ ತಮ್ಮ ಕೆಲಸವನ್ನೇ ಸತತವಾಗಿಮಾಡಿ ಎಲ್ಲರಿಗು ಬೇಕಾಗಿದ್ದಾರೆ

---

## ಶ್ರೀಮಾನ್ ಮಾನ್ವಿ ಹನುಮಂತರಾಯರು, ಎಮ್. ಎ.



ಶ್ರೀ. ಮಾನ್ವಿ ಹನುಮಂತರಾಯರು

ಇವರು ಹೊಸಹಳ್ಳಿ ಶ್ರೀನಿವಾಸರಾಯರ ಪುತ್ರರು. ಚಿಕ್ಕಂದಿನಿಂದಲೂ ಮೇಧಾವಿಗಳು. ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಎಮ್. ಎ., ಪರೀಕ್ಷೆಯನ್ನು ಪಾಸುಮಾಡಿದ್ದಾರೆ. ಈಗ ತಹಸಿಲ್ದಾರರಾಗಿದ್ದಾರೆ. ತಂದೆಗೆತಕ್ಕ ಮಕ್ಕಳು. ನಿಜಾಂ ಸರಕಾರದ ಅಧಿಕಾರದಲ್ಲಿರುವ ಇಂತಹ ತರುಣ ಸುಶಿಕ್ಷಿತ ಕನ್ನಡಿಗರು ಕನ್ನಡನಾಡಿನ ಸಾಮರಸ್ಯ ಜೀವನದ ಬೆಳೆವಣಿಗೆಯ ಆಧಾರಸ್ಥಂಭಗಳಾಗಿದ್ದಾರೆ.

---

## ಶ್ರೀ ಚಂದಪ್ಪ ಪಟೇಲ ಬಿ. ಎಸ್ ಸಿ. (ಉಸ್ಮಾನಿಯಾ)

ಶ್ರೀ. ಪಟೇಲ ಚಂದಪ್ಪನವರು ಕಲಬುರ್ಗಿಗೆ ಸಮೀಪದಲ್ಲಿರುವ ಹಳ್ಳಿಯ ಗೌಡರಾದರೂ, ಇವರು ಇರುವದು ಕಲಬುರ್ಗಿಯೇ. ಇವರ ಪ್ರಾಥಮಿಕ ಹಾಗು ಉನ್ನತ ಶಿಕ್ಷಣ ಅಲ್ಲಿಯೇ ಆಯಿತು. ತಮ್ಮ ಬಿ. ಎ. ಪದವಿಯನ್ನು ಹೈದರಾಬಾದಿನ ಉಸ್ಮಾನಿಯಾ ವಿಶ್ವ ವಿದ್ಯಾನಿಲಯದಿಂದಪಡೆದುಕೊಂಡರು. ಇವರು ಗಣಿತ

ಶಾಸ್ತ್ರದಲ್ಲಿ ವಿಶ್ವವಿದ್ಯಾ ನಿಲಯದಲ್ಲಿಯೇ ಪ್ರಥಮ ತರಗತಿಯನ್ನು ಸಂಪಾದಿಸಿದರು. ಎಂ. ಎ. ವರ್ಗದಲ್ಲಿ ಇರುವಾಗಲೇ ಇವರನ್ನು ತಹಸೀಲ್ದಾರಿಯಲ್ಲಿ ಚುನಾಯಿಸಲಾಯಿತು. ಶ್ರೀ. ಚಂದಪ್ಪನವರು ಸ್ವಯಂ ಸ್ಫೂರ್ತಿಯಿಂದಲೂ, ಪ್ರಯತ್ನದಿಂದಲೂ, ಮುಂದೆ ಬಂದವರು. ಅವರಿಗೆ ಕನ್ನಡ ನುಡಿಯಮೇಲೆ ತುಂಬ ಅಭಿಮಾನವಿದೆ. ಈಗಾಗಲೇ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವವರಲ್ಲಿ ನಿಸ್ಸೀಮರೆಂದು ಹೆಸರಾಗಿದ್ದಾರೆ. ಅವರ ನಿಸ್ವಾರ್ಥತೆ, ಹಾಗು ನಿಷ್ಪಕ್ಷಪಾತ ಬುದ್ಧಿ ಉನ್ನತ ಅಧಿಕಾರಿಗಳಲ್ಲಿ ಅವರಿಗಾಗಿ ತುಂಬಾ ಅಭಿಮಾನವನ್ನು ಹುಟ್ಟಿಸಿವೆ.

---

## ಶ್ರೀ ರಟಗಲ್ ವಿಠ್ಠಲರಾಯರು, ಬಿ. ಎ.,

ಇವರು ಕಲಬುರ್ಗಿಯವರು. ಪ್ರಾಥಮಿಕ ಹಾಗು ಉನ್ನತ ಶಿಕ್ಷಣ ಹುಟ್ಟಿದೂರಿನಲ್ಲಿಯೇ ಆಯಿತು. ನಿಜಾಮ ಕಾಲೇಜನಿಂದ ಪದವೀಧರರಾದರು. ವಿದ್ಯಾರ್ಥಿಯಾಗಿದ್ದಾಗ ಎಲ್ಲ ಚಟುವಟಿಕೆಗಳಲ್ಲಿ ಮುಖಂಡತ್ವವನ್ನು ವಹಿಸುತ್ತಿದ್ದರು. ಕರ್ನಾಟಕಸಂಘದ ಜೀವಾಳವಾಗಿದ್ದರು. ಇವರ ಯೋಗ್ಯತೆಗೆ ತಕ್ಕಂತೆ ಇವರನ್ನು ತಹಸೀಲದಾರರನ್ನಾಗಿ ನಿಯಮಿಸಲಾಗಿದೆ.

---

## ಶ್ರೀ ಜಗನ್ನಾಥರಾವ, ಬಿ. ಎ. ಎಲ್‌ಎಲ್. ಬಿ. (ಮುನಸಿಫ್).

ಶ್ರೀಮಾನ್ ಜಗನ್ನಾಥರಾಯರು ಪೇಶ್ವೆರಾಜರ ಸುಬೇದಾರರ ವಂಶಜರು. ಪೇಶ್ವೆಯವರ ಆಳಿಕೆಯು ಕೊನೆಗಂಡನಂತರ ಇವರ ಮನೆತನದವರು ಕಲಬುರ್ಗಿಗೆ ಬಂದು ನೆಲೆಸಿದರು. ಕಲಬುರ್ಗಿ ತಾಲೂಕಿನಲ್ಲಿಯ ಪ್ರಸಿದ್ಧ ಜಮೀನದಾರರಿವರು. ಅಂತೇ ಇವರು ಕನ್ನಡಿಗರು.

ರಾಯರ ಪ್ರಾಥಮಿಕ ಶಿಕ್ಷಣವು ಕಲಬುರ್ಗಿಯಲ್ಲಿ ಜರುಗಿತು. ಪುಣೆಯ ಫರ್ಗ್ಯುಶನ್ ಕಾಲೆಜಿನಿಂದ ಬಿ.ಎ. ಪಾಸಾದರು. ಮುಂಬಯಿ ಲಾ ಕಾಲೇಜಿನಿಂದ ಎಲ್‌ಎಲ್. ಬಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೩೩೮ರಲ್ಲಿ ಕಲಬುರ್ಗಿಯಲ್ಲಿ ಇನ್ಫ್ಲುಯಂಜಾ ಪಿಡುಗು ಹರಡಿದಾಗ, ರಾಯರು ಅದನ್ನು ನಿಲ್ಲಿಸುವ ಕಾರ್ಯವನ್ನು ಶಿಸ್ತಿನಿಂದಲೂ, ಯಶಸ್ವಿಯಾಗಿಯೂ, ನಡೆಯಿಸಿದದು ಸುವರ್ಣಾಕ್ಷರಗಳಲ್ಲಿ ಬರೆಯುವಂತಿದೆ. ಮುಂದೆ ೧೩೫೯ ರಲ್ಲಿ ಕಲಬುರ್ಗಿ ಎಂ. ಎಸ್. ಕೆ. ಮಿಲ್ಲಿನ ಕೆಲಸಗಾರರು ಸಂಪುಮಾಡಿದಾಗ, ಸಂಧಾನ ನಡೆಯಿಸಿ ಕೆಲಸಗಾರರ

ತೊಂದರೆಗಳನ್ನು ದೂರಮಾಡಿಸುವದರಲ್ಲಿ ರಾಯರು ಪಟ್ಟ ಸಾಹಸ, ಚಾತುರ್ಯಗಳಿಗೆ ಅವರು ಅದರಲ್ಲಿ ಪಡೆದ ಯಶಸ್ಸೇ ಸಾಕ್ಷಿಯಾಗಿದೆ.

೧೩೨೯ನೆಯ ಫ. ಯಲ್ಲಿ ಹೈದರಾಬಾದಿನಲ್ಲಿ ವಕೀಲರಾದರು. ಮುಂದೆ ೧೩೩೧ರಲ್ಲಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟರು. ಈಗ ೨೦ ವರ್ಷಗಳಿಂದ ಇದೇಕೆಲಸದಲ್ಲಿದ್ದಾರೆ. ತಮ್ಮ ಸರಳತನದಿಂದಲೂ, ಶಿಸ್ತಿನಿಂದಲೂ ನಿಷ್ಪಕ್ಷಪಾತಿಗಳೆಂದು ಹೆಸರಾಗಿದ್ದಾರೆ.

ಹೈದರಾಬಾದಿನಿಂದ ಪ್ರಕಟವಾಗುವ ದಕ್ಕನ್ ಲಾ ರಿಪೋರ್ಟಿನಲ್ಲಿ ರಾಯರು ಆಗಾಗ ವಿಚಾರ ಪೂರಿತ ಲೇಖನಗಳನ್ನು ಬರೆಯುತ್ತಿರುತ್ತಾರೆ.

---

## ಶ್ರೀ ಮುಟಮುರಿ ಹನುಮಂತರಾಯರು, ಎಚ್. ಸಿ. ಎಸ್.,

ಹೈದರಾಬಾದು ಸಿವ್ಹಿಲ್ ಸರ್ವೀಸಿನಲ್ಲಿ ಇದುವರೆಗೆ ಆರಿಸಲಾದ ಕನ್ನಡಿಗರೆಂದರೆ, ಶ್ರೀ ಮುಟಮುರಿ ಹನಮಂತರಾಯರೊಬ್ಬರೇ ! ಇವರು ಈ ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಕ್ಕಾಗಿ 'ವಾಕ್‌ರ' ಪದಕವನ್ನು ಪಾರಿತೋಷಕವಾಗಿ ಹೊಂದಿದರು. ಇವರು ತಮ್ಮ ಕಾಲೇಜ ಜೀವನದಲ್ಲಿಯೇ ಅಧ್ಯಾಪಕರ ವರ್ಗದಲ್ಲಿಯೂ, ಸಹಪಾಠಿಗಳಲ್ಲಿಯೂ, ತಮ್ಮ ಚಾಣಾಕ್ಷ ಬುದ್ಧಿಯಿಂದಲೂ, ಆತ್ಮೀಯ ಸ್ನೇಹದಿಂದಲೂ, ಪೂರ್ಣ ವರ್ಚಸ್ವಿಗಳೆಂದು ಹೆಸರಾದರು. ಇವರು ತಮ್ಮ ಎಮ್. ಎ., ಪದವಿಯನ್ನು ಉಸ್ಮಾನಿಯಾ ವಿಶ್ವವಿದ್ಯಾ ನಿಲಯದಿಂದ ಒಳ್ಳೇ ತರಗತಿಯಲ್ಲಿ ಸಂಪಾದಿಸಿದರು. ಭಕ್ತಿ ಚಳವಳಿಯಮೇಲೆ ಇವರು ಸಲ್ಲಿಸಿದ ಥಿಸಿಸ್ಸು ವಿಚಾರ ಪ್ರಚೋದಕವಾಗಿದೆ ಯೆಂದು ಹೇಳಲಾಗುತ್ತದೆ. ಇವರ ತಂದೆಗಳಾದ ಶ್ರೀ ಪೇಷ್ಕಾರ ರಾಘವೇಂದ್ರರಾಯರು ಹೈದರಾಬಾದಿನಲ್ಲಿ ನೆಲಿಸಿ ಬಹಳ ವರುಷಗಳಾದವು. ರಾಯರ ಶಿಕ್ಷಣ, ಮೊದಲಿನಿಂದ ಕೊನೆಯವರೆಗೂ ಹೈದರಾಬಾದಿನಲ್ಲಿಯೇ ಆಯಿತು. ಮ ಹ ಬೂ ಬ ನ ಗ ರ ಜಿಲ್ಲೆಯ ಅಮರಾಬಾದಿನಲ್ಲಿ ಸದ್ಯಕ್ಕೆ ಮುನ್ಸಿಫ್‌ರಾಗಿದ್ದಾರೆ. ತಮ್ಮ ಕರ್ತವ್ಯ ದಕ್ಷತೆಯಿಂದಲೂ, ಸೌಜನ್ಯತೆಯಿಂದಲೂ, ನಿಷ್ಪಕ್ಷಪಾತ ಅಧಿಕಾರಿಗಳೆಂಬ ವಿ ಶೇ ಷ ಣ ವ ನ್ನು ಪಡೆದಿದ್ದಾರೆ. ಈಗಿನ ತಮ್ಮ ಮಹತ್ವದ ಕಾರ್ಯ ಕ್ರಮುಗಳಲ್ಲಿಯೂ, ಸಮಯಸಾಧಿಸಿ ಆಗಾಗ ಇಲ್ಲಿಯ ಪ್ರಮುಖ ಉರ್ದು ಪತ್ರಿಕೆಗಳಿಗೆ ವಿಚಾರಪೂರ್ಣ ಲೇಖಗಳನ್ನು ಅಂತರರಾಷ್ಟ್ರೀಯ, ಭಾರತೀಯ, ವಿಷಯಗಳಮೇಲೆ ಬರೆಯುತ್ತಾರೆ. ಈ ಚಿಕ್ಕ ವಯಸ್ಸಿನಲ್ಲಿಯೇ ರಾಯರು ಸಾಧಿಸಿದ ಸಾಹಸ ಶಕ್ತಿಗಳನ್ನು ನೋಡಿದರೆ, ಮುಂದೆ ಬರಲಿರುವ ಭವಿಷ್ಯದಲ್ಲಿ ಇವರಿಗಾಗಿ ಹೆಮ್ಮೆಯ ಸ್ಥಾನವಿದೆ ಎಂದು ಸಹಜವಾಗಿ ಹೇಳಬಹುದು.

---

**ಶ್ರೀ. ಗುಡೂರು ಶ್ರೀನಿವಾಸರಾವ್,** ಬಿ. ಎ. ಎಲ್‌ಎಲ್. ಬಿ. (ಮುನ್ಸಿಫ್)

ಇವರು ಅಚ್ಚ ಕನ್ನಡಿಗರು. ಇವರು ಹೈದರಾಬಾದಿನಲ್ಲಿ ವಕೀಲಿಯನ್ನು ಆರಂಭಿಸಿ ಸಾಕಷ್ಟು ಸ್ಥಿರವಾಗಿ ನೆಲೆಸಿದರು. ಚಿಕ್ಕಂದಿನಿಂದಲೇ ಕಷ್ಟ ಜೀವಿಗಳು. ಸ್ವಂತ ಪ್ರಯತ್ನದಿಂದ ಮುಂದೆಬಂದಿದ್ದಾರೆ. ಈಗ ಅವರು ಮುನಸಿಫರಾಗಿದ್ದಾರೆ. ತಮ್ಮ ಸತತೋದ್ಯೋಗ ನಿಸ್ಪೃಹತೆ ಮುಂತಾದವುಗಳಿಂದ ಇನ್ನು ಪ್ರಗತಿ ಹೊಂದುವರೆಂಬುದರಲ್ಲಿ ಸಂದೇಹವಿಲ್ಲ. ಇವರು ಕನ್ನಡದ ಮುನ್ನಡೆಗೆ ಸಾಕಷ್ಟು ಆಶ್ರಯವನ್ನು ಕೊಟ್ಟು, ಕನ್ನಡಿಗರಿಗೆ ಪ್ರೋತ್ಸಾಹ ಕೊಡುತ್ತಾರೆ.

---

**ಶ್ರೀ. ಬಸಪ್ಪ ಆಲೂರ,** ಬಿ. ಎ..

ಶ್ರೀ ಬಸಪ್ಪ ಆಲೂರ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಲಬುರ್ಗಿಯಲ್ಲಿ ಮುಗಿಸಿದನಂತರ ಹೈದರಾಬಾದಿಗೆ ಉನ್ನತ ಶಿಕ್ಷಣಕ್ಕೆ ಬಂದರು. ಹೈದರಾಬಾದಿನ ನಿಜಾಮುಕಾಲೇಜಿನಲ್ಲಿ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಶ್ರೀ ಬಸಪ್ಪನವರು ತಮ್ಮ ವಿದ್ಯಾರ್ಥಿದಶೆಯಲ್ಲಿಯೇ ಚುರಕುಬುದ್ಧಿಯವರು. ಹಾಗು ಶ್ರಮಜೀವಿಗಳೆಂದು ಹೆಸರಾಗಿದ್ದಾರೆ. ಹೈದರಾಬಾದನಲ್ಲಿರುವ ವೀರಶೈವ ವಸತಿಗ್ರಹದ ಸಂಸ್ಥಾಪಕರಲ್ಲಿ ಇವರು ಮುಖ್ಯರು. ಸದ್ಯಕ್ಕೆ ತಹಶೀಲದಾರರಾಗಿದ್ದಾರೆ. ತಮ್ಮ ಯೋಗ್ಯತೆಯಿಂದಲೂ, ನಿಸ್ಪೃಹತೆಯಿಂದಲೂ, ಒಳ್ಳೇ ವರ್ಚಸ್ವಿ ಅಧಿಕಾರಿಗಳಲ್ಲಿ ಇವರ ಗಣನೆಯಾಗುತ್ತದೆ.

---

**ಡಾಕ್ಟರ್ ಜಿ. ಭೀಮಸಿಂಗ್ ಅಸಿಸ್ಟೆಂಟ್ ಸರ್ಜನ್, ಕರೀಮನಗರ್.**

ಇವರು ಗಂಗಾವತಿ ತಾಲೂಕಿನ ಜಂತಗಲ್ಲಿನವರು. ಇವರು ಆರಂಭದಲ್ಲಿ ತಾಮೀರಾತ ಖಾತೆಯಲ್ಲಿ ಅಕೌಂಟಂಟರಾಗಿದ್ದರು. ಅಲ್ಲಿಂದ ೧೩೩೨ ಫ. ಯಲ್ಲಿ ಡಾಕ್ಟರಿ ಪರೀಕ್ಷೆ ಪಾಸಾಗಿ ಸಬ್ ಅಸಿಸ್ಟೆಂಟ್ ಸರ್ಜನರಾಗಿ ನಿಯಮಿಸಲ್ಪಟ್ಟರು. ಮುಂದೆ ೧೩೪೦ನೆಯ ಫಸಲಿಯಲ್ಲಿ ಸಿನೀಯರ್ ಕೇಂಬ್ರಿಜ್ ಪಾಸಾದಮೇಲೆ ಅಸಿಸ್ಟೆಂಟ ಸರ್ಜನ್ನರಾಗಿ ಇವರನ್ನು ನಿಯಮಿಸಲಾಯಿತು. ಅಂದಿನಿಂದಲೂ ಉತ್ತಮ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತ ಬಂದಿದ್ದಾರೆ.

ಡಾ. ಭೀಮಶಿಂಗ್‌ರು ಬಡವರಾಧಾರಿಗಳು. ಇವರನ್ನು ಯಾವ ಊರಿಗೇಬದಲಿಮಾಡಲಿ, ಅಲ್ಲಿ ತಮ್ಮ ನಿಸ್ಪೃಹವಾದ ಸೇವೆಯಿಂದ ಬಡಜನರ ಆದರಕ್ಕೆ ಪಾತ್ರರಾಗುತ್ತಾರೆ. ಇದರಿಂದ ಅನೇಕಸಲ ಧನವಂತರು ಅಸೂಯೆಯಿಂದ ರೊಚ್ಚಿಗೆದ್ದುದೂ ಉಂಟು.

'ಲೆಪ್ರಸಿ' ಚಿಕಿತ್ಸೆಯಲ್ಲಿ ಡಾ. ಭೀಮಸಿಂಗ್‌ರಕ್ಕೆ ಪಳಗಿದೆ. ಇವರು ನಾರಾಯಣ ಪೇಟೆಯಲ್ಲಿದ್ದಾಗ ವಿಶ್ವಪ್ರಯತ್ನಮಾಡಿ 'ಲೆಪ್ರಸಿ' ರೋಗಿಗಳಿಗಾಗಿಯೇ ಸಾರ್ವಜನಿಕರ ನೆರವಿನಿಂದ ಒಂದು 'ಲೆಪ್ರಸಿ ಅಸೇಲಂ' ಸ್ಥಾಪಿಸಿದರು ೩೦,೦೦೦ ರೂಪಾಯಿಯಸ್ವಂತ ಕಟ್ಟಡವನ್ನು ಅದಕ್ಕೆಮಾಡಿಸಿದರು. ಇವರು ಅದಕ್ಕಾಗಿ ಸುಮಾರು ೩-೪ಸಾವಿರ ರೂಪಾಯಿಗಳನ್ನು ಸ್ವಂತಾಗಿ ಖರ್ಚುಮಾಡಿದರು. ಈ ಆಸ್ಪತ್ರೆಯಲ್ಲಿ ೩೨ ಜನ ರೋಗಿಗಳುಯಿದ್ದು ಚಿಕಿತ್ಸೆ ಪಡೆಯುವದಕ್ಕೆ ವ್ಯವಸ್ಥೆಯಿದೆ. ಈ ಆಸ್ಪತ್ರೆಗೆ ನಿತ್ಯಬಂದು ಔಷಧ ಪಡೆಯುವವರ ಸಂಖ್ಯೆ ಸುಮಾರು ೫೦.

ಮನುಷ್ಯನು ಯಾವ ಕ್ಷೇತ್ರದಲ್ಲಿಯೇ ಇರಲಿ. ಸಮಾಜ ಸೇವೆ ಮಾಡುವ ಮನಸ್ಸು, ನಿರ್ಧಾರ ಇದ್ದರೆ ತನ್ನ ಕ್ಷೇತ್ರದಲ್ಲಿಯೇ ಅಸಾಧಾರಣವಾದ ಕಾರ್ಯವನ್ನೆಸಗಿ ಸಮಾಜದ ತದ್ವಾರಾ ರಾಷ್ಟ್ರದ ಉನ್ನತಿಗಾಗಿ ಸೇವೆಯನ್ನು ಸಲ್ಲಿಸಬಲ್ಲನೆಂಬುದಕ್ಕೆ ಡಾ. ಭೀಮಶಿಂಗರ ಕೃತಿಯೇ ಪುರಾವೆಯಾಗಿದೆ.

ಗ್ರಾಮಸ್ಥರ ಪರೀಕ್ಷೆಯಲ್ಲಿ ಆರೋಗ್ಯದ ವಿಷಯವನ್ನು ಸೇರಿಸಬೇಕೆಂದು ಮೇಲಿನ ಅಧಿಕಾರಿಗಳೊಡನೆ ಪತ್ರ ವ್ಯವಹಾರಮಾಡಿ ಅದರಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಈ ಪರೀಕ್ಷೆಗೆ ಬೇಕಾಗುವ ಆರೋಗ್ಯ ವಿಷಯಕವಾದ ಪುಸ್ತಕಗಳನ್ನು ಕನ್ನಡದಲ್ಲಿಯೂ, ಉರ್ದುದಲ್ಲಿಯೂ ಸಿದ್ಧಮಾಡುವ ಕಾರ್ಯದಲ್ಲಿ ಈಗ ಇವರು ತೊಡಗಿದ್ದಾರೆ.

---

## ಶ್ರೀ ಭೀಮಸೇನರಾಯರು ಕುಮರಿಮೋಶಿ

ಬಿ.ಎ. (ಆನರ್ಸ) ಬಿ. ಎಸ್‌ಸಿ. ಎಲ್‌ಎಲ್.ಬಿ.,

ಇನ್ಸಪೆಕ್ಟರ್ ಸಿಟಿ ಪೋಲೀಸ್ ಹೈದರಾಬಾದ್.

ಇವರು ಹುಟ್ಟಿದೂರು ರಾಯಚೂರು. ಕ್ರಿ.ಶ ೧೯೦೧ ರಲ್ಲಿ ಜನ್ಮವನ್ನೆತ್ತಿದರು. ಪ್ರಾಥಮಿಕಶಿಕ್ಷಣ ರಾಯಚೂರಿನಲ್ಲಿಯೇ ನಡೆಯಿತು. ಇವರ ತಂದೆಗಳಾದ ಶ್ರೀಮಾನ್ ಈಶ್ವರಪ್ಪನವರು ಜಿಲ್ಲಾ ಕಚೇರಿಯಲ್ಲಿ ಕರಣಿಕರು. ಇವರ ಮನೆತನದವರೆಲ್ಲ ಸಾಮಾನ್ಯವಾಗಿ ಸರಕಾರಿ ಉದ್ಯೋಗವನ್ನೇ ಮಾಡುತ್ತ ಬಂದಿದ್ದಾರೆ. ಕಲಬುರ್ಗಿಯ ನೂತನ ವಿದ್ಯಾಲಯದಿಂದ ಮೆಟ್ರಿಕ್ ಪಾಸಾಗಿ, ಫರ್ಗುಶನ್ ಕಾಲೇಜ ಪುಣೆಯಿಂದ ಬಿ, (ಆನರ್ಸ) ಬಿ. ಎಸ್‌ಸಿ., ಎಲ್ ಎಲ್.ಬಿ. ಪರೀಕ್ಷೆಗಳನ್ನು ಪಾಸುಮಾಡಿದರು. ಕೆಲವು ವರ್ಷಗಳವರೆಗೆ ಅದೇ ಸಂಸ್ಥೆಯಲ್ಲಿಯೇ ವಿಜ್ಞಾನ ಶಾಖೆಯಲ್ಲಿ ಅಧ್ಯಾಪಕರಾಗಿ ಕೆಲಸಮಾಡಿದರು. ಅನಂತರ ಹೈದರಾಬಾ

ದಿನಲ್ಲಿ ಎರಡು ವರ್ಷಗಳವರೆಗೆ ವಕೀಲಿಯನ್ನು ಮಾಡಿದರು. ಮುಂದೆ ೧೯೩೯ ರಲ್ಲಿ ಸಿಟಿ ಪೋಲೀಸ್ ಖಾತೆಯಲ್ಲಿ ಸೇರಿದರು. ಈಗಲೂ ಇವರು ಇದೇಉದ್ಯೋಗದಲ್ಲಿದ್ದು ಉತ್ತಮ ಅಧಿಕಾರಿಗಳೆಂದು ಹೆಸರಾಗಿದ್ದಾರೆ.

## ಶ್ರೀ ದಿದ್ದಿಗಿ ಭೀಮಸೇನರಾಯರು. ಎಂ. ಎ.



ಶ್ರೀಮಾನ್ ಭೀಮಸೇನರಾಯರು

ಪ್ರೊ. ಭೀಮಸೇನರಾಯರು ರಾಯಚೂರು ಜಿಲ್ಲೆಯ ಸಿಂಧನೂರ ತಾಲೂಕಿನ ದಿದ್ದಿಗಿಗ್ರಾಮದವರು. ಅವರುಚಿಕ್ಕಂದಿನಿಂದಲೇ ಶ್ರಮಜೀವಿಗಳು. ಹಿಡಿದಕಾರ್ಯವನ್ನು ನಿರಾಡಂಬರವಾಗಿ ಸಪ್ಪಳಿಲ್ಲದೆ ಯಶಸ್ಸಿನ ಮೆಟ್ಟಲಿಗೆ ಮುಟ್ಟಿಸುವ ಹದವೊಂದು ಅವರಲ್ಲಿ ನೈಸರ್ಗಿಕವಾಗಿಯೇ ಇದೆ. ಅಂತೇ ಅವರಿಗೆ ಶಿಕ್ಷಣದ ಎಲ್ಲ ಸೌಕರ್ಯಗಳು ದೊರೆಯದಿದ್ದರೂ ಸ್ವಪ್ರಯತ್ನದಿಂದ ತೊಂದರೆಗಳನ್ನು ಎದುರಿಸಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಬಿ. ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ವಿಶವಿದ್ಯಾಲಯದಿಂದ ವಿದ್ಯಾರ್ಥಿ ವೇತನವನ್ನು ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಎಮ್. ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಎಂ. ಎ., ಪಾಸಾದವರಲ್ಲಿ ಇವರೇ ಮೊದಲಿಗರು. ಈಗ ೧೦ ವರ್ಷಗಳಿಂದ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿಯೇ ಕನ್ನಡ ವಿಭಾಗದ ಮುಖ್ಯಾಧ್ಯಾಪಕರಾಗಿದ್ದಾರೆ. "ಶ್ರೀಮನ್ನಿಜಾಮರವರ ರಜತೋತ್ಸವ ಪ್ರಗಾಥ" ಎಂಬ ನೀಳ್ಗವನವನ್ನು ನಮ್ಮನ್ನಾಳುವ ಉಸ್ಮಾನ್ ಪ್ರಭುಗಳ ಬೆಳ್ಳಿಯ ಹಬ್ಬದ ಸಮಯದಲ್ಲಿ ಪ್ರಕಟಿಸಿದ್ದಾರೆ. ಇವರು ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ದೇವಿಯಮಂದಿರದ ನಂದಾದೀಪವಂತಿದ್ದಾರೆ.

## **ಶ್ರೀ ತವಗ ಭೀಮಸೇನರಾಯರು,** ಬಿ. ಎ., ಬಿ. ಟಿ.,

### ಇಂಟರ್‌ಮಿಡಿಯೆಟ್ ಕಾಲೇಜು, ಕಲಬುರ್ಗಿ.

ಇವರು ರಾಯಚೂರು ಜಿಲ್ಲೆಯ ಗುಡಗುಂಟಿ ಸಂಸ್ಥಾನಕ್ಕೆ ಸೇರಿದ ಮಾಚನೂರಿನವರು. ತವಗ ಇವರ ಕುಲಕರಣಿಕೆಯ ಊರು. ಶ್ರೀ ಭೀಮಸೇನ ರಾಯ

ರಿಗೆ ವಿದ್ಯಾ ಸಂಪಾದನೆಯಲ್ಲಿ ಬಹಳ ಆಸಕ್ತಿ. ಅಂತೇ ಎಷ್ಟೋ ತೊಂದರೆಗಳು ಬಂದರೂ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವರೆಗೆ ಮುಟ್ಟಿ ೧೩೪೫ ನೆಯ ಫಸಲಿಯಲ್ಲಿ ಅಂದರೆ ತಮ್ಮ ೨೩ ನೆಯ ವರ್ಷದ ವಯಸ್ಸಿನಲ್ಲಿ ಬಿ. ಎ. ಪಾಸಾದರು. ಕಲಬುರ್ಗಿ ಕಾಲೇಜಿನಲ್ಲಿ ಕನ್ನಡ ಲೆಕ್ಚರರ್ ಆದದ್ದು ೧೩೪೦ ರಲ್ಲಿ. ಈ ಹತ್ತು ವರ್ಷಗಳ ಅವಧಿಯಲ್ಲಿ ಕನ್ನಡ ಸೇವೆಯನ್ನು ಸಲ್ಲಿಸುತ್ತ, ಮೇಲಾಧಿಕಾರಿಗಳ, ಮೆಚ್ಚಿಗೆಯನ್ನು ಪಡೆದಿದ್ದಾರೆ. ೧೩೪೮ ರಲ್ಲಿ ಬಿ.ಎ. ಪರೀಕ್ಷೆಯನ್ನು ಪಾಸುಮಾಡಿದ್ದಾರೆ.

ನಮ್ಮ ಶಿಕ್ಷಣ ಖಾತೆಯವರ ಅಪ್ಪಣೆಯ ಪ್ರಕಾರ ಕನ್ನಡ ೪ ನೆಯ ಇನೆಯ ಪುಸ್ತಕಗಳನ್ನೂ, ೬,೭,೮, ನೆಯ ವರ್ಗಗಳಿಗಾಗಿ ನಿಯಮಿಸಿದ ಹಿಂದು ಸ್ಥಾನದ ಇತಿಹಾಸದ ಪಠ್ಯ ಪುಸ್ತಕಗಳನ್ನು ಕನ್ನಡಿಸಿಕೊಟ್ಟಿದ್ದಾರೆ. ಅವು ಇನ್ನೂ ಅಚ್ಚಿನ ಬೆಳಕು ಕಾಣಬೇಕಾಗಿದೆ. ಕಲಬುರ್ಗಿಯಲ್ಲಿ ನಡೆಯುವ ಕನ್ನಡ ಚಟುವಟಿಕೆಗಳಿಗೆಲ್ಲ ಉತ್ತೇಜನ ಕೊಟ್ಟು ರಾಯರು ಕನ್ನಡಕ್ಕೆ ಸೇವೆ ಸಲ್ಲಿಸುತ್ತ ಬಂದಿದ್ದಾರೆ.

---

## ಪ್ರೊ. ಆ. ಸೀತಾರಾಮರಾಯರು, ಎಂ. ಎ.,

ಇವರು ಮಂಗಳೂರು ಪ್ರಾಂತದವರು. ನಿಜಾಮ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರು. ಇವರಿಗೆ ಕನ್ನಡದ ವಿಷಯದಲ್ಲಿ ತುಂಬಾ ಆದರವಿದೆ. ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದಿಗೆ ಆಜೀವ ಸದಸ್ಯರಾಗಿದ್ದಾರೆ. ಈ ಸಂಸ್ಥೆಯ ಸಂಸ್ಥಾಪಕರಲ್ಲೊಬ್ಬರಿವರು. ಅದರ ಬೆಳವಣಿಗೆಗಾಗಿ ಸದಾ ದುಡಿಯುತ್ತಾರೆ. ಇತರ ಕನ್ನಡ ಚಟುವಟಿಕೆಗಲ್ಲಿಯೂ ಭಾಗ ವಹಿಸುತ್ತಾರೆ.

---

## ಶ್ರೀ. ವಂಕಲಕುಂಟಿ ರಾಮರಾಯರು, ಎಂ. ಎ.,

ಇವರು ಕುಷ್ಟಿಗಿಯ ತಾಲೂಕಿನವರು. ಚಿಕ್ಕಂದಿನಿಂದಲೂ ಕಷ್ಟ ಜೀವಿಗಳು. ಇವರು ಕುಕನೂರಿನ ವಿದ್ಯಾನಂದ ಗುರುಕುಲದಲ್ಲಿ ಅಧ್ಯಾಪಕರಾಗಿ ಸೇರಿದರು. ಅಲ್ಲಿಂದಲೇ ಖಾನಗಿ ರೀತಿಯಿಂದ ಮ್ಯಾಟ್ರಿಕ್ ಪರೀಕ್ಷೆಯನ್ನು ಪಾಸುಮಾಡಿದರು. ಮುಂದೆ ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಬಿ. ಎ. ಪಾಸಾದರು. ಮ್ಯಾಟ್ರಿಕ್, ಇಂಟರ್, ಬಿ. ಎ., ಈ ಮೂರು ಪರೀಕ್ಷೆಗಳಲ್ಲಿಯೂ ಕನ್ನಡದಲ್ಲಿ ಮೊದಲನೇ ಶ್ರೇಣಿಯಲ್ಲಿ ಪಾಸಾದರು. ಆದ್ದರಿಂದಲೇ ವಿದ್ಯಾರ್ಥಿ ವೇತನವನ್ನು ಪಡೆದು ಮೈಸೂರಿಗೆ ಕನ್ನಡ ಎಂ. ಎ., ಅಭ್ಯಾಸಕ್ಕಾಗಿ ಹೋದರು. ಈಗ

ಎಂ. ಎ. ಪಾಸಾಗಿ ಬಂದಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸಮಾಡುತ್ತಿದ್ದಾರೆ. ಇವರು ವಿದ್ಯಾನಂದ ಗುರುಕುಲದ ಆಜೀವ ಸದಸ್ಯರು. ಅದಕ್ಕೆ ಅವರು ಸಲ್ಲಿಸಿದ ಸೇವೆ ಎಷ್ಟು ಅಮೋಘವಾಗಿದೆಯೋ ಅಷ್ಟೇ ಮಹತ್ವವಾದ ಸಹಾಯ ಅದರಿಂದ ಇವರಿಗೆ ದೊರೆಕಿದೆ.

## ಶ್ರೀ ಎ. ಡಿ. ದೇಸಾಯಿ, ಬಿ.ಎಸ್‌ಸಿ., ಬಿ.ಎ.ಜಿ. ಪಿ.ಎಚ್.ಡಿ., (ಎಡಿನ್‌ಬರ)



ಎ. ಡಿ. ದೇಸಾಯರು

ಇವರು ಕಲಬುರ್ಗಿ ಜಿಲ್ಲೆಯ ದೇಸಾಯರು. ಪ್ರಾಥಮಿಕ ಶಿಕ್ಷಣ ಕಲಬುರ್ಗಿಯಲ್ಲಿಯೇ ಆಯಿತು. ತಮ್ಮ ವಿಶ್ವವಿದ್ಯಾನಿಲಯದ ಪದವಿಗಳನ್ನು ಉತ್ತಮ ತರಗತಿಯಲ್ಲಿ ಪುಣೆಯ ಫರ್ಗ್ಯುಸನ್ ಕಾಲೇಜಿನಿಂದ ಪಡೆದರು. ಅನಂತರ ಸರಕಾರದವರ ಜಿರಾಯತಿ ಖಾತೆಯಲ್ಲಿ ಅಧಿಕಾರಸ್ಥರಾಗಿ ಕೆಲಸಮಾಡುತ್ತಿದ್ದಾರೆ. ಇವರು ಉತ್ತಮ ಸಂಶೋಧಕರು. ತಮ್ಮ ವಿಷಯದಲ್ಲಿ ಪೂರ್ಣ ಆಸಕ್ತಿ ಇದೆ. ಎರಡು ವರ್ಷಗಳ ಹಿಂದೆ ಇಂಗ್ಲೆಂಡಕ್ಕೆ ಹೋಗಿ ಏಡಿನ್‌ಬರು ವಿಶ್ವವಿದ್ಯಾನಿಲಯದಿಂದ ಪಿ.ಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀ ದೇಸಾಯಿಯವರ ವಯಸ್ಸು ಇನ್ನು ೩೭. ಕಲಬುರ್ಗಿಯಲ್ಲಿರುವ ನೂತನ ವಿದ್ಯಾಲಯದ ಜಿಮಖಾನೆಯ ಪ್ರಗತಿಗಾಗಿ ಇವರು ದುಡಿದಿದ್ದಾರೆ. ಸಧ್ಯಕ್ಕೆ ಹೈದರಾಬಾದಿನ ಹಿಮಾಯತ್ ಸಾಗರ ಪ್ರಯೋಗ ಶಾಲೆಯಲ್ಲಿ ಸಂಶೋಧಕರಾಗಿದಾರೆ.

---

## ಶ್ರೀ ವೆಂಕೋಬರಾಯರು, ಎಮ್. ಎ. (ಡಿಪ್)

ಇವರು ಹುಟ್ಟಾ ಸಾಹಸಿಗಳು. ಪರದೇಶದವರೆಗೆ ಹೋಗಿ ಶಿಕ್ಷಣ ಪಡೆದು ಬಂದಿದ್ದಾರೆ. ಈಗ ರಾಯಚೂರಿನ ಕನ್ನಡ ಟೀಚರ್ಸ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದಾರೆ. ಇವರು ತಮ್ಮ ಕಾರ್ಯಗಳನ್ನು ಬಹಳ ಶಿಸ್ತಿನಿಂದ ಮಾಡುತ್ತಾರೆಂದು ಪ್ರಸಿದ್ಧರಾಗಿದ್ದಾರೆ. ಕನ್ನಡ ಸಾಹಿತ್ಯ ಚಟುವಟಿಕೆಗಳಲ್ಲಿಯೂ ರಾಯರಿಗೆ ಆಸಕ್ತಿಯಿದೆ. ಅವಕ್ಕೆ ತಕ್ಕ ಆಶ್ರಯವನ್ನೂ ನೆರವನ್ನೂ ನೀಡುತ್ತಾರೆ. ಇಂಥ ವಿದ್ವನ್ಮಣಿಗಳಿಂದ ನಮ್ಮ ನಾಡಿನ ಸಾಹಿತ್ಯ ಲೋಕವು ಬೆಳೆಯಬೇಕಾಗಿದೆ.

## ಶ್ರೀ ಪಿ. ಜಿ. ಮಠದ, ಕನ್ನಡ ಪಂಡಿತ ನಿಜಾಂ ಕಾಲೇಜು ಹೈದರಾಬಾದು-ದ.

ಶ್ರೀ ಮಠದವರನ್ನು ಇದೇ ವರ್ಷ ನಿಜಾಮ ಕಾಲೇಜಿನಲ್ಲಿ ಕನ್ನಡ ಪಂಡಿತ ರನ್ನಾಗಿ ನಿಯಮಿಸಲಾಗಿದೆ. ಇವರು ರಾಯಚೂರು ಜಿಲ್ಲೆಗೆ ಸೇರಿದವರು. ಇವರ ತಂದೆಯವರು ಸಂಸ್ಕೃತದ ವಿದ್ವಾಂಸರಾದ ಕಾರಣ ಇವರಾದರೂ ಚಿಕ್ಕಂದಿನಿಂ ದಲೇ ಅದರ ಅಭ್ಯಾಸವನ್ನು ಮಾಡಿದರು. ಇವರ ತಂದೆಯವರ ಅಕಾಲ ನಿಧನ ದಿಂದ ಇವರಿಗೆ ತಮ್ಮ ವಿಶ್ವವಿದ್ಯಾ ನಿಲಯದ ಅಭ್ಯಾಸವನ್ನು ಮುಂದು ವರಿಸುವದಾಗ ಲಿಲ್ಲ. ಇಷ್ಟರಲ್ಲಿ ವಿದ್ವಾನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರು. ಕೆಲವು ಕಾಲ ಗಳ ವರೆಗೆ ಯಾದಗಿರಿಯ ಸಂಸ್ಕೃತ ಕಾಲೇಜಿನಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದರು. ಮುಂದೆ ಮದರ್ರಾಸ ಸರಕಾರದವರ ಶಿಕ್ಷಣ ಖಾತೆಯಲ್ಲಿ ಅಧ್ಯಾಪಕ ರಾಗಿನಿಂತರು.

ಶ್ರೀ.ಮಠದ ಅವರು ತರುಣ ಪಂಡಿತರು. ಅವರು ಇಲ್ಲಿಗೆ ಬಂದು ಕೆಲವು ತಿಂಗಳುಗಳಾದರೂ ಇಲ್ಲಿ ಈಗಾಗಲೇ ಕನ್ನಡಿಗರಿಗೆ ಪರಿಚಿತರಾಗಿದ್ದಾರೆ. ಇವರು ಒಳ್ಳೇ ವಿಮರ್ಶಕರು. ಇವರನ್ನು ಇಲ್ಲಿಯ ಸ್ವಾಗತ ಸಮಿತಿಯ ಪರವಾಗಿ ೨೬ ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಸ್ವಾಗತಾಧ್ಯಕ್ಷರನ್ನಾಗಿ ಆರಿಸಲಾಗಿ

---

## ಶ್ರೀ.ಕೆ. ಎನ್. ಅಚಾರ್ಯ, ಎಂ. ಎ.

ಇವರು ಮೈಸೂರು ಪ್ರಾಂತದವರು. ಇಲ್ಲಿ ಶಿಕ್ಷಣ ಖಾತೆಯಲ್ಲಿ ಸೇರಿ ಮೊದಲು ಹೈಸ್ಕೂಲಿನಲ್ಲಿ ಅಧ್ಯಾಪಕರಾದರು. ಇವರ ಯೋಗ್ಯತೆಯೇ ಇವರನ್ನೀಗ ಉಸ್ಮಾನಿಯಾ ಕಾಲೇಜಿನ ಇಂಗ್ಲಿಷ್ ಲೆಕ್ಚರಾರ್ ಪದವಿಗೆ ಏರಿಸಿದೆ. ಆಚಾರ್ಯ ರಿಗೆ ಕನ್ನಡ ಸಾಹಿತ್ಯದಲ್ಲಿಯೂ ಕೈವಾಡವಿದೆ. ಕನ್ನಡಕ್ಕಾಗಿ ಕಳಕಳಯಿದೆ. ೨೬ ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾ.ನಿ. ಮಂಡಳಿಯ ಉತ್ಸಾಹಿ ಕಾರ್ಯಕರ್ತರಲ್ಲಿ ಇವರೂ ಒಬ್ಬರು.

---

## ಡಾ. ಗುರಾಚಾರ್ಯ ಮುರಡಿ, ಎಂ. ಬಿ. ಬಿ. ಎಸ್.,

ಇವರು ಕುಷ್ಟಗಿ ತಾಲೂಕಿಗೆ ಸೇರಿದ ಮುರಡಿ ಗ್ರಾಮದವರು. ಪ್ರಾಥಮಿಕ ಶಿಕ್ಷಣ ಕುಷ್ಟಗಿ, ಕಲಬುರ್ಗಿಯಲ್ಲಿ ಆಯಿತು. ಉಸ್ಮಾನಿಯ ವಿಶ್ವ ವಿದ್ಯಾನಿಲಯದ

ಎಂ. ಬಿ. ಬಿ. ಎಸ್, ಪಾಸಾದರು. ನಮ್ಮ ಹೈದರಾಬಾದ ಕನ್ನಡಿಗರಲ್ಲಿ ಈ ಪದವಿಯನ್ನು ಪಡೆದವರಲ್ಲಿ ಇವರು ಮೊದಲಿಗರು. ಇವರು ಈಗ ಆದಿಲಾಬಾದು ಜಿಲ್ಲೆಯ ಮೆಡಿಕಲ್ ಆಫೀಸರ್‌ರಾಗಿದ್ದಾರೆ. ಡಾಕ್ಟರರು ಕನ್ನಡಾಭಿಮಾನಿಗಳು.

## ಶ್ರೀ ಮಧ್ವರಾವ ಆನ್ವರಿ

: ಮ್ಯಾನೇಜರ್ :
ಹೈದರಾಬಾದ್ ಕೋಆಪರೇಟಿವ್ ಇನ್ಸುರೆನ್ಸ ಸುಸೈಟಿ
ಇವರ ಪರಿಚಯವನ್ನು
'ನಮ್ಮ ಆರ್ಥಿಕ ಹಾಗು ಕೈಗಾರಿಕೆಯ ಸ್ಥಿತಿ ಗತಿ'
ಎಂಬ
ಲೇಖನದ ಆರಂಭದಲ್ಲಿ ಕೊಡಲಾಗಿದೆ.



ಶ್ರೀ ಮಧ್ವರಾವ ಆನ್ವರಿ.

**ಶ್ರೀ ಬಾಗಾತ ಶ್ರೀನಿವಾಸರಾಯರು**, ಬಿ. ಎ. ಎಲ್ ಎಲ್. ಬಿ. ಹೈದರಾಬಾದು.



ಶ್ರೀ ಬಾಗಾತ ಶ್ರೀನಿವಾಸರಾಯರು.

ಇವರು ಹೈದರಾಬಾದಿನ ಸುಪ್ರಸಿದ್ಧ ಜಾಗೀರದಾರರಾದ ಶ್ರೀನುಂತ ಚುಂಗಿ ಶೇಷಗಿರಿ ರಾಯರ ಮೊಮ್ಮಕ್ಕಳು. ಇವರು ಚಿಕ್ಕಂದಿನಲ್ಲಿಯೇ ಬಾಗಾತ ಜಾಗೀರದಾರರ ಮನೆತನಕ್ಕೆ ದತ್ತಕ್ಕೆ ಹೋಗಿದ್ದಾರೆ. ಇವರು ಇಲ್ಲಿಯೇ ಅಭ್ಯಾಸಮಾಡಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಬಿ.ಎ. ಎಲ್ ಎಲ್. ಬಿ., ಪಾಸಾಗಿದ್ದಾರೆ. ಇಲ್ಲಿಯ ಹೈಕೋರ್ಟಿನ ಆಡಳಿತ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮುನಸಿಫ್ ಸ್ಥಳಕ್ಕೆ ಉಮೇದುವಾರರನ್ನಾಗಿ ಆರಿಸಲಾಗಿದೆ. ಈಗಾಗಲೇ ಆ ಸ್ಥಾನದಲ್ಲಿ ತಾತ್ಪೂರ್ತಿಕವಾಗಿ ಕೆಲಸ ಮಾಡಿ ಯೋಗ್ಯರೆನಿಸಿಕೊಂಡಿದ್ದಾರೆ. ನೃಪತುಂಗ ಶಾಲೆಯ ಕಾರ್ಯದರ್ಶಿಗಳಾಗಿ ಕಳೆದ ೪-೫ ವರ್ಷಗಳಿಂದ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

## ಶ್ರೀ ಜಿ. ರಾಮಾಚಾರ್ಯ, ಹೈಕೋರ್ಟ ವಕೀಲ, ಹೈದರಾಬಾದು.



ಶ್ರೀ ಜಿ. ರಾಮಾಚಾರ್ಯ.

ಇವರು ಗುಡಗುಂಟಿ ಸಂಸ್ಥಾನದ ಶ್ರೀ ಜೋಯಿಸ ವೆಂಕಪ್ಪಾಚಾರ್ಯರ ಪುತ್ರರು. ಇವರು ಚಿಕ್ಕಂದಿನಲ್ಲಿ ಬಡತನದ ಎಲ್ಲ ಕಷ್ಟ ಪರಂಪರೆಗಳನ್ನು ಎದುರಿಸಿ ಶಿಕ್ಷಣವನ್ನು ಪಡೆದು ವಕೀಲಿ ಪಾಸುಮಾಡಿದರು. ಇವರು ವಕೀಲಿಯನ್ನು ಆರಂಭಿಸಿದ್ದು ಚಿಂಚೋಳಿಯಲ್ಲಿ. ಇವರು ಅಲ್ಲಿಯೇ ನಾಕಷ್ಟು ಧನವನ್ನೂ ಕೀರ್ತಿಯನ್ನೂ ಸಂಪಾದಿಸಿದರು. ಮುಂದೆ ಹೈದರಾಬಾದಿಗೆ ಬಂದ ಮೇಲೆ ಇವರ ಕಾರ್ಯಕ್ಷೇತ್ರ ಇನ್ನೂ ವಿಸ್ತೃತವಾಯಿತು. ಆಚಾರ್ಯರು ಚತುರರು. ಸರಕಾರಿ ಅಧಿಕಾರಿಗಳಲ್ಲಿ ಇವರ ವರ್ಚಸ್ಸು ಸಾಕಷ್ಟಿದೆ. ಸಾರ್ವಜನಿಕ ಕಾರ್ಯಗಳಲ್ಲಿಯೂ ಇವರ ಹೆಸರನ್ನು ಕೇಳದವರಿಲ್ಲ. ಇವರ ಮನೆ ಸಾರ್ವಜನಿಕ ಚಟುವಟಿಕೆಗಳ ಕಾರ್ಯಾಲಯ. ಇವರು ನವ್ವಾಬ್ ಮೆಹದಿಜಂಗ್ ಬಹಾದ್ದೂರ್ ತಾಂಡೂರು ಅವರ ಜಾಗೀರಿಯ ಮತ್ತು ಅಮರಚಿಂತಾ ಹಾಗು ಚಿಂಚೋಳಿ ಸಂಸ್ಥಾನಗಳ ಶಾಸನ ಸಲಹೆಗಾರರಾಗಿದ್ದಾರೆ. ಸ್ಥಾನಿಕ ಕನ್ನಡ ಸಂಸ್ಥೆಗಳಿಗೂ ಇವರು ತಕ್ಕ ಆಶ್ರಯವನ್ನೀಯುತ್ತಾರೆ. ೨೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಗೆ ಅಧ್ಯಕ್ಷರು. ಈ ಸಮ್ಮೇಳನದ ಯಶಸ್ವಿಗಾಗಿ ನಡೆಸಿದ ಇವರ ಹೆಣಗಾಟ ಪ್ರಶಂಸನೀಯವಾಗಿದೆ.

---



ಶ್ರೀ ಅಂತು ರಾಮಚಂದ್ರರಾವ್

## ಶ್ರೀ ಅಂತು ರಾಮಚಂದ್ರರಾವ್, ಎಂ.ಎಲ್.ಸಿ., ಹೈಕೋರ್ಟ ವಕೀಲ, ಹೈದರಾಬಾದು.

ಇವರು ಮಹಬೂಬನಗರ ಜಿಲ್ಲೆಯ ನಾರಾಯಣಪೇಟೆಯವರು. ಇವರ ಪ್ರಾಥಮಿಕ ಹಾಗು ಉನ್ನತ ಶಿಕ್ಷಣ ಕರ್ನೂಲ ಹಾಗು ಮುಸಲಿಪಟಂದಲ್ಲಿ ಆಯಿತು. ಆದರೆ ಇವರು ತಮ್ಮ ವಕೀಲಿ ಪದವಿಯನ್ನು ಹೈದರಾಬಾದದಿಂದಲೇ ಸಂಪಾದಿಸಿದರು. ಇವರ ಪೂರ್ವಿಜರು ನಮ್ಮ ಸಂಸ್ಥಾನದ ರಾಜ್ಯಾಡಳಿತದಲ್ಲಿ ಒಳ್ಳೇಜವಾಬುದಾರಿಅಧಿಕಾರದ

ಮೇಲೆ ಇದ್ದರೆಂದು ತಿಳಿದುಬರುತ್ತದೆ. ಶ್ರೀ ಅಂತು ರಾಮಚಂದ್ರರಾಯರು ವಕೀಲಿ ವ್ಯವಸಾಯಕ್ಕಾಗಿ ಹೈದರಾಬಾದಿನಲ್ಲಿ ಬಂದು ನೆಲಿಸಿ ೧೯ ವರ್ಷಗಳಾಗಿ ಹೋದಕಾರಣ ಜನರು ಇವರನ್ನು ಹೈದರಾಬಾದಿನವರೆಂದೇ ಭಾವಿಸುತ್ತಾರೆ. ತಮ್ಮ ಸಾರ್ವಜನಿಕ ಸೇವೆಯ ಪ್ರಥಮ ದೆಶೆಯಲ್ಲಿಯೇ ಕೈಲಾಸವಾಸಿಗಳಾದ ದೇಶಭಕ್ತ, ಧರ್ಮವೀರ ವಾಮನ್ ನಾಯಕರ ಪಟ್ಟ ಶಿಷ್ಯರೆಂದು ಹೆಸರಾದರು. ಈ ಅವಧಿಯಲ್ಲಿ ನಮ್ಮ ಸಂಸ್ಥಾನದ ಸಾಮಾಜಿಕ, ಶೈಕ್ಷಣಿಕ, ಹಾಗು ರಾಜಕೀಯ, ಆಂದೋಲನದಲ್ಲಿ ಯಾವಾಗಲೂ ಮುಖ್ಯಪಾತ್ರವನ್ನು ವಹಿಸಿ, ತದ್ವಾರಾ ನಮ್ಮ ಸಂಸ್ಥಾನದ ಸರ್ವತೋಮುಖ ಪ್ರಗತಿಗಾಗಿ ಪ್ರಯತ್ನಿಸುವ ಅಗ್ರಗಣ್ಯ ಮುಖಂಡರಲ್ಲಿ ಇವರ ವ್ಯಕ್ತಿತ್ವ ಗಣನೆಯಾಗುತ್ತದೆ. ಹೋದವರ್ಷವೇ ರಾಯರನ್ನು ನಮ್ಮ ಸಂಸ್ಥಾನದ ಕಾಯದೆ ಮಂಡಲದ ಸದಸ್ಯರನ್ನಾಗಿ ವಕೀಲರಪರವಾಗಿ ಚುನಾಯಿಸಲಾಯಿತು. ಶಾಸನ ಸಭೆಯಲ್ಲಿ ಪ್ರಗತಿಪರ ಮಸೂದೆಗಳನ್ನು ಮಂಡಿಸಿ, ಜನತೆಯ ಆರ್ಥಿಕ ಉನ್ನತಿಗಾಗಿ ಧಾವಿಸಹತ್ತಿದ್ದಾರೆ. ನೃಪತುಂಗ ಕನ್ನಡ ವಿದ್ಯಾಲಯದ ಕಾ.ನಿ. ಸಮಿತಿಯ ಸದಸ್ಯರಾಗಿ ಕನ್ನಡಿಗರ ಶಿಕ್ಷಣದ ಬೆಳವಣಿಗೆಯ ಆಶೆಗಳ ಆಧಾರಸ್ತಂಭರಾಗಿದ್ದಾರೆ.

---

**ಶ್ರೀ. ಸಿ. ರಂಗಾಚಾರ್ಯ,** ಎಂ. ಎ., ಎಲ್‌ಎಲ್. ಬಿ., ಹೈಕೋರ್ಟ ವಕೀಲ. ಸಿಕೆಂದರಾಬಾದು.

ಇವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ ಬಿ.ಎ. ಪಾಸುಮಾಡಿದರು. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಸ್ಥಾಪಕರಲ್ಲೊಬ್ಬರಿವರು. ಈ ಸಂಘದ ವತಿಯಿಂದ "ಪ್ರಬುದ್ಧ ಕರ್ನಾಟಕ" ಪತ್ರಿಕೆಯನ್ನು ಆರಂಭಿಸಿ ಅದನ್ನು ಊರ್ಜಿತ ಸ್ಥಿತಿಗೆ ತರುವದಕ್ಕೆ, ಹೆಣಗಿದವರಲ್ಲಿ, ಆಚಾರ್ಯರೂ ಒಬ್ಬರು. ಈಗ ಈ ಪತ್ರಿಕೆಯನ್ನು ಮೈಸೂರು ವಿಶ್ವ ವಿದ್ಯಾನಿಲಯದವರು ಪ್ರಕಟಿಸುತ್ತಿದ್ದಾರೆ.

ಇವರು ಕನ್ನಡ ಹಾಗು ಇಂಗ್ಲಿಷ ತೆಗೆದುಕೊಂಡು ಎಂ.ಎ., ಪಾಸುಮಾಡಿದರು. ಮುಂಬಯಿ ವಿಶ್ವವಿದ್ಯಾನಿಲಯದ ಎಲ್.ಎಲ್. ಬಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಸಿಕೆಂದರಾಬಾದಿನಲ್ಲಿ ಪ್ರಮುಖ ವಕೀಲರು. ಹೈದರಾಬಾದಿನ ಹೈಕೋರ್ಟಿನಲ್ಲಿಯೂ ಇವರು ತಮ್ಮ ಹೆಸರನ್ನು ರಜಿಸ್ಟರ್ ಮಾಡಿಸಿದ್ದಾರೆ. ೧೯೩೪ ರಲ್ಲಿ ಸಿಕೆಂದರಾಬಾದಿದ ಕೆಂಟೋನ್‌ಮೆಂಟುಬೋರ್ಡಿನ ಚುನಾವಣೆಯಲ್ಲಿ ಆಚಾರ್ಯರು ಎಲ್ಲರಗಿಂತಲೂ ಅಧಿಕವಾದ ಮತಗಳನ್ನು ಸಂಪಾದಿಸಿ ಬೋರ್ಡಿನ ಸದಸ್ಯರಾಗಿ ಆರಿಸಬಂದಿರುವ ಸಂಗತಿಯು ಇವರು ಜನಪ್ರಿಯರಾಗಿರುವದಕ್ಕೆ ಸಾಕ್ಷಿಯಾಗಿದೆ.

ಸಿಕೆಂದರಾ ಬಾದಿನ ಪಿ. ಪಿ. ಡಿ. ಕನ್ಯಾಶಾಲೆಯ ಅಧ್ಯಕ್ಷರು. ಬ್ರಿಟಿಷ ಎಡ್ಮಿನ್ಸ್ಟ್ರೆರ್ಡ ಏರಿಯಾ, ಸೆಂಟ್ರಲ್ ಕೋಆಪರೇಟಿವ್ ಯೂನಿಯನ್ನಿಗೆ ಉಪಾಧ್ಯಕ್ಷರು. ರೆಸಿಡೆಂಟ್ ಬಹಾದ್ದೂರ್ ಅವರ ಅಧ್ಯಕ್ಷತೆಯಲ್ಲಿ ಕೆಲಸ ಮಾಡುತ್ತಿರುವ ಸಿಕೆಂದರಾಬಾದು ಸೆಂಟ್ರಲ್ ಟೆಂಪರೆನ್ಸ ಅಸೋಸಿಯೇಷನ್ ಕಾರ್ಯ ನಿರ್ವಾಹಕ ಮಂಡಲಿಯ ಉತ್ಸಾಹಿ ಸದಸ್ಯರಿವರು. ಸಂಸ್ಥಾನದಲ್ಲಿರುವ ಒಂದೇ ಒಂದಾದ ಫ್ಯಾಮಿಲಿ ಕ್ಲಬ್ಬಿನ ಕಾರ್ಯದರ್ಶಿಗಳು. ೨೬ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಗೆ ಸರ್ವಾನುಮತದಿಂದ ಉಪಾಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಅನೇಕ ಕನ್ನಡ ಸಂಸ್ಥೆಗಳಿಗೆ ಉದಾರವಾಗಿ ಧನ ಸಹಾಯಮಾಡಿದ್ದಾರೆ.

---

**ಶ್ರೀ ದೇಸಾಯಿ ಜನಾರ್ದನರಾಯರು, ಹೈಕೋರ್ಟ ವಕೀಲ,** ಹೈದರಾಬಾದು.

ಇವರು ರಾಯಚೂರು ಜಿಲ್ಲೆಯ ವಲಕುಂದಿನ್ನಿಯ ದೇಸಾಯಿಯರು. ವಕೀಲಿ ವೃತ್ತಿಯನ್ನು ಆರಂಭಿಸಿದುದು ಕಲಬುರ್ಗಿಯಲ್ಲಿ. ಅಲ್ಲಿಯೇ ಸಾಕಷ್ಟು ಕೀರ್ತಿಯನ್ನು ಗಳಿಸಿ, ಹೈದರಾಬಾದಿನಂತಹ ವಿಸ್ತಾರವಾದ ಕ್ಷೇತ್ರಕ್ಕೆ ಬಂದರು. ಇಲ್ಲಿಯೂ ತಮ್ಮ ವೃತ್ತಿಯಲ್ಲಿ ಯಶಸ್ಸನ್ನು ಪಡೆದಿರುವುದಲ್ಲದೆ, ಔದ್ಯೋಗಿಕ ಸಂಸ್ಥೆಗಳನ್ನು ಬೆಳೆಯಿಸುವುದರಲ್ಲಿ ಸಾಕಷ್ಟು ಶ್ರಮಪಡುತ್ತಿದ್ದಾರೆ. ಸಾರ್ವಜನಿಕ ಮುಂದಾಳುಗಳಲ್ಲಿ, ರಾಯರ ಹೆಸರನ್ನು ಕೇಳದವರಿಲ್ಲ. ಹೈದರಾಬಾದ್ ಕರ್ನಾಟಕಕ್ಕೊಂದು ರಾಯರು ಕಣ್ಣು. ಕಳೆದ ಸತ್ಯಾಗ್ರಹದಲ್ಲಿ ಅವರು ಮಾಡಿದ ತ್ಯಾಗ, ಕನ್ನಡ ನಾಡಿಗೆ ಉತ್ತೇಜಕವಾಗಿ, ಕನ್ನಡ ವಿಭಾಗಕ್ಕೂ ಸಾರ್ವಜನಿಕರಂಗದಲ್ಲಿ ಒಂದು ಸ್ಥಾನ ತಂದುಕೊಟ್ಟಿದೆ.

ನಿಜಾಮ ಕರ್ನಾಟಕ ಪರಿಷತ್ತು ಇವರ ಕಾರ್ಯರಂಗ; ಹೈದರಾಬಾದ್ ಕರ್ನಾಟಕ ಅವರ ಕಾರ್ಯಭೂಮಿ; ಮೊದಲು ಪರಿಷತ್ತಿನ ಕಾರ್ಯದರ್ಶಿಗಳಾಗಿದ್ದರು. ಈಗ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇತರ ಅನೇಕ ಸಂಸ್ಥೆಗಳಿಗೂ ಅವರು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಸಂಘಟನೆಯ ಕಾರ್ಯದಲ್ಲಿ ರಾಯರಿಗೆ ಇರುವ ಹದ ಇನ್ನಿತರರಲ್ಲಿ ಕಾಣುವುದು ಅಪರೂಪ. ಅವರ ಸಮುದ್ರದಂತಹ ಶಾಂತವಾದ ಸ್ವಭಾವವು ವಿಮರ್ಶಕರ ಕಟುವಾದ ಮಾತುಗಳನ್ನು ಸಹ ಅಡಗಿಸಿಕೊಳ್ಳಬಲ್ಲದು.ಅಷ್ಟು ಆಳವಾಗಿದೆ ಅವರ ಕರ್ತೃತ್ವಶಕ್ತಿ. ಅಂತೇ ಅವರು ಹಿಡಿದ ಕಾರ್ಯಗಳನ್ನು ಎಷ್ಟೇ ಹೊಗಳಿಕೆ, ತೆಗಳಿಕೆ ಬಂದರೂ ಲಕ್ಷಿಸದೆ, ಕೊನೆಗಾಣಿಸುತ್ತಿರುತ್ತಾರೆ. ರಾಯರು ಹೈದರಾಬಾದ್ ಕರ್ನಾಟಕದ ನವಜಾಗ್ರತಿಯ ಆಚಾರ್ಯ ಪುರುಷ ರಾಗಬೇಕಾಗಿದೆ.

---

**ಶ್ರೀ ದೇಸಾಯಿ ಗುರುರಾಯರು,** ಹೈಕೋರ್ಟ ವಕೀಲ, ಕೊಪ್ಪಳ.



ಶ್ರೀ ದೇಸಾಯಿ ಗುರುರಾಯರು

ಕೊಪ್ಪಳದ ಜಾಗೀರಿಯಲ್ಲಿ ಅಗ್ರಗಣ್ಯ ವಕೀಲರೆಂದರೆ ಶ್ರೀ ದೇಸಾಯಿ ಗುರುರಾಯರು. ಇವರು ಹೈದರಾಬಾದಿನಲ್ಲಿ ವಕೀಲಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ತಮ್ಮ ಉದ್ಯೋಗವನ್ನು ಪ್ರಾರಂಭಿಸಿದ ಕೆಲವು ವರ್ಷಗಳಲ್ಲಿಯೇ ಒಳ್ಳೇ ವಕೀಲರೆಂದು ಹೆಸರಾದರು. ಬರಬರುತ್ತ ರಾಯರು ಆ ಕ್ಷೇತ್ರದ ನಾಯಕರೆಂದು ಗಣನೆಯಾಗಹತ್ತಿದರು. ಇವರಿಗೆ ತಮ್ಮ ಉದ್ಯೋಗದಲ್ಲಿ ಬಿಡುವಿನ ಅಭಾವ ವಿದ್ದರೂ ಸಾರ್ವಜನಿಕ ಚಟುವಟಿಕೆಗಳಲ್ಲಿ ವಿಶ್ವಾಸದಿಂದ ಭಾಗ ವಹಿಸುತ್ತಾರೆ. ಕುಕನೂರಿನಲ್ಲಿರುವ ವಿದ್ಯಾನಂದ ಗುರುಕುಲ ಸಂಸ್ಥೆಯ ಅಧ್ಯಕ್ಷರು, ಗಜಾನನ ವಾಚನಾಲಯದ ಪೋಷಕರು. ಇತ್ತೀಚಿಗೆ ನಿಜಾಮುಕರ್ನಾಟಕ ಪರಿಷತ್ತಿನಜಿಲ್ಲಾ ಸಮಿತಿಯ ಅಧ್ಯಕ್ಷರಾಗಿ ಜಾಗೀರಿ ರೈತರ ಸರ್ವತೋಮುಖ ಪ್ರಗತಿಯ ಜವಾಬ್ದಾರಿಯನ್ನು ವಹಿಸಿದ್ದಾರೆ. ರಾಯರು ಪ್ರಭಾವ ಶಾಲಿಗಳು. ಇವರಲ್ಲಿ ಹಿಡಿದ ಕೆಲಸ ಕೊನೆಗಾಣಿಸುವ ಶಕ್ತಿ ಇದೆ.

---

**ಶ್ರೀ ಎನ್. ಎಸ್. ರಾಘವನ್** ಬಿ.ಎ.,ಎಲ್ಎಲ್.ಬಿ.,ವಕೀಲ, ಸಿಕೆಂದರಾಬಾದು.

ಇವರಿಗೆ ತಮ್ಮ ವ್ಯವಸಾಯದಲ್ಲಿ ಬಿಡುವಿಲ್ಲದಷ್ಟು ಕೆಲಸ. ಕೇವಲ ಕಿರಿಯ ವಯಸ್ಸಿನಲ್ಲಿಯೇ ಈ ಯೋಗ್ಯತೆಯನ್ನು ಸಂಪಾದಿಸಿಕೊಂಡಿದ್ದಾರೆ. ಮನಸ್ಸು ಕರಗಿಸುವಂಥ ಇವರ ವ್ಯಕ್ತಿತ್ವ, ಹಸಗೂಸಿಗೆ ಸರಿಹೋಲುವ ಇವರ ಸರಳ ಸ್ವಭಾವ ಇವರ ಸೊತ್ತಾಗಿದೆ. ಇವರು ಹುಟ್ಟಿದ ಊರು ಮೈಸೂರು ಪ್ರಾಂತದಲ್ಲಿರುವ ಹೊಳೆನರಶೀಪುರ. ಬೆಂಗಳೂರಿನ ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿ ಪುಣೆ ಲಾ ಕಾಲೇಜಿನಿಂದ ಎಲ್ಎಲ್. ಬಿ. ಪದವಿಯನ್ನು ತೆಗೆದುಕೊಂಡು ಸಿಕೆಂದ್ರಾಬಾದಿನಲ್ಲಿ ತಮ್ಮ ವ್ಯವಸಾಯವನ್ನು ಪ್ರಾರಂಭಿಸಿದರು. ಕಾಲೇಜು ಜೀವನದಲ್ಲಿ ನಡೆಸಿಕೊಂಡು ಬಂದ ಸಾಹಿತ್ಯ, ಸಾಮಾಜಿಕ ಹಾಗು ಐತಿಹಾಸಿಕ, ಮುಂತಾದ ಬೌದ್ಧಿಕ ಚಟುವಟಿಕೆಗಳನ್ನು ಇಂದಿಗೂ ಸಮಯದ ಅಭಾವ ವಿದ್ದರೂ ಮುಂದುವರಿಸಿದ್ದಾರೆ. ಅಖಿಲ ಭಾರತೀಯ ಕಾಯದೆ ಪತ್ರಿಕೆ (ಆಲ್ ಇಂಡಿಯಾ ಲಾ ಜನರಲ್) ಯಲ್ಲಿ ಆಗಾಗ ವಿವಿಧ ವಿಷಯಗಳನ್ನು ಕುರಿತು ಪ್ರಕಟವಾಗುವ ಇವರಲೇಖಗಳು ಪಂಡಿತರ

ಮೆಚ್ಚಿಗೆಯನ್ನು ಪಡೆದಿದೆ. ಹಿಂದು ಕಾಯದೆಯಲ್ಲಿ ಇವರಿಗೆ ಪ್ರಾವೀಣ್ಯತೆಯಿದೆ. ಅದರಲ್ಲಿ ಅಲ್ಲಲ್ಲಿ ಅಡಕವಾಗಿರುವ ವಿಧಿ ವಿರೋಧಗಳನ್ನೂ, ಅಕ್ರಮತೆಯನ್ನೂ ಹೊಗಲಾಡಿಸಲು ಉಪಯುಕ್ತ ಸಲಹೆಯನ್ನು ಮಾಡಿದ್ದಾರೆ. ಸಿಕೆಂದರಾಬಾದಿನಲ್ಲಿಯುದ್ಧ ಸಹಾಯ ಸಮಿತಿಯ ಸದಸ್ಯರಿದ್ದು ಅದರಲ್ಲಿ ಪೂರ್ಣಶ್ರದ್ಧೆಯಿಂದ ಕೆಲಸಮಾಡುತ್ತಾರೆ. ಸ್ಥಳಿಕ ಚಟುವಟಿಕೆಗಳಿಗಾಗಿ ಇವರ ನೆರವು ಯಾವಾಗಲೂ ಸಿದ್ಧವಿರುತ್ತದೆ.

---

**ಶ್ರೀ ಬಿ. ಕೆ. ರಾಮಾನುಜ ಐಂಗಾರರು** ಬಿ.ಎ.ಎಲ್‌ಎಲ್.ಬಿ., ಸಿಕೆಂದರಾಬಾದು.

ಇವರ ಹುಟ್ಟಿದೂರು ಮೈಸೂರು. ಸಧ್ಯದ ವಯಸ್ಸು ೫೬. ಸಿಕೆಂದ್ರಾಬಾದಿನಲ್ಲಿ ಸುಪ್ರಸಿದ್ಧ ವಕೀಲರು ಇವರು. ಇವರ ಪ್ರಾಥಮಿಕ ಹಾಗು ಉನ್ನತ ಶಿಕ್ಷಣ ಮಹಬೂಬ ಕಾಲೇಜ, ಹಾಗು ನೈಜಾಂ ಕಾಲೆಜಿನಲ್ಲಿ ಆಯಿತು. ತಮ್ಮ ಬಿ. ಎ. ಪದವಿಯನ್ನು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಪಡೆದ ನಂತರ ಮುಂಬಯಿ, ವಿಶ್ವವಿದ್ಯಾನಿಲಯದಲ್ಲಿ ಎಲ್‌ಎಲ್. ಬಿ. ಯನ್ನು ಮುಗಿಸಿದರು. ತಕ್ಷಣವೇ ಪೋಲೀಸ ಖಾತೆಯಲ್ಲಿ ಸೇರಿದರು. ಕೆಲವು ದಿನಗಳಲ್ಲಿಯೇ ಹೈದರಾಬಾದ್ ರೆಸಿಡೆನ್ಸಿಯ ಸುಪರಿಂಟೆಂಡಂಟರಾಗಿ ತಮ್ಮ ಕರ್ತವ್ಯದಕ್ಷತೆಗಾಗಿ ಹೆಸರಾದರು. ಆದರೆ ಐಂಗಾರರಿಗೆ ವಕೀಲಿಯ ಕಡೆಗೆ ಒಲವು ಇದ್ದ ಕಾರಣ, ಅದೇ ವ್ಯವಸಾಯವನ್ನು ಪ್ರಾರಂಭಿಸಿದ ಕೆಲವು ಕಾಲದಲ್ಲಿಯೇ ಅಗ್ರಗಣ್ಯ ವಕೀಲರೆಂದು ಹೆಸರು ಪಡೆದರು. ಶ್ರೀ ಐಂಗಾರರಿಗೆ ಇಲ್ಲದ ಆಡಂಬರ ಬಾರದು. ಸಿಕೆಂದ್ರಾಬಾದಿನಲ್ಲಿ ಕೊಡಗೈಯವರೆಂದು ಹೆಸರಾಗಿದ್ದಾರೆ. ಐಂಗಾರರ ನೆರವು ಪಡೆಯದೆ ಇದ್ದ ಸಾರ್ವಜನಿಕ ಸಂಸ್ಥೆಯು ಸಿಕೆಂದ್ರಾಬಾದಿನಲ್ಲಿಯಾವೂ ಇಲ್ಲ. ಯುದ್ಧದ ಸಹಾಯದ ಸಮಿತಿಯ ಸದಸ್ಯರಾಗಿ ಬಹಳ ಆಸಕ್ತಿಯಿಂದ ದುಡಿಯುತ್ತಲಿದ್ದಾರೆ.

---

**ಶ್ರೀ ಗುಂಡೇರಾವ್ ಜೋಶಿ,** ಬಿ. ಎ. ಎಲ್‌ಎಲ್. ಬಿ. ಹೈದರಾಬಾದ್

ಇವರು ಕಲಬುರ್ಗಿ ಜಿಲ್ಲೆಯ ಶೇಡಂ ತಾಲೂಕಿನ ಜೋಯಿಸರ ಮನೆತನದವರು. ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಬಿ. ಎ., ಎಲ್‌ಎಲ್. ಬಿ. ಯನ್ನು ಪಾಸಾಗಿ ಹೈದರಾಬಾದಿನಲ್ಲಿ ವಕಾಲತ್ತನ್ನು ಆರಂಭಿಸಿ ಯಶಸ್ವಿಯಾಗಿದ್ದಾರೆ.

ಇವರಿಗೆ ಕನ್ನಡ ಭಾಷೆಯ ವಿಷಯದಲ್ಲಿ ಸಾಕಷ್ಟು ಆದರಾಭಿಮಾನಗಳಿವೆ. ಅವರಿಗೆ ಚಿಕ್ಕಂದಿನಲ್ಲಿ ಕನ್ನಡ ಕಲಿಯುವ ಸೌಕರ್ಯವಿರುತ್ತಿದ್ದರೆ ಕನ್ನಡಭಾಷೆಯಲ್ಲಿ

ಸಾಕಷ್ಟು ಪಾಂಡಿತ್ಯವನ್ನು ಪಡೆಯುತ್ತಿದ್ದರು. ನಿಜಾಂ ಕರ್ನಾಟಕ ಪರಿಷತ್ತಿನ ಹೈದರಾಬಾದ್ ನಗರ ಸಮಿತಿಯ ಅಧ್ಯಕ್ಷರಿವರು. ಸಾಕ್ಷರತಾ ಪ್ರಸಾರದ ಕಾರ್ಯ ದಲ್ಲಿ ತುಂಬಾ ಆಸಕ್ತಿಯಿದೆ. ತಾವು ಸ್ವತಃ ಇತ್ತೀಚಿಗೆ ಕನ್ನಡ ಅಕ್ಷರಾಭ್ಯಾಸವನ್ನು ಮಾಡಿಕೊಂಡು, ಕನ್ನಡದ ವಿಷಯದಲ್ಲಿ ಉದಾಸೀನತೆಯನ್ನು ತೋರಿಸುವ ಅನೇಕ ರಿಗೆ ಪಾಠವನ್ನು ಹಾಕಿದ್ದಾರೆ.

---

**ಶ್ರೀ ಕಾಗಲ ಶ್ರೀನಿವಾಸರಾಯರು**, ಬಿ.ಎ.,ಎಲ್‌ಎಲ್. ಬಿ., ವಕೀಲ.ಹೈದರಾಬಾದು



ಶ್ರೀ ಕಾಗಲ ಶ್ರೀನಿವಾಸರಾಯರು

ಇವರು ಧಾರವಾಡ ಕಾಲೇಜಿನಿಂದ ಬಿ. ಎ., ಪದವಿಯನ್ನು ಸಂಪಾದಿಸಿ, ಪುಣೆಯ ಲಾ ಕಾಲೇಜಿನಲ್ಲಿ ಎಲ್. ಎಲ್. ಬಿ., ಯನ್ನು ಸನ್ ೧೯೨೭ ರಲ್ಲಿ ಮುಗಿಸಿದರು. ಪ್ರಾರಂಭದಲ್ಲಿ ಇಲ್ಲಿಯ ಸುಪ್ರಸಿದ್ಧ ವಕೀಲರಾದ ದಿವಾನ್ ಬಹಾದ್ದೂರ್ ಅರ್ವಮುದು ಐಂಗಾರರ ಬಲಗೈಯಾಗಿ ಕೆಲಸ ಮಾಡಿದರು. ಅಮರಚಿಂತಾ ಸಂಸ್ಥಾನದಲ್ಲಿ ಕೆಲ ಅವಧಿಯ ವರೆಗೆ ಮುನ್ಸಫರಾಗಿದ್ದರು. ೧೫ ವರ್ಷಗಳ ತಮ್ಮ ಈ ಜೀವನದಲ್ಲಿ ಇಲ್ಲಿಯ ಕನ್ನಡ ಚಟುವಟಿಕೆಗಳಲ್ಲಿ ತಮ್ಮದೇ ಆದ ಒಂದು ಸ್ಥಾನವನ್ನು ಕಲ್ಪಿಸಿಕೊಂಡಿದ್ದಾರೆ. ದುಡಕತನ ನೇರದು. ತಾಳ್ಮೆ, ಸಹಾನುಭೂತಿ, ಹಾಗು ಸೌಹಾರ್ದತೆ ಇವರ ಯಶಸ್ವಿಯಾದ ಸಾರ್ವಜನಿಕ ಜೀವನದ ಮುಖ್ಯ ರಹಸ್ಯಗಳು. ಇಲ್ಲಿಯ ಎಲ್ಲ ಕನ್ನಡ ಸಂಸ್ಥೆಗಳಿಗೆ ಒಂದಿಲ್ಲೊಂದು ಬಗೆಯಿಂದ ಯಾವಾಗಲೂ ತಮ್ಮ ಸೇವೆಯನ್ನು ಸಲ್ಲಿಸುತ್ತ ಬಂದಿದ್ದಾರೆ. ಮುಖ್ಯವಾಗಿ ಸಾಹಿತ್ಯಮಂದಿರ, ನೃಪತುಂಗಶಾಲೆ, ಕರ್ನಾಟಕ ಾರದ ಕನ್ಯಾಪಾಠಶಾಲೆಗಳಲ್ಲಿ ಕ್ರಮವಾಗಿ ಅಧ್ಯಕ್ಷರಾಗಿಯೂ, ಕಾ· ನಿ. ಮಂಡಲದ ಸದಸ್ಯರಾಗಿಯೂ ಇಂದಿಗೂ ಅವುಗಳ ಉನ್ನತಿಗಾಗಿ ದುಡಿಯುತ್ತಲಿದ್ದಾರೆ. ಸನ್ ೧೩೪೯ ನೆಯ ಫಸಲಿಯಲ್ಲಿ ನಿಜಾಮು ಕನಾಟಕ ಪರಿಷತ್ತಿನ ಕಾರ್ಯದರ್ಶಿಗಳಾಗಿಯೂ, ಕೆಲಸಮಾಡಿದರು. ೨೬ ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತ ಸಮಿತಿಯ ಗೌರವ ಕಾರ್ಯದರ್ಶಿಗಳಾಗಿ ಸಮ್ಮೇಲವನ್ನು ಎಲ್ಲ ದೃಷ್ಟಿಯಿಂದಲೂ ಯಶಸ್ವಿಯಾಗಬೇಕೆಂದು ಧಾವಿಸಹತ್ತಿದಾರೆ.



**ಶ್ರೀ ಕೃಷ್ಣಾಚಾರ್ಯ ಜೋಶಿ,**
ಬಿ. ಎ., ಎಲ್‌ಎಲ್. ಬಿ.,
ಹೈಕೋರ್ಟ್ ವಕೀಲ
ಹೈದರಾಬಾದು.
ಇವರ ಪರಿಚಯವನ್ನು
ನಮ್ಮ ಅಧ್ಯಾತ್ಮಜೀವನ
ಎಂಬ ಲೇಖನದ ಆರಂಭದಲ್ಲಿ
ಕೊಡಲಾಗಿದೆ.



**ಶ್ರೀ ಜಯಾಚಾರ್ಯ**
ಹೈಕೋರ್ಟ್ ವಕೀಲ
ಹೈದರಾಬಾದು.
ಇವರ ಪರಿಚಯವನ್ನು
ರಾಜ್ಯಾಡಳಿತಕ್ರಮ
ಎಂಬ ಲೇಖನದ ಆರಂಭದಲ್ಲಿ
ಕೊಡಲಾಗಿದೆ.

---

**ಶ್ರೀ ಗುಡಿಹಾಳ ಹನಮಂತರಾಯರು** ವಕೀಲ ಹೈಕೋರ್ಟ್, ರಾಯಚೂರು.

ಇವರು ರಾಯಚೂರಿನ ಪ್ರಸಿದ್ಧ ವಕೀಲರೆಂದೂ, ಖಾದಿ ಭಕ್ತರೆಂದೂ, ಹರಿಜನ ಪ್ರೀಯರೆಂದೂ ಸಾಹಿತ್ಯ ಪೋಷಕರೆಂದೂ, ಕನ್ನಡಿಗರಲ್ಲಿ ಹೆಸರಾಗಿದ್ದಾರೆ. ಯಾರು ಏನಾದರೇನು ತಮ್ಮ ಹಿಡಿದ ಕಾರ್ಯವನ್ನು ಸಾಗಿಸಿಕೊಂಡು ಹೋಗುವ ಕೆಚ್ಚೆದೆ ಇವರದು. ರಾಯರು ಕಾಂಗ್ರೆಸ್ಸ ಭಕ್ತರು. ಗ್ರಾಮೋದ್ಧಾರ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಕನ್ನಡ ಹೆಣ್ಣುಮಕ್ಕಳಿಗಾಗಿ 'ಶಾರದ ಶಾಲೆಯನ್ನು ಸ್ಥಾಪಿಸಿ ಅದನ್ನು ನಡೆಸಹತ್ತಿದ್ದಾರೆ. ಶಾರದಾ ಬ್ಯಾಂಕ ಸ್ಥಾಪಿಸಿ ಅದರ ಲಾಭದ ಕೆಲ ಭಾಗವನ್ನು ಶಿಕ್ಷಣಕ್ಕಾಗಿ ಕೊಡುತ್ತಿದ್ದಾರೆ.

## ಶ್ರೀ ಮದನೂರು ಶ್ರೀನಿವಾಸರಾಯರು, ಹೈಕೋರ್ಟ್ ವಕೀಲ.

ಇವರು ೨೦ ವರ್ಷಗಳಿಂದ ಮಹಾರಾಜಾ ಬಹಾದ್ದೂರ್ ಸ್ಟೇಟಿನಲ್ಲಿಯೂ, ಕೋರ್ಟಆಫ ವಾರ್ಡ್ಸನಲ್ಲಿಯೂ ಸರಕಾರಿ ವಕೀಲರಾಗಿ ಕೆಲಸಮಾಡುತ್ತಿದ್ದಾರೆ. ಇವರು ಮಹಾರಾಜಾ ಬಾಹಾದ್ದೂರ್ ಸ್ಟೇಟಿನ ಮದನೂರ ಗ್ರಾಮದ ಸನ್ಮಾನ್ಯ ವೀರಶೈವ ಮನೆತನಕ್ಕೆ ಸೇರಿದವರು. ತನ್ನ ಸಮಾಜದ ಉನ್ನತಿಗಾಗಿ ಇವರು ಹಣ ಗಾಡಿದ್ದಾರೆ. ಇವರ ಸಂಸ್ಥಾನದ ವೀರಶೈವ ಪ್ರಾಂತೀಯಪರಿಷತ್ತಿನ ಪಾರ್ಲಿಮೆಂಟರಿ ಬೋರ್ಡಿನ ಕಾರ್ಯದರ್ಶಿಗಳು. ಯಾದಗಿರಿಯ ಸಂಸ್ಕೃತ ಶಾಲೆಯ ಆಜೀವ ಸದಸ್ಯರಾಗಿದ್ದು, ಅದರ ಅಧ್ಯಕ್ಷರಾಗಿಯೂ, ಹೈದರಾಬಾದಿನ ನೃಪತುಂಗ ಶಾಲೆಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿಯೂ, ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿದ್ದಾರೆ. ಇವರು ಅಖಿಲ ಭಾರತೀಯ ಲಿಂಗಾಯತ ಪರಿಷತ್ತಿಗಾಗಿ ಹೈದರಾಬಾದಿನ ಪರವಾಗಿ ಪ್ರತಿನಿಧಿಗಳು. ನಿಜಾಂ ಕರ್ನಾಟಕ ಪರಿಷತ್ತಿನ ಕಾರ್ಯದರ್ಶಿಗಳು.

---

## ಶ್ರೀ ಜಿ. ಮಧ್ವರಾವ್ ಹೈಕೋರ್ಟ್ ವಕೀಲ, ರಾಯಚೂರು.

ರಾಯಚೂರುಜಿಲ್ಲೆಯ ಜಿ. ಮಧ್ವರಾಯರು ಯಾರೆಂದು ಹೇಳುವದು ಅಗತ್ಯವಿಲ್ಲ. ಅಷ್ಟು ಪರಿಚಿತವಾದ ವ್ಯಕ್ತಿತ್ವ ಇರುವದು. ರಾಯಚೂರಿನಸುಪ್ರಸಿದ್ಧ ವಕೀಲರಾದ ಶ್ರೀ ಜಿ. ಕೃಷ್ಣರಾಯರ ಮಕ್ಕಳಿವರು. ರಾಯರಾದರು ತಮ್ಮ ಹಿರಿಯರ ಹೆಸರನ್ನು ಮುಂದೆ ಮಾಡಿಕೊಂಡು ಬಂದಿದ್ದಾರೆ. ಇವರ ಸ್ವಭಾವ ಸರಳ. ಇವರು ಜನಪ್ರಿಯರು. ಅಧಿಕಾರಿಗಳಲ್ಲಿ ಇವರಿಗೆ ಎಷ್ಟು ಗೌರವ ವಿದೆಯೋ ಅಷ್ಟೇ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಕೈಲಾದ ಸಹನಭೂತಿಯನ್ನು ತೋರಿಸಿ ಕಾರ್ಯ ಯಶಸ್ವಿಯಾಗಿ ಸಾಗಿದರೆ ತೀರಿತು, ಇವರ ಸಂತೋಷಕ್ಕೆ ಎಣೆಯಿಲ್ಲ.

---

## ಶ್ರೀ ರಾಮರಾಯರು, ವಕೀಲ ಶಿಂಧನೂರು.

ಇವರು ಇಲ್ಲಿಯ ಪ್ರಸಿದ್ಧ ವಕೀಲರು. ತಮ್ಮ ವ್ಯವಸಾಯದಲ್ಲಿ ನುರಿತವರು. ಸಾರ್ವಜನಿಕ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಇವರ ಪ್ರಯತ್ನದಿಂದಲೇ ಇಲ್ಲಿ ವಾಚನಾಲಯ ನಡೆದಿದೆ. ನಿಜಾಮಕರ್ನಾಟಕ ಪರಿಷತ್ತಿನ ತಾಲೂಕಾಸಮಿತಿಯ ಅಧ್ಯಕ್ಷರು.

---

**ಮೌಲ್ವಿ ಅಬ್ದುರ್ರೋಫ್ ಸಾಹೇಬ,** ಬಿ.ಎ,ಎಲ್ಎಲ್.ಬಿ. ವಕೀಲ,ರಾಯಚೂರು.

ಇವರು ಬಿಜಾಪುರದ ಜಾಗೀರದಾರರ ಮನೆತನದವರು. ಉಸ್ಮಾನಿಯಾ ವಿಶ್ವವಿದ್ಯಾನಿಲಯದದಿಂದ ಬಿ. ಎ., ಎಲ್ಎಲ್. ಬಿ., ಪಾಸಾಗಿದ್ದಾರೆ. ಇವರು ಉರ್ದು ಹಾಗು ಕನ್ನಡದಲ್ಲಿ ಚೆನ್ನಾಗಿ ಭಾಷಣ ಮಾಡುತ್ತಾರೆ. ರಾಯಚೂರಿನಲ್ಲಿಯ ಸಾರ್ವಜನಿಕ ಚಟುವಟಿಕೆಗಳಲ್ಲಿ ಇವರಗೆ ಸಾಕಷ್ಟು ಆಸಕ್ತಿಇದೆ. ಅಂಜುಮನ್ ಇತ್ತಿಹಾದುಲ್ಮುಸಲ್ಮೀನದ ಉತ್ಸಾಹಿ ಕಾಯಕಕರ್ತರಿವರು. ತಮ್ಮ ವ್ಯವಸಾಯದಲ್ಲಿಯೂ ಸಾಕಷ್ಟು ಕೀರ್ತಿಯನ್ನು ಗಳಿಸಿದ್ದಾರೆ.

---

**ಶ್ರೀ ಪಿ. ಎಸ್. ಪಾಟೀಲ,** ಬಿ. ಎ., ಎಲ್ಎಲ್. ಬಿ., ರಾಯಚೂರು.

ರಾಯಚೂರಿನಲ್ಲಿರುವ ವೀರಶೈವ ವಿದ್ಯಾರ್ಥಿ ವಸತಿಗೃಹದ ಸ್ಥಿರ ನಿಧಿಗಾಗಿ ಅರ್ಧಲಕ್ಷ ರೂಪಾಯಿಗಳನ್ನು, ದಾನವಾಗಿಕೊಟ್ಟು ದಾನ ಶೂರರೆಂದು ಹೆಸರಾದ ಸಕ್ಕರೆಪ್ಪಗೌಡರ ಮಕ್ಕಳು ಇವರು. ಉಸ್ಮಾನಿಯಾ ವಿಶ್ವ ವಿದ್ಯಾನಿಲಯದಿಂದ ತಮ್ಮ ಎಲ್ಎಲ್. ಬಿ., ಪದವಿಯನ್ನು ಸಂಪಾದಿಸಿ ಈ ಎರಡು ವರ್ಷಗಳಿಂದ ರಾಯಚೂರಿನಲ್ಲಿಯೇ ಸ್ವತಂತ್ರವಾಗಿ ತಮ್ಮ ಉದ್ಯೋಗವನ್ನು ನಡೆಸಿದ್ದಾರೆ. ಹಿಡಿದ ಕೆಲಸವನ್ನು ಸಾವಧಾನವಾಗಿ ಕೊನೆಗಾಣಿಸುವದು ಇವರ ಗುಣವಾಗಿದೆ. ಎಲ್ಲರಲ್ಲಿ ಬೆರೆತು ಜನತೆಯ ಹಿತಕ್ಕಾಗೆ ದುಡಿಯುವ ಹಿಡಿತ ಇವರಿಗೆ ಚೆನ್ನಾಗಿ ಬಂದಿದೆ.

---

**ಶ್ರೀ ವೆಂಕಟರಾವ್, ವಕೀಲ ಕಾಳಾಪೂರ, ಲಿಂಗಸುಗೂರು.**

ಇವರು ಸುಪ್ರಸಿದ್ಧ ವಕೀಲರು. ಸಾಕಷ್ಟು ಧನವನ್ನು, ಕೀರ್ತಿಯನ್ನೂ ಸಂಪಾದಿಸಿದ್ದಾರೆ. ಲಿಂಗಸುಗೂರಿನ ಸಹಕಾರಬ್ಯಾಂಕಿನ ಕಾರ್ಯದರ್ಶಿಗಳಾಗಿ ಬಹಳ ಶ್ರದ್ಧೆಯಿಂದದೂ, ಕಳಕಳಿಯಿಂದಲೂ ಕೆಲಸಮಾಡಿ ಸಹಕಾರ ಚಳವಳಿಯ ಉತ್ಪಾದಕರಾಗಿದ್ದಾರೆ. ಸರಕಾರಿ ಅಧಿಕಾರಿಗಳಲ್ಲಿ ರಾಯರು ವರ್ಚಸ್ವಿಗಳಾಗಿದ್ದಾರೆ.

---

**ಶ್ರೀ ಜಿ. ಹನುಮಂತರಾಯರು, ಲಿಂಗಸುಗೂರು.**

ಇವರು ಪ್ರಸಿದ್ಧ ವಕೀಲರು. ಧರ್ಮಿಷ್ಟರು. ಸಾಹಿತ್ಯ ಸಂಶೋಧನೆಯ ಕಾರ್ಯವನ್ನು ಈಗ ೧೫-೨೦ ವರ್ಷಗಳಿಂದ ನಡೆಯಿಸಿದ್ದಾರೆ. ಶ್ರೀ ಪ್ರಾಣೇಶ ದಾಸರ ಹಾಗು ಅವರ ಇಬ್ಬರು ಶಿಷ್ಯರ ಕೀರ್ತನೆಗಳನ್ನು ೧೬ ಹೊತ್ತಿಗೆಗಳಲ್ಲಿ ಪ್ರಕಟಸಿದ್ದಾರೆ. ಮೈಸೂರು ಪ್ರಾಂತದಲ್ಲಿ ದೊರೆತ ಒಬ್ಬ ದಾಸರ ಕೃತ 'ಸುಮಧ್ವವಿಜಯ'

ವೆಂಬ ಹಳೆಯ ಕನ್ನಡ ಷಟ್ಪದಿ ಕಾವ್ಯವನ್ನು ಪರಿಶೋಧಿಸಿ ಈಗಗಾಲೇ [illegible] ಳನ್ನು ಪ್ರಕಟಿಸಿದ್ದಾರೆ. ಇಂಥ ಕಾಲದಲ್ಲಿಯೂ ಧಾರ್ಮಿಕ ಪುಸ್ತಕಗಳನ್ನು ಇಷ್ಟು ವೆಚ್ಚ ವಹಿಸಿ ಪ್ರಕಟಿಸುತ್ತಿರುವುದು ಸಾಹಸದ ಕೆಲಸವಾಗಿದೆ. ಇದಲ್ಲದೆ ಇವರು ಸುಮಾರು ಹತ್ತು ಸಾವಿರ ಸುಳಾದಿಗಳನ್ನು, ಒಂದುಸಾವಿರ ಉಗಾಭೋಗಗಳನ್ನು ೨೫ ಹಳೆಗನ್ನಡ ಕಾವ್ಯಗಳನ್ನು ಸಂಗ್ರಹಿಸಿದ್ದಾರೆ

---

**ಶ್ರೀ ಜನಾರ್ದನರಾಯರು** ಬಿ. ಎ., ಎಲ್‌ಎಲ್. ಬಿ. ವಕೀಲ ಕೊಪ್ಪಳ.

ಇವರ ಶಿಕ್ಷಣ, ಕೊಪ್ಪಳ, ಧಾರವಾಡ ಹಾಗು ಪುಣೆಯಲ್ಲಿ ಆಯಿತು. ಪುಣೆಯಿಂದಲೇ ತಮ್ಮ ಎಲ್‌ಎಲ್. ಬಿ., ಪದವಿಯನ್ನು ಪಡೆದು ಇಲ್ಲೀಗ ಕೊಪ್ಪಳದಲ್ಲಿ ತಮ್ಮ ವ್ಯವಸಾಯವನ್ನು ಪ್ರಾರಂಭಿಸಿದ್ದಾರೆ. ಕೆಲವು ಅವಧಿಯ ವರೆಗೆ ಇವರು ಹೈದರಾಬಾದಿನಲ್ಲಿಯೂ ವಕೀಲಿಯನ್ನು ಮಾಡಿ ಈಗ ಕೊಪ್ಪಳದಲ್ಲಿಯೇ ನಡೆಸಿದ್ದಾರೆ. ನಿಜಾಮ ಕರ್ನಾಟಕ ಪರಿಷತ್ತಿನ ಪ್ರಮುಖ ಕಾರ್ಯಕರ್ತರು. ಕರ್ನಾಟಕ ಸಂಘದ, ಹಾಗು ಗಜಾನನ ವಾಚನಾಲಯದ ಪೋಷಕರು. ಸದ್ಗುಣಿಗಳು. ಒಡನರಾಧಾರಿಗಳು. ಪಾದಿ ಭಕ್ತರು.

---

**ಶ್ರೀ ಕಕ್ಕೇರಿ ಹನುಮಂತರಾಯರು,** ಹೈಕೋರ್ಟ ವಕೀಲ, ಕಲಬುರ್ಗಿ.


ಶ್ರೀ ಕಕ್ಕೇರಿ ಹನುಮಂತರಾಯರು

ಇವರು ಸುರಪುರತಾಲೂಕಕ್ಕೆ ಸೇರಿದ ಕಕ್ಕೇರಿ ಗ್ರಾಮಸ್ಥರು. ಇವರ ಪ್ರಾಥಮಿಕ ಹಾಗು ಉನ್ನತ ಅಭ್ಯಾಸ ಕಲಬುರ್ಗಿಯಲ್ಲಿ ಆಯಿತು. ಅಲ್ಲಿಂದಲೇ ತಮ್ಮ ವಕೀಲಿಯ ಪದವಿಯನ್ನು ಸಂಪಾದಿಸಿ ತಮ್ಮ ವ್ಯವಸಾಯವನ್ನು ಪ್ರಾರಂಭಮಾಡಿ ಇಂದಿಗೆ ಸುಮಾರು ೨೫ ವರ್ಷಗಳಾದವು. ರಾಯರು ಕಲಬುರ್ಗಿಯಲ್ಲಿ ಕಣ್ಣಾದ ವಕೀಲರು. ಸ್ಥಳೀಕ ಸಂಸ್ಥೆಗಳಲ್ಲಿ ಆಸಕ್ತಿಯಿಂದ ಕೆಲಸಮಾಡಿದ್ದಾರೆ. ನೂತನ ವಿದ್ಯಾಲಯದ ಆಡಳಿತ ಸಮಿತಿಯ ಸದಸ್ಯರು. ನಿಜಾಮ ಕರ್ನಾಟಕ ಪರಿಷತ್ತಿನ ಜಿಲ್ಲಾಸಮಿತಿಯ ಅಧ್ಯಕ್ಷರು. ಸುರಪುರದಲ್ಲಿ ನೆರೆಯಲಿರುವ ಪರಿಷತ್ತಿನ ತೃತೀಯಾಧಿವೇಶನಕ್ಕಾಗಿ ಹಗಲಿರುಳು ಹೋರಾಡುತ್ತಿದ್ದಾರೆ. ಅದರ ತಾತ್ಕಾಲಿಕ ಸ್ವಾಗತ ಸಮಿತಿಯ ಅಧ್ಯಕ್ಷರು ಇವರು.

---

## ಶ್ರೀ ಅಣ್ಣಾರಾಯರು, ಬಿ. ಎ., ಎಲ್‌ಎಲ್. ಬಿ., ಕಲಬುರ್ಗಿ.



ಶ್ರೀ ಅಣ್ಣಾರಾಯರು

ಇವರು ಕಲಬುರ್ಗಿಯ ತರುಣ ವಕೀಲರು. ತಮ್ಮ ಅಭ್ಯಾಸವನ್ನು ಕಲಬುರ್ಗಿಯಲ್ಲಿ ಪ್ರಾರಂಭ ಮಾಡಿ ಹೈದರಾಬಾದಿನಲ್ಲಿ ಕೊನೆಗಾಣಿಸಿದರು. ಇವರು ಮೊದಲಿನಿಂದಲೂಶ್ರಮಜೀವಿಗಳು. ಈಚಿಕ್ಕ ವಯಸ್ಸಿನಲ್ಲಿಯೇ ಎಷ್ಟೊ ಸಂಸ್ಥೆಗಳಿಗೆ ಜವಾಬು ದಾರಿ ಸೇವೆಯನ್ನು ಸಲ್ಲಿಸಿದ್ದಾರೆ. ಎರಡು ವರ್ಷ ಗಳವರೆಗೆ ಶಂಕರ ಕಾಲೇಜದ ಅಧ್ಯಕ್ಷರಿದ್ದು ಈಗ ಅದರ ಕಾ. ನಿ. ಸ. ಸದಸ್ಯರಿದ್ದಾರೆ. ಕಬಬುರ್ಗಿ ಜಿಲ್ಲೆಯ ಮುನ್ಸಿಪಾಲ್ಟಿ ಸಭೆಯ ಸದಸ್ಯರಾಗಿಯೂ ಎರಡುವರ್ಷಗಳ ವರೆಗೆ ಕೆಲಸಮಾಡಿದ್ದಾರೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮೀಟಿಯ ಸದಸ್ಯ ರಾಗಿಯೂ ಆರಿಸಲಾಗಿದ್ದಾರೆ. ಕಲಬುರ್ಗಿಯ ವೀರಶೈವ ತರುಣ ಸಂಘದ ಅಧ್ಯಕ್ಷ ರಾಗಿದ್ದಾರೆ. ಕರ್ನಾಟಕ ಪರಿಷತ್ತಿನ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾ ಗಿಯೂ, ವೀರಶೈವ ಪ್ರಾಂತೀಯ ಪರಿಷತ್ತಿನ ಕಾರ್ಯದರ್ಶಿಗಳಾಗಿಯೂ, ಕೆಲಸ ಮಾಡುತ್ತಾರೆ. ಈ ಎಲ್ಲ ಸಂಸ್ಥೆಗಳಲ್ಲಿ ನುರಿತ ಅಣ್ಣಾರಾಯರಲ್ಲಿ ಸಾರ್ವಜನಿಕ ಜೀವ ನಕ್ಕೆ ಬೇಕಾದ ಎಲ್ಲ ಅನುಭವಗಳು ಬಂದಿವೆ.

---

## ಶ್ರೀ ತಿಮ್ಮನಗೌಡರು ವಕೀಲ, ಕೊಪ್ಪಳ.

ಇವರು ಜಾಗೀರಿನಲ್ಲಿರುವ ಬನ್ನಿಕೊಪ್ಪ ಗ್ರಾಮದವರು. ಹೈದರಾಬಾದಿ ನಿಂದ ವಕೀಲಿಯ ಪದವಿಯನ್ನು ಸಂಪಾದಿಸಿದರು. ಅಲ್ಪಾವಧಿಯಲ್ಲಿಯೇ ಎದೆ ಯುಳ್ಳ ವಕೀಲರೆಂದು ಹೆಸರಾದರು. ಜನತೆಯ ಕಲ್ಯಾಣಕ್ಕಾಗಿ ನಡೆಯುವ ಆಂ ದೋಲನಗಳಲ್ಲಿ ಇವರಿಗೆ ತುಂಬಾ ಆಸಕ್ತಿ, 'ಗ್ರಾಮ ಸುಧಾರಣೆ'ಯ ಎಲ್ಲಚಳುವಳಿಗಳ ತಳಹದಿ ಎಂದು ತಮ್ಮ ಗ್ರಾಮದಲ್ಲಿ ಆ ಕಾರ್ಯವನ್ನು ಪ್ರಾರಂಭ ಮಾಡಿದ್ದಾರೆ. ಸಹಕಾರ ಸಂಘ, ವಾಚನಾಲಯಗಳನ್ನು ನಡೆಸುತ್ತಿದ್ದಾರೆ. ಗೌಡರು ಉದಾರ ಹೃದಯದವರು. ಒಳ್ಳೇ ಕಾರ್ಯಗಳಿಗೆ ಯಾವಾಗಲೂ ಸಹಾಯವನ್ನು ಸಲ್ಲಿಸಲು ಸಿದ್ಧರಿರುತ್ತಾರೆ.

## ಶ್ರೀ ಚಾಕಲಬ್ಬಿ ರಾಘವೇಂದ್ರ ರಾಯರು.

ಇವರು ಕನ್ನಡಿಗರಿಗೆ ಪರಚಿತರಾಗಿದ್ದಾರೆ. ಇವರು ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರು. ಹೈದರಾಬಾದ್ ಸಂಸ್ಥಾನದ ವಿವಿಧ ಪರಿಸ್ಥಿತಿಗಳನ್ನು ಕುರಿತು ಜಯಕರ್ನಾಟಕದಲ್ಲಿಯೂ, ಹಾಗು ಇತರ ಪತ್ರಿಕೆಗಳಿಗೆ ಲೇಖವನ್ನು ಬರೆದಿದ್ದಾರೆ. ಮೊದಲನೆಯ ಸಾಲಾರ್‌ಜಂಗ್‌ರ ಚರಿತ್ರೆ ಬರೆದು ಬಹಳ ಕಾಲವಾಯಿತು. ಅದಿನ್ನು ಅಚ್ಚು ಕಾಣಬೇಕಾಗಿದೆ.

---

## ಮೌಲ್ವಿ ಅಬ್ದುಲ್ಕರೀಮ ಸಾಹೇಬ ತಿಮ್ಮಾಪುರಿ,
ಹೈಕೋರ್ಟ್ ವಕೀಲ, ಕಲಬುರ್ಗಿ

ಇವರು ಕಲಬುರ್ಗಿಯಲ್ಲಿ ಸುಪ್ರಸಿದ್ಧ ವಕೀರು. ನಾಲ್ಕು ಜನರಿಗೆ ಬೇಕಾದವರು. ಅಧಿಕಾರವರ್ಗದಲ್ಲಿಯೂ ಸಾಕಷ್ಟು ವರ್ಚಸ್ಸಿದೆ. ಸಾರ್ವಜನಿಕ ಕಾರ್ಯಗಳಲ್ಲಿಯೂ ಇವರು ಭಾಗ ತೆಗೆದುಕೊಳ್ಳುತ್ತಾರೆ. ಅಂಜುಮನ್ ಇತ್ತಿಹಾದಲ್ಮುಸಲ್ಮೀನ ಕಲಬುರ್ಗಿಯ ಅಧ್ಯಕ್ಷರು. ಮುಸಲ್ಮಾನರ ಏಳ್ಗೆಯ ಹೆಣಗಾಟದಲ್ಲಿ ಇವರ ಕೈವಡವೂ, ಆಸಕ್ತಿಯೂ ವಿಪುಲವಾಗಿದೆ. ಇತರ ಪಂಗಡದವರೊಡನೆಯೂ, ಸೌಹಾರ್ದದಿಂದಲೂ ಸಹಾನು ಭೂತಿಯಿಂದಲೂ ಕಾರ್ಯಮಾಡುತ್ತಾರೆ. ತಮ್ಮ ಹುಟ್ಟಿದೂರಾದ ತಿಮ್ಮಾಪುರದಲ್ಲಿಯೂ ಅಂಜುಮನ್ನಿನ ಶಾಖೆಯನ್ನು ಸ್ಥಾಪಿಸಿ ಕಾರ್ಯ ಮುಂದುವರಿಸುತ್ತಿದ್ದಾರೆ.

---

## ಶ್ರೀ ಬಳ್ಳುರಿಗಿ ನಾರಾಯಣ ರಾಯರು ಹೈಕೋರ್ಟ್ ವಕೀಲ, ಕಲಬುರ್ಗಿ.

ಇವರು ಕಲಬುರ್ಗಿಯ ಹಿರಿಯ ವಕೀಲರು. ತಮ್ಮ ಉದ್ಯೋಗದಲ್ಲಿ, ಸುರಿತವರಾಗಿದ್ದಾರೆ. ಸಾರ್ವಜನಿಕ ಚಟುವಟಿಕೆಗಳಿಗೆ ತಮ್ಮ ಆಶೀರ್ವಾದಗಳನ್ನು ದಯಪಾಲಿಸಿ, ಅವುಗಳ ಪ್ರಗತಿಗಾಗಿ ತಮ್ಮ ಸಲಹೆ ಸೂಚನೆಗಳನ್ನು, ನೆರವನ್ನು ಕೊಡುತ್ತಾರೆ. ಕಲಬುರ್ಗಿಯ ಎಲ್ಲ ಪಂಗಡಗಳಲ್ಲಿಯೂ ರಾಯರಿಗೆ ಮನ್ನಣೆಯಿದೆ.

---

## ಶ್ರೀ ಸತಾಳಕರ್ ಕೃಷ್ಣರಾಯರು. ಹೈಕೋರ್ಟ ವಕೀಲ, ಕಲಬುರ್ಗಿ.

ಇವರು ಕಲಬುರ್ಗಿಯ ಸುಪ್ರಸಿದ್ಧ ವಕೀಲರು. ಮಹಾಪ್ಪದವರು. ಕನ್ನಡಕ್ಕಾಗಿ ಸಂಪೂರ್ಣ ಸಹಾನುಭೂತಿಯಿದೆ. ಎಲ್ಲ ಭಾಷೆಗಳೂ ಸಮತೆಯಿಂದ ಬಾಳಿ ಬದುಕುವ ಅಧಿಕಾರವಿದೆ ಎನ್ನುವ ಅಭಿಪ್ರಾಯದವರಿವರು. ಕರ್ನಾಟಕ ಪರಿಷ

ತ್ತಿನಲ್ಲಿ ಆಸಕ್ತಿಯಿಂದ ಕೆಲಸಮಾಡುತ್ತಾರೆ. ಅದರ ಜಿಲ್ಲಾ ಸಮಿತಿಯ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರಿದ್ದಾರೆ. ನೂತನ ವಿದ್ಯಾಲಯದ ಆಡಳಿತ ಸಮಿತಿಯ ಸದಸ್ಯರು. ಅದರ ಪುರೋಭಿವೃದ್ಧಿಗೆ ಇವರು ಬಹಳ ದುಡಿದಿದ್ದಾರೆ. ಬರುವ ತಿಂಗಳಲ್ಲಿ ಸುರಪುರದಲ್ಲಿ ನೆರೆಯಲಿರುವ ನಿಜಾಂ ಕರ್ನಾಟಕಪರಿಷತ್ತಿನ ತೃತೀಯಾಧಿವೇಶನಕ್ಕಾಗಿ ತಮ್ಮ ಜಿಲ್ಲೆಯಲ್ಲಿ ಸಂಚಾರವನ್ನು ಮಾಡಹತ್ತಿದ್ದಾರೆ. ರಾಯರು ಸ್ವಾವಲಂಬಿಗಳು. ಇವರದೃಷ್ಟಿ ವಿಕಾಸಹೊಂದಿದೆ. ಒಟ್ಟಿನಲ್ಲಿ ನಮ್ಮ ಪ್ರಾಂತದ ಹಿರಿಯರಲ್ಲಿ ಇವರೂ ಒಬ್ಬರು.

## ಶ್ರೀ ಸಿದ್ಧರಾಮಪ್ಪನವರು, ವಕೀಲ ಕಲಬುರ್ಗಿ.


ಶ್ರೀ ಸಿದ್ಧರಾಮಪ್ಪನವರು ಕಲಬುರ್ಗಿ

ಇವರು ಮುಂದೆ ಬಂದ ವಕೀಲರು. ರಾಯಚೂರಜಿಲ್ಲೆಯ ಯರಮರಸ್ ಗ್ರಾಮದವರು. ಶಿಕ್ಷಣವನ್ನು ರಾಯಚೂರಿನಲ್ಲಿ ಮುಗಿಸಿ ಹೈದರಾಬಾದಿನಿಂದ ತಮ್ಮ ವಕೀಲಿಯ ಸನದನ್ನು ಪಡೆದರು. ತಮ್ಮ ಉದ್ಯೋಗದ ಜೊತೆಗೆ ದೇಶವನ್ನು ಬಿಟ್ಟಿಲ್ಲ. ನಿಜಾಮ ಕರ್ನಾಟಕ ಪರಿಷತ್ತಿನ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾಗಿಯೂ, ಸ್ಥಾಯಿ ಸಮಿತಿಯ ಸದಸ್ಯರಾಗಿಯೂ, ನಾಡಿನ ಉನ್ನತಿಗಾಗಿ ಟೊಂಕ ಕಟ್ಟಿದ್ದಾರೆ. ಸ್ಥಳಿಕ ಸಂಸ್ಥೆಯಾದ ಕನ್ನಡಸಾಹಿತ್ಯ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಕನ್ನಡದ ಚಳವಳಿಯಲ್ಲಿ ಭಾಗವಹಿಸಿದ್ದಾರೆ. ವೀರಶೈವ ಪ್ರಾಂತೀಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿಯೂ ಚುನಾಯಿತರಾಗಿದ್ದಾರೆ.

## ಶ್ರೀ ದೀಕ್ಷಾಚಾರ್ಯ ವಕೀಲ, ಸುರಪುರ

ಇವರು ಇಲ್ಲಿಯ ಕರ್ನಾಟಕ ಸಂಘದ ಉಪಾಧ್ಯಕ್ಷರು. ಕೋ‌ಆಪರೇಟಿವ್ ಅರ್ಬನ್, ಸೆಂಟ್ರಲ್ ಬ್ಯಾಂಕುಗಳ ಕಾರ್ಯದರ್ಶಿಗಳೂ ಆಗಿದ್ದಾರೆ. ಪ್ರತಿಯೊಂದು ಸಾರ್ವಜನಿಕ ಕೆಲಸದಲ್ಲಿ ಇವರ ಕೈವಾಡ. ನಾಡಹಬ್ಬಕ್ಕೆ ಇವರೇ ಮುಂದಾಳು. ಇವರಮನೆ ಎಂದರೆ ಎಲ್ಲ ಕಾರ್ಯಕರ್ತರ ನೆಲೆವೀಡು. ಹೋಮಿಯೊಪೆಥಿಕ ವೈದ್ಯಕಿ

ಯಲ್ಲಿ ಪರಂಗತರು. ಬಡವ ಬಲ್ಲಿದರೆಲ್ಲರಿಗೂ ವೈದ್ಯರು. ಹಿರಿಯರಲ್ಲಿಯೂ, ಕಿರಿಯರಲ್ಲಿಯೂ ಬೆರೆತು ಹೋಗಿದ್ದಾರೆ. ಮಾತೃಭಾಷೆ ತೆಲಗಿದ್ದರೂ ಕನ್ನಡಕ್ಕಾಗಿ ಹೆಣಗಾಡುತ್ತಿದ ರೆ. ಒಟ್ಟಾರೆ ಈ ಊರ 'ಕಾಕಾ' ಇವರು.

---

## ಶ್ರೀಧರ ವಾಮನ್ ನಾಯಕ, ಬಿ.ಎ., ಬಾರ್-ಎಟ್-ಲಾ. ಹೈದರಾಬಾದು.

ಧರ್ಮವೀರ ವಾಮನ್ ನಾಯಕರು ಹೈದರಾಬಾದು ಸಂಸ್ಥಾನದಲ್ಲಿಯೇ ಪ್ರಸಿದ್ಧರಾಗಿದ್ದು ತಮ್ಮ ಅನೇಕ ಸತ್ಕಾರ್ಯಗಳನ್ನು ಸ್ಥಿರಗೊಳಿಸಿ ಕೈಲಾಸವಾಸಿಯಾದರು. ಅವರ ಮಕ್ಕಳಾದ ಶ್ರೀಧರನಾಯಕರು ಕೂಡ ಅಷ್ಟೇ. ತಂದೆಗೆ ತಕ್ಕ ಮಕ್ಕಳು. ನಾರಾಯಣಪೇಟೆ ಇವರ ಊರು. ಅಲ್ಲಿ ಹಾಗು ಇತರ ಸ್ಥಳಗಳಲ್ಲಿ ಇವರ ಅನೇಕ ಗಿರಣಿಗಳೂ, ಕಾರ್ಖಾನೆಗಳೂ ಇವೆ. ನಾಯಕರು ಪುಣೆಯ ಫರ್ಗ್ಯುಶನ್ ಕಾಲೇಜಿನಿಂದ ಬಿ.ಎ., ಪಾಸಾದರು. ೧೯೨೮ ರಲ್ಲಿ ಇಂಗ್ಲಂಡಿಗೆ ಹೋಗಿ ಬಾರ್-ಎಟ್-ಲಾ ಪಾಸಾಗಿಬಂದರು. ೧೯೨೬ ರ ವರೆಗೆ ವಕೀಲಿಯನ್ನುಮಾಡಿದರು. ಇವರಿಗೆ ಕಾರ್ಮಿಕ ಚಳವಳಿಯಲ್ಲಿ ಬಹಳ ಆಸಕ್ತಿ. ಎನ್. ಎಸ್. ರೇಲ್ವೆ ಕೆಲಸಗಾರರ ಸಂಘದ ಉಪಾಧ್ಯಕ್ಷರಾಗಿ ಕಾರ್ಮಿಕ ಚಳವಳಿಯನ್ನು ಹೈದರಾಬಾದಿನಲ್ಲಿ ಊರ್ಜಿತಸ್ಥಿತಿಗೆ ತಂದಿದ್ದಾರೆ. ೧೯೩೦ ರಲ್ಲಿ ಕೆಲಸಗಾರರ ಸಂಪನ್ನು ಯಶಸ್ವಿಯಾಗಿ ನಡೆಯಿಸಿದರು. ಅಖಿಲಭಾರತ ಸಂಯುಕ್ತ ರೇಲ್ವೆ ಕೆಲಸಗಾರ ಸಂಘಗಳಿಗೆ ಪ್ರತಿನಿಧಿಗಳಾಗಿ ಹೋಗಿದ್ದರು. ಅನೇಕ ಗಿರಣಿಗಳಲ್ಲಿ ಕೆಲಸಗಾರರ ಸಂಘಗಳನ್ನು ಸ್ಥಾಪಿಸಿದ್ದಾರೆ. ೧೯೩೯ ರಲ್ಲಿ 'ಬಾಂಬೆ ಕ್ರಾನಿಕಲ್' ಪತ್ರಿಕೆಯ ಸಂಪಾದಕರಾದ ಮಿಸ್ಟರ್ ಬ್ರೇಲ್ವಿಅವರ ಅಧ್ಯಕ್ಷತೆಯಲ್ಲಿ ಔರಂಗಾಬಾದಿನಲ್ಲಿ ನಡೆದ ಅಖಿಲ ಹೈದರಾಬಾದ್ ಕಾರ್ಮಿಕ ಪರಿಷತ್ತಿನ ಸ್ವಾಗತಾಧ್ಯಕ್ಷರಾಗಿದ್ದರು. ೧೯೪೦ ರಲ್ಲಿ ನಡೆದ ಕೆಲಸಗಾರರ ಸಂಪನ್ನು ಅಧಿಕಾರಿಗಳ ಬಿನ್ನಹದಮೇರೆಗೆ ಸಂಧಾನ ನಡೆಸಿ ಯಶಸ್ವಿಗಳಾದರು.

ಹೈದರಾಬಾದ್ ಮುನ್ಸಿಪಾಲ್ ಪೌರ ಸಮಿತಿಗೆ ಕಳೆದ ವರ್ಷ ಉಪಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದರು. ಸಾಹುಕಾರ ಕಮೀಟಿಗೆ ಸದಸ್ಯರು; ಅದೇ ಕಮೀಟಿಗೆ ಅಧ್ಯಕ್ಷರಾಗಿದ್ದರು. ವಿವೇಕವರ್ಧಿನಿ ಶೈಕ್ಷಣಿಕ ಸಮಿತಿಯ ಉಪಾಧ್ಯಕ್ಷರು. ರಾಷ್ಟ್ರೀಯ ಭಾವನೆಯುಳ್ಳವರು. ಖಾದೀ ಪ್ರಚಾರ ಸಂಘದ, ಪ್ರಜಾಶಿಕ್ಷಣ ಪರಿಷತ್ತಿನ ಕಾ. ನಿ. ಮಂಡಲದ ಸದಸ್ಯರು. ಸಂಸ್ಥಾನದ ಖಾನಗಿ ಶೈಕ್ಷಣಿಕ ಸಂಸ್ಥೆಗಳ ಕೇಂದ್ರ ಸಮಿತಿಯ ಅಧ್ಯಕ್ಷರು. ಇವರು ಕನ್ನಡ ಚಟುವಟಿಕೆಗಳಿಗೆ ಆಶ್ರಯವನ್ನು ಕೊಡುತ್ತಿದ್ದಾರೆ.

---

**ಶ್ರೀ ಜೋಯ್ಸ್ಸ ಭೀಮ ಭಟ್ಟ** ವಕೀಲ ಸುರಪುರ.

ಕೆಲಕಾಲ ಕರ್ನಾಟಕಸಂಘದ ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಆಗಿದ್ದರು. ಕನ್ನಡಸಾಹಿತ್ಯದ ಅಭ್ಯಾಸಮಾಡುತ್ತಿದ್ದಾರೆ. ಹೆಸರುಪಡೆದ ವಕೀಲರು.

---

**ಎಸ್ ಮಾಣಿಕರಾಯರು,** ಸುರಪುರ.

ಇವರು ವಕೀಲಿ ಮಾಡಿಕೊಂಡಿದ್ದಾರೆ. ಇಲ್ಲಿಯ ಸಹಕಾರೀ ಸಂಘಗಳ ಡಾಯರೆಕ್ಟರರಲ್ಲೊಬ್ಬರು. ನಿಜಾಂ ಕರ್ನಾಟಕ ಪರಿಷತ್ತಿಗಾಗಿಯೂ ಇತ್ತೀಚಿಗೆ ದುಡಿಯುತ್ತಿದ್ದಾರೆ. ಅಂತೇ ತೃತೀಯಾಧಿವೇಶನದ ಸಿದ್ಧತೆಯಲ್ಲಿ ಬಹಳ ಆಸಕ್ತಿಯಿಂದ ಕೆಲಸಮಾಡುತ್ತಿದ್ದಾರೆ.

---

**ಶ್ರೀ ಎನ್. ರುದ್ರಪ್ಪನವರು** ವಕೀಲ ರಾಯಚೂರು

ಸುಪ್ರಸಿದ್ಧ ಸಮಾಜ ಸೇವಕರು. ನಾಲ್ಕನೆಯ ವೀರಶೈವ ಪ್ರಾಂತೀಯ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಪಂಗಡದ ಉನ್ನತಿಗಾಗಿ ಹೆಣಗಾಡುತ್ತಿದ್ದಾರೆ. ಅದಕ್ಕಾಗಿ ಎಲ್ಲ ಕನ್ನಡ ಜಿಲ್ಲೆಗಳನ್ನು ಸಂಚರಿಸ ಹತ್ತಿದ್ದಾರೆ. ಯಾದಗಿರಿಯ ಸ್ಥಳಿಕ ಸಂಸ್ಥೆಯಾದ ಶಂಕರ ಕಾಲೇಜಿನ ಅಧ್ಯಕ್ಷರಾಗಿಯೂ ದುಡಿದಿದ್ದಾರೆ. ಹೈದರಾಬಾದ್ ಸಂಸ್ಥಾನದ ಸಾಹುಕಾರ ಕಮೀಟಿಯ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು. ಅಲ್ಲದೆ ತಾಲೂಕ ಸಮೀತಿಯ ಅಧ್ಯಕ್ಷರು. ಇದೀಗ ಶ್ರೀ ಎನ್. ರುದ್ರಪ್ಪನವರು ಸುರಪುರದ ಅಧಿವೇಶನಕ್ಕಾಗಿ ತಮ್ಮ ತಾಲೂಕದಲ್ಲಿ ಪ್ರಯತ್ನ ನಡೆಸಿದ್ದಾರೆ.

---

**ಶ್ರೀಮಾನ್ ನಾರಾಯಣರಾಯರು,** ಹೈಕೋರ್ಟ ವಕೀಲ, ಮಹಬೂಬನಗರ.

ಇವರು ಮಹಬೂಬನಗರದ ಮುಖಂಡ ವಕೀಲರು. ಇವರ ಮೂಲಸ್ಥಾನ ರಾಯಚೂರು ಜಿಲ್ಲೆಯಲ್ಲಿರುವ ಮಾನ್ವಿ. ಇವರ ಹೆಸರು ಆಂಧ್ರ ಕರ್ನಾಟಕ ಪ್ರಾಂಗಳೆರಡರಲ್ಲಿಯೂ ಕೇಳಬರುತ್ತದೆ; ರಾಯರು ಪ್ರವೇಶಿಸಿದ ಪ್ರತಿಯೊಂದು ಸಾರ್ವಜನಿಕ ಕ್ಷೇತ್ರಕ್ಕೆ ಒಂದು ಕಳೆಬರುತ್ತದೆ. ಇವರ ಭಾಷಣ ಉಜ್ವಲವಾಗಿರುತ್ತದೆ.

ಆಂಧ್ರ ಪರಿಷತ್ತಿನಲ್ಲಿ ಕೆಲವು ಕಾಲ ಕೆಲಸಮಾಡಿದರು. ನಿಜಾಮ ಕರ್ನಾಟಕ ಪರಿಷತ್ತಿನ ಸ್ಥಾಪನೆಯ ಕಾರ್ಯ ಕಲಾಪಗಳಲ್ಲಿ ಆಸಕ್ತಿಯನ್ನು ವಹಿಸಿದರು. ಇವರು ಹಿಂದು ಧರ್ಮಾಭಿಮಾನಿಗಳು. ಈಗ ಒಂದು ಪ್ರಜಾಮಂಡಲದ ಪ್ರಮುಖ ಕಾರ್ಯಕರ್ತರಾಗಿದ್ದಾರೆ. ಸ್ಥಳಿಕ ಚಟುವಟಿಕೆಗಳಿಗೆ ಆಶ್ರಯದಾತರಾಗಿದ್ದಾರೆ.

---

**ಶ್ರೀ ಮಲ್ಲಿಕಾರ್ಜನಪ್ಪ ತೋಡಕರಿ,** ಬಿ.ಎ.,ಎಲ್ಎಲ್.ಬಿ., ಉಸ್ಮಾನಾಬಾದ.

ಇವರು ವೀರಶೈವ ಪ್ರಾಂತೀಯ ಪರಿಷತ್ತಿನ ಅಧ್ಯಕ್ಷರು. ತಮ್ಮ ಅಧ್ಯಕ್ಷ ಭಾಷಣದಲ್ಲಿ ವೀರಶೈವ ಸಮಾಜದ ಏಳ್ಗಿಗಾಗಿ ಸಲಹೆಗಳನ್ನೂ ಕೊಟ್ಟಿದ್ದಾರೆ. ಇವರು ಸುಪ್ರಸಿದ್ಧ ವಕೀಲರು. ತಮ್ಮ ಈ ಚಿಕ್ಕ ವಯಸ್ಸಿನಲ್ಲಿಯೇ ಬಹುಮುಖವಾಗಿ ದುಡಿದು ಮೆಚ್ಚಿಗೆಯನ್ನು ಪಡೆದಿದ್ದಾರೆ.

---

**ಶ್ರೀ ಅಶ್ವಥರಾಯರು.** ಬಿ. ಎ., ಎಲ್ಎಲ್. ಬಿ., **ಕಲಬುರ್ಗಿ.**

ಇವರು ಪ್ರಸಿದ್ಧ ವಕೀಲರು. ಕಳೆದ ಹತ್ತುವರ್ಷಗಳಿಂದ ವಕೀಲಿಯನ್ನು ಮಾಡಹತ್ತಿದ್ದಾರೆ. ಇವರು ಕಲಬುರ್ಗಿಗೆ ಬಂದಂದಿನಿಂದ ಕನ್ನಡ ಚಳವಳಿಗೆ ವಿಶೇಷ ಕಳೆಬಂದಿದೆ. ನಿಜಾಮ ಕರ್ನಾಟಕ ಪರಿಷತ್ತಿನ ಪ್ರಮುಖ ಕಾರ್ಯಕರ್ತರು. ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು. ಸುರಪುರದಲ್ಲಿ ನೆರೆಯಲಿರುವ ನಿಜಾಮ ಕರ್ನಾಟಕ ಪರಿಷತ್ತಿನ ಅಧಿವೇಶನಕ್ಕಾಗಿ ದುಡಿಯುತ್ತಾರೆ.

---

**ಶ್ರೀ ಕಪಟರಾಳ ಕೃಷ್ಣರಾಯರು.** ಹೈಕೋರ್ಟ ವಕೀಲ, ಕಲಬುರ್ಗಿ.

ಕನ್ನಡದ ಭಕ್ತರು. ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿ ತೋರಿಸುತ್ತಾರೆ. ಸಂಶೋಧನಾತ್ಮಕ ಲೇಖಗಳನ್ನು ಬರೆದಿದ್ದಾರೆ. ಪಂಡಿತ ನೆಹರು ಅವರ 'ಮಗಳಿಗೆ ತಂದೆಯ ಓಲೆಗಳು' ಎಂಬ ಪುಸ್ತಕವನ್ನು ಕನ್ನಡಿಸಿ ಅಚ್ಚುಹಾಕಿದ್ದಾರೆ.

---

## ಡಾ. ಜಿ. ಎಸ್. ಮೇಲ್ಕೋಟೆ ಮದಿನಾಬಾಗ್, ಹೈದರಾಬಾದು.

ಡಾ. ಸುಬ್ಬಾರಾಯರು ಮೈಸೂರಿದಲ್ಲಿರುವ ಇತಿಹಾಸ ಪ್ರಸಿದ್ಧವಾದ ಮೇಲ್ಕೋಟೆಯವರು. ಡಾ. ಮೇಲ್ಕೋಟೆಯವರೆಂದೇ ಇವರು ಪ್ರಸಿದ್ಧರಾಗಿದ್ದಾರೆ. ಕ್ರಿ.ಶ. ೧೯೨೭ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದಿಂದ ಎಲ್.ಎಂ.ಎಂಡ್ ಎಸ್. ಪರೀಕ್ಷೆಯನ್ನು ಶ್ರೇಷ್ಠ ತರಗತಿಯಲ್ಲಿ ತೇರ್ಗಡೆಹೊಂದಿ, ಸುವರ್ಣ ಪದಕವನ್ನು ಪಡೆದರು. ಕ್ರಿ.ಶ. ೧೯೨೮ರಲ್ಲಿ ತಮ್ಮ ವೃತ್ತಿಯನ್ನು ಆರಂಭಿಸಿ, ಯಶಸ್ವಿಗಳಾಗಿದ್ದಾರೆ. ಹೈದರಾಬಾದಿನ ಅಗ್ರಗಣ್ಯ ಡಾಕ್ಟರರಲ್ಲೊಬ್ಬರಾಗಿದ್ದಾರೆ. ಅವರ ಹಸನ್ಮುಖ, ವೇಳೆಯ ಮಿತತನ, ಶಿಸ್ತು, ಮುಂತಾದ ಸದ್ಗುಣಗಳು ಇವರನ್ನು ಜನಪ್ರಿಯರನ್ನಾಗಿ ಮಾಡಿವೆ. ಇವರು ಧನಸಹಾಯಮಾಡದ ಕನ್ನಡ ಸಾರ್ವಜನಿಕ ಸಂಸ್ಥೆಗಳಂತೂ ಯಾವೂ ಇಲ್ಲ. ಇತರ ಅನೇಕ ಸಂಸ್ಥೆಗಳಿಗೂ ಇವರಿಂದ ಹಣ ಸಾಕಷ್ಟು ದೊರೆಯುತ್ತದೆ. ಖಾದಿ ಭಕ್ತರು. ರಾಷ್ಟ್ರೀಯ ಭಾವನೆಯುಳ್ಳವರು. ೧೯೩೦ ರಲ್ಲಿ ವೃತ್ತಿಯನ್ನು ತೆಜಿಸಿ, ಒಂದು ವರುಷದವರೆಗೆ ಕಾಂಗ್ರೆಸ್ಸಿನಲ್ಲಿ ಸೇರಿ ಸೇವೆಯನ್ನು ಸಲಿಸಿದರು.

ಡಾಕ್ಟರರು, ಬಡವರಾಧಾರಿಗಳು. ಪರೋಪಕಾರಿಗಳು. ಕರ್ತವ್ಯ ದಕ್ಷರು. ಶಿಸ್ತಿನವರು. ಹೈದರಾಬಾದಿನ ಸುಶಿಕ್ಷಿತ ಕನ್ನಡಿಗರಿಗೆ ಇವರ ಈ ಗುಣಗಳು ಆದರ್ಶ.

## ಡಾ. ಆರ್. ಬಿ. ಜಾಗೀರದಾರ, ಕಲಬುರ್ಗಿ.



ಶ್ರೀ ಆರ್. ಬಿ. ಜಾಗೀರದಾರರು.

ಇವರು ಕಲಬುರ್ಗಿಯ ಪ್ರಸಿದ್ಧ ಡಾಕ್ಟರರು. ಇವರು ಅಗರಖೇಡ ಜಾಗೀರದಾರರ ಮನೆತನಕ್ಕೆ ಸೇರಿದವರು. ಪ್ರಾಥಮಿಕ ಶಿಕ್ಷಣ ಸೊಲ್ಲಾಪೂರದಲ್ಲಿಯಾಯಿತು. ಪುಣೆಯಲ್ಲಿ ಇಂಟರ್ ಮುಗಿಸಿಕೊಂಟು ಮುಂಬಯಿಯಲ್ಲಿ ಎಂ. ಬಿ. ಬಿ. ಎಸ ಪದವಿಯನ್ನು ಪಡೆದರು. ಒಂದು ವರ್ಷದ ವರೆಗೆ ಅಲ್ಲಿಯೇ ತಮ್ಮ ಕ್ಷೇತ್ರದಲ್ಲಿ ಅನುಭವವನ್ನು ಪಡೆದು ಕಲಬುರ್ಗಿಯಲ್ಲಿ ವೃತ್ತಿಯನ್ನು ಪ್ರಾರಂಭಿಸಿದರು. ಕೆಲವು ದಿನಗಳಲ್ಲಿಯೇ ತಮ್ಮ ವ್ಯವಸಾಯದಲ್ಲಿ ನೈಪುಣ್ಯತೆಯನ್ನು ತೋರಿಸಿ, ಜನತೆಯನ್ನು ತಮ್ಮಕಡೆಗೆ ಆಕರ್ಷಿಸಿದ್ದಾರೆ. ಡಾ. ರರು ಈ ಹದಿಮೂರು ವರ್ಷಗಳ ಅವಧಿಯಲ್ಲಿ ದಿನಕ್ರ

ಮೇಣಮನ್ನಣೆಯನ್ನು ಹೊಂದುತ್ತ ನಡೆದಿದ್ದಾರೆ. ಮುಖ್ಯವಾಗಿ ಡಾಕ್ಟರರು ಬಡವರಾಧಾರಿ. ಕನ್ನಡ ಚಟುವಟಿಕೆಗಳಿಗಾಗಿ ಯಾವಾಗಲೂ ಆಶ್ರಯವನ್ನು ಕೊಡುತ್ತಾರೆ. ಕರ್ತವ್ಯ ನಿಷ್ಠರಾದಕಾರಣ ಇವರಿಗೆ ಬಿಡುವು ಸಿಗುವದು ದುರ್ಲಭ. ಆದರೂ ನೂತನ ವಿದ್ಯಾಲಯದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ದುಡಿಯುತ್ತಾರೆ.

## ಡಾ|| ಬಿ. ಆರ್ ನಾಯಕರು.



ಡಾ|| ಬಿ. ಆರ್. ನಾಯಕರು.

**ಇವರ** ಮಾಧ್ಯಮಿಕ ಶಿಕ್ಷಣ ಪುಣೆಯಲ್ಲಿ ಆಯಿತು. ಮುಂದೆ ಹೈದರಾಬಾದಿನ ಉಸ್ಮಾನಿಯಾ ಮೆಡಿಕಲ್ ಕಾಲೇಜಿನಲ್ಲಿ ೧೯೩೯ ರಲ್ಲಿ ಶಿಕ್ಷಣಕ್ಕಾಗಿ ಸೇರಿದರು. ಆರಂಭದಿಂದಲೇ ಇವರಿಗೆ ದಂತವಿಜ್ಞಾನದಲ್ಲಿ ಆಸಕ್ತಿ. ಕ್ರಿ. ಶ. ೧೯೪೪ ರಲ್ಲಿ ಮುಂಬಯಿಗೆ ಹೊರಟರು. ಅಲ್ಲಿ 'ಅಮೇರಿಕನ್ ಕಾಲೇಜ ಆಫ್ ಡೆಂಟಿಸ್ಟ್ರಿ' ಯಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿದರು. ಮುಂದೆ ಮುಂಬಯಿಯಲ್ಲಿ ಕೈ. ವಾ. ಡಾಕ್ಟರ್. ಕೆ. ಆರ್. ಅಮೃತ್‌ರೊಡನೆ ಕೆಲಸಮಾಡಿದರು. ೧೯೪೬ ರಲ್ಲಿ ಸಾಂಗಲಿಗೆಹೋಗಿ ಅಲ್ಲಿ ಅಮೇರಿಕೆಯ ಪದ್ಧತಿಯಮೇಲಿಗೆ 'ಡೆಂಟಲ್ ರೂಮ್ಸ' ಗಳನ್ನು ಆರಂಭಿಸಿದರು. ಅವರು ತಮ್ಮ ವೃತ್ತಿಯಲ್ಲಿ ನೈಪುಣ್ಯದಿಂದ ಕೆಲಸಮಾಡಿದುದಕ್ಕೆ ಸಾಂಗಲಿಯ ಸುತ್ತಮುತ್ತಲಿನಲ್ಲಿ ಪ್ರಸಿದ್ಧರಾದರು. ಅಲ್ಲಿಂದ ಇವರು ಕೊಲ್ಹಾಪುರದಲ್ಲಿಯೂ 'ಸರ್ಜರಿ' ಶಾಖೆಯನ್ನು ತೆಗೆದರು. ಹೀಗೆ ಇವರು ಕೊಲ್ಹಾಪುರ, ಹಾಗು ಸಾಂಗಲಿ ಈ ಎರಡು ಸ್ಥಲಗಳಲ್ಲಿ ತಮ್ಮ ವ್ಯವಹಾರವನ್ನು ಚನ್ನಾಗಿ ನಡೆಸುತ್ತ ಬಂದರು. ಈ ಎರಡೂ ಸ್ಥಲಗಳಲ್ಲಿಯೂ ಇವರು ಬಡವರಿಗೆ ಧರ್ಮಾರ್ಥವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಮುಂದೆ ವಿಯನ್ನಾಕ್ಕೆಹೋಗಿ ಉನ್ನತ ಶಿಕ್ಷಣವನ್ನು ಪಡೆದು ಮರಳಿಬಂದು ಈಗ ಹೈದರಾಬಾದಿನಲ್ಲಿ ತಮ್ಮ ವೃತ್ತಿಯನ್ನು ಯಶಸ್ವಿಯಾಗಿ ನಡೆಯಿಸಿದ್ದಾರೆ. ಇವರಿಗೆ ಈಗಾಗಲೇ ತಮ್ಮ ಕ್ಷೇತ್ರದಲ್ಲಿ ೨೭ ವರ್ಷಗಳ ಅನುಭವವಿದೆ. ಇವರ ಚಿಕಿತ್ಸಾಲಯವು ಅತ್ಯಂತ ಆಧುನಿಕ ಸಾಮಗ್ರಿಗಳಾದ ಡೆಂಟಲ್ ಎಕ್ಸರೆ ಮುಂತಾದವುಗಳಿಂದ ಸ್ಥಾಪಿತವಾಗಿದೆ. ಜನಸಾಮಾನ್ಯರಿಗಾಗಿ ಬರೆದ (Lights on dentistry) ಎಂಬ ಗ್ರಂಥವು ಅಚ್ಚಿಗಾಗಿ

ಸಿದ್ಧವಿದೆ. ಇವರ ವಿವಾಹವು ಆಸ್ಟ್ರಿಯ ದೇಶದ ಸನ್ಮಾನ್ಯ ಮನೆತನದ ಮಹಿಳೆಯ ಸಂಗಡವಾಗಿದೆ. ಅವರಾದರೂ ಲಿಂಗಾಯತ ಧರ್ಮದ ದೀಕ್ಷೆಯನ್ನು ತೆಗೆದುಕೊಂಡಿದ್ದಾರೆ. ಇವರು ಸಮಾಜ ಸುಧಾರಕರು. ಅಸ್ಪೃಶ್ಯ ನಿವಾರಣೆಗಾಗಿ ಬಹಳ ಹೆಣಗಾಡಿದ್ದಾರೆ ಡಾಕ್ಟರರು.

## ಡಾ ಗೋವಿಂದ ರಘುನಾಥರಾಯರು ಮಣೂರಕರ್.



ರಾಯಚೂರು ಇಲಾಖೆಯ ಶಾನುಭೋಗರ ಮನೆತಕ್ಕೆ ಸೇರಿದವರು. ಹೈ ಸ್ಕೂಲ್ ಶಿಕ್ಷಣ ಮುಗಿಸಿದ ತರುವಾಯ, ೧೯೩೨ ನೆಯ ಇಸವಿಯಲ್ಲಿ ಇವರು ಕಲಕತ್ತೆಯ (Collage of Aptholmology) ಯಲ್ಲಿ ಸೇರಿ F. I. D. A. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇವರು ಕಲಕತ್ತೆಯ ಕಣ್ಣಿನ ಆಸ್ಪತ್ರೆಯಲ್ಲಿ ಕೆಲವು ದಿನ ಗೌರವ ಸಹಾಯಕ ಡಾಕ್ಟರ್‌ರಾಗಿ ಕೆಲಸ ಮಾಡಿದರು. ಇವರು ಅಲ್ಲಿಯೇ ತಮ್ಮ ವೃತ್ತಿಯನ್ನು ಆರಂಭಿಸಿದರು. ಆದರೆ "ಭೂಕಂಪವಾದ ಮೇಲೆ ಮರಳಿಬಂದು ಹೈದರಾಬಾದಿನಲ್ಲಿ 'ಅಪ್ಟಿಕ್ ಹೌಸ್' ನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ಡಾ. ಗೋವಿಂದ ರಘುನಾಥರಾಯರು ನಡೆಯಿಸಿದ್ದಾರೆ. ಕಣ್ಣಿನ ಪ್ರದರ್ಶನವನ್ನು ನಡೆಯಿಸಿದರು. ಶ್ರೀಮತಿ ಸರೋಜಿನಿ ದೇವಿಯವರಿಂದ ಈ ಪ್ರದರ್ಶನದ ಉದ್ಘಾಟನೆಯಾಯಿತು. ಇವರು ಡಾ. ನಾಯುಡು ಅವರ ಅಧ್ಯಕ್ಷತೆಯಲ್ಲಿ ಆಪ್ಟಿಕಲ್ ಕಾನ್‌ಫ್ರೆನ್ಸನ್ನು ನೆರವೇರಿಸಿದರು. ಇನ್ನು ವಿಶೇಷ ಸೇವೆಯನ್ನು ನೀಡುವ ಉದ್ದೇಶದಿಂದ ಕ್ಷಿಪ್ರದಲ್ಲಿಯೇ ಫಿಲ್ಮು ಹಾಗು ಮಾಯಾದೀಗಳದ್ವಾರಾ ಚಕ್ಷು ಶಿಕ್ಷಣ ಸಪ್ತಾಹವನ್ನು ಆರಂಭಿಸ.ವವರಿದ್ದಾರೆ. ಸಾಮಾನ್ಯವಾಗಿ ವಿದ್ಯಾರ್ಥಿಗಳ ಕಣ್ಣಿನ ಪರೀಕ್ಷೆಯನ್ನು ಪುಕ್ಕಟೆಯಾಗಿ ಮಾಡುತ್ತಾರೆ. ಇತ್ತೀಚಿಗೆ ನೃಪತುಂಗ ಕನ್ನಡ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಉಚಿತವಾಗಿ ಕಣ್ಣಿನ ಚಿಕಿತ್ಸೆಯನ್ನು ಮಾಡಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ

**ಡಾ. ದೇಶಪಾಂಡೆ ಭಗೀರಥರಾಯರು,** ಎಂ. ಬಿ. ಬಿ. ಎಸ್., ರಾಯಚೂರು.

ಇವರು ರಾಯಚೂರಿನ ಸುಪ್ರಸಿದ್ಧ ಡಾಕ್ಟರರು. ಇವರು ತಮ್ಮ ಎಂ.ಬಿ.ಬಿ. ಎಸ್ ಪದವಿಯನ್ನು ಮುಂಬಯಿ ವಿಶ್ವ ವಿದ್ಯಾನಿಲಯದಿಂದ ಸಂಪಾದಿ

ಸಿದರು. ಡಾಕ್ಟರರು ಕನ್ನಡಾಭಿಮಾನಿಗಳು. ಆಯುರ್ವೇದದಲ್ಲಿ ಇವರಿಗೆ ತುಂಬಾ ಅಭಿರುಚಿ ಯಿದೆ. ರಾಯಚೂರಿನಲ್ಲಿ ಜರುಗಿದ ಆಯುರ್ವೇದ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಒಳ್ಳೆಯಕಾರ್ಯವನ್ನು ಮಾಡಿದ್ದಾರೆ. ಇವರಿಗೆ ಸುಗಮವಾಗಿ ನಡೆಯುವ ವಿಧಾಯಕಕಾರ್ಯಗಳಲ್ಲಿ ಬಹಳ ಪ್ರೇಮ. ಸ್ಥಳಿಕ ಸಂಸ್ಥೆಗಳಿಗೆ ತಮ್ಮ ಆಶ್ರಯವನ್ನು ಯಾವಾಗಲೂ ಕೊಡುತ್ತಾರೆ. ನಿಜಾಮ ಕರ್ನಾಟಕ ಪರಿಷತ್ತಿನ ಜಿಲ್ಲಾ ಸಮಿತಿಯ ಅಧ್ಯಕ್ಷರಲ್ಲದೆ, ಪರಿಷತ್ತಿನ ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರೂ ಇದ್ದಾರೆ. ಕನ್ನಡ ಚಟುವಟಿಕೆಗಳಿಗೆ ಯಾವಾಗಲೂ ತಮ್ಮ ಉತ್ತಮ ಸಲಹೆ ಸೂಚನೆಗಳನ್ನು ಕೊಡುತ್ತಾರೆ.

---

### ಡಾ. ಶೇಷಗಿರಿರಾಯರು. ಚಿಂಚೋಳಿ.

ಇವರು ತಮ್ಮ ಆಯುರ್ವೇದ ಅಭ್ಯಾಸವನ್ನು ತುಂಗಭದ್ರೆಯ ಪ್ರೇಮಾಯತನದಲ್ಲಿ ಪಡೆದು ತಮ್ಮ ಸ್ಥಳದಲ್ಲಿಯೇ ವ್ಯವಸಾಯವನ್ನು ನಡೆಸಿದ್ದಾರೆ. ಇವರು ಖಾದಿ ಭಕ್ತರು. ನಿಜಾಂ ಕರ್ನಾಟಕ ಪರಿಷತ್ತಿನ ತಾಲೂಕು ಸಮಿತಿಯ ಕಾರ್ಯದರ್ಶಿಗಳು. ಬಹಳ ಕಳಕಳಿಯಿಂದ ಕೆಲಸಮಾಡುತ್ತಾರೆ.

---

### ಡಾ. ಎಸ್. ಆರ್, ಕಂಠಿ, ಯಾದಗಿರಿ.

ಇವರು ಇಲಕಲ್ಲ ನಿವಾಸಿಗಳು. ವಿದ್ಯಾಭ್ಯಾಸ ಮುಂಬಯಿ ವಿಶ್ವ ವಿದ್ಯಾನಿಲಯದಲ್ಲಿ ಆಯಿತು. ಈಗ ಇವರು ಯಾದಗಿರಿಯಲ್ಲಿ ತಮ್ಮ ವೃತ್ತಿಯನ್ನು ನಡೆಸಿದ್ದಾರೆ. ವೀರಶೈವ ಪರಿಷತ್ತಿನ ಕಾರ್ಯದರ್ಶಿಗಳಾಗಿ ಕಳಕಳಿಯಿಂದ ಕಾರ್ಯ ನಡೆಸಿದ್ದಾರೆ.

---

### ಡಾ. ಟಂಕಸಾಲಿ ಬಿಂದೂರಾಯರು, ಕೊಪ್ಪಳ.

ಇವರು ನುರಿತ ಡಾಕ್ಟರರು. ಸ್ವತಂತ್ರ ವಾಗಿಯೇ ಇವರು ತಮ್ಮ ಆಸ್ಪತ್ರೆಯನ್ನು ನಡೆಸುತ್ತಾರೆ. ತಮ್ಮ ಸದ್ವರ್ತನೆಯಿಂದ ಅಧಿಕಾರಿಗಳಿಗೂ, ಜನರಿಗೂ ಸಮವಾಗಿ ಬೇಕಾಗಿದ್ದಾರೆ. ಕೊಪ್ಪಳದಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಇವರು ಯಾವಾಗಲೂ ಭಾಗವಹಿಸುತ್ತಾರೆ. ಇಲ್ಲಿಯ ಕರ್ನಾಟಕ ಸಂಘ, ಗಜಾನನ ವಾಚನಾಲಯ, ಅರ್ಬನ್ ಬ್ಯಾಂಕ ಮುಂತಾದ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಿಗೆ ಇವರು ಸೇರಿದವರು. ಕುಕುನೂರ ವಿದ್ಯಾನಂದ ಗುರುಕುಲದ ಉಪಾಧ್ಯಕ್ಷರು.

---

## ಡಾ. ರಾಮಕೃಷ್ಣ, ರಾಯಚೂರು.

ಇವರು ತುಂಗಭದ್ರ ಪ್ರೇಮಾಯತನದ ವಿದ್ಯಾರ್ಥಿಗಳು. ಅಲ್ಲಿಂದಲೇ ತಮ್ಮ ವೈದ್ಯಕಿಯ ಪದವಿಯನ್ನು ಸಂಪಾದಿಸಿ ರಾಯಚೂರಿನಲ್ಲಿ ತಮ್ಮ ಸ್ವಂತ ಆಸ್ಪತ್ರೆಯನ್ನು ಪ್ರಾರಂಭಿಸಿದ್ದಾರೆ. ಇವರು ಬಡವರಾಧಾರಿಗಳು. ತಮ್ಮ ವ್ಯವಸಾಯದಲ್ಲಿ ದಿನದಿನಕ್ಕೆ ಪ್ರಗತಿಯನ್ನು ಪಡೆಯಹತ್ತಿದ್ದಾರೆ. ಹಾಗೆಯೇ ಆಯುರ್ವೇದದ ಕೀರ್ತಿಯನ್ನು ಮುಂದುವರಿಸುತ್ತಿದ್ದಾರೆ. ಸ್ಥಳಿಕ ಕನ್ನಡ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ.

---

## ಪಂಡಿತ ವೈದ್ಯ ನರಹರಿ ಆಚಾರ್ಯ ಕಟ್ಟಿ ಹೆಡ್‌ಮಾಸ್ತರ್ ಕನಕಗಿರಿ.

ಇವರು ಮುದುಗಲ್ಲಿನವರು. ಚಿಕ್ಕಂದಿನಲ್ಲಿ ಸಂಸ್ಕೃತ ಕಲಿತು, ಮುಂದೆ ಶ್ರೀ ವಿಠ್ಠಲ್ ಪ್ರಸಾದರಿಂದ ಆಯುರ್ವೇದ ದೀಕ್ಷೆಯನ್ನು ಪಡೆದು ಆಕಾಲಕ್ಕೆ ಅವರಿಗೆ ಅನಾಯಾಸವಾಗಿಯೇದೊರೆತ ಸರಕಾರಿ ಶಿಕ್ಷಕ ವೃತ್ತಿಯನ್ನು ಅವಲಂಬಿಸಿದರು. ಪ್ರಾಥಮಿಕಶಾಲೆಯ ಮುಖ್ಯಾಧ್ಯಾಪಕ ಪದವಿಗೆ ಬಂದಿದ್ದಾರೆ. ತಮ್ಮ ಶಿಕ್ಷಣ ವೃತ್ತಿಯಜೊತೆಗೆ ವೈದ್ಯಕಿಯ ಕೆಲಸವನ್ನು ನಿಪುಣತೆಯಿಂದ ನಡೆಯಿಸಿಕೊಂಡು ಬಂದಿದ್ದಾರ.

---

## ಶ್ರೀ ಡಾ. ರಾಮರಾಯರು ಕುಕುನೂರು.

ಇವರು ಕೊಪ್ಪಳ ಜಾಗೀರಿಯ ಕುಕನೂರಿನ ಹೆಸರಾದ ಡಾಕ್ಟರರು. ಒಳ್ಳೇ ಬುದ್ಧಿಶಾಲಿಗಳು. ಎಲ್ಲರಿಗೆ ಬೇಕಾದವರು. ಬಡವರಿಗಾಗಿ ಧರ್ಮಾರ್ಥವಾಗಿ ಔಷಧವನ್ನು ಕೊಡುತ್ತಾರೆ. ಇವರು ಖಾದಿ ಪ್ರೇಮಿಗಳು. ಹಿಂದಕ್ಕೆ ರಂಗಭೂಮಿಯ ಸೇವೆಯನ್ನು ಮಾಡಿದ್ದಾರೆ. ವಿದ್ಯಾನಂದ ಗುರುಕುಲದ ಹಿತಚಿಂತಕರು.

## ಶೇಠ ಲಕ್ಷ್ಮೀನಿವಾಸಜಿ, ಗನೇರಿವಾಲ, ಹೈದರಾಬಾದು.

ಇವರು ಹೈದರಾಬಾದಿನ ಸುಪ್ರಸಿದ್ಧ ಮನೆತನಕ್ಕೆ ಸೇರಿದ ಜಾಗೀರದಾರರು. ಇವರ ತಂದೆ ರಾಮಲಾಲ ಸೇಠರೆಂದರೆ ಇಲ್ಲಿಯ ನವಾಬರಲ್ಲಿಯೂ ರಾಜಾ ಬಹಾದ್ದೂರರಲ್ಲಿಯೂ, ತುಂಬ ಆದರ. ನಿಜವಾಗಿಯೂ ತಂದೆಗೆ ತಕ್ಕಮಕ್ಕಳಿವರು. ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅಘಾದವಾದ ವ್ಯಕ್ತಿತ್ವವನ್ನು ಗಳಿಸಿಕೊಂಡಿದ್ದಾರೆ ಇವರು ತಮ್ಮ ಮಾರವಾಡಿ ಸಮಾಜದಲ್ಲಿಯೂ. ವ್ಯವಹಾರಸ್ಥರ ಸಂಘದಲ್ಲಿಯೂ, ಒಂದುಬಗೆಯ ನವಚೈತನ್ಯವನ್ನು ಹುಟ್ಟಿಸಿದ್ದಾರೆ. ಹೈದರಾಬಾದ ಸಂಸ್ಥಾನದ ಸಾಹುಕಾರರ ಕಮಿಟಿ (ವರ್ತಕರ ಸಂಘ) ಗೆ ಗೌರವ

ಶೇಠ ಲಕ್ಷ್ಮೀನಿವಾಸ್‌ಜಿ ಗನೇರಿವಾ...

ಕಾರ್ಯದರ್ಶಿಗಳಾಗಿ ಅಖಂಡ ಸಂಸ್ಥಾನದಲ್ಲಿರುವ ವರ್ತಕರನ್ನು ಸಂಘಟಿಸಿ ಆದರ್ಶ ವರ್ತಕರ ಕರ್ತವ್ಯಗಳ ಕಡೆಗೆ ಅವರ ಮನಸ್ಸನ್ನು ತಿರುಗಿಸಹತ್ತಿದ್ದಾರೆ. ಇವರಲ್ಲಿರುವ ಜಾತೀಯ ಸೌಹಾರ್ದತೆಯು ಅವರ ವಿಶಾಲದೃಷ್ಟಿಯ ಗುರುತಾಗಿದೆ. ಇವರಿಗೆಕನ್ನಡ ಬರುವದಿಲ್ಲ. ಆದರೆ ಕರ್ನಾಟಕ ಜನವೆಂದರೆ ಇವರಿಗೆ ಹಿಡಿಸಲಾರದಷ್ಟು ಗೌರವ. ಈಗ ಕನ್ನಡ ಕಲಿಯುತ್ತಿದ್ದಾರೆ. ಇಲ್ಲಿಯ ಕರ್ನಾಟಕ ಪರಿಷತ್ತಿನ ನಗರ ಸಮಿತಿಯ ಉಪಾಧ್ಯಕ್ಷರು. ಶ್ರೀ ಲಕ್ಷ್ಮೀನಿವಾಸರು ಹೆಚ್ಚಾಗಿ ಯುವಕರ ಆಶ್ರಯದಾತರು ಯಾವಾಗಲೂ ವಿಧಾಯಕ ಸಲಹೆ ಸೂಚನೆಗಳನ್ನು ಕೊಡುತ್ತಾರೆ.

## ಶ್ರೀ ಎಲ್. ಜಿ. ಹೊಂಬಳ, ಅವರು ಹೈದರಾಬಾದು

ಇವರು ಅಚ್ಚ ಕನ್ನಡಿಗರು. ಸನ್ಮಾನ್ಯ ವೀರಶೈವ ಮನೆತನಕ್ಕೆ ಸೇರಿದವರು. ತಿಜೋರಿಗಳ ವ್ಯಾಪಾರವನ್ನು ಯಶಸ್ವಿಯಾಗಿ ನಡೆಯಿಸಿದ್ದಾರೆ. ವೀರಶೈವಸಮಾಜದ ಏಳ್ಗೆಗಾಗಿ ಅವರ ಹಣ ಸಾಕಷ್ಟು ವಿನಿಯೋಗವಾಗುವದಲ್ಲದೆ, ಸ್ವತಃ ಟೊಂಕ ಕಟ್ಟಿ ಕೆಲಸಮಾಡುತ್ತಾರೆ. ಕನ್ನಡ ಚಟುವಟಿಕೆಗಳಲ್ಲಿಯೂ ಅವರ ಭಾಗ ಇಲ್ಲದಿಲ್ಲ. ಇವರ ಮಕ್ಕಳಾದ ಶ್ರೀ ಜಿ. ಎಲ್. ಹೊಂಬಳರೂ ತಂದೆಗೆ ತಕ್ಕ ಮಕ್ಕಳಾಗಿದ್ದಾರೆ.

## ಶ್ರೀ ಲಕ್ಷ್ಮಯ್ಯ ಪರುಶರಾಮ ಜಾಜಿ



ಶ್ರೀ ಲಕ್ಷ್ಮಯ್ಯ ಪರುಶರಾಮ ಜಾಜಿ

ವೈಶ್ಯಸಮಾಜದ ಶಿರೋಮಣಿಗಳು. ಮಛಲಿಪಟಮ್‌ದಲ್ಲಿ ಕೂಡಿದ ೧೬ ನೆ ಅಖಿಲಭಾರತ ವೈಶ್ಯ ಸಮಾಜದ ಅಧ್ಯಕ್ಷರಾಗಿದ್ದರು. ಇವರವ್ಯವಹಾರದ ಸಂಬಂಧ ಹಿಂದುಸ್ಥಾನದ ಎಲ್ಲ ಮಹತ್ವ ಪಟ್ಟಣಗಳ ಸಂಗಡವಿದೆ. ಇವರ ಪೂರ್ವಜರು ಹುಮನಾಬಾದಿನಿಂದಕಲಬುರ್ಗಿಯಲ್ಲಿ ಬಂದು ನೆಲೆಸಿದರು. ಶ್ರೀ. ಜಾಜಿಯವರು ತಮ್ಮ ಜೀವನದಲ್ಲಿ ಹಿರಿಯರ ವ್ಯವಹಾರ ಬೆಳೆಸಿಲಕ್ಷ್ಮೀ, ಪುತ್ರರಾಗಿದ್ದಾರೆ ಇವರುತಮ್ಮಸಮಾಜದಲ್ಲಿ ವೇದಪ್ರಚಾರದ ಸಲುವಾಗಿಬಹಳ ದುಡಿದಿದ್ದಾರೆ. ಅದಕ್ಕೆ ಬೇಕಾದ ಆಶ್ರಯವನ್ನು ಕೊಟ್ಟಿದ್ದಾರೆ. ಇವರು ಇಂದಿಗೂ ಸದಾವ್ರತವನ್ನು ನಡೆಯಿಸುತ್ತಾರೆ. ಧರ್ಮಶಾಲೆಗಳನ್ನು ಕಟ್ಟಿಸಿದ್ದಾರೆ. ಯಾವ ಮಂಗಲಕಾರ್ಯವೇ ಆಗಲಿ ಇವರು ತಮ್ಮ ಸಹಾಯವನ್ನು ಅವಕ್ಕೆ ಸಲ್ಲಿಸುತ್ತಾರೆ. ಹೀಗೆಜಾಜಿಯವರು ತಮ್ಮ ವ್ಯಕ್ತಿತ್ವವನ್ನು ಭವ್ಯವನ್ನಾಗಿ ಮಾಡಿಕೊಂಡಿದ್ದಾರೆ.

---

## ಶ್ರೀ ಭೀಮಾಚಾರ್ಯ ಚಿಮ್ಮಲಗಿ, ಹೈದರಾಬಾದು.

ಇವರು ಹೈದರಾಬಾದಿಗೆ ಬಂದು ನೆಲಸಿ ಸುಮಾರು ಮೂವತ್ತು ವರ್ಷಗಳಾದವು. ಮೊದಲು ಇಲ್ಲಿ ಪೋಲೀಸ ಖಾತೆಯಲ್ಲಿದ್ದರು. ಮುಂದೆ ಅದನ್ನು ಬಿಟ್ಟು ಗ್ರಾಮೋಫೋನು, ಫೋಟೋ ಮುಂತಾದ ವ್ಯಾಪಾರವನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ನಡೆಯಿಸಿಕೊಂಡುಬಂದಿದ್ದಾರೆ. ಕನ್ನಡದ ಮುನ್ನಡೆಗೆ ಇವರ ಹಣ ಹೊಳೆಯಾಗಿ ಹರಿದಿದೆ. ಹೈದರಾಬಾದಿನಲ್ಲಿ ಕನ್ನಡದ ಸೊಲ್ಲು ಕೇಳಿಸುವಂತೆ ಮಾಡಿದಕೀರ್ತಿ ಇವರಿಗಿದೆ. ನೃಪತುಂಗಶಾಲೆ, ತರುಣರತಂಡ, ಕರ್ನಾಟಕ ಸಂಘ

ಎಜುಕೇಶನಲ್ ಸುಸೈಟಿ ಮುಂತಾದ ಅನೇಕ ಕನ್ನಡ ಸಂಸ್ಥೆಗಳಿಗೆ ಉದಾರವಾದ ಪೋಷಣೆಯನ್ನಿತ್ತಿದ್ದಾರೆ. 'ಬೀದಿಯಲ್ಲಿ ಕನ್ನಡ ಮಾತಾಡುವದಕ್ಕೆ ಅಂಜುವ' ವೆಂಬ ಜನರಿದ್ದ ಈ ಹೈದರಾಬಾದು ಕನ್ನಡದ ಕೇಂದ್ರವಾದ ಯಶಸ್ಸು ಇವರಿಗೂ ಇದೆ. ಒಟ್ಟಾರೆ ಹೇಳುವದಾದರೆ ಹೈದರಾಬಾದಿನಲ್ಲಿ ಕನ್ನಡದ ಹೆಸರೆತ್ತಿದರೆ, ಶ್ರೀ ಚಿನ್ಮಲಗಿಯವರ ಹೆಸರು ಅದರೊಡನೆಯೇ ಇರುತ್ತದೆ.

---

### ಶ್ರೀ ದತ್ತಾತ್ರೇಯ ಗುರುನಾಥ ನಾಯಕರು.

ಕಲಬುರ್ಗಿಯ ಒಳ್ಳೆ ವ್ಯಾಪಾರಿಗಳು. ಇವರು ಕಮಲಾಪುರದವರು. ಶ್ರೀ ಕೃಷ್ಣಮುದ್ರಣಾಲಯದ ಒಡೆಯರು. ಬಟ್ಟೆ, ಸರಾಫಿ, ಮುಂತಾದ ವ್ಯಾಪಾರ ಗಳಲ್ಲಿ ಹೆಸರು ಪಡೆದಿದ್ದಾರೆ. ಉದ್ಯೋಗವೆಂದರೆ ಮೂಗು ಮುರಿಯುವ ಬ್ರಾಹ್ಮಣರಿಗೆ ಒಳ್ಳೇ ಆದರ್ಶರಾಗಿದ್ದಾರೆ.

---

### ಶ್ರೀ ಚಂದೋಜಿ ತಿರುಪತಿರಾಯರು, ಸುರಪುರ

ಇವರ ೪ ಅಂಗಡಿಗಳಿವೆ. ನುರಿತ ವ್ಯಾಪಾರಸ್ಥರು. ಕಷ್ಟದಿಂದ ಇಷ್ಟ ಪಡೆದವರು. ಇವರ ಮಕ್ಕಳು ಸಾರ್ವಜನಿಕ ಕೆಲಸದಲ್ಲಿಯೂ ಭಾಗ ವಹಿಸ್ತಾರೆ. ಇವರ ಮನೆಯೆಂದರೆ ಗೋಕುಲವಿದ್ದಂತೆ.

---

### ಶ್ರೀ ಗೋಗಿ ಸದಾಶಿವಪ್ಪ.

ಇವರು ಸಾಹುಕಾರರು. ಉದಾರಿಗಳು. ಈಗೀಗ ಕನ್ನಡ ಚಟುವಟಿಕೆ ಗಳಲ್ಲಿ ಮನಸ್ಸು ಹಾಕಬೇಕೆಂದಿದ್ದಾರೆ. ಧಾರ್ಮಿಕ ವಿಚಾರದವರು.

---

### ಶ್ರೀ ರಾಮಕರ್ಣಸಾಹು.

ಇವರು ಮಾರವಾಡಪ್ರಾಂತದಿಂದ ಬಂದ ಬ್ರಾಹ್ಮಣ ಮನೆತನದವರು. ಇಲ್ಲಿಯ ಎಷ್ಟೋ ಜಾಹಾಗೀರಿಗಳ ಸರ್ವಾಧಿಕಾರಿಗಳು. ಧಾರ್ಮಿಕ ಮನೋವೃತ್ತಿ ಯವರು. ಸರಕಾರಿ ಅಧಿಕಾರಿಗಳಲ್ಲಿಯೂ ಇವರ ವರ್ಚಸ್ಸು ಹೆಚ್ಚು. ಇವರ ಮನೆ ಯೆಂದರೆ ಒಂದು ದರ್ಬಾರು. ಪುಟ್ಟ ಮಾರ್ಕೆಟ್ಟು. ಉದಾರ ದಾನಿಗಳು. ಪ್ರತಿ ಯೊಂದು ಸಾರ್ವಜನಿಕ ಕೆಲಸದಲ್ಲಿಯೂ ಇವರ ಕೈವಾಡವಿದೆ. ಇಲ್ಲಿಯ ಕರ್ನಾ ಟಕ ಸಂಘದ ಆಶ್ರಯದಾತರು ಸಹಕಾರೀ ಸಂಘಗಳಡಾಯರೆಕ್ಟರರು.

---

## ಶ್ರೀ ಭೂಮರಡ್ಡಿ ಬಂಧುಗಳು, ಕಲಬುರ್ಗಿ.



ಶ್ರೀ. ತೋಟಪ್ಪನವರು



ಶ್ರೀ. ಬಸವಂತಪ್ಪನವರು.

ಈ ಬಂಧುಗಳು ಹೈದರಾಬಾದು ಸಂಸ್ಥಾನದ ಸುಪ್ರಸಿದ್ಧ ವ್ಯಾಪಾರಿಗಳು. ಇವರ ಮೂಲ ನಿವಾಸಸ್ಥಾನ ಕೊಪ್ಪಳ ಜಾಗೀರಿಗೆ ಸೇರಿದ ಬನ್ನಿಕೊಪ್ಪ ಗ್ರಾಮ. ಯಾದಗಿರಿ, ಜಹೀರಾಬಾದ್ ಗಜೇಂದ್ರಗಡ ಹಾಗು ಕಲಬುರ್ಗಿಯಲ್ಲಿ ಶಿವಾನಂದ ಆಯ್ಲ ಮಿಲ್ಸ ಎಂಬ ಎಣ್ಣೆ ಗಿರಣಿಗಳನ್ನು ಹಾಕಿದ್ದಾರೆ. ಇವರ ಕಾರಖಾನೆಗಳಲ್ಲಿ ಪ್ರತಿ ನಿತ್ಯ ಸುಮಾರು ಅರ್ಧ ಸಾವಿರ ಜನರು ಕೆಲಸ ಮಾಡುತ್ತಾರೆ. ಶ್ರೀಯುತರುಗಳಾದ ತೋಟಪ್ಪ ಹಾಗು ಬಸವಂತಪ್ಪನವರು ಆದರ್ಶ ಬಂಧುಗಳು. ಸಹಕಾರದಿಂದ ವ್ಯವಹಾರವನ್ನು ತೂಗಿಸಿಕೊಂಡು ಸಮಾಜದಲ್ಲಿ ಪ್ರತಿಷ್ಠೆಯನ್ನು ಪಡೆದಿದ್ದಾರೆ.

ಇವರಿಗೆ ಕನ್ನಡ ಚಟುವಟಿಕೆಗಳೆಂದರೆ ಪೂರ್ಣ ಅಭಿಮಾನ. ಸಾಹಿತ್ಯ ಸಂಸ್ಕೃತಿಯ ಅಭಿವೃದ್ಧಿಗೆ ಯಾವಾಗಲೂ ತಮ್ಮ ಆಶ್ರಯವನ್ನು ಕೊಡಲು ಸಿದ್ಧರಿರುತ್ತಾರೆ.

---

## ಆರ್. ಗೋಪಾಚಾರ್ಯ ಬಿ. ಇ.

ವಯಸ್ಸು ೪೧. ಹುಟ್ಟಿದ ತಾರೀಖು ಜೂನ ೧೯೦೦ ಇ. ಮೈಸೂರು ಸಂಸ್ಥಾನದ ಶಿವಮೊಗ್ಗೆ ಜಿಲ್ಲೆಗೆ ಸೇರಿದ ಹೊನ್ನಳ್ಳಿ ತಾಲೂಕು ಇವರ ನಿವಾಸ ಸ್ಥಳ. ಹೈದರಾಬಾದ ರಸಿಡೆನ್ಸಿಯ ಪಿ. ಡಬ್ಲ್ಯು.ಡಿ. ಖಾತೆಯಲ್ಲಿ ಅಧಿಕಾರಸ್ಥರಾಗಿಯೂ ಮಹಾಘನತೆಯನ್ನು ಹೊಂದಿದ ನಿಜಾಮ ಪ್ರಭುಗಳವರಸರಕಾರದವರಲ್ಲಿಯೂ ಸಬ್ ಡಿವ್ಹಿಜನಲ್ ಅಧಿಕಾರಿಗಳಾಗಿ ಕೆಲಸ ಮಾಡಿದ್ದಾರೆ. ಇವರ ಶಿಕ್ಷಣ ಶಿವಮೊಗ್ಗೆ ಹಾಗು ಬೆಂಗಳೂರಿನಲ್ಲಿಯೇ ಆಯಿತು. ಮೈಸೂರು ವಿಶ್ವವಿದ್ಯಾ ನಿಲಯದಿಂದ ತಮ್ಮ ಬಿ. ಇ. ಪದ

ವಿಯನ್ನು ಪಡೆದರು. ಸಂಸ್ಕೃತಿ, ಧರ್ಮ, ಕನ್ನಡ ಸಾಹಿತ್ಯದಲ್ಲಿ ಇವರಿಗೆ ತುಂಬ ಆದರ ವುಂಟು. ತಮ್ಮ ವ್ಯವಸಾಯದಲ್ಲಿ ನುರಿತಿದ್ದಾರೆ. ಡೆಕ್ಕನ್ ಕ್ರಾನಿಕಲ್ ಪತ್ರಿಕೆಯಲ್ಲಿ " ನಗರದ ಅಧಿಕಪ್ರಗತಿ" ಎಂಬ ಲೇಖನವನ್ನು ಬರೆದಿದ್ದಾರೆ. ಈಗ ಇಲ್ಲಿ ಖಾನಗಿ ರೀತಿಯಲ್ಲಿ ಇಂಜನಿಯರಿಂಗ್ ಕೆಲಸವನ್ನು ಯಶಸ್ವಿಯಾಗಿ ನಡೆಯಿಸಿದ್ದಾರೆ.

---

## ಶ್ರೀ ಅಗಡಿ ಈರಣ್ಣನವರು

ಇವರು ಕೊಪ್ಪಳ ಜಾಗೀರಿಯ ಪ್ರಮುಖ ವ್ಯಾಪಾರಿಗಳಲ್ಲಿ ವ್ಯವಹಾರವಿದೆ. ಶ್ರೀ ಅಗಡಿಯುವರು ಸಭ್ಯ ಗೃಹಸ್ಥರು. ತಮ್ಮ ಒಳ್ಳೇ ಗುಣಗಳಿಂದ ಎಲ್ಲರಿಗೂ ಬೇಕಾಗಿದ್ದಾರೆ. ವೀರಶೈವ ವಸತಿಗೃಹಕ್ಕೂ, ಇನ್ನಿತರಸ್ಥಾನಿಕ ಸಂಸ್ಥೆಗಳಿಗೂ ಆಶ್ರಯದಾತರಾಗಿದ್ದಾರೆ.

---

## ಶ್ರೀ ವಿಶ್ವನಾಥಪ್ಪ ಸಾಹು ನಿಲಂಗ

ಶ್ರೀ.ವಿಶ್ವನಾಥಪ್ಪ ಕರಿಬಸಪ್ಪ ಹತ್ತಿಯವರು ತಾಲೂಕ ನಿಲಂಗಕ್ಕೆ ಒಳಪಟ್ಟ ದಿಂದಖೇಡ ಗ್ರಾಮದ ಗೌಡರು. ಇವರು ಒಳ್ಳೇ ಉದ್ಯಮಿಗಳು. ಜಿನ್ನಿಂಗ್ ಫ್ಯಾಕ್ಟರಿ, ಮುಂತಾದ ಕಾರಖಾನೆಗಳನ್ನು ಸ್ಥಾಪಿಸಿ ನೂರಾರು ಜನರಿಗೆ ಉದ್ಯೋಗವನ್ನು ಒದಗಿಸಿ ಕೊಟ್ಟಿದ್ದಾರೆ. ಇವರು ದಾನಶೂರರೆಂದು ಹೆಸರಾಗಿದ್ದಾರೆ.

---

## ಶ್ರೀ. ಮುದಗಲ್ ಸಂಗಪ್ಪನವರು ಕೊಪ್ಪಳ.

ಇವರು ಯಜಮಾನ ಸಂಗಪ್ಪನವರೆಂಬ ಹೆಸರಿನಿಂದ ಖ್ಯಾತಿ ಹೊಂದಿದ್ದಾರೆ. ಇವರು ಹೈದರಾಬಾದು ಸಂಸ್ಥಾನದ ದೊಡ್ಡವ್ಯಾಪಾರಿಗಳು. ಅದರಂತೆಯೇ ಕೊಡುಗೈಗಳು. ಇವರು ಪ್ರಭಾವಶಾಲಿಗಳೆಂದು ಹೆಸರಾಗಿದ್ದಾರೆ. ಕನ್ನಡ ಪ್ರಾಂತಗಳಲ್ಲಿ ನಡೆಯುವ ಎಲ್ಲ ಚಟುವಟಿಕೆ ಗಳಿಗೆ ತಮ್ಮ ಬೆಂಬಲವನ್ನು ಕೊಡುತ್ತಾರೆ. ಸರಕಾರಿ ಅಧಿಕಾರಿಗಳಲ್ಲಿಯೂ ಇವರಿಗೆ ಗೌರವದ ಸ್ಥಾನವಿದೆ.

---

## ಶ್ರೀ ಶಿವರಾಮು ಶೆಟ್ಟಿ, ರಾಯಚೂರು

ಸುಶಿಕ್ಷಿತ ತರುಣ ವ್ಯಾಪಾರಿಗಳು. ಸಾರ್ವಜನಿಕ ಕಾರ್ಯಗಳಲ್ಲಿ ತಂಬಾ ಆಸಕ್ತಿ. 'ಭಾರತ್ ರೀಡೀಂಗ್ ರೂಮು' ನಡೆಸಿದ್ದಾರೆ.

## ಶ್ರೀ ವೇದವ್ಯಾಸಾಚಾರ್ಯ ಚಿಮ್ಮಲಗಿ.

### ಫೋಟೋಗುಡ್ಸ ಡೀಲರ್ಸ, ಸಿಕೆಂದರಾಬಾದ.


ಶ್ರೀ ವೇದವ್ಯಾಸಾಚಾರ್ಯ ಚಿಮ್ಮಲಗಿ

ಇವರು ಹೈದರಾಬಾದಿಗೆ ಬಂದು ಸುಮಾರು ೩೦ ವರ್ಷಗಳಾದವು. ವ್ಯಾಪಾರದಲ್ಲಿ ಇವರ ಕೈ ಚೆನ್ನಾಗಿ ಪಳಗಿದೆ. ಸಿಕೆಂದರಾಬಾದಿನ ಪ್ರಮುಖ ವ್ಯಾಪಾರಸ್ಥರಲ್ಲಿ ಇವರ ಗಣನೆ ಇದೆ. ಕನ್ನಡದ ಚಟುವಟಿಕೆಗಳಿಗೆ ಇವರಿಂದ ತುಂಬಾ ಆಶ್ರಯ ದೊರೆಯುತ್ತದೆ. ಇವರು ಶ್ರೀ ಭೀಮಾಚಾರ್ಯ ಚಿಮ್ಮಲಗಿಯವರ ಸಹೋದರರು. ಈ ಮನೆತನವೇ ವ್ಯವಹಾರದಲ್ಲಿ ನುರಿತಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

## ಸಣ್ಣೂರ ರುದ್ರಪ್ಪನವರು ಯಾದಗಿರಿ.

ಸಣ್ಣೂರ ರುದ್ರಪ್ಪನವರು ಯಾದಗಿರಿಯಲ್ಲಿ ವ್ಯಾಪಾರಸ್ಥರು. ಇವರು ಹೆಸರಾದ ಸಮಾಜ ಸೇವಕರಾಗಿದ್ದಾರೆ. ಬಸವಜಯಂತಿ ಮುಂತಾದ ಉತ್ಸವಗಳಲ್ಲಿ ಮುಖ್ಯಪಾತ್ರವನ್ನು ವಹಿಸಿ ಹುರುಪಿನಿಂದ ಕೆಲಸವನ್ನು ಮಾಡುವರು. ಬಡಬಗ್ಗರ ವಿಷಯಕ್ಕೆ ಇವರಿಗೆ ಕಳಕಳಿ ಬಹಳ. ಮೊನ್ನೆ ಯಾದಗಿರಿ ಸುತ್ತಮುತ್ತಲೂ ಮಾರಿಯ ಉಪದ್ರ ಹಬ್ಬಿದಾಗ ಇವರು ಒಳ್ಳೇ ಕಳಕಳಿಯಿಂದ ಕೆಲಸ ಮಾಡಿ ಜನರಿಗೆ ಔಷಧೋಪಚಾರಗಳನ್ನು ಏರ್ಪಡಿಸಿದರು.

## ಶ್ರೀ ಗಣದಿನ್ನಿ ತಿಮ್ಮಣ್ಣನವರು, ರಾಯಚೂರು

ಪ್ರಸಿದ್ಧ ವ್ಯಾಪಾರಿಗಳು. ಕೈ. ವಾ. ಶ್ರೀ ಪದಕಿ ಕೃಷ್ಣರಾಯರ ಬಲಗೈಯಾಗಿದ್ದರು. ಈಗಲೂ ಸಾರ್ವಜನಿಕ ಕಾರ್ಯಗಳಿಗೆ ನೆರವೀಯುತ್ತಾರೆ.

## ಶ್ರೀಮನ್ನಿರಂಜನ ಶಿವಯೋಗಿ ಖಾನಾಮಠದ

## ಶಾಂತವೀರಸ್ವಾಮಿಗಳು ಗುರುಮಠಕಲ್.



ಶ್ರೀ ಶಾಂತವೀರಸ್ವಾಮಿಗಳು.

ಇವರ ಜನ್ಮಸ್ಥಾನವು ಬೆಳಗಾವಿಜಿಲ್ಲೆಯ ಹಿರೆ ಬಾಗೇವಾಡಿಯಾದರೂ ಗುರುಮಠಕಲ್ ಮಠಕ್ಕೆ ಅಧಿಕಾರಿಗಳಾಗಿ ಬಂದು ೨೨ ವರ್ಷಗಳಾದವು. ಮುಲ್ಕೀ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬೇರೆಬೇರೆ ಸಂಸ್ಕೃತ ಪಾಠಶಾಲೆಗಳಲ್ಲಿ ಸಂಸ್ಕೃತ ಮತ್ತು ಕನ್ನಡವನ್ನೂ ಅಭ್ಯಾಸಮಾಡಿದ್ದಾರೆ.

ಶ್ರೀಗಳವರು, ಮಠದ ಉನ್ನತವಾದ ಅನುಷ್ಠಾನ ಪರಂಪರೆಯನ್ನು ಅವಿಚ್ಛಿನ್ನವಾಗಿ ನಡೆಸಿಕೊಂಡು, ಜನೋಪಯುಕ್ತ ಅನೇಕ ಕಾರ್ಯಗಳನ್ನು ಮಾಡುತ್ತಿರುವರು. ಮೊಟ್ಟಮೊದಲು ಅವರು "ಹಿತೋಪದೇಶಕ ಸಂಘ" ವನ್ನು ಸ್ಥಾಪಿಸಿದ್ದಾರೆ. ಹೈದರಾಬಾದ್ ಪ್ರಾಂತದ ಬಡ ವೀರಶೈವ ವಿದ್ಯಾರ್ಥಿಗಳಿಗೆ ಉಪಯೋಗವಾಗಬೇಕೆಂಬ ಉದ್ದೇಶದಿಂದ ನೈಜಾಂ ವೀರಶೈವ ಫಂಡನ್ನು ಕೂಡಿಸಿ ಅದರ ಪೋಷಣೆಯನ್ನು ಮಾಡಿ, ಇಂದಿಗೂ ಶ್ರೀಗಳವರೇ ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಶ್ರೀ ಶಂಕರ ಸಂಸ್ಕೃತ ಕಾಲೇಜಿನ ಸ್ಥಾಪನೆಯ ಕಾರ್ಯಕ್ಕೆ ಪ್ರೇರಕರೂ ಪೋಷಕರೂ ಆಗಿದ್ದಾರೆ. ಶ್ರೀಗಳವರು, ಚಿಟಗೊಪ್ಪಿ, ತಾಂಡೂರು, ಚಮನ್‌ಚೋಡ ಮೊದಲಾದ ಗ್ರಾಮಗಳಲ್ಲಿ ಮಹಿಳಾ ಮಂದಿರಗಳನ್ನು ಸ್ಥಾಪಿಸಿರುತ್ತಾರೆ. ಯಾದಗಿರಿಯಲ್ಲಿ ಇವರು ತಮ್ಮ ಸ್ವಂತ ಹಣದಿಂದ ಸ್ಥಾಪಿಸಿದ ಅಸ್ಪೃಶ್ಯರ ಶಾಲೆಯನ್ನು ಈಗ ಸರಕಾರದವರು ಸರಕಾರಿ ಶಾಲೆಯನ್ನಾಗಿ ಮಾಡಿ ಇಂದಿನವರೆಗೂ ನಡೆಸಿಕೊಳ್ಳುತ್ತಬಂದಿದ್ದಾರೆ. ಶ್ರೀಗಳವರು ಅಲ್ಲಲ್ಲಿ ಸಂಚರಿಸಿ ಅಸ್ಪೃಶ್ಯರಿಗೆ ಆಚಾರ ವಿಚಾರಗಳನ್ನು ಬೋಧಿಸಿ, ಅವರನ್ನು ಸನ್ಮಾರ್ಗಕ್ಕೆಹಚ್ಚಿ ಅವರಿಗಾಗಿ ವಾಚನಾಲಯಗಳನ್ನು ಶಾಲೆಗಳನ್ನೂ ಸ್ಥಾಪಿಸಿದ್ದಾರೆ. ಅಹಿಂಸಾ ತತ್ವವನ್ನು ಬೋಧಿಸಿ ಎಷ್ಟೋ ಗ್ರಾಮಗಳಲ್ಲಿ ಹಿಂಸೆ ಇಲ್ಲದೆ ದೇವಿ ಜಾತ್ರೆಗಳನ್ನೂ ಮಾಡುವ ಕಾರ್ಯವನ್ನು ರೂಢಿಗೆ ತಂದಿರುತ್ತಾರೆ. ಶ್ರೀಗಳವರು ಖಾದಿ ಭಕ್ತರು. ಅನೇಕ ಹಳ್ಳಿಗಳಲ್ಲಿ ಪಂಚಾಯತರನ್ನು ನೇಮಿಸಿ ಅವರ ಮುಖಾಂತರ ವ್ಯಾಜ್ಯಗಳನ್ನು ತೀರಿಸುವ ಏರ್ಪಾಡು ಮಾಡಿರುವರು. ಶ್ರೀಗಳವರು ತಮ್ಮ ಮಂತ್ರ ಶಕ್ತಿಯ

ಪ್ರಭಾವದಿಂದ ಸಾವಿರಾರು ಜನರಿಗೆ ಭೂತ, ಪಿಶಾಚಿ, ಮೊದಲಾದ ವಿಕಾರಗಳಿಂದ ಮುಕ್ತರನ್ನಾಗಿ ಮಾಡಿ ಹೊಗಳಿಕೆಗೆ ಪಾತ್ರರಾಗಿದ್ದಾರೆ. ಆಯುರ್ವೇದದಲ್ಲಿಯೂ ಶ್ರೀಗಳವರು ಸಿದ್ಧಹಸ್ತರೆನ್ನಬಹುದು.

---

### ಸಾಹಿತ್ಯ ವಿಶಾರದ ವಿದ್ವದ್ರತ್ನ ಚಿದರಿ ಮಠದ
### **ಪಂಡಿತ ವೀರಭದ್ರ ಶಾಸ್ತ್ರಿಗಳು,** ಸಿಕೆಂದರಾಬಾದು.

ಇವರು ಮಹಬೂಬನಗರ ಜಿಲ್ಲೆಗೆ ಸೇರಿದವರು. ಇವರು ಕಾಶಿ, ಕಲಕತ್ತೆ ಮುಂತಾದ ಸಂಸ್ಕೃತ ಕಾಲೇಜುಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆದಿದ್ದಾರೆ. ಇವರಿಗೆ ಸಂಸ್ಕೃತ, ತೆಲಗು, ಕನ್ನಡ, ಮರಾಠಿ, ಹಿಂದಿ, ಮುಂತಾದ ಭಾಷೆಗಳಲ್ಲಿ ಸಾಕಷ್ಟು ಪರಿಶ್ರಮವಿದೆ. ಇವರು ಈ ಎಲ್ಲ ಭಾಷೆಗಳಲ್ಲಿಯೂ ಉತ್ತಮ ಲೇಖನಗಳನ್ನು ಬರೆಯುತ್ತಾರೆ. ಚೆನ್ನಾಗಿ ಭಾಷಣ ಮಾಡುತ್ತಾರೆ. ಇವರು ಕೆಲವು ವರ್ಷ ಶಂಕರ ಸಂಸ್ಕೃತ ಕಾಲೇಜ ಯಾದಗಿರಿಯಲ್ಲಿ ಪ್ರಿನ್ಸಿಪಾಲರಾಗಿದ್ದರು. ಈಗ ಸಿಕೆಂದರಾಬಾದಿನಲ್ಲಿಯೇ ಒಂದು ವೀರಶೈವ ಗುರುಕುಲವನ್ನು ಆರಂಭಿಸಿ ಯಶಸ್ವಿಯಾಗಿ ನಡೆಯಿಸಿದ್ದಾರೆ. 'ವಿಭೂತಿ' ಎಂಬ ತೆಲಗುಮಾಸಪತ್ರಿಕೆಯನ್ನು ನಡೆಯಿಸಿದ್ದಾರೆ. ಕನ್ನಡಭಾಷೆ ಸಂಸ್ಕೃತಿಗಳ ವಿಷಯವಾಗಿಯೂ ಅವರಿಗೆ ತುಂಬಾಆದರವಿದೆ. ನಿಜಾಂ ಕರ್ನಾಟಕ ಪರಿಷತ್ತಿನ ದ್ವಿತಿಯಾಧಿವೇಶನದ ಉದ್ಘಾಟನೆಯು ಇವರಿಂದಲೇ ನಡೆಯಿತು. ನಿಜಾಂ ಕರ್ನಾಟಕ ಪರಿಷತ್ತಿನ ಕಾ. ನಿ. ಮಂಡಲದ ಸದಸ್ಯರಾಗಿದ್ದಾರೆ.

---

### ವಿದ್ವದ್ರತ್ನ- ವ್ಯಾಕರಣ ತೀರ್ಥ **ಚಂದ್ರಶೇಖರ ಶಾಸ್ತ್ರಿ**ಗಳು, ಪ್ರಿನ್ಸಿಪಾಲ,
### ಶಂಕರ ಸಂಸ್ಕೃತ ಕಾಲೇಜು ಯಾದಗಿರಿ.

ಇವರು ಕನ್ನಡ ನಾಡಿನ ವಿದ್ಯಾರ್ಥಿಗಳನೇಕರಿಗೆ ಸಂಸ್ಕೃತ ಅಭ್ಯಾಸಮಾಡಿಸಿ ಕನ್ನಡಕ್ಕೂ ಸೇವೆ ಸಲ್ಲಿಸಿದ್ದಾರೆ. ಬನಾರಸದವರೆಗೆ ಹೋಗಿ ಸಂಸ್ಕೃತ, ಇಂಗ್ಲೀಷಗಳನ್ನು ಅಭ್ಯಸಿಸಿ ಕನ್ನಡ ನಾಡಿಗೆ ಮರಳಿಬಂದರು. ಇವರ ಪ್ರಯತ್ನದಿಂದ ಹುಬ್ಬಳ್ಳಿ ಮತ್ತು ಯಾದಗಿರಿಗಳು ಕಲಕತ್ತೆಯ ಸಂಸ್ಕೃತ ಪರೀಕ್ಷೆಯ ಕೇಂದ್ರಗಳಾಗಿವೆ. ಇವರ ಪಾಂಡಿತ್ಯವನ್ನು ಮೆಚ್ಚಿ ಕಲಕತ್ತೆಯ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು ಇವರನ್ನು ಪ್ರಶಂಸಿಸಿದ್ದಾರೆ. ಕನ್ನಡ ನಾಡಿನ ಸಾಹಿತ್ಯ, ಏಕೀಕರಣ ಸಮಾಜ, ಮುಂತಾದ ಅನೇಕ ವಿಷಯಗಳನ್ನು ಕುರಿತು ಕನ್ನಡದಲ್ಲಿ ಲೇಖನಗಳನ್ನು ಬರೆದು, ಹೆಸರಾಗಿದ್ದಾರೆ. ವಿಜಯನಗರ ಸಾಮ್ರಾಜ್ಯದ ಸ್ಮಾರಕೋತ್ಸವದ ಕಾಲದಲ್ಲಿ ಇವರು ತೋರಿ

ಸಿದ ಕಾರ್ಯಶಕ್ತಿ ಅಸಾಧಾರಣವಾದದ್ದು ವೀರಶೈವ ಮಹಾಸಭೆಯ ಕಾರ್ಯ ದಲ್ಲಿ ಇವರು ತೋರಿಸಿದ ಕಾರ್ಯಶಕ್ತಿ ಅಸಾಧಾರಣವಾದದ್ದು. ವೀರಶೈವ ಮಹಾ ಸಭೆಯ ಕಾರ್ಯದಲ್ಲಿಯೂ ತುಂಬಾ ಹೆಣಗುತ್ತಿದ್ದಾರೆ. ಮದರಾಸು ಇಲಾಖೆಯ ಹೊಳಲು ಗ್ರಾಮದಲ್ಲಿ ಹುಟ್ಟಿ, ಮುಂಬಯಿ ಪ್ರಾಂತದಲ್ಲಿ ಬೆಳೆದು, ಹೈದರಾಬಾದು ಕರ್ನಾಟಕದಲ್ಲಿ ವಾಸಿಸಿ, ಮೈಸೂರು ಮಹಾಜನಗಳಿಂದ ಹೆಚ್ಚಾಗಿ ಮತಗಳನ್ನು ದೊರಕಿಸಿ, ೨೫ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಸಮ್ಮೇಳನಕ್ಕೆ ಅಪೂರ್ವವಾದ ಕಳೆಯನ್ನು ತಂದುಕೊಟ್ಟರು; ಎಂಬ ಸಂಗತಿಯು ಇವರ ಸರ್ವಪ್ರಿಯತೆಯ ಕುರುಹು.

---

## ಶ್ರೀ. ಕೀರ್ತನಕೇಸರಿ ಜಯರಾಮಾಚಾರ್ಯರು. ಕೊಪ್ಪಳ.



ಶ್ರೀ ಜಯರಾಮಾಚಾರ್ಯರು

ಕೀರ್ತನ ರಂಗದಲ್ಲಿ ಕ್ರಾಂತಿಯನ್ನುಂಟುಮಾಡಿದ ಮಹಾನ್ ವ್ಯಕ್ತಿಗಳಿವರು. ತಮ್ಮ ಆಯುಷ್ಯದ ಬಹು ಭಾಗವನ್ನು ಕನ್ನಡದ ಚಳವಳಿಯಲ್ಲಿ ಕಳೆದಿದ್ದಾರೆ. ಸಾವಿರಾರು ಜನರು ನೆರೆದಿರಲಿ, ಧ್ವನಿವಾಹಕ ಯಂತ್ರದ ಅವಶ್ಯಕತೆಯಿಲ್ಲದೆ ತಮ್ಮ ಸಿಂಹಗರ್ಜನೆಯಿಂದ ಜನರನ್ನು ಕೀರ್ತನದ ವಿವಿಧ ರಸಗಳಲ್ಲಿ ತಲ್ಲೀನರನ್ನಾಗಿ ಕುಣಿಸುತ್ತಾರೆ: ಮಾತುಗಳು, ಪದಗಳು, ಶ್ಲೋಕಗಳು, ಹಾಗು ಪ್ರಾಸಂಗಿಕ ಕತೆಗಳು ಆಗಲೀ, ಪರಿಸ್ಥಿತಿಗೆ ತಕ್ಕಂತೆ ಸಹಜವಾಗಿ ನುಸುಳಿಕೊಂಡು ಬರುತ್ತವೆ. ಇವರು ಚಿತ್ರಿಸುವ ವ್ಯಂಗಭಾವ ಕಟುವಾಗಿರುತ್ತವೆ. ತಮ್ಮ ಪ್ರಾಂತವೇ ಶ್ರೇಷ್ಠವೆಂದು ಪ್ರತಿಪಾದಿಸುವ ಪ್ರಾಂತೀಯ ವಾದಿಗಳು ಆಚಾರ್ಯರಿಗೆ ಜಯಪತ್ರವನ್ನು ಕೊಡುತ್ತಾರೆ. ಇಪ್ಪತ್ತನೆಯ ಶತಮಾನದ ಪ್ರಾರಂಭ ದಶೆಯಲ್ಲಿ ಕನ್ನಡದ ಪುನರುಜ್ಜೀವನದ ಪ್ರಭಾತಭೇರಿಯಲ್ಲಿ ಆಚಾರ್ಯರೇ ಅವರ ಕಹಳೆಗರು.

---

## ಶ್ರೀ ವೈ. ಅಚ್ಯುತರಾಯರು ಬಿ. ಎ.

ಇವರು ಮೈಸೂರು ಪ್ರಾಂತದವರು. ಬೆಂಗಳೂರಿನಲ್ಲಿಯೇ ಬಿ.ಎ. ಪರೀಕ್ಷೆ ಪಾಸು ಮಾಡಿದರು. ಈಗ ೧೩ ವರ್ಷಗಳಿಂದ ಹೈದರಾಬಾದಿನ ಧರ್ಮವಂತ ಹೈಸ್ಕೂಲಿನಲ್ಲಿ

ಅಧ್ಯಾಪಕರಾಗಿದ್ದಾರೆ. ಕತೆಗಾರರು. ಲೇಖಕರು. ಕೆಲವು ಕತೆಗಳು, ವಿಜ್ಞಾನವಿಷಯಕವಾದ ಲೇಖಗಳೂ ಬೇರೆಬೇರೆ ಕನ್ನಡ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಕರ್ನಾಟಕ ಸಾಹಿತ್ಯ ಮಂದಿರಕ್ಕೆ ಕಾರ್ಯದರ್ಶಿಗಳಾಗಿದ್ದರು. ನೃಪತುಂಗ ಶಾಲೆಯಸಹಾಯ ಕಾರ್ಯದರ್ಶಿಗಳು. ೨೬ ನೆಯ ಅಖಿಲಕರ್ನಾಟಕ ಸಾಹಿತ್ಯಸಮ್ಮೇಳನದ ಸ್ವಾಗತ ಸಮಿತಿಗೆ ಜಂಟಿ ಕಾರ್ಯದರ್ಶಿಗಳು. ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಕನ್ನಡ ಎಂ. ಎ., ತರಗತಿಯಲ್ಲಿ ಅಭ್ಯಸಿಸುತ್ತಿದ್ದಾರೆ.

---

### ಶ್ರೀ ಎ. ಸಿ. ಶ್ರೀಕಂಠಯ್ಯನವರು.

ಇವರು ಸಾಹಿತಿಗಳು. ಕಲಾವಿದರು. ಹೈದರಾಬಾದಿನಲ್ಲಿಯೂ ಆಗಾಗ್ಗೆ ನಾಟಕಗಳನ್ನು ಅಭಿನಯಿಸಿ ಉತ್ತಮ ಕಲಾವಿದರೆಂದು ಜನರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ. ೨೬ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿಯಮನೋರಂಜನ ಉಪಸಮಿತಿಯ ಕಾರ್ಯದರ್ಶಿಗಳು.

---

### ಶ್ರೀ ನಾರಾಯಣಾಚಾರ್ಯ ಕಸೂನೂರ.

ಇವರು ಮುಂಬಯಿಪ್ರಾಂತದವರು. ಗಾಂಧಿವಾದದಲ್ಲಿ ನಂಬಿಗೆಯನ್ನಿಟ್ಟು ಅದರಂತೆ ಆಚರಿಸುವವರು. ನೃಪತುಂಗ ಶಾಲೆಯ ಸ್ಥಾಪನೆಯಲ್ಲಿ ಅವರ ಕೈವಾಡವೂ ಇತ್ತು. ಈಗ ಹೈದರಾಬಾದಿನಲ್ಲಿಯೇ ದುಗ್ಧಾಲಯವನ್ನು ತೆಗೆದು ಅದನ್ನು ಸ್ವಂತಾಗಿ ನಡೆಯಿಸುತ್ತಿದ್ದಾರೆ. ಇವರು ಆದರ್ಶಲಿಪಿಯನ್ನು, ಟೈಪರೈಟರ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಹೈದರಾಬಾದಿನ ಕನ್ನಡ ಕಾರ್ಯಕರ್ತರು.

---

### ಶ್ರೀ ಅಷ್ಟಾವಧಾನಿ ನರಸಿಂಹಶಾಸ್ತ್ರಿಗಳು ಸುರಪುರ.

ಮೊದಲಿನಿಂದಲೂ ಇವರ ಮನೆತನವು ವಿದ್ಯಾ ಗುರುವಿನದೆಂದು ಹೆಸರಾದದ್ದು. ಇವರೂ ಕೂಡ ಅದನ್ನು ಕಾಯ್ದುಕೊಂಡಿದ್ದಾರೆ. ಕರ್ನಾಟಕ ಸಂಘದ ಗೌರವ ಕಾರ್ಯದರ್ಶಿಗಳು. ಉದಯೋನ್ಮುಖ ಗವಾಯಿಗಳು. ತರುಣ ವರ್ಗದಲ್ಲಿ ಇವರ ವರ್ಚಸ್ಸು ಬಹಳ. ಇವರಿಗೊಂದು ಜಾಗೀರಿದೆ.

---

### ಶ್ರೀ ಬ್ರಹ್ಮಶ್ರೀ ಹೊಬ್ಬಾಳದ ಶೇಷಶಾಸ್ತ್ರಿಗಳು.

ಇವರು ನಾಡಿಗೆಲ್ಲ ಹೆಸರಾದವರು. ಸುರಪುರ ಪಂಚಾಂಗ ಕರ್ತರು. ಒಳ್ಳೇ ಬರಹಗಾರರು. ವಾಗ್ಮಿಗಳು. ಕರ್ನಾಟಕ ಸಂಘದಲ್ಲಿ ೨೦ ವರ್ಷದಿಂದ ಈಸುತ್ತ ಬಂದಿದ್ದಾರೆ. ಹೊಗಳಿಕೆಗಾಗಿ ಕೆಲಸಮಾಡುವ ಸ್ವಭಾವದವರಲ್ಲ. ಇವರೊಂದು ಬೂದಿ

ಮುಚ್ಚಿದ ಕನ್ನಡ ಕೆಚ್ಚಿನ ಕೆಂಡ. ಶ್ರೀಮಂತರು, ಉದಾರಿಗಳು. ಇವರಿಗೆ ಅನುವು ದೊರೆತರೆ ನಿಜಾಂ ಕರ್ನಾಟಕದ ಪ್ರಸಿದ್ಧ ವಾಗ್ಮಿಗಳಾಗಲೂ ಸಂದೇಹವಿಲ್ಲ. ಸಧ್ಯಕ್ಕೆ ವಿಶೇಷ ಅಧ್ಯಾಪನದ ಕೆಲಸದಲ್ಲಿ ತೊಡಗಿದ್ದಾರೆ.

## ಶ್ರೀ ರಾಘವೇಂದ್ರಾಚಾರ್ಯ ಕುಷ್ಟಗಿ, ಸುರಪುರ.

ಜಿರಾಯತಿಖಾತೆಯಲ್ಲಿ ಕಾಮಗಾರರಿದ್ದಾರೆ. ಕನ್ನಡ ಭಕ್ತರು. ಕನ್ನಡ ಸಾಹಿತ್ಯ ಅಭ್ಯಾಸಿಗಳು. ನಾಟಕಗಳನ್ನು ಬರೆಯುತ್ತಾರೆ. ಸುರಪುರದಲ್ಲಿ ನಡೆಯುವ ಚಟುವಟಿಕೆಗಳಲ್ಲಿ ಇವರ ಕೈವಾಡವೂ ಇದ್ದೇ ಇರುತ್ತದೆ. ಮೃದುಸ್ವಭಾವದವರು. ಹಸನ್ಮುಖಿಗಳು.

## ಶ್ರೀಮತಿ ಪದ್ಮಾವತಿಬಾಯಿಯವರು ಹೈದರಾಬಾದು.



ಶ್ರೀಮತಿ ಪದ್ಮಾವತಿಬಾಯಿಯವರು.

ಇವರು ಮೈಸೂರು ಪ್ರಾಂತದ ಯಶವಂತಪುರದ ಸುಬ್ಬರಾಯರ ಪುತ್ರಿಯರು. ಇವರ ಪತಿಗಳು ನಿಜಾಂ ಸರಕಾರದ ಉದ್ಯೋಗದಲ್ಲಿದ್ದಾರೆ. ಇವರು ಕರ್ನಾಟಕ ಸಾಹಿತ್ಯಮಂದಿರ ಹೈದರಾಬಾದಿನ ಕಾರ್ಯನಿರ್ವಾಹಕ ಮಂಡಲದಲ್ಲಿ ಈಗ ಸುಮಾರು ೫ ವರ್ಷಗಳಿಂದ ಸದಸ್ಯರಾಗಿದ್ದಾರೆ. ಸ್ತ್ರೀವರ್ಗವೂ ಸಾರ್ವಜನಿಕ ಜೀವನದಲ್ಲಿ ಸಮಭಾಗಿಯಾಗಬೇಕೆಂದು ಪ್ರಯತ್ನಿಸುತ್ತಿದ್ದಾರೆ. ೨೬ ನೆಯ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಾ. ನಿ. ಮಂಡಲಿಯ ಸದಸ್ಯರಾಗಿ ಆರಿಸಿ ಬಂದಿದ್ದಾರೆ. ಅದರ ಯಶಸ್ಸಿಗಾಗಿ ಪ್ರಯತ್ನಿಸುತ್ತಿದ್ದಾರೆ.

## ಶ್ರೀಮತಿ ಮೈನಾತಾಯಿ ಖೇಣಿಯವರು ಹೈದರಾಬಾದು.

ಸುಪ್ರಸಿದ್ಧ ಸಿರಿವಂತ ಖೇಣಿ ಮನೆತನದವರು. ಇವರು ಧರ್ಮಾಭಿಮಾನಿಗಳು. ನಮ್ಮ ಸಮಾಜದ ಹೆಣ್ಣುಮಕ್ಕಳು ಸುಶಿಕ್ಷಿತರಾಗಿ ಇತರ ದೇಶದ ಮಹಿಳೆ

ಯರಿಗಿಂತೂ ಹಿಂದುಳಿಯಬಾರದೆಂದು ಹಂಬಲಿಸುವವರಲ್ಲಿ ಇವರು ಒಬ್ಬರು. ವಚನ ಸಾಹಿತ್ಯವನ್ನು ಅಭ್ಯಸಿಸಿಕೊಂಡಿದ್ದಾರೆ. ಸಾಹಿತ್ಯ, ಸಮಾಜ, ಮುಂತಾದ ವಿಷಯಗಳನ್ನು ಕುರಿತು ಭಾಷಣ ಮಾಡಬಲ್ಲರು. ಬೀದರಿನಲ್ಲಿ ಕೂಡಿದ ನಿಜಾಂ ಕರ್ನಾಟಕ ಪರಿಷತ್ತಿನ ಮಹಿಳಾ ಸಮ್ಮೇಲನದ ಯಶಸ್ಸಿಗಾಗಿ ತುಂಬ ಹೆಣಗಾಡಿದರು. ವೀರಶೈವಪ್ರಾಂತೀಯ ಪರಿಷತ್ತಿನ ನಾಲ್ಕನೆಯ ಅಧಿವೇಶನದ ಮಹಿಳಾ ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿ ಮನನೀಯ ಭಾಷಣವನ್ನು ಅರ್ಪಣೆಕೊಡಿಸಿದ್ದಾರೆ. ೨೬ನೆಯ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾಗೋಷ್ಠಿಯ ಸ್ವಾಗತಾಧ್ಯಕ್ಷರನ್ನಾಗಿ ಆರಿಸಲಾಗಿದೆ.

---

## ಶ್ರೀಮತಿ. ದೇಸಾಯಿ ಸುಭದ್ರಾಬಾಯಿಯವರು.

ಇವರು ಶ್ರೀ ದೇಸಾಯಿ ಜನಾರ್ದನರಾಯರ ಧರ್ಮಪತ್ನಿ. ಹೈದರಾಬಾದಿನ ಪ್ರಮುಖ ಕನ್ನಡ ಮಹಿಳೆಯರು. ಸ್ತ್ರೀ ಶಿಕ್ಷಣದಪ್ರಗತಿಗಾಗಿ ದುಡಿಯಬೇಕೆನ್ನುತ್ತಾರೆ. ಇಂದಿಗೂ ಮನೆಯಲ್ಲಿ ಕನ್ನಡದ ಅಭ್ಯಾಸವನ್ನು ನಡೆಸಿದ್ದಾರೆ. ಹೈದರಾಬಾದಿನಲ್ಲಿ ನಡೆಯುವ ಮಹಿಳೆಯರ ಎಲ್ಲಕಾರ್ಯ ಕಲಾಪಗಳಿಗೆ ವತ್ಮು ಬೆಂಬಲವನ್ನು ಕೊಡುತ್ತಾರೆ.

---

## ಶ್ರೀಮತಿ. ಮಹದೇವಮ್ಮನವರು ರಾಯಚೂರು.

ಇವರು ರಾಯಚೂರು ಜಿಲ್ಲೆಯ ಪ್ರಸಿದ್ಧ ಜಮೀನದಾರರಾದ ಶ್ರೀ ಸಿರಿವಾರ ಬಸವನಗೌಡರ ಧರ್ಮಪತ್ನಿ. ಸುಶಿಕ್ಷಿತ ಮಹಿಳೆಯರು. ಆಧುನಿಕ ವಿಷಯಗಳನ್ನು ಚೆನ್ನಾಗಿ ಮನವರಿಕೆಮಾಡಿಕೊಂಡಿದ್ದಾರೆ. ಕನ್ನಡ ಚಳವಳಿಯೆಂದರೆ ಇವರಿಗೆ ತುಂಬ ಪ್ರೀತಿ. ಹೈದರಾಬಾದಿನಲ್ಲಿ ಕೂಡಿದ ವೀರಶೈವ ಪ್ರಾಂತೀಯ ಪರಿಷತ್ತಿನ ಯಶಸ್ಸಿಗಾಗಿ ಧಾವಿಸಿದುದಲ್ಲದೆ, ಮಹಿಳಾಸಮ್ಮೇಳನದ ಅಧ್ಯಕ್ಷರಾಗಿ ತಮ್ಮ ಸಮಾಜದ ಮಹಿಳೆಯರ ಜವಾಬ್ದಾರಿಯನ್ನು ವಹಿಸಿದ್ದಾರೆ.

---

## ಶ್ರೀ ಯನ್. ಜಿ. ಕುಲಕರ್ಣಿ ಹೈದರಾಬಾದು.

ಇವರು ಕೊಪ್ಪಳ ಜಾಗೀರಿಯವರು. ನಿಜಾಂ ಕರ್ನಾಟಕ ಪರಿಷತ್ತಿನ ನಗರ ಸಮಿತಿಯಪರವಾಗಿ ಹೈದರಾಬಾದಿನಲ್ಲಿ ವಿಧಾಯಕ ಕಾರ್ಯ ಕ್ರಮವನ್ನು ಬಹಳ ಆಸಕ್ತಿಯಿಂದ ಮಾಡುತ್ತಾರೆ.

---

## **ಶ್ರೀ ಸ್ವಾಮಿರಾವ್ ನಾಯಕ** ಹೈದರಾಬಾದು.



ಶ್ರೀ ಸ್ವಾ. ಮಿರಾವ್‌ನಾಯಕರು

ಇವರು ಧಾರವಾಡ ಜಿಲ್ಲೆಯವರು. ಸುಮಾರು ೧೦ ವರ್ಷಗಳಿಂದ ನೃಪತುಂಗ ಕನ್ನಡಶಾಲೆ ಹೈದರಾಬಾದಿನಲ್ಲಿ ಅಧ್ಯಾಪಕರಾಗಿದ್ದಾರೆ. ಇವರು 'ಮುತ್ತು ಗಾರ' ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಇಲ್ಲಿಯವರೆಗೆ ಇವರು ೫ ಸಾವಿರ ಹಿಡಿನುಡಿಗಳನ್ನು, ಹತ್ತು ಸಾವಿರ ಗಾದೆಮಾತುಗಳನ್ನು ಸಂಗ್ರಹಿಸಿದ್ದಾರೆ. ಮಕ್ಕಳಶಿಕ್ಷಣವನ್ನು ಶಾಸ್ತ್ರೀಯವಾಗಿ ಕೊಡುತ್ತಾರೆ. ಇವರು ಉತ್ತಮಭಾಷಣಕಾರರು. ಹೈದರಾಬಾದಿನಲ್ಲಿ ನಡೆಯುವ ಕನ್ನಡ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.

## **ಶ್ರೀ ಹಂಪಿ ನರಸಿಂಗರಾಯರು.**

ಇವರು ಆ ಭಾಗಕ್ಕೆ ಪರಿಚಿತರಾದ ಸಾರ್ವಜನಿಕ ಕಾರ್ಯಕರ್ತರು. ಆಗಾಗ್ಗೆ ಕನ್ನಡ ಪತ್ರಿಕೆಗಳಲ್ಲಿ ಇವರ ಉತ್ತಮಲೇಖನಗಳು ಪ್ರಕಟವಾಗುತ್ತವೆ. ಕವಿತೆಗಳನ್ನು ಕತೆಗಳನ್ನು ಬರೆದಿದ್ದಾರೆ. ಇವರು ಪತ್ರಿಕೋದ್ಯಮಿಗಳು.

## **ಶ್ರೀ ನರಸಿಂಹಭಟ್ಟ,** ಗಂಗಾವತಿ, ಹೈದರಾಬಾದ.

ಇವರು ಕನಕಗಿರಿಯವರು. ಹೈದರಾಬಾದಿನಲ್ಲಿ ನೃಪತುಂಗ ಕನ್ನಡ ವಿದ್ಯಾಲಯ ಆರಂಭವಾದಂದಿನಿಂದ ಈ ಶಾಲೆಯಲ್ಲಿ ತಮ್ಮ ಸೇವೆಯನ್ನು ವಿಶ್ವಾಸದಿಂದಲೂ, ಶ್ರದ್ಧೆಯಿಂದಲೂ ಸಲ್ಲಿಸುತ್ತ ಬಂದಿದ್ದಾರೆ. ಚಿತ್ರಗಳನ್ನು ತೆಗೆಯುವದರಲ್ಲಿ ನಿಷ್ಣಾತರಾಗಿದ್ದಾರೆ. ಈ ದಾರಿಯಲ್ಲಿ ಅವರಿನ್ನು ಹೆಚ್ಚು ಸೇವೆ ಕನ್ನಡಿಗರಿಗಾಗಿ ಸಲ್ಲಿಸಬೇಕಾಗಿದೆ.

## **ಶ್ರೀ ಹನುಮಂತರಾಯರು,** ಹೆಡ್‌ಮಾಸ್ತರ್ ಲಿಂಗಸುಗೂರು.

ಇವರಿಗೆ ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯಿದೆ. ಇವರು 'ಸಿಬಿಚಕ್ರವರ್ತಿ' ಯೆಂಬ ನಾಟಕವನ್ನು ಪ್ರಕಟಿಸಿದ್ದಾರೆ. ಕನ್ನಡ ಪುಸ್ತಕಾವಲೋಕನದಲ್ಲಿ ಇವರಿಗೆ

ಬಹಳ ಮನಸ್ಸು. ಇವರ ಪ್ರಯತ್ನದಿಂದಲೇ ಲಿಂಗಸುಗೂರಿನಲ್ಲಿ ಉಸ್ಮಾನಿಯಾ ಕನ್ನಡ ವಾಚನಾಲವು ಸ್ಥಾಪಿತವಾಗಿದೆ. ಇತರ ಧಾರ್ಮಿಕ ಕಾರ್ಯಗಳಲ್ಲಿಯೂ ಭಾಗ ವಹಿಸುತ್ತಾರೆ.

---

## ಶ್ರೀ ಇಟಗಿ ಬಸಲಿಂಗನಗೌಡರು ಕೊಪ್ಪಳ.

ಇವರು ಸುಶಿಕ್ಷಿತ ಜಮೀನದಾರರು. ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ವನ್ನು ಪಡೆದಿದ್ದಾರೆ. ಗೌಡರು ಪರೋಪಕಾರಿಗಳು. ಇವರಿಗೆ ಕನ್ನಡ ಸಾಹಿತ್ಯದಲ್ಲಿ ಬಹಳ ಅಭಿರುಚಿಯಿದೆ. ಇವರು ತಮ್ಮ ಮನೆಯಲ್ಲಿ ಒಂದು ದೊಡ್ಡ ಗ್ರಂಥಾಲಯ ವನ್ನು ಶೇಖರಿಸಿದ್ದಾರೆ. ಕನ್ನಡಿಗರ ಏಳ್ಗೆಗಾಗಿ ಕೂಡಿದ ಎಲ್ಲ ಕಾರ್ಯಕ್ರಮಗ ಳಿಗೂ ತಮ್ಮಿಂದಾಗುವ ಬೆಂಬಲವನ್ನೀಯುತ್ತಾರೆ.

---

## ಶ್ರೀ ಗವಿಮಠದ ಸ್ವಾಮಿಗಳು, ಕೊಪ್ಪಳ.

ಇವರು ಕೊಪ್ಪಳದಲ್ಲಿರುವ ಸುಪ್ರಸಿದ್ಧ ಗವಿಮಠದ ಸ್ವಾಮಿಗಳವರು. ಕಾಶಿಯಲ್ಲಿ ಹತ್ತು ವರ್ಷಗಳವರೆಗೆ ಇದ್ದು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದಿದ್ದಾರೆ. ಇವರು ಒಂದು ದೊಡ್ಡ ಗ್ರಂಥಾಲಯವನ್ನು ಬೆಳಿಸಿಕೊಂಡು ಬಂದಿದ್ದಾರೆ. ಸಂಸ್ಕೃತಪಾಠಶಾಲೆಯನ್ನು ನಡೆಸುತ್ತಾರೆ. ವಿದ್ಯಾರ್ಥಿಗಳಿಗಾಗಿ ಆಶ್ರಯವನ್ನು ಕೊಟ್ಟಿದ್ದಾರೆ. ತಳಕಲದಲ್ಲಿ ಮೊನ್ನೆ ಸ್ಥಾಪಿತವಾದ ಆಯುರ್ವೇದ ವಿದ್ಯಾಲಯಕ್ಕೆ ಬಹಳಸಹಾಯಮಾಡಿದ್ದಾರೆ. ಇವರು ಮಹಾ ಸಾಧುಗಳು. ಎಲ್ಲರಲ್ಲಿಯು ಇವರಿಗೆ ತುಂಬ ಆದರವಿದೆ.

---

## ಶ್ರೀ ಸೂಗವೀರ ಶರ್ಮರು, ರಾಯಚೂರು.

ಇವರು ಹಮ್ದರ್ದ ಶಾಲೆಯ ಕನ್ನಡ ಪಂಡಿತರು. ಇವರು ಕವಿಗಳು. ರಾಯಚೂರಿನಲ್ಲಿರುವ ವೀರಶೈವ ವಸತಿಗೃಹದ ಸಂಚಾಲಕರು. ಶ್ರೀ ಶರ್ಮರು, ಕನ್ನಡಿಗರು ಪ್ರತಿಯೊಂದು ಕ್ಷೇತ್ರದಲ್ಲಿ ಮುಂದೆಬರಬೇಕೆಂದು ದುಡಿಯುತ್ತಲಿದ್ದಾರೆ. ನಿಜಾಂ ಕರ್ನಾಟಕ ಪರಿಷತ್ತಿನ ಜಿಲ್ಲಾ ಸಮಿತಿಯ ಉತ್ಸಾಹಿ ಕಾರ್ಯಕರ್ತರು. ತಮ್ಮ ಜಿಲ್ಲೆಯಲ್ಲಿ ಸಂಚರಿಸಿ ಕನ್ನಡ ಪ್ರಚಾರವನ್ನುಮಾಡಿದ್ದಾರೆ. ಸ್ಥಳಿಕ ಚಟು ವಟಿಕೆಗಳಲ್ಲಿಯೂ ತುಂಬ ಶ್ರದ್ಧೆಯಿಂದ ಭಾಗವಹಿಸುತ್ತಾರೆ.

---

## ಶ್ರೀ. ಅಲಂದ ಶಂಕರರಾಯರು ಕಲಬುರ್ಗಿ.


ಶ್ರೀ ಶಂಕರರಾಯರು

ಇವರ ಕಲಾಕೃತಿಗಳು ಆಗಾಗ ಜಯಂತಿ ಮುಂತಾದ ಮಾಸಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಇವರ ಕಾರ್ಯರಂಗ ಕಲಬುರ್ಗಿಯ ನೂತನವಿದ್ಯಾಲಯ. ಅದರ ಆಜೀವ ಸದಸ್ಯರು ಇವರ ನೇತೃತ್ವದಲ್ಲಿ ತಯಾರಾದ ಶಿಷ್ಯರ ಸಮೂಹವು ಪ್ರಸಿದ್ಧ ಕಲಾಸಂಸ್ಥೆಗಳಲ್ಲಿ ಪ್ರಾಶಸ್ತ್ಯವನ್ನು ಪಡೆದಿದೆ. ಸಾಮಾನ್ಯವಾಗಿ ಕಲಾವಿದರಲ್ಲಿರುವ ಚಂಚಲ ಸ್ವಭಾವವು ಇವರಲ್ಲಿಲ್ಲ. ಒಮ್ಮೆ ಮನಸ್ಸು ಮಾಡಿದರಾಯಿತು. ಬೇಕಾದದ್ದು ಬರಲಿ ಹಿಡಿದಕೆಲಸ ಮಾಡಿಬಿಡುವರು. ಬಡತನವೇ ಭಾಗ್ಯವೆಂದು ಕಲಾದೇವಿಯ ಪೂಜೆಯೇ ದೇವರ ಆರಾಧನೆಯೆಂದು ತಮ್ಮ ಜೀವನವನ್ನು ರೂಪಗೊಳಿಸುವ ಪೂಜಾರರು ಇವರು.

## ಶ್ರೀ. ಹನುಮಂತರಾಯರು. ರಾಯಚೂರು.

ಇವರು ಕರ್ನಾಟಕ ತರುಣ ಸಂಘದ ಸದಸ್ಯರು. ಕತೆಗೊಂಚಲ, ಉತ್ತಮ ವ್ಯವಸಾಯ ಮುಂತಾದ ಗ್ರಂಥಗಳ ಲೇಖಕರು. ಮೊದಲಿನಿಂದಲೂ ರಾಯಚೂರಿನಲ್ಲಿ ಕನ್ನಡದ ಮುನ್ನಡೆಗಾಗಿ ಪ್ರಯತ್ನಿಸುತ್ತಿರುವವರಲ್ಲಿ ಇವರೂ ಒಬ್ಬರು.

---

## ಶ್ರೀ. ಬಿ. ರಾಮದಾಸ, ಕೊಪ್ಪಳ.

ಇವರು ಪತ್ರಿಕಾ ಕರ್ತರು. ಕನ್ನಡ ಪತ್ರಿಕೆಗಳಿಗೆ ಸ್ವಂತ ಸುದ್ದಿಗಾರರಾಗಿ ಕೆಲಸಮಾಡುತ್ತಾರೆ. ರಾಷ್ಟ್ರೀಯ ವಾದಿಗಳು...

---

## ಶ್ರೀ ಹೇರೂರೂ ದತ್ತಾತ್ರೇಯರಾಯರು ಕಲಬುರ್ಗಿ.

ನೂತನ ವಿದ್ಯಾಲಯದ ಕನ್ನಡ ಅಧ್ಯಾಪಕರು. ಪ್ರಾರಂಭದೆಶೆಯಲ್ಲಿ ಕನ್ನಡದ ಚಳವಳಿಯನ್ನು ಧೈರ್ಯದಿಂದಲೂ, ತಾಳ್ಮೆಯಿಂದಲೂ ನಡೆಯಿಸಿದರು.

---

## ಪರಿಚಯ ವಿಭಾಗ

### ಶ್ರೀ. ಜಿ.ಕೆ. ಪ್ರಾಣೇಶಾಚಾರ್ಯರು



ಶ್ರೀ ಜಿ.ಕೆ. ಪ್ರಾಣೇಶಾಚಾರ್ಯ.

ಇವರು ರಾಯಚೂರು ಜಿಲ್ಲೆಯ ಕುಷ್ಟಗಿ ತಾಲೂಕಿನವರು. ನಿಜಾಂ ಕಾಲೇಜಿನಿಂದ ಇಂಟರ್ ಮೀಡಿಯಟ್ ಪರೀಕ್ಷೆಯನ್ನು ಮೊದಲನೆಯ ತರಗತಿಯಲ್ಲಿ ಪಾಸಾದರು. ಆಗಿನಿಂದಲೆ ಸಾರ್ವಜನಿಕ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡ ತೊಡಗಿದರು. ಇವರು ತರುಣರತಂಡದ ಜೀವಾಳ ವಾಗಿದ್ದು ಕೆಲಸಮಾಡಿದರು. ಕನ್ನಡ ಸಾಹಿತ್ಯದ ಉದಯೋನ್ಮುಖ ಕವಿಗಳೆಂದು ಹೆಸರು ಪಡೆದಿದ್ದಾರೆ. ಕರ್ನಾಟಕ ಸಾಹಿತ್ಯ ಮಂದಿರದ ಏಳ್ಗೆಗಾಗಿಯೂ ದುಡಿದು ಯಶಸ್ವಿಗಳಾದರು. ಆ ಮೇಲೆ ಅಖಂಡ ಹೈದರಾಬಾದಿನ ರಾಜಕೀಯ ರಂಗದಲ್ಲಿಳಿದಿದ್ದಾರೆ. ಮೊನ್ನೆ ತಾನೆ ಇವರ ಬಿಡುಗಡೆಯಾಗಿದೆ.

---

### ಶ್ರೀ. ರಾ. ಮೊ. ಗಂಗಾವತಿಯವರು, ಹೈದರಾಬಾದು

ಖಾದಿಭಕ್ತರು. ಉತ್ತಮ ನಟರು. ವಿನೋದ ಪ್ರಿಯರು. ಶ್ರೀ ಆರ್. ಬಿ. ಜಾಗೀರದಾರ, ಶ್ರೀ ಹ. ಭೀ. ಹಂಬಲ ಮುಂತಾದವರ ಸಹಕಾರದಿಂದ ಗ್ರಂಥ ಮಾಲೆ ಯನ್ನು ನಡೆಯಿಸಿದರು. ಪತ್ರಕೋದ್ಯಮ ವನ್ನು ಕೈಕೊಂಡಿದ್ದಾರೆ. ಕರ್ನಾಟಕ ಸಂಘದ ಉತ್ಪಾದಕರು. ಹೈದರಾಬಾದಿನ ಕನ್ನಡ ಚಳವಳಿಯಲಿ ಇವರು ಭಾಗವಹಿಸುತ್ತಾರೆ.

### ಶ್ರೀ. ಸ್ವಾಮಿರಾಚಾರ್ಯ

ಇವರು ಕುಷ್ಟಗಿ ತಾಲೂಕಿನವರು. ಈ ಭಾಗದಲ್ಲಿ ಹೆಸರಾಗಿದ್ದಾರೆ. ತಾರಾವಿಹಾರ ಗ್ರಂಥ ಮಾಲೆಯ ಪ್ರಕಾಶಕರು. ಲೇಖಕರು. ಪ್ರೇಮಾಯತನದ ಸಲುವಾಗಿಯೇ ತಮ್ಮ ಆಯುಷ್ಯವನ್ನು ಅರ್ಪಿಸಿದ್ದಾರೆ.

ಶ್ರೀ. ಶ್ರೀಧರ ವಾಮನ್ನಾಯಕರು ಬಿ.ಎ., ಬಾರ್.ಎಟ್-ಲಾ.



ಇವರ ಪರಿಚಯವನ್ನು ವಕೀಲರ ವಿಭಾಗದಲ್ಲಿ ಕೊಡಲಾಗಿದೆ.

---

## ಶ್ರೀ ಅಡೂರ ವೀರಭದ್ರಪ್ಪನವರು.

ಇವರು ಕೊಪ್ಪಳ ಜಾಗೀರಿಗೆ ಸೇರಿದ ಅಡೂರ ಗ್ರಾಮದವರು. ಬಡ ಜನರಿಗಾಗಿ ದುಡಿಯಬೇಕೆಂಬ ಮನಸ್ಸು ಇವರಿಗೆ ಬಲಿದಿದೆ. ಇವರು ತಮ್ಮ ವಿಚಾರಗಳನ್ನು ವ್ಯವಹಾರದಲ್ಲಿ ತರಬಲ್ಲರು. ವಾಚನಾಲಯಗಳನ್ನು ಸುತ್ತುಮುತ್ತಿನ ಹಳ್ಳಿಗಳಲ್ಲಿ ಸ್ಥಾಪಿಸಿ ಗ್ರಾಮೋದ್ಧಾರದ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ತಮ್ಮ ಅಡೂರ ವಾಚನಾಲಯದ ಪರವಾಗಿ ಕೆಲವು ಗ್ರಂಥಗಳನ್ನು ಪ್ರಕಾಶಿಸಿದ್ದಾರೆ.

---

## ಶ್ರೀ ಖಾಬ್ಲಿಯವರು ಕಲಾವಿದರು, ಹೈದರಾಬಾದು.

ಇವರು ಸಿನೇಮಾ ಪ್ರಿಯರು. ಅಂತೇ ಅವರ ಕಲಾಕೃತಿಗಳು ಕೂಡ ಹಾಸ್ಯದ ತೆರಗಳನ್ನೊಳಗೊಂಡವು. ಚಿತ್ರವ್ಯಂಗ ಚಿತ್ರಕಾರರೆಂದು ಕರ್ನಾಟಕದಲ್ಲಿ

ಹೆಸರಾಗಿದ್ದಾರೆ. ಜಯಕರ್ನಾಟಕ, ಜಯಂತಿ, ಮುಂತಾದ ಕನ್ನಡ ಪತ್ರಿಕೆಗಳಲ್ಲಿಯೂ ಹಾಗೂ ಇತರ ಇಂಗ್ಲಿಷ ವೃತ್ತ ಪತ್ರಿಕೆಗಳಲ್ಲಿಯೂ ಇವರ ಅನೇಕ ವ್ಯಂಗ ಚಿತ್ರಗಳು ಪ್ರಕಟವಾಗಿವೆ.

---

**ಶ್ರೀ. ಅಳವಂಡಿ ಭಗವಂತರಾಯರು**(German returned) ಹೈದರಾಬಾದು.



ಶ್ರೀ ಅಳವಂಡಿಕರ.

ಇವರು ನಮ್ಮ ಸಂಸ್ಥಾನದ ಶ್ರೇಷ್ಠ ತರಗತಿಯ ಕಲಾವಿದರು. ಇವರು ಜರ್ಮನಿಯಿಂದ ಮರಳಿ ಬಂದ ನಂತರ ಇವರ ಕಲೆಯನ್ನು ನೋಡಿ ನಮ್ಮನ್ನಾಳುವ ಪ್ರಭುಗಳವರು ಮುಲ್ಕಿ ಪ್ರದರ್ಶನೆಯ ಕಾಲಕ್ಕೆ ಬಹಳ ಪ್ರಶಂಸಿದರು. ಇವರು ಕೊಪ್ಪಳ ಜಾಗೀರಿಗೆ ಸಂಬಂಧಪಟ್ಟ ಅಳವಂಡಿಗ್ರಾಮದ ಶಾನಭೋಗರು. ಸ್ಥಳಿಕ ಕನ್ನಡ ಸಂಸ್ಥೆಗಳಿಗೆ ತಮ್ಮ ಉದಾರಾಶ್ರಯವನ್ನು ಸ್ವಯಂ ಸ್ಫೂರ್ತಿಯಿಂದ ಸಲ್ಲಿಸುತ್ತಾರೆ. ಫೋಟೋಗ್ರಾಫಿಯಮೇಲೆ ಇವರು ಕನ್ನಡದಲ್ಲಿ ಬರೆದ ನೂತನ ಗ್ರಂಥ ಅಚ್ಚಿಗೆ ಸಿದ್ಧವಿದೆ. ಹೈದರಾಬಾದಿಗೆ ಆಗಮಿಸಿದ ಶ್ರೇಷ್ಠ ಸಾಹಿತಿಗಳ ಭಾವ ಚಿತ್ರಗಳನ್ನು ಅರ್ಪಿಸಿ ಮೆಚ್ಚುಗೆಯನ್ನು ಪಡೆದಿದ್ದಾರೆ.

---

**ಶ್ರೀ. ಸಿದ್ದಯ್ಯನವರು** ಪುರಾಣಿಕ.

ಇವರು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು. ಇವರ ಕವನಗಳು ಕನ್ನಡ ಪತ್ರಿಕೆಗಳಲ್ಲಿ ಅಚ್ಚಾಗಿವೆ, ಇವರು ನಾಟಕಗಳನ್ನು ಬರೆಯುತ್ತಾರೆ. ವೀರಶೈವ ಸಮಾಜೋದ್ಧಾರದ ಕಾರ್ಯದಲ್ಲಿ ಇವರಿಗೆ ಅತ್ಯಂತ ಆಸಕ್ತಿಯಿದೆ.

---

**ಶ್ರೀ ರಾಘವೇಂದ್ರರಾಯರು ದೇಸಾಯಿ**, ವಿದ್ಯಾನಂದ ಗುರುಕುಲ ಕುಕುನೂರ.

ಇವರು ಕೊಪ್ಪಳಜಾಗೀರಿಯ ಇಲಾಖೆಗೆ ಸೇರಿದ ಬೆಣಕಲ್ಲಿನ ದೇಸಾಯಿ ಮನೆತನದವರು. ಮೊದಲಿನಿಂದಲೇ ರಾಷ್ಟ್ರಾಭಿಮಾನಿಗಳು. ನಿಜಾಂ ಕಾಲೇಜಿನಲ್ಲಿ

ಬಿ. ಎ.. ತರಗತಿಯಲ್ಲಿ ಓದುತ್ತಿದ್ದಾಗಲೇ ರಾಯಚೂರು ಕಾಲೇಜನ್ನು ಬಿಟ್ಟು ದೇಶ ಸೇವೆಗೆ ಕಂಕಣ ಬದ್ಧರಾಗಿ ತಮ್ಮ ಕೆಲವು ಗೆಳೆಯರೊಡನೆ ಕುಕನೂರಲ್ಲಿ 'ವಿದ್ಯಾನಂದ ಗುರುಕುಲ' ವನ್ನು ಸ್ಥಾಪಿಸಿ ಅದನ್ನು ಉತ್ತಮ ಶಿಕ್ಷಣ ಸಂಸ್ಥೆಯನ್ನಾಗಿ ಮಾಡಿದ್ದಾರೆ. ಇವರಲ್ಲಿರುವ ಧರ್ಮವಿವೇಕ, ದೇಶಭಕ್ತಿ, ಸ್ವಾರ್ಥತ್ಯಾಗ ಭಾಷಾಭಿಮಾನಗಳೇ ಇಂದು ಆ ಗುರುಕುಲಕ್ಕೆ ಒಂದು ವಿಶೇಷ ಮಹತ್ವವನ್ನು ತಂದಿವೆ

---

## ಶ್ರೀ. ಹವಾಲ್ದಾರ ಶ್ರೀನಿವಾಸರಾಯರು ಬೀದರ್



ಹವಾಲ್ದಾರ ಶ್ರೀನಿವಾಸರಾಯರು.

ಇವರು ಶ್ರೀ ಜೀವಣರಾಯರ ಮಕ್ಕಳು. ಚಿಕ್ಕಂದಿನಿಂದಲೇ ಸಾಹಸಿಗರು. ಉನ್ನತ ಶಿಕ್ಷಣವನ್ನು ಮುಗಿಸಿಕೊಳ್ಳುವುದರಲ್ಲಿಯೇ ಪ್ರಪಂಚದ ಹೊಣೆಯನ್ನು ಹೊರಬೇಕಾಗಿ ಬಂತು. ಸತತ ಪ್ರಯತ್ನಗಳಿಂದ ಇಷ್ಟ ಪದವನ್ನು ಸಾಧಿಸಿಕೊಂಡು ಬರುತ್ತಿದ್ದಾರೆ. ಇವರು ದೇಶಭಕ್ತರು ತಮ್ಮ ನಿಷ್ಕಾಮ ತ್ಯಾಗದಿಂದ ಬೀದರ ಜಿಲ್ಲೆಯಲ್ಲಿ ಎಲ್ಲರಿಗು ಬೇಕಾದ ಸಾರ್ವಜನಿಕ ಕಾರ್ಯಕರ್ತರೆಂದು ಹೆಸರುಪಡೆದಿದ್ದಾರೆ. ನಿಜಾಂ ಕರ್ನಾಟಕ ಪರಿಷತ್ತಿನ ಬೀದರ್ ಅಧಿವೇಶನದಲ್ಲಿ ಮನಮುಟ್ಟಿ ದುಡಿದು ತಮ್ಮ ಸಂಘಟನೆ ಶಕ್ತಿಯನ್ನು ತೋರಿಸಿದ್ದಾರೆ. ಮೊನ್ನೆ ತಾನೆ ತಮ್ಮ ಎರಡನೆಯ ಸಲದ ಕಾರಾಗ್ರಹದಿಂದ ಬಿಡುಗಡೆ ಹೊಂದಿದ್ದಾರೆ.

## ಶ್ರೀ ಪಿ. ರಾಚೋಟೆಪ್ಪನವರು ಸಂಪಾದಕ ದಕ್ಕನ್ ಪ್ರಭಾತ ರಾಯಚೂರು.

ಇವರು ಗೌರಿಶಂಕರದ ಮುದ್ರಣಾಲಯದ ಒಡೆಯರು. ಈಗ ಒಂದು ವರ್ಷದಿಂದ ದಕ್ಕನ್ ಪ್ರಭಾತ ಎಂಬ ಕನ್ನಡ ವಾರ ಪತ್ರಿಕೆಯನ್ನು ನಡೆಯಿಸಿಕೊಂಡು ಬಂದಿದ್ದಾರೆ. ಇದರಿಂದ ಇವರು ಸರಕಾರಿ ವರ್ಗದಲ್ಲಿಯೂ ಜನರಲ್ಲಿಯೂ ಪರಿಚಿತರಾಗಿದ್ದಾರೆ.

---

## ಶ್ರೀ. **ಕಸ್ಬೆ ಪಾಂಡುರಂಗರಾಯರು**, ರಾಯಚೂರು.

ಇವರು ರಾಯಚೂರಿನ ಶಾನಭೋಗರ ಮನೆತನಕ್ಕೆ ಸೇರಿದವರು. ರಸಿಕರು. ಕನ್ನಡ ಸಾಹಿತ್ಯದ ಅಭ್ಯಾಸದಲ್ಲಿ ತುಂಬ ಆಸಕ್ತಿಯಿದೆ. ದಾಸಸಾಹಿತ್ಯ ಇವರ ಅಚ್ಚು ಮೆಚ್ಚಿನದು. ಕವನಗಳನ್ನು ಕೀರ್ತನೆಗಳನ್ನು ರಚಿಸಿದ್ದಾರೆ. ಜನ ಸಾಮಾನ್ಯರಲ್ಲಿ ಪ್ರಚಾರಕ್ಕೆ ಇವು ಬಹಳ ಯೋಗ್ಯವಾಗಿವೆ. ಇವರ ಭಾಷಣಗಳು ಕೂಡ ತುಂಬಾಸ್ವಾರಸ್ಯಮಯನಾಗಿರುತ್ತವೆ. ಕನ್ನಡ ಸಂಸ್ಕೃತಿಯ ಏಳ್ಗೆಗಾಗಿ ಹೋರಾಡುವುವರಲ್ಲಿ ಇವರೂ ಒಬ್ಬರು.

---

## ಶ್ರೀ **ರಾ . ಗು. ಜೋಶಿ** ರಾಯಚೂರು.

ಇವರು 'ವಾರ್ತಾ ವಾಹಿನಿ' ಯ ಸಂಪಾದಕರು. ರಾಷ್ಟ್ರೀಯ ಭಾವನೆಯುಳ್ಳವರು. ರಾಯಚೂರಿನ ಕರ್ನಾಟಕ ತರುಣಸಂಘವನ್ನು ನಡೆಯಿಸುವದರಲ್ಲಿ ಶ್ರೀ ಜೋಶಿಯವರ ಭಾಗವೂ ಸಾಕಷ್ಟಿದೆ. ಸ್ವತಂತ್ರವಾಗಿ ವ್ಯಾಪಾರವನ್ನು ನಡೆಸಿ ಯಶಸ್ವಿಗಳಾಗಿದ್ದಾರೆ.

---

# ಒ ಪ್ಪೋ ಲೆ.

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ಕನ್ನಡದ ಮುನ್ನಡೆ. | | | |
| ೧ | ೩ | ಶೂರತನ | ಶೌರ್ಯ |
| ೨ | ೧೬ | ಅೀನೆಕ | ಅನೇಕ |
| ೪ | ೧೪ | ಅಭಿವೃದ್ದೆ | ಅಭಿವೃದ್ಧಿ |
| ೧೦ | ೧೭ | ಒಂತ್ತಂಬ | ಒತ್ತಂಬ |
| ೩೭ | ೨೭ | 'ಅವರಿಗೆ' ಓದಬಾರದು | |
| ೩೭ | ೨೮ | ಆತ್ಮಾನಾಂ | ಆತ್ಮಾನಂ |
| ೩೮ | ೧೪ | ಭಗದರ್ಪಣ | ಭಗವದರ್ಪಣ |
| ೩೯ | ೯ | 'ಯಜ್ಞಯಾಗ' ಓದಬಾರದು | |
| ೪೧ | ೨ ನೆಯ ಶ್ಲೋಕ | ದೊಳಿದ್ದೊಡೇನಾ | ದೊಳಿದ್ದೊಡೇನಿನ್ನಾ |
| ೪೨ | ೨೩ | ಭೂತೇಷಾಂ | ಭೂತೇಷು |
| ೪೨ | ೪೬ | ಜನಾಂ | ಜನಾಃ |
| ಶಿಕ್ಷಣ ಸಮಸ್ಯೆಗಳು | ಕೆಲವಡೆ | ಮಾಧ್ಯಾಮಿಕ | ಮಾಧ್ಯಮಿಕ |

**ಜಿ. ಎಸ್. ರಾವ್ ಟೇಲರ್,** ಜೇಮ್ಸ್ ಸ್ಟ್ರೀಟ್ ಸಿಕಂದ್ರಾಬಾದ್.

ಶಾಖೆ:— ಆಬಿದ್‌ರೋಡು ಹೈದರಾಬಾದು ದ.

ಎಲ್ಲ ತರದ ಪುರುಷರ ಪೋಷಾಕುಗಳನ್ನು, ನಯವಾಗಿ ಶಿಸ್ತಾಗಿ ತಯಾರಿಸಲಾಗುತ್ತದೆ. ಉಡುಪು· ಮಾನವ ಶರೀರಕ್ಕೆ ಒಡವು, ಅದು ಸರ್ವಾಂಗಸುಂದರವಾಗಬೇಕಾಗಿದ್ದರೆ ನಮ್ಮಲ್ಲಿಗೆ ಬನ್ನಿರಿ.

ನಮ್ಮಲ್ಲಿ ಉಡುಪುಗಳಿಗಾಗಿ ಬೇಕಾಗುವ ಎಲ್ಲತರದ ಬಟ್ಟೆಗಳೂ ಯೋಗ್ಯ ಬೆಲೆಗೆ ದೊರಕುತ್ತವೆ.

G. S. RAO, TAILOR. { James Street Secunderabad. / Abid Road, Hyderabad Dn.

---

**ಆದರ್ಶ ಗ್ರಂಥಮಾಲೆಯ ಎರಡನೆಯ ಕುಸುಮ.**

**‘ಕಿಚ್ಚು’**

ಲೇಖಕರು:— **ಶ್ರೀ ಬಿ. ಅಶ್ವತ್ಥನಾರಾಯಣರಾಯರು.**

ಬೆಲೆ, ಎಂಟಾಣೆ.

ತೀರ ಸ್ವಲ್ಪೇಪ್ರತಿಗಳು ಉಳಿದಿವೆ ತೀವ್ರ ಬರೆದು ತರಿಸಿಕೊಳ್ಳಿ.

ನಮ್ಮಲ್ಲಿ ಉರ್ದು, ತೆಲಗು, ಮುಂತಾದ ಭಾಷೆಗಳ ಪುಸ್ತಕಗಳೂ,

ವೃತ್ತಪತ್ರಿಕೆ ಮುಂತಾದವುಗಳೂ ದೊರೆಯುತ್ತವೆ.

ಮ್ಯಾನೇಜರ್

**ಶಾರದಾಮಂದಿರ ಸುಲ್ತಾನ್‌ಬಾಜಾರ**

ಹೈದರಾಬಾದ್ ದಕ್ಷಿಣ.

---

# ಹೈದರಾಬಾದ್ ಕೋಆಪರೇಟಿವ್ ಇನ್ಸುರೆನ್ಸ ಸುಸೈಟಿ ಲಿಮಿಟೆಡ್

ಬಷೀರ್‌ಬಾಗ್ ಹೈದರಾಬಾದ್ ದಕ್ಷಿಣ.

## ಧನ ಸಂಚಯದ ಉತ್ತಮ ಸಾಧನ

ಜೀವವಿಮೆಯೇ ಈ ಸಾಧನ. ವಿಮೆ ಯಿಳಿಸುವದರಿಂದ ನಿಮಗೆ ನಿಯಮಿತವಾಗಿ ಕಂತು ಸಲ್ಲಿಸುವ ಅಭ್ಯಾಸ ವಾಗುವದು. ಇದು ನಿಮ್ಮ ಆಯುವ್ಯಯದ ಮುಖ್ಯಾಂಶವಾಗುವದು. ವಿವರಣೆ ಗಾಗಿ ನಮಗೆ ಬರೆಯಿರಿ.

ಇದು ಪಾಲಸಿದಾರರ ಸುಸೈಟಿ, ಪಾಲುಗಾರರ ಗುಂಪು ಬೇರೆ ಇಲ್ಲ. ಲಾಭದ ಎಲ್ಲ ಹಣವೂ ಪಾಲಸಿ ದಾರರಲ್ಲಿಯೇ ಹಂಚಲಾಗುವದು. ಅತ್ಯಲ್ಪಾವಧಿಯಲ್ಲಿಯೇ ೭೦ಲಕ್ಷಕ್ಕೆ ಮಿಕ್ಕಿ ವ್ಯವಹಾರವನ್ನು ನೀಡಿದೆ.

ಅಧ್ಯಕ್ಷರು
**ಮೌಲ್ವಿ ಮೊಹಮ್ಮದ್ ಲಿಯಾಖತುಲ್ಲಖಾನ್ ಸಾಹೇಬ ಎಚ್. ಸಿ. ಎಸ್.,**
ಫೈನಾನ್ಸಸೆಕ್ರೆಟ್ರಿ
ಕಾರ್ಯದರ್ಶಿ
**ಶ್ರೀ ಲಕ್ಷ್ಮೀನಾರಾಯಣಗುಪ್ತ ಎಚ್. ಸಿ. ಎಸ್.,**
ಎಕ್ಸಾಮಿನರ್ ಪಿ. ಡಬ್ಲ್ಯು. ಎಂಡ್ ಕಮರ್ಸಿಯಲ್ ಅಕೌಂಟ್ಸ.

ಮ್ಯಾನೇಜರ್
**ಶಿ.೧. ಮದ.ರಾವ್ ಅನ್ಸರಿ.**

## ದಿ ಹೋಮ್ ಇಂಡಸ್ಟ್ರೀಜ ಲಿಮಿಟೆಡ್, ನಾಂಪಲ್ಲಿ.

ಹೈದರಾಬಾದ್. ದಕ್ಷಿಣ.

---

ಹೈದರಾಬಾದಿನ ಬಡಜನರಿಗೆ ಕೂಲಿ ದೊರಕಿಸಬೇಕೆಂಬ ಉದ್ದೇಶದಿಂದಲೇ ಇದನ್ನು ಧೂಳಪೇಟೆಯಲ್ಲಿ ಆರಂಭಿಸಲಾಗಿದೆ ಇಲ್ಲಿಯ ಬಡವರು ಸುಲಭವಾಗಿ ಮಾಡಬಹುದಾದ ಬೀಡಿಯ ಕಾರಖಾನೆಯನ್ನು ಆರಂಭಿಸಲಾಗಿದೆ. ಬೀಡಿಯಲ್ಲಿ ಉಪಯೋಗಿಸುವ ತಂಬಾಕವು ಅತ್ಯುತ್ತಮವಾಗಿದ್ದು ಸಿಗರೇಟುಗಳ ಸರಿಜೋಡಿಯಾಗಿ ನಿಲ್ಲುತ್ತದೆ.

ಹೊಗೆಸೊಪ್ಪನ್ನು ಉಪಯೋಗಿಸುವವರು ನಮ್ಮ ಸ್ವಸ್ತಿಕ್ ಬೀಡಿಗಳನ್ನೇ ಉಪಯೋಗಿಸಿ ಬಡಜನರ ಪರಿಸ್ಥಿತಿಯನ್ನು ಸುಧಾರಿಸಲು ನೆರವಾಗಬೇಕು.

—ಮ್ಯಾನೇಜಿಂಗ್ ಡೈರೆಕ್ಟರ್.

---

## ದಿ ಜುಬಿಲಿ ಎಲೆಕ್ಟ್ರಿಕ್ ಲಾಂಡ್ರಿ ಆಬಿದ್‌ರೋಡ್,

ಹೈದರಾಬಾದ್ ದಕ್ಷಿಣ.

---

ರೇಶಿಮೆ, ಊಲನ್, ಜರತಾರಿ, ಸರ್ಜ ಮುಂತಾದ ಬೆಲೆಬಾಳುವ ಬಟ್ಟೆಗಳನ್ನು ನೀರಿನಲ್ಲಿ ಹಾಕಿ ಸ್ವಚ್ಛ ಮಾಡುವದರಿಂದ ಈ ಬಟ್ಟೆಗಳ ನಯವು ಕೆಟ್ಟು ತಾಳಿಕೆಯು ಕಡಿಮೆಯಾಗುವದು. ನಮ್ಮಲ್ಲಿ ಹಿಂದುಸ್ಥಾನದಲ್ಲಿಯೇ ಮೂರನೆಯ ನಂಬರಿನ ಸ್ವಚ್ಛ ಮಾಡುವ ಯಂತ್ರವಿದೆ. ಸಮಯಕ್ಕೆ ಸರಿಯಾಗಿ

ಈ ಎಲ್ಲ ಬೆಲೆಬಾಳುವ ಬಟ್ಟೆಗಳನ್ನು ನಯವಾಗಿಯೂ, ಶಿಸ್ತಾಗಿಯೂ, ಸ್ವಚ್ಛಮಾಡಿ ಹೊಸ ಮೆರಗು ಬರುವಂತೆ ಮಾಡಲಾಗುವದು. ಜಿಲ್ಲೆಗಳಿಂದ ಬರುವ ಆರ್ಡರುಗಳನ್ನೂ ಪೂರೈಸಲಾಗುವದು

ಹೈದರಾಬಾದು ಪಟ್ಟಣದ ಬೇರೆಬೇರೆ ಭಾಗಗಳಲ್ಲಿ ನಮ್ಮ ಶಾಖೆಗಳಿವೆ.

—ಮ್ಯಾನೇಜಿಂಗ್ ಡೈರೆಕ್ಟರ್.

---

## ದಿ ಯುನೈಟೆಡ್ ಕರ್ನಾಟಕ ಇನ್ಶುರೆನ್ಸ್ ಕಂಪನಿ ಲಿಮಿಟೆಡ್,

ಹೆಡ್-ಆಫೀಸ:-ಧಾರವಾಡ

(೧೯೩೮ ನೆಯ ವಿಮಾ ಕಾಯಿದೆಯಮೇರೆಗೆ ರಜಿಸ್ಟರಾಗಿದೆ)

ಮುಂಬಯಿ ಕರ್ನಾಟಕದ ಒಂದೇ ಒಂದಾದ ಜೀವವಿಮಾ ಕಂಪನಿ ಕಳೆದ ಹತ್ತು ವರುಷಗಳಿಂದ ಭರದಿಂದ ಬೆಳೆಯುತ್ತಿದೆ.

ಕನ್ನಡಿಗರ ಬಂಡವಾಳ, ಕನ್ನಡಿಗರ ಆಡಳಿತ, ಕನ್ನಡನಾಡಿನ ಪ್ರಗತಿಪರವಾದ ಈ ಕಂಪನಿಯಲ್ಲಿ ಪ್ರತಿಯೊಬ್ಬ ಕನ್ನಡಿಗನು ಪಾಲಸ್ನೂ, ಪಾಲಿಸಿಯನ್ನೂ, ಪಡೆಯಬೇಕು

ನಿಜಾಮು ಕರ್ನಾಟಕದ ಭಾಗಗಳಿಗಾಗಿ ಕಾರ್ಯ ಕುಶಲರಾದ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗೆ ಬರೆಯಬೇಕು.

ಎಮ್ ಗೋವರ್ಧನರಾವ್

ಮ್ಯಾನೇಜರ್

---

## ನಿವ್ ಏಶಿಯಾಟಿಕ್ ಲಾಯ್ಫ ಇನ್ಸುರನ್ಸ ಕಂಪನಿ.

ಇದರಲ್ಲಿ ವಿಮಾಇಳಿಸಿರಿ, ಈ ಸಂಸ್ಥೆಯು ದಿನದಿನಕ್ಕ ಪ್ರಗತಿ ಹೊಂದುತ್ತಲಿದೆ. ವಿಮಾಹಣ ವಿಳಂಬವಿಲ್ಲದೆ ಕೊಡಲಾಗುವದು. ಇದರ ಮ್ಯಾನೇಜಿಂಗ್ ಏಜಂಟರು ಬಿರ್ಲಾ ಬಂಧುಗಳು. ಸ್ಥಾನಿಕ ಸಲಹೆಗಾರರಿವರು ಶ್ರೀ. ಜನಾರರ್ದನರಾವ್ ದೇಸಾಯಿ ಶ್ರೀ. ಕಾಸಿನಾಥರಾವ್ ವೈದ್ಯ ಅಡ್ವೊಕೇಟ- ಶ್ರೀ ಜಿ. ರಘುನಾಥಮಲ್ ಬ್ಯಾಂಕರ್, ಡಾ. ಲತೀಫ ಸೈಯ್ಯದ ಸಾಹೇಬ್.

ಹೈದರಾಬಾದಿನ
- ಬ್ರ್ಯಾಂಚ್ ಸೆಕ್ರೆಟ್ರಿ:- ರಾಮಕೃಷ್ಣಧೂತ.
- ಬ್ರ್ಯಾಂಚ್ ಮ್ಯಾನೇಜರ್.- ಬ್ರಿಧಿ ಚಂದ ಚೌಧ್ರಿ.
- ಕಚೇರಿ.- ಸುಲ್ತಾನಬಾಜಾರ್ ಹೈದರಾಬಾದು.
- ಟೆಲಿಫೋನು ನಂಬರ- ೩೩೫೩.

ಸಂಸ್ಥಾನದಲ್ಲೆಲ್ಲ ಏಜಂಟರು ಬೇಕಾಗಿದ್ದಾರೆ. ವಿವರಣೆಗಾಗಿ ಬರೆಯರಿ.

## ದಿ ದಕ್ಕನ್ ಕರ್ನಾಟಕ ಬ್ಯಾಂಕ ಲಿಮಿಟೆಡ್, ಜಾಂಬಾಗ್

ಹೈದರಾಬಾದ್ ದಕ್ಷಿಣ. ಶಾಖೆ:— ರಾಯಚೂರು.

(ನಿಜಾಮ ಸರಕಾರದ ಜಾಯಿಂಟ ಸ್ಟಾಕ್ ಕಂಪನಿ ಕಾಯಿದೆಗನುಸರಿಸಿ ರಜಿಸ್ಟರಾಗಿದೆ). ಅಧಿಕೃತ ಬಂಡವಾಲ:- ಒಂದು ಲಕ್ಷ ರೂಪಾಯಿ. ೧೦,೦೦ ಪಾಲುಗಳಲ್ಲಿ ವಿಭಾಗಮಾಡಿರುವ ಹಣ:-ಸುಮಾರು(೨೭,೬೦೦).

ಉದ್ಯೋಗಗಳನ್ನು ಆರಂಭಿಸುವ ಬಡಜನರಿಗೆ ಸಾಲ ಕೊಡಲಾಗುವದು. ಆಧುನಿಕ ಬ್ಯಾಂಕಿನ ಎಲ್ಲಕೆಲಸಗಳನ್ನು ಪೂರೈಸ ಲಾಗುತ್ತದೆ.

ಇದರ ಲಾಭದ ಕೆಲಭಾಗವನ್ನು ಶೈಕ್ಷಣಿಕ ಮುಂತಾದ ಸಂಸ್ಥೆಗಳಿಗೆ ದಾನವಾಗಿ ಕೊಡಲಾಗುತ್ತದೆ.

ಹೈದರಾಬಾದಿನ ಜನರೆಲ್ಲರೂ ಮುಖ್ಯವಾಗಿ ಕನ್ನಡಿಗರು ನಮ್ಮಸೇವೆಯನ್ನು ಪಡೆಯಬೇಕು.

—ಮ್ಯಾನೇಜಿಂಗ್ ಡೈರೆಕ್ಟರ್.

---

Telephone No: 3272.

## ದಿ ಜನರಲ್ ಸ್ಟೋನ್ ಸಪ್ಲಾಯಿಂಗ್ ಕಂಪನಿ.

ಮೋಜಂಜಾಹಿ ಮಾರ್ಕೆಟ್ ಹೈದರಾಬಾದ್ ದಕ್ಷಿಣ.

ಒಡೆಯರು:—**ಟಿ. ಜಿ. ಸಲ್ಲಾಖಿ.**

ನೀವು ಮನೆಕಟ್ಟಿಸುವಾಗ, ರಿಪೇರಿಮಾಡಿಸುವಾಗ ನಮ್ಮನ್ನು ವಿಚಾರಿಸಿರಿ. ಉತ್ತಮ ಇಟ್ಟಂಗಿ ಶುಭ್ರವಾದ ಸುಂಣ, ಗಟ್ಟಿಮುಟ್ಟಾದ ಕಲ್ಲುಗಳೇ ಮನೆಯ ಸ್ಥಿರತೆಯನ್ನೂ, ಸೌಂದರ್ಯವನ್ನೂ ಹೆಚ್ಚಿಸಬಲ್ಲವು. ಇಂತಹ ಶಾಬಾದಿ ಕಲ್ಲುಗಳನ್ನು, ಸುಂಣ ಹಾಗು ಇಟ್ಟಂಗಿಗಳನ್ನು ನಾವು ಯೋಗ್ಯ ಬೆಲೆಗೆ ಒದಗಿಸುವೆವು.

ಈಗ ಸುಮಾರು ೧೫ ವರುಷಗಳಿಂದ ನಾವು ಹೈದರಾಬಾದಿನಲ್ಲಿ ಕೆಲಸ ಮಾಡುತ್ತಿದ್ದು, ಜನತೆಯಲ್ಲಿ ನಮ್ಮ ಸೇವೆಯು ಸಾಕಷ್ಟು ಮೆಚ್ಚಿಗೆಗೆ ಪಾತ್ರವಾಗಿದೆ.

The General Stone Supplying Company.

Opp: Mozam Jahi Market, Hydarabad-Dn.

## ಅಂಜುಮನ್ ತರಕ್ಕಿ ಉರ್ದುಹಿಂದ ದ

(ಹಿಂದುಸ್ತಾನ ಉರ್ದು ಸಂಘ)

ಪುಸ್ತಕಾಲಯ, ಆಬೀದ್‌ರೋಡ್ ಹೈದರಾಬಾದ್ ದ.

ದಕ್ಷಿಣ ಹಿಂದುಸ್ತಾನದಲ್ಲಿ ಎಲ್ಲಕ್ಕೂ ದೊಡ್ಡದೂ, ಹಾಗು ಆಧುನಿಕ ಎಲ್ಲ ಉರ್ದುಪುಸ್ತಕಗಳ ಭಂಡಾರ ಹಿಂದುಸ್ತಾನದ ಸುಪ್ರಸಿದ್ಧ ಲೇಖಕರ ಹಾಗು ಪುಸ್ತಕವ್ಯಾಪಾರಿಗಳ ಎಲ್ಲತರದ ಪುಸ್ತಕಗಳು ಯಾವಾಗಲೂ ದೊರೆಯುತ್ತವೆ.

ಮಕ್ಕಳಿಗೆ, ಸ್ತ್ರೀಯರಿಗೆ, ಹಾಗು ಗ್ರಂಥಾಲಯಗಳಿಗೆ ಉಪಯುಕ್ತವಾದ ಹಾಗು ಉಚ್ಚತರಗತಿಯ ಪುಸ್ತಕಗಳು ಯೋಗ್ಯಬೆಲೆಗೆ ದೊರೆಯುವವು.

ಶಾಲೆ ಕಾಲೇಜುಗಳ ಪಠ್ಯ ಪುಸ್ತಕಗಳು ಅಂದರೆ ಇಂಗ್ಲೀಷು, ಉರ್ದು, ತೆಲಗು, ಮರಾಠಿ, ಕನ್ನಡ ಮುಂತಾದ ಎಲ್ಲ ಪುಸ್ತಕಗಳು ದೊರೆಯುತ್ತವೆ. ಪಾರಿತೋಷಕ, ಉಡುಗೋರೆ, ಕೊಡುವದಕ್ಕೆ ಬೇಕಾಗುವ 'ಫ್ಯಾನ್ಸಿ' ಹಾಗು ಸೋವಿ ಬೆಲೆಯ ಸ್ಟೇಶನರಿ ಸಾಮಾನುಗಳು ಸಿಗುತ್ತವೆ. ನಾಯಕರ ಚಿತ್ರಗಳೂ ದೊರೆಯುತ್ತವೆ.

—ಮ್ಯಾನೇಜರ್.




ಮನೆಕಟ್ಟಿಸುವದಕ್ಕೆ,

ಸ್ಥಳ ನಿಯೋಜನೆಗೆ,

ಉತ್ತಮ ವಿಧಾನಕ್ಕಾಗಿ,

ಮನೆಕಟ್ಟುವ ವ್ಯವಸ್ಥೆಗಾಗಿ

ಆರ್. ಗೋಪಾಲಾಚಾರಿ ಬಿ. ಇ,

ಸಿವಿಲ್ ಇಂಜಿನೀಯರ,

ಸುಲ್ತಾನ ಬಾಜಾರ್,

ಹೈದರಾಬಾದು ದಕ್ಷಿಣ.

ಇವರನ್ನು ವಿಚಾರಿಸಿರಿ.



(ಬ್ರಿಟಿಷ್. ಇಂಡಿಯಾದಲ್ಲಿ ಸ್ಥಾಪಿತವಾದದ್ದು.)

'ಸಿದ್ಧೇಶ್ವರ' ತಿಜೋರಿಗಳನ್ನು ಕೊಳ್ಳಿ. ನೆಮ್ಮದಿಯಾಗಿರಿ. ಈ ೨೨ ವರ್ಷಗಳಿಂದ ಹಿಂದುಸ್ತಾನದಲ್ಲೆಲ್ಲ ಪ್ರಸಿದ್ಧಿಯನ್ನು ಪಡೆದಿವೆ. ನಮ್ಮ ಉಕ್ಕಿನ ತಿಜೋರಿಗಳು, ಅಲ್ಮಾರಿಗಳು, ಕ್ಯಾಷ ಬಾಕ್ಸುಗಳು, ಮುಂತಾದವುಗಳೆಲ್ಲ ಪರದೇಶದ ಸರಕುಗಳಿಗಿಂತ ಗಟ್ಟಿಮುಟ್ಟಾಗಿಯೂ, ಚಂದವಾಗಿಯೂ ದೊರೆಯುತ್ತವೆ. ನಮ್ಮ ಕೀಲಿಗಳನ್ನು ಮುರಿದವಂಗೆ ಸಾವಿರ ರೂಪಾಯಿಯ ಇನಾಮು. ತಾವು ಒಮ್ಮೆ ನಮ್ಮ ಅಂಗಡಿಗೆ ದಯಮಾಡಿಸಿರಿ.

**ಸಿದ್ಧೇಶ್ವರ ಎಂಡ್, ಕಂಪನಿ**

ಒಡೆಯರು:-ಜಿ. ಎಸ್. ಕಮ್ಮಾರ.

ಹೆಡ್‌ಆಫೀಸ್- ಹುಬ್ಬಳ್ಳಿ.

ಶಾಖೆ:-ಮಹಿಯೋದ್ದೀನ್ ಬಿಲ್ಡಿಂಗ್ಸ, ಆಬಿದ್‌ರೋಡ್, ಹೈದರಾಬಾದ್. ದ.

---

## ಸೊಗಸಾದ ಸವಾರಿಗೆ 'ಹಿಂದ್' ಸೈಕಲ್ ?

ಹೌದು. ಹಿಂದುಸ್ತಾನದಲ್ಲಿಯೇ 'ಹಿಂದ್' ಸೈಕಲ್ಲುಗಳು ಅತ್ಯಂತ ಸುವ್ಯವಸ್ಥಿತವಾದ ಆಧುನಿಕ ಯಂತ್ರಾಲಯದಲ್ಲಿ ತಯಾರಾಗುವವು. ಉತ್ತಮ ತರದ ಉಕ್ಕು ಹಾಗು ಇತರ ಸಾಮಾನುಗಳಿಂದ ಮಾಡಲಾಗುವದು ಜಗತ್ತಿನಲ್ಲಿರುವ ಶ್ರೇಷ್ಠ ಸೈಕಲ್‌ಗಳೊಡನೆ 'ಹಿಂದ್' ಸೈಕಲು ಸರಿಗಟ್ಟುತ್ತದೆ. ನಿಮ್ಮ ಸವಾರಿಗೆಹೆಚ್ಚು ಸುಖಸುಯುವಾಗಿದ್ದು ಬಹಳದಿನ ಬಾಳಿಕೆ ಬರುವದು. ಈ ಸೈಕಲ್ಲನ್ನೇ ಕೊಳ್ಳುವದರ ಮೂರುಕಾರಣಗಳು:-

೧ ದೀರ್ಘಬಾಳಿಕೆ, ೨ ಬೆಲೆಕಡಿಮೆ, ೩ ಸೊಗಸಾದ ಸವಾರಿ.

ಮ್ಯಾನೇಜಿಂಗ್ ಎಜಂಟ್ಸ್:-ಮೆಸರ್ಸ ಬಿರ್ಲಾ ಬ್ರದರ್ಸ ಲಿಮಿಟೆಡ್.

ಹೈದರಾಬಾದು ಸಂಸ್ಥಾನದ ಸೋಲ್ ಏಜಂಟ್ಸ್.-

ದಿ ಗಿರಿ ಕಾಫಿ ಸಪ್ಲೈಂಗ್ ಕಂಪನಿ

ಸುಲ್ತಾನ ಬಾಜಾರ ಹೈದರಾಬಾದು.

ಗೌರ್ನಮೆಂಟು ಹಾಗು ರೇಲ್ವೆ ಲಿಸ್ಟಿನಲ್ಲಿ.

ಮೈಸೂರಿನಲ್ಲಿ ತಯಾರಾಧವಸ್ತುಗಳಿಗಾಗಿ

**ದಿ ಸೆಂಟ್ರಲ್ ಟ್ರೇಡಿಂಗ್ ಕಂಪನಿ, ಕಿಂಗ್ಸ್ವೆ, ಸಿಂಕೆಂದರಾಬಾದಿಗೆಬನ್ನಿರಿ.**

ಮೈಸೂರು ಎಲೆಕ್ಟ್ರಿಕ್ ಬಲ್ಬ್ಸ್, ಬಿ. ಸಿ. ಮ್ಯಾಂಟಲ್ಸ್, ಶ್ರೀಗಂಧದ ಕಟ್ಟಿಗೆ ಹಾಗು ಎಣ್ಣೆ, ಜೇನುತುಪ್ಪ, ಕಾಫಿ ಆಟಿಗೆಯ ಸಾಮಾನುಗಳು, ಸಾಬೂನು, ಅಗರಬತ್ತಿಗಳು, ಪೇಕ್ಲೈಟ್, ಟೈಪ್‌ರೈಟರ್ ರಿಬ್ಬನ್ನುಗಳು, ಜಮಖಾನೆ, ಮೈಸೂರು ಸ್ಟೋ ಇತ್ಯಾದಿ ಸಾಮಾನುಗಳೆಲ್ಲ ದೊರೆಯುತ್ತವೆ.

The central Trading Co, Kingsway Secundrabad-Dn.

---

**ಶಾಂತಿ.**

ಅನ್ನಕೋಶ, ಜಠರ, ಮುಂತಾದವುಗಳ ರೋಗಕ್ಕೆ ಇದು ಉತ್ತಮ ಔಷಧವು ಇದರಿಂದ ತಲೆನೋವು, ಮಲಬದ್ಧತೆ, ಮುಂತಾದವುಗಳೆಲ್ಲ ಹೋಗಿ ಹಸಿವು ಹೆಚ್ಚುವುದು.

ಆರು ತಿಂಗಳಿಗಿಂತ ಹೆಚ್ಚು ದಿನವಾದ ಗರ್ಭಿಣಿ ಸ್ತ್ರೀಯರು ಇದನ್ನು ಉಪಯೋಗಿಸಕೂಡದು.

ಉಪಯೋಗ:- ರಾತ್ರಿ ಊಟಕ್ಕೆ ಅರ್ಧ ಗಂಟೆ ಮುಂಚೆ ಹಿರಿಯರು 1/2 ತೊಲೆ. ಸಣ್ಣವರು 1/8 ತೊಲೆ ತೆಗೆದು ಕೊಳ್ಳಬೇಕು.

**ಅಗಸ್ತಿಯರ್ ಮ್ಯೊನುಫೆಕ್ಚರಿಂಗ್ ಡಿಪೋ**

೭೫೩, ಸುಲ್ತಾನ ಬಾಜಾರು ಹೈದರಾಬದ್-ದ.

ಅದಾಲತ್ ಮತಾಲಿಬಾತ್ ಖಫೀಪಾ ಕಚೇರಿಯ ಪಕ್ಕದಲ್ಲಿ.

---

**ವಿಜಯ ತುಪ್ಪ ವ ಕಿರಾಣಿ ಅಂಗಡಿ.**

ಗೌಳೀಗೂಡ–ಹೈದರಾಬಾದು ದ.

ನಮ್ಮಲ್ಲಿ ಅತ್ಯುತ್ತಮ ತುಪ್ಪಹಾಗು ಇತರ ಕಿರಾಣಿಸಾಮಾನುಗಳು ಯೋಗ್ಯಬೆಲೆಗೆ ದೊರೆಯುವವು ನಮ್ಮ ತುಪ್ಪ, ಕಿರಾಣಿ ಸಾಮಾನುಗಳನ್ನು ಒಮ್ಮೆ ಪರೀಕ್ಷಿಸಿದಲ್ಲಿ ಪುನಃ ನಮ್ಮಲ್ಲಿಗೆ ದಯಮಾಡಿಸುವಿರೆಂದು ನಮ್ಮ ನಂಬಿಕೆ.

**Vijaya Ghee & Kirana Stors, Gowliguda Hyderabad-Dn.**